ಬೆಳಗಾವಿ

# ಜಿಲ್ಲಾ ರಂಗಮಾಹಿತಿ

ಡಾ. ದೇವದಾಸ ಕಳಸದ

ಕರ್ನಾಟಕ ನಾಟಕ ಅಕಾಡೆಮಿ

# ಬೆಳಗಾವಿ

## ಜಿಲ್ಲಾ ರಂಗ ಮಾಹಿತಿ

ಡಾ. ದೇವದಾಸ ಕಳಸದ

ಕರ್ನಾಟಕ ನಾಟಕ ಅಕಾಡೆಮಿ
ಕನ್ನಡ ಭವನ, ಜೆ.ಸಿ.ರಸ್ತೆ , ಬೆಂಗಳೂರು – ೫೬೦ ೦೦೨

**Belagavi (Jilla Ranga Mahithi)** by **Dr. Devadasa Kalasada**, Published by Registrar, Karnataka Nataka Academy, Kannada Bhavana, J.C.Road, Bengaluru - 560 002.

ಈ ಆವೃತ್ತಿಯ ಹಕ್ಕು : ಕರ್ನಾಟಕ ನಾಟಕ ಅಕಾಡೆಮಿ

ಮುದ್ರಿತ ವರ್ಷ : 2016
ಪ್ರತಿಗಳು : 1000
ಪುಟಗಳು : viii + 120
ಬೆಲೆ : ರೂ. 70

ಪ್ರಕಾಶಕರು :
**ಸಿದ್ಧರಾಜು**
ರಿಜಿಸ್ಟ್ರಾರ್
ಕರ್ನಾಟಕ ನಾಟಕ ಅಕಾಡೆಮಿ
ಕನ್ನಡಭವನ, ಜೆ.ಸಿ.ರಸ್ತೆ
ಬೆಂಗಳೂರು – ೫೬೦ ೦೦೨
ದೂ. : ೦೮೦ – ೨೨೨೩೭೪೮೪

ರಕ್ಷಾಪುಟ ವಿನ್ಯಾಸ: ಕೃಷ್ಣ ರಾಯಚೂರು

ಮುದ್ರಕರು:
**ರಶ್ಮಿ ಪ್ರಿಂಟರ್ಸ್**
ಸುಧಾಮನಗರ, ಬೆಂಗಳೂರು
9901916581

# ಪ್ರಧಾನ ಸಂಪಾದಕರ ನುಡಿ

ಕರ್ನಾಟಕ ನಾಟಕ ಅಕಾಡೆಮಿಯ ನಮ್ಮ ಅವಧಿ ಎರಡು ವರ್ಷ ಕಳೆದಿದೆ. ಮೊದಲ ವರ್ಷ ಜಿಲ್ಲೆಗಳಲ್ಲಿ ನಾಟಕೋತ್ಸವ, ಹವ್ಯಾಸಿ ರಂಗ ತಂಡಗಳಿಗೆ ಶಿಬಿರ, ರಸಗ್ರಹಣ, ನಾಟಕ ಕಂಪನಿಗಳಿಗೆ ಹೊಸ ನಾಟಕ ಬರೆಸುವ ಯೋಜನೆ, ಪೌರಾಣಿಕ ರಂಗೋತ್ಸವ, ತಿಂಗಳ ನಾಟಕ, ರಂಗಗೀತೆ ಪ್ರಾತ್ಯಕ್ಷಿಕೆ, ಮುಂಬಯಿಯಲ್ಲಿ ನಾಟಕೋತ್ಸವ ಮುಂತಾದ ಹತ್ತು ಹಲವು ವಿನೂತನ ಕಾರ್ಯಕ್ರಮ ನಡೆಸಿದೆವು.

ವಿಜಯಪುರದಲ್ಲಿ 2015 ಸೆ.24 ರಿಂದ 30 ರ ವರೆಗೆ ನಡೆದ ರಾಜ್ಯ ವೃತ್ತಿರಂಗ ಸಮ್ಮೇಳನದಲ್ಲಿ ಎಲ್ಲ ಕಂಪನಿಗಳ ಕಲಾವಿದರು ಭಾಗವಹಿಸಿದ್ದರು. ಈ ಸಂದರ್ಭದಲ್ಲಿ ಐದು ದಿನಗಳ ಕಾಲ ಹತ್ತು ನಾಟಕ ಕಂಪನಿಗಳಿಗೆ ಏರ್ಪಡಿಸಿದ್ದ ನಾಟಕ ಸ್ಪರ್ಧೆ ರಂಗ ಇತಿಹಾಸದಲ್ಲಿ ಅಪರೂಪದ್ದಾಗಿತ್ತು. ಹಿರಿಯ ಕವಿಗಳಾದ ಬಿ.ಆರ್.ಅರಿಷಿಣಗೋಡಿ ಅವರಿಗೆ ಇಳಕಲ್‌ನಲ್ಲಿ, ಎಲ್.ಬಿ.ಕೆ.ಆಲ್ದಾಳ ಅವರಿಗೆ ಕಲಬುರಗಿಯಲ್ಲಿ ಏರ್ಪಡಿಸಿದ್ದ ಅಭಿನಂದನೆ, ವಿಚಾರ ಸಂಕಿರಣ, ಪುಸ್ತಕ ಬಿಡುಗಡೆ ವಿಶೇಷವಾಗಿತ್ತು.

ಹಾವೇರಿ ಜಿಲ್ಲೆಯ ಶೇಷಗಿರಿಯಲ್ಲಿ 21 ದಿನಗಳ ಕಾಲ ರಂಗ ನೇಪಥ್ಯ ಶಿಬಿರ, ರಾಮನಗರದ ಜಾನಪದ ಲೋಕದಲ್ಲಿ ನಡೆದ ಐದು ದಿನಗಳ ನಾಟಕ ರಚನಾ ಶಿಬಿರ, ಶಿರಸಿಯಲ್ಲಿ ನಡೆದ ರಂಗವಿಮರ್ಶಾ ಕಮ್ಮಟ, ದೆಹಲಿಯಲ್ಲಿ ನಡೆದ ವೃತ್ತಿ ಕಂಪನಿ ನಾಟಕೋತ್ಸವ ಕೆಲವು ಮೈಲುಗಲ್ಲುಗಳು. ವಿಶೇಷ ಘಟಕ ಯೋಜನೆಯಡಿ ಬಹುತೇಕ ಜಿಲ್ಲೆಗಳಲ್ಲಿ ರಂಗಶಿಬಿರ, ನಾಟಕ ಪ್ರದರ್ಶನ ನಡೆದಿವೆ. ಫೆಲೋಶಿಪ್ ಯೋಜನೆ ಮುಂದುವರಿದಿದೆ. ಕರ್ನಾಟಕ ನಾಟಕ ಅಕಾಡೆಮಿಯ ಮುಖವಾಣಿ 'ಸಂವಾದ' ಪತ್ರಿಕೆಯನ್ನು ಪುನರಾರಂಭಿಸಿದ್ದೇವೆ.

ಪುಸ್ತಕಗಳ ಪ್ರಕಟಣೆ ನಾಟಕ ಅಕಾಡೆಮಿಯ ಮಹಾತ್ವಾಕಾಂಕ್ಷೆಯ ಯೋಜನೆ. ಮೊದಲ ಸರ್ವ ಸದಸ್ಯರ ಸಭೆಯಲ್ಲಿ ಪ್ರಕಟನಾ ಸಮಿತಿ ರಚಿಸಿ ಕಾರ್ಯ ಪ್ರವೃತ್ತರಾಗಿದ್ದೆವು. ಪುಸ್ತಕಗಳ ಪ್ರಕಟಣೆ ಮುಖಾಂತರ ಅಂದು ಕಂಡ ಕನಸು ಇಂದು ನನಸಾಗುತ್ತಿದೆ. ಹಿಂದಿನ ವರ್ಷ ಹಾಗೂ ಈ ವರ್ಷದ ಪ್ರಕಟಣಾ ಸಮಿತಿ ಮತ್ತು ಈ ಕನಸು ಸಾಕಾರಗೊಳ್ಳಲು ಶ್ರಮಿಸಿದ ಸದಸ್ಯ ಗುಡಿಹಳ್ಳಿ ನಾಗರಾಜ ಹಾಗೂ ಪುಸ್ತಕ ಬರೆದುಕೊಟ್ಟ ಎಲ್ಲ ಲೇಖಕರಿಗೂ ಕೃತಜ್ಞತೆಗಳು.

ಎಲ್.ಬಿ.ಶೇಖ (ಮಾಸ್ತರ)
ಅಧ್ಯಕ್ಷರು
ಕರ್ನಾಟಕ ನಾಟಕ ಅಕಾಡೆಮಿ

# ಜಿಲ್ಲಾ ರಂಗಮಾಹಿತಿ ಮುನ್ನೋಟ

ಕರ್ನಾಟಕ ನಾಟಕ ಅಕಾಡೆಮಿ ಪ್ರಕಟನೆಗೆ ಆದ್ಯತೆ ಇರುವ ಅಕಾಡೆಮಿಯಲ್ಲ, ಇದು ಪ್ರಯೋಗ ಪ್ರಧಾನವಾದುದು. ಆದರೂ ರಂಗಭೂಮಿ ಚಟುವಟಿಕೆ, ಅಧ್ಯಯನಕ್ಕೆ ಪೂರಕವಾಗಬಲ್ಲ ಆಕರಗಳು ಅಕಾಡೆಮಿಯಲ್ಲಿ ದೊರೆಯುವಂತಾಗ ಬೇಕು ಎಂದು ಈ ಹಿಂದೆ ತಕ್ಕಮಟ್ಟಿನ ಪ್ರಕಟನೆ ಕಾರ್ಯಗಳು ನಡೆದಿವೆ. ಮಧ್ಯೆ ಕ್ಷೀಣಿಸಿದ್ದ ಪ್ರಕಟನಾ ವಿಭಾಗವನ್ನು ಚುರುಕುಗೊಳಿಸಿ ಮತ್ತಷ್ಟು ಪುಸ್ತಕಗಳನ್ನು ಹೊರತರಬೇಕು ಎಂದು ಅಧ್ಯಕ್ಷರಾದ ಎಲ್.ಬಿ.ಶೇಖ ಮಾಸ್ತರ ಅವರ ಅಧ್ಯಕ್ಷತೆಯಲ್ಲಿ 23 ಜುಲೈ 2014 ರಂದು ನಡೆದ ಪ್ರಕಟನಾ ಸಮಿತಿ ಸಭೆಯಲ್ಲಿ ನಿರ್ಧರಿಸಲಾಯಿತು. ಸಮಿತಿ ಸದಸ್ಯರಾದ ಪಿ.ತಿಪ್ಪೇಸ್ವಾಮಿ, ವಿ.ಎನ್.ಅಕ್ಕಿ, ಗುಡಿಹಳ್ಳಿ ನಾಗರಾಜ ಹಾಗೂ ರಿಜಿಸ್ಟ್ರಾರ್ ಸಿದ್ದರಾಜು ಭಾಗವಹಿಸಿದ್ದರು.

ಪ್ರಕಟನೆಗೆ ಇದ್ದ ಬೇಡಿಕೆಗಳು ಹಲವಾರು. ಆದರೆ ಸೀಮಿತ ಅವಕಾಶದಲ್ಲಿ ತೀರಾ ಅಗತ್ಯವಾದ ಪುಸ್ತಕಗಳನ್ನು ಮಾತ್ರ ಪ್ರಕಟಿಸಲು ಸಾಧ್ಯವಿತ್ತು. ಕನ್ನಡ ರಂಗಭೂಮಿಗೆ ಅಸಾಧಾರಣ ಕೊಡುಗೆ ನೀಡಿದ ಪ್ರತಿಭಾವಂತರ ಕುರಿತ ಪುಸ್ತಕಗಳನ್ನು ಹೊರತರುವ 'ರಂಗಸಂಪನ್ನರು' ಮಾಲಿಕೆಯನ್ನು ಸಿಜಿಕೆಯವರು ಅಧ್ಯಕ್ಷರಾಗಿದ್ದ ಅವಧಿಯಲ್ಲಿ ಆರಂಭಿಸಿ ಕೆಲವು ಪುಸ್ತಕಗಳನ್ನು ಹೊರತರಲಾಗಿತ್ತು. ನಂತರದ ಅವಧಿಯಲ್ಲೂ ಕೆಲವು ಪುಸ್ತಕಗಳು ಹೊರಬಂದವು. ಆ ಮಾಲಿಕೆಯನ್ನು ಮುಂದುವರಿಸಲು ತೀರ್ಮಾನಿಸಿದೆವು.

ಬಿ.ವಿ.ರಾಜಾರಾಂ ಅಧ್ಯಕ್ಷರಾಗಿದ್ದ ಅವಧಿಯಲ್ಲಿ ಪ್ರತಿ ಜಿಲ್ಲೆಯ ರಂಗಮಾಹಿತಿ ಹೊರತರುವ ಯೋಜನೆ ರೂಪಿಸಿ ಸದಸ್ಯರಿಗೇ ಆ ಹೊಣೆ ವಹಿಸಲಾಗಿತ್ತು. 5–6 ಜಿಲ್ಲೆಗಳ ರಂಗಮಾಹಿತಿ ಬರಹವೂ ಪೂರ್ಣಗೊಂಡಿತ್ತು. ಆದರೆ ಪುಸ್ತಕಗಳು ಪ್ರಕಟನೆಯಾಗಲಿಲ್ಲ. ಉಳಿದಿರುವ ಇತರ ಜಿಲ್ಲೆಗಳನ್ನೂ ಸೇರಿಸಿಕೊಂಡು ಜಿಲ್ಲೆಗೊಂದು ರಂಗಮಾಹಿತಿ ಪುಸ್ತಕಗಳನ್ನು ಹೊರತರುವ ಯೋಜನೆ ಹಮ್ಮಿಕೊಂಡೆವು. ಆಯಾ ಜಿಲ್ಲೆಗಳ ರಂಗ ಚಟುವಟಿಕೆಯಲ್ಲಿ ಪಾಲ್ಗೊಂಡ ಲೇಖಕರಿಗೆ ಈ ಕೆಲಸವನ್ನು ಒಪ್ಪಿಸಿದೆವು. ಜಿಲ್ಲಾ ರಂಗಮಾಹಿತಿ ಕಲೆಹಾಕುವುದು ಗುರುತರ ಕೆಲಸ. ದಾಖಲೆಗಳು ಸರಿಯಾಗಿ ಲಭ್ಯವಿಲ್ಲದ ಕಾರಣ ಲೇಖಕರು ತಮ್ಮ ಶಕ್ತ್ಯಾನುಸಾರ

ಸಂಗ್ರಹಿಸಿ ಬರೆದಿದ್ದಾರೆ. ಆದ್ದರಿಂದ ಇದನ್ನು ಯಾರೂ ಸಂಪೂರ್ಣ ಮಾಹಿತಿ ಎಂದು ಭಾವಿಸಬಾರದು. ಇದೊಂದು ಆರಂಭ. ಇದನ್ನು ಮುಂದುವರಿಸಲು ಸಂಘ ಸಂಸ್ಥೆ, ವಿಶ್ವವಿದ್ಯಾಲಯಗಳಿಗೆ ಅವಕಾಶವಿದೆ.

ರಂಗಸಂಪನ್ನರು ಮಾಲಿಕೆಗೆ ಪುಸ್ತಕ ಬರೆಯಲು ಕಲಾವಿದರ ಬಳಿ ಕುಳಿತಾಗಲೂ ಲೇಖಕರಿಗೆ ಮಾಹಿತಿ ಹಾಗೂ ಚಿತ್ರಗಳ ಕೊರತೆ ಕಾಡಿದೆ. ಆದರೂ ತಾವು ಕಣ್ಣಾರೆ ಕಂಡಿದ್ದ ಕಲಾವಿದರ ಪ್ರತಿಭಾ ಸಂಪನ್ನತೆಯನ್ನು ಆಪ್ತವಾಗಿ ಚಿತ್ರಿಸಿಕೊಟ್ಟಿದ್ದಾರೆ.

2015ರಲ್ಲಿ ಪ್ರಕಟಣಾ ಸಮಿತಿ ಬದಲಾದಾಗಲೂ ಈ ಮಾಲಿಕೆಗಳ ಪುಸ್ತಕಗಳನ್ನು ಸಂಪಾದಿಸುವ ಸಂಪಾದಕನ ಹೊಣೆಯನ್ನು ನನಗೇ ವಹಿಸಲಾಯಿತು. ಸದಸ್ಯರು ಇಟ್ಟ ವಿಶ್ವಾಸ ಹಾಗೂ ಅಧ್ಯಕ್ಷರಾದ ಶ್ರೀ ಶೇಖ್ ಮಾಸ್ತರ್ ಅವರು ಪುಸ್ತಕದ ಕೆಲಸ ಎಲ್ಲಿಗೆ ಬಂತು ಎಂದು ಸದಾ ನೆನಪಿಸುತ್ತ, ಈ ಪ್ರಕಟನೆಗಳ ಕುರಿತು ತಾಳಿದ ಆಸಕ್ತಿಯ ಫಲವಾಗಿ ಈ ಪುಸ್ತಕಗಳು ಇದೀಗ ಹೊರಬರುತ್ತಿವೆ.

## ವ್ಯಕ್ತಿಚಿತ್ರದ ಮೂಲಕ ರಂಗ ಇತಿಹಾಸ

ಕನ್ನಡ ರಂಗಭೂಮಿಗೆ ಸಂಚಲನ ತಂದ ಹಲವು ಪ್ರತಿಭಾವಂತರ ನೆಲೆವೀಡು ಬೆಳಗಾವಿ ಜಿಲ್ಲೆ. ರಂಗಭೂಮಿಗೆ ಅಸಾಧಾರಣ ಕೊಡುಗೆ ನೀಡಿದ ಅಂತಹ ವ್ಯಕ್ತಿಗಳ ಪರಿಚಯದ ಮೂಲಕ ಜಿಲ್ಲೆಯ ರಂಗಮಾಹಿತಿಯನ್ನು ಕೊಡುವ ಪ್ರಯತ್ನವನ್ನು ಡಾ.ದೇವದಾಸ ಕಳಸದ ಅವರು ಇಲ್ಲಿ ಮಾಡಿದ್ದಾರೆ.

ಖ್ಯಾತ ಸಂಶೋಧಕರು, ಲೇಖಕರು ಆದ ದೇವದಾಸ ಕಳಸದ ಅವರು ವೃತ್ತಿ ರಂಗಭೂಮಿಯ ನೇಪಥ್ಯದ ಕುರಿತು ಮೊದಲು ಗಮನ ಹರಿಸಿದವರು. ಕನ್ನಡ ವೃತ್ತಿ ರಂಗಭೂಮಿ ಹಾಗೂ ರಂಗವಿನ್ಯಾಸ, ವೃತ್ತಿ ರಂಗ ಸಂಸ್ಕೃತಿ, ರಂಗನೇಪಥ್ಯದ ನಿಸ್ಸೀಮರು, ರಂಗ ಚಿತ್ರಕಲಾ ನಿಪುಣರು ಮುಂತಾದ ಕಡೆಗಣಿಸಲ್ಪಟ್ಟವರ ಬಗ್ಗೆ ಅಪರೂಪದ ಗ್ರಂಥಗಳನ್ನು ರಚಿಸಿದ್ದಾರೆ.

**– ಗುಡಿಹಳ್ಳಿ ನಾಗರಾಜ**

ಪ್ರಕಟನಾ ಸಮಿತಿ ಸದಸ್ಯರು :

**ಉಮೇಶ ಸಾಲಿಯಾನ**

**ಶಿವಶಂಕರ ಹಾಲ್ಕುರಿಕೆ**

**ಜಗುಚಂದ್ರ ಕೆ.**

# ಕರ್ನಾಟಕ ನಾಟಕ ಅಕಾಡೆಮಿ

ಎಲ್.ಬಿ.ಶೇಖ (ಮಾಸ್ತರ)
ಅಧ್ಯಕ್ಷರು

ಸದಸ್ಯರು

| | |
|---|---|
| ರಾಜಪ್ಪ ಕಿರಗಸೂರು | ಉಮೇಶ ಸಾಲಿಯಾನ್ |
| ಕಲ್ಪನಾ ನಾಗನಾಥ್ | ವಿ.ಎನ್.ಅಕ್ಕಿ |
| ಪಿ.ತಿಪ್ಪೇಸ್ವಾಮಿ | ಬಿ.ಎಂ.ರಾಮಚಂದ್ರ |
| ಎಂ.ಎಸ್.ಗುಣಶೀಲನ್ | ಎನ್.ಕೆ.ರಾಮಕೃಷ್ಣ |
| ಮುದ್ದಣ್ಣ ರಟ್ಟೆಹಳ್ಳಿ | ವಿ.ವರಲಕ್ಷ್ಮಿ |
| ಅನ್ನಪೂರ್ಣ ಸಾಗರ | ಎಸ್.ಕೆ.ಕೊನೆಸಾಗರ |
| ಗುಡಿಹಳ್ಳಿ ನಾಗರಾಜ | ಹಾಲ್ಕುರಿಕೆ ಶಿವಶಂಕರ್ |
| ಎಚ್.ಷಡಾಕ್ಷರಪ್ಪ ಹೊಸಮನಿ | ಎಲ್.ಎಚ್.ರಂಗನಾಥಪ್ಪ |
| ಶ್ರೀಪಾದ ಭಟ್ | ಕೆ.ಜಗುಚಂದ್ರ |

ರಿಜಿಸ್ಟ್ರಾರ್ : ಸಿದ್ದರಾಜು

ಯೋಜನಾ ಸಹಾಯಕರು : ಕೆ.ರೇವಣ್ಣ

ಕಚೇರಿ ಸಿಬ್ಬಂದಿ :
ಸೌಭಾಗ್ಯಲಕ್ಷ್ಮೀ, ಎಂ.ಭೋಜಣ್ಣ, ಸುಶೀಲಮ್ಮ

# ಲೇಖಕರ ಮಾತು

ಯಾವುದೇ ಒಂದು ಪ್ರದೇಶದ ಸಾಂಸ್ಕೃತಿಕ ಹಾಗೂ ಸಾಹಿತ್ಯಿಕ ಮೇಲ್ಮೆಯನ್ನು ಗುರುತಿಸುವಲ್ಲಿ ಮೊಟ್ಟ ಮೊದಲು ಅಲ್ಲಿಯ ರಂಗಭೂಮಿ ಚಟುವಟಿಕೆಗಳ ಬಗ್ಗೆ ಪಕ್ಷಿ ನೋಟ ಬೀರುವುದು ಬಹಳ ಮಹತ್ವಪೂರ್ಣ ಸಂಗತಿ. ಈ ನಿಟ್ಟಿನಲ್ಲಿ ಒಟ್ಟು ರಾಜ್ಯದ ವೈವಿಧ್ಯಪೂರ್ಣ ರಂಗಭೂಮಿ ಹರಹನ್ನು ಅರಿಯುವುದಕ್ಕೋಸ್ಕರ ಜಿಲ್ಲಾವಾರು ರಂಗ ಮಾಹಿತಿಯೊಂದಿಗೆ ಕಿರು ಹೊತ್ತಗೆಗಳನ್ನು ಹೊರ ತರುವಲ್ಲಿ ನಮ್ಮ ಕರ್ನಾಟಕ ನಾಟಕ ಅಕಾಡೆಮಿ ಮನಸ್ಸು ಮಾಡಿದ್ದು ಸ್ವಾಗತಾರ್ಹ. ಈ ದಿಶೆಯಲ್ಲಿ 'ಬೆಳಗಾವಿ ಜಿಲ್ಲಾ ರಂಗ ಮಾಹಿತಿ'ಯನ್ನು ತಯಾರಿಸುವ ಜವಾಬ್ದಾರಿ ನನ್ನ ಪಾಲಿನದಾಗಿತ್ತು. ಅದು ಈಗ ಕೈಗೂಡಿದ್ದು ಸಂತೋಷದ ಸಂಗತಿ.

ರಾಜ್ಯದ ಒಟ್ಟು 30 ಜಿಲ್ಲೆಗಳಲ್ಲಿ ಬೆಳಗಾವಿ ಜಿಲ್ಲೆ ಹತ್ತು ತಾಲೂಕುಗಳಿಂದ ಕೂಡಿದ ವಿಶಾಲ ಜಿಲ್ಲೆ. ಸಾಂಸ್ಕೃತಿಕವಾಗಿಯೂ ಅತ್ಯಂತ ಶ್ರೀಮಂತ ಜಿಲ್ಲೆ. ಜನಪದ ರಂಗಭೂಮಿ, ವೃತ್ತಿ ರಂಗಭೂಮಿ, ಹವ್ಯಾಸಿ ರಂಗಭೂಮಿ ಹಾಗೂ ವೃತ್ತಿ ರಂಗ ಮಾದರಿಯ ಹವ್ಯಾಸಿ ರಂಗಭೂಮಿಗಳ ಹರಹಂತೂ ವಿಸ್ತೃತವಾದದ್ದು. ಈ ಜಿಲ್ಲೆಯಲ್ಲಿ ಅತಿ ಹೆಚ್ಚಿನ ಸಂಖ್ಯೆಯ ವೃತ್ತಿರಂಗಭೂಮಿಯ ನಾಟಕ ಕಂಪನಿಗಳು ಕನಿಷ್ಠ 5 ವರ್ಷ, ಗರಿಷ್ಠ 40 ವರ್ಷಗಳವರೆಗೆ ಬದುಕಿ ಬಾಳಿ ಹೋದದ್ದು ರಾಜ್ಯ ರಂಗ ಇತಿಹಾಸದಲ್ಲಿಯೇ ಅಚ್ಚಳಿಯದ ವಿಷಯವಾಗಿದೆ. ಅದರಲ್ಲೂ ಬೈಲಹೊಂಗಲ ತಾಲೂಕಿನಲ್ಲಿಯೇ 38 ಕಂಪನಿ ನಾಟಕ ಸಂಸ್ಥೆಗಳು ಮೆರೆದು ಮಾಯವಾದದ್ದು ಸುವರ್ಣಾಕ್ಷರಸಹಿತ ದಾಖಲಾರ್ಹ ಸಂಗತಿ.

ಪ್ರಸ್ತುತ 'ಬೆಳಗಾವಿ ಜಿಲ್ಲಾ ರಂಗ ಮಾಹಿತಿ' ತಯಾರಿಸುವ ಮುನ್ನ ಪತ್ರಿಕೆಗಳಲ್ಲಿ ಪ್ರಕಟಣೆ ಕೊಟ್ಟು, ರಂಗಪ್ರಮುಖರಿಗೆ ಸಾಕಷ್ಟು ಸಲ ದೂರವಾಣಿ ಮೂಲಕ ವಿನಂತಿಸಿಕೊಂಡರೂ ಸಿಗಬೇಕಾದಷ್ಟು ಮಾಹಿತಿ ಲಭ್ಯವಾಗದೇ ಇದ್ದುದು ವಿಷಾದನೀಯ. ಆದರೂ ಈ ಕೆಲಸದಲ್ಲಿ ಬಹಳಷ್ಟು ನೆರವಾದ ಬೆಳಗಾವಿ ಜಿಲ್ಲಾ ಘಟಕದ ಕರ್ನಾಟಕ ರಾಜ್ಯ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರಾದ ಶ್ರೀ ಕೆ.ಎಚ್. ಚನ್ನೂರರವರು ಅಭಿನಂದನಾರ್ಹರು. ಅದರಂತೆ ಪ್ರತಿ ತಾಲೂಕಿಗೂ ಒಬ್ಬೊಬ್ಬರಂತೆ ಬೆನ್ನೆಲುಬಾಗಿ ನಿಂತ ರಂಗ ಮಾಹಿತಿದಾರರಿಗೂ ನೇರವಾಗಿ ತಮ್ಮ ತಮ್ಮ ರಂಗ ಮಾಹಿತಿಯನ್ನೊದಗಿಸಿದ ರಂಗನಟ–ನಟಿ, ರಂಗನಿರ್ದೇಶಕ, ರಂಗವಿಮರ್ಶಕ, ರಂಗಸಂಶೋಧಕ, ರಂಗಲೇಖಕ, ರಂಗಕರ್ಮಿ ಮುಂತಾದವರಿಗೆಲ್ಲ ಕೃತಜ್ಞತೆಗಳು.

ಇಲ್ಲಿಯ ಹಲವಾರು ಭಾವಚಿತ್ರಗಳನ್ನು ಒದಗಿಸಿಕೊಟ್ಟ ಹಿರೇಬಾಗೇವಾಡಿಯ ಪ್ರಕಾಶ ಎಸ್. ಕಳಸದ ಹಾಗೂ ಈ ಸಂದರ್ಭದಲ್ಲಿ ಕರ್ನಾಟಕ ನಾಟಕ ಅಕಾಡೆಮಿಯ ಹಿಂದಿನ ಅಧ್ಯಕ್ಷರಾದ ಡಾ. ಬಿ.ವಿ. ರಾಜಾರಾಂ ಹಾಗೂ ಇಂದಿನ ಅಧ್ಯಕ್ಷರಾದ ಶ್ರೀ ಎಲ್.ಬಿ.ಶೇಖ ಮಾಸ್ತರ, ಗುಡಿಹಳ್ಳಿ ನಾಗರಾಜ ಹಾಗೂ ಸರ್ವ ಸದಸ್ಯರಿಗೂ, ಸರ್ವ ಸಿಬ್ಬಂದಿಗೂ ಅಭಿನಂದನೆಗಳನ್ನು ಸಲ್ಲಿಸದೇ ಇರಲಾರೆ.

– ಡಾ. ದೇವದಾಸ ಕಳಸದ

# ಬೆಳಗಾವಿ ಜಿಲ್ಲಾ ರಂಗಭೂಮಿಯ ಸಂಕ್ಷಿಪ್ತ ಇತಿಹಾಸ

ಉತ್ತರ ಕರ್ನಾಟಕದ ರಂಗಭೂಮಿ ಹಾಗೂ ದಕ್ಷಿಣ ಕರ್ನಾಟಕದ ರಂಗಭೂಮಿ ಎಂಬ ಎರಡೂ ಭಾಗಗಳಿಗೆ ಪ್ರತ್ಯೇಕವಾಗಿ ಪಕ್ಷಿನೋಟವನ್ನಳವಡಿಸಿದಾಗ ರಂಗಭೂಮಿಯ ತನ್ನದೇ ಆದ ವಿಶೇಷತೆ, ವೈಭವ, ವೈಖರಿ ಹಾಗೂ ಅದ್ಭುತಗಳ ಪರಿಚಯವಾಗುತ್ತ ಹೋಗುತ್ತದೆ. ಅದರಂತೆ, ಇಲ್ಲಿ ಕರ್ನಾಟಕದ ಜಿಲ್ಲಾವಾರು ರಂಗಭೂಮಿಯತ್ತ ದೃಷ್ಟಿ ತಿರುಗಿಸಿ ಕನ್ನಡದ ಗಂಡುಮೆಟ್ಟಿನ ಸ್ಥಳ ಬೆಳಗಾವಿ ಜಿಲ್ಲೆಯ ರಂಗಭೂಮಿಯ ವೀಕ್ಷಿಸಲಾಗಿ, ಉತ್ತರ ಕರ್ನಾಟಕ ರಂಗಭೂಮಿಗೆ ಬೆಳಗಾವಿ ಜಿಲ್ಲೆಯ ಕೊಡುಗೆ ಅನನ್ಯ ಎಂಬುದು ಸ್ಪಷ್ಟವಾಗುತ್ತದೆ.

ಕರ್ನಾಟಕದ ರಂಗಭೂಮಿ ಪ್ರಕಾರಗಳಲ್ಲಿಯ ಜನಪದ ರಂಗಭೂಮಿ, ವೃತ್ತಿ ರಂಗಭೂಮಿ ಹಾಗೂ ಹವ್ಯಾಸಿ ರಂಗಭೂಮಿ ಎಂಬ ಈ ಮೂರೂ ಪ್ರಕಾರಗಳನ್ನು ಮುಂದಿಟ್ಟುಕೊಂಡು ಗಮನಿಸಲಾಗಿ ಬೆಳಗಾವಿಯ ರಂಗಭೂಮಿಗನುಸರಿಸಿ ಜನಪದ ರಂಗಭೂಮಿ ಹಾಗೂ ವೃತ್ತಿ ರಂಗಭೂಮಿಯ ವಿಶೇಷ ಪರಿಚಯವನ್ನು ನಾವು ಪೂರ್ಣ ರೂಪದಿಂದ ಹೊಂದಬಹುದಾಗಿದೆ. ಆದರೆ ಹವ್ಯಾಸಿ ರಂಗ ಚಟುವಟಿಕೆಗಳೇ ಸ್ವಲ್ಪ ಹಿಂದೇಟು ಹಾಕಿವೆ ಎಂದು ಹೇಳಬಹುದು.

ಬೆಳಗಾವಿ ಜಿಲ್ಲೆಯಲ್ಲಿ ಬೆಳಗಾವಿ ತಾಲೂಕೂ ಸೇರಿದಂತೆ ಬೈಲಹೊಂಗಲ, ಸವದತ್ತಿ, ರಾಮದುರ್ಗ, ಗೋಕಾಕ, ರಾಯಬಾಗ, ಅಥಣಿ, ಚಿಕ್ಕೋಡಿ, ಹುಕ್ಕೇರಿ, ಖಾನಾಪೂರ ಹೀಗೆ ಹತ್ತು ತಾಲೂಕುಗಳನ್ನು ಒಳಗೊಂಡಂಥ ಬೆಳಗಾವಿಯು ಶ್ರೀಮಂತ ರಂಗ ಸಂಸ್ಕೃತಿಯಿಂದ ಕೂಡಿದ ಜಿಲ್ಲೆ. ಒಂದು ದೇಶ, ರಾಜ್ಯ ಅಥವಾ ಜಿಲ್ಲೆಯ ಸಾಂಸ್ಕೃತಿಕ ಹಿನ್ನೆಲೆ ಅರಿಯಲು ಅಲ್ಲಿಯ ಜನಪದ ಕಲೆಗಳು ಹಾಗೂ ಸಂಪ್ರದಾಯಗಳು ಹೆಚ್ಚು ಮಹತ್ವದ ಪಾತ್ರವನ್ನು ವಹಿಸುತ್ತವೆ. ಒಂದು ನಾಡಿನ ಜನತೆಯಲ್ಲಿ ಸಂಪ್ರದಾಯಬದ್ಧವಾಗಿ ಬಂದ ನಡೆ-ನುಡಿ, ಆಚಾರ-ವಿಚಾರಗಳ ವೈವಿಧ್ಯಪೂರ್ಣ ಕ್ರಿಯಾತ್ಮಕತೆಗಳೇ 'ಸಂಸ್ಕೃತಿ' ಎಂಬ ನಿರ್ಣಯಕ್ಕೆ ಬಂದಾಗ ಆ ಸಂಸ್ಕೃತಿಯ ಎಲ್ಲ ಘಟಕಗಳು ಸಾಮಾನ್ಯವಾಗಿ ಜಾನಪದೀಯ ಸಂವಹನ ಕ್ರಿಯೆಯ ಮೂಲಕವಾಗಿ ಒಂದು ಪೀಳಿಗೆಯಿಂದ ಮತ್ತೊಂದು ಪೀಳಿಗೆಗೆ ಬರುವಂಥವುಗಳಾಗಿವೆ.

ಇಂಥವುಗಳಲ್ಲಿ 'ಸಾಹಿತ್ಯ' ಪ್ರಕಾರವೇ ಪ್ರಮುಖವಾದದ್ದು. ಈ ಸಾಹಿತ್ಯದ ಪ್ರಕಾರಗಳಲ್ಲಿ ರಂಗಭೂಮಿಯೂ ಒಂದು. ಅನುಕರಣೆಯ ಮೂಲಕವಾಗಿ ಹುಟ್ಟಿಕೊಂಡ ರಂಗಭೂಮಿಯ ಚಟುವಟಿಕೆಗಳಲ್ಲಿ ಈಗ ಒಂದೊಂದಾಗಿ ಜನಪದರಂಗಭೂಮಿ, ವೃತ್ತಿ ರಂಗಭೂಮಿ ಹಾಗೂ ಹವ್ಯಾಸಿ ರಂಗಭೂಮಿಯ ಐತಿಹ್ಯಗಳನ್ನು ನೋಡೋಣ.

# ಜನಪದ ರಂಗಭೂಮಿ

ಸಾಮಾಜಿಕ ಮೌಲ್ಯಗಳಿಗೆ ಪ್ರತಿನಿಧಿಯಾಗಿ ನಿಲ್ಲುವುದೇ ಸನಾತನ ಧಾರ್ಮಿಕ ಸಂಪ್ರದಾಯ ಇಲ್ಲವೆ ಸಾಮಾಜಿಕನ ಬದುಕು-ಬವಣೆಯ ಮನರಂಜನಾತ್ಮಕ, ಶೃಂಗಾರಾತ್ಮಕ ಮತ್ತು ವಿಷಾದಾತ್ಮಕ ಕ್ಷಣಗಳು. ಇವುಗಳಿಗನುಸಾರವಾಗಿ ಉಗಮಗೊಂಡ ಜನಪದ ರಂಗಭೂಮಿಯ ಪ್ರಕಾರಗಳು ಕೊನೆಮೊದಲಿಲ್ಲದಂತೆ 'ಸಂಸ್ಕೃತಿ' ಯಲ್ಲಿ ಹಾಸುಹೊಕ್ಕಾಗಿರುವುದನ್ನು ವಿಭಿನ್ನ ಪ್ರದೇಶಗಳಲ್ಲಿ ಕಾಣಬಹುದಾಗಿದೆ. ಪ್ರಸ್ತುತ, ನಮ್ಮ ಬೆಳಗಾವಿ ಜಿಲ್ಲೆಯ ಬಹುತೇಕ ತಾಲೂಕುಗಳನ್ನು ಒಳಗೊಂಡಂತೆ ಜನಪದ ರಂಗಪ್ರಕಾರಗಳಾದಂಥ ಕವಲೆತ್ತಿನಾಟ, ದುರುಗು ಮುರಗೆಯರಾಟ, ಕಿಳ್ಳಿಕ್ಯಾತರಾಟ, ಸೂತ್ರದ ಗೊಂಬೆಯಾಟ, ವೀರಭದ್ರದೇವರ ಒಡಪಿನಾಟ, ಜೋಗತಿಯರ ಕುಣಿತದಾಟ, ದಾಸರಾಟ, ದೊಡ್ಡಾಟ, ಸಣ್ಣಾಟ, ಮುಂತಾದವುಗಳಲ್ಲಿ ಅಭಿನಯ, ಸಂಗೀತ, ಸಂಭಾಷಣೆಮೂಲವಾದ ರಂಗ ಕ್ರಿಯೆಗಳು ಪ್ರತಿಯೊಂದು ಶಹರ ಹಾಗೂ ಈ ಮುಂದಿನ ಪ್ರಕಾರಗಳನ್ನು ಚರ್ಚಿಸಬಹುದಾಗಿದೆ. ಇಂಥವುಗಳು ಗ್ರಾಮಗಳಲ್ಲಿ ಯಥೇಚ್ಛವಾಗಿ ಕಾಣಸಿಗುತ್ತಿದ್ದವು. ಅವುಗಳಲ್ಲಿ ಪ್ರಮುಖವಾಗಿ.

**ತೊಗಲು ಗೊಂಬೆಯಾಟ** : ಈ ರಂಗ ಪ್ರಕಾರವೂ ಸಹಿತ ತೀರ ಹಳಮೆಯದ್ದಾಗಿದೆ. ಇದಕ್ಕೆ 'ಕಿಳ್ಳಿಕ್ಯಾತರಾಟ' ವೆಂತಲೂ ಕರೆಯುತ್ತಾರೆ. 'ಕಿಳ್ಳಿಕ್ಯಾತರು' ಎಂಬ ಒಂದು ಜನಾಂಗವೇ ಇಂಥ ರಂಗ ಕ್ರಿಯೆಗಳನ್ನು ನಡೆಸಿಕೊಡುತ್ತಾ ಬಂದಿದ್ದರು. ಈಗಲೂ ಕೂಡ ಇಂಥಾ ಜನಪದ ಕಲಾವಿದರು ಜಿಲ್ಲೆಯ ದೊಡ್ಡವಾಡ, ಬೈಲಹೊಂಗಲ, ಕಾಕನೂರು, ಗೋಸಬಾಳ ಮುಂತಾದಕಡೆಗಳಲ್ಲಿ ಸಿಗುತ್ತಾರೆ.

ತೆಳುವಾದ ಬಿಳಿಪರದೆಯ ಹಿಂದೆ ಗ್ಯಾಸದೀಪ ಇಲ್ಲವೆ ವಿದ್ಯುತ್ ಬೆಳಕಿನ ಸಹಾಯ ಪಡೆದು ತೊಗಲು ಗೊಂಬೆಯನ್ನಾಡಿಸುತ್ತ ಪ್ರೇಕ್ಷಕರನ್ನು ಪೌರಾಣಿಕ ಸಂದರ್ಭಕ್ಕೊಯ್ದು ರಂಜಿಸುತ್ತಿದ್ದರು. ಚಿತ್ರಿತ ಪಾತ್ರಗಳಿಗೆ ತಕ್ಕಂತೆ ಧ್ವನಿಕೊಡುವ ಕಲೆಯಲ್ಲಿ ಪರಿಣಿತಿಯನ್ನು ಸಾಧಿಸಿದ ಮೂರುನಾಲ್ಕು ಜನ ಕಂಠದಾನ ಕಲಾವಿದರು ಆಟವನ್ನು ನಡೆಸಿಕೊಡುತ್ತಿದ್ದರು. ಪ್ರಾಣಿಯ ತೊಗಲನ್ನು ಸಂಗ್ರಹಿಸಿ, ಹದಗೊಳಿಸಿ, ತೆಳವಾದ ರೀತಿಯಲ್ಲಿ ಚಪ್ಪಟೆಗೊಳಿಸಿ, ವಿವಿಧ ಬಣ್ಣಗಳಿಂದ ಕಥಾ ಸಂದರ್ಭದ ಪಾತ್ರದಾಕೃತಿಗಳನ್ನು ಬರೆದು, ಸುತ್ತ ನಿರುಪಯುಕ್ತ ಭಾಗವನ್ನು ಕತ್ತರಿಸಿ ತೆಗೆದು ಗೊಂಬೆಗಳನ್ನು ತಯಾರಿಸಿ, ಕೈ ಕಾಣದಂತೆ ತೆಳು ಪರದೆಗೆ ಹಿಡಿದು ತಮ್ಮ ಕೈಚಳಕ ತೋರಿಸಿ ಹಿನ್ನೆಲೆಯಲ್ಲಿ ಧ್ವನಿ ಕೊಡುತ್ತಿದ್ದರು.

ಕಾಲಕಾಲಕ್ಕೆ ಮಳೆಯಾಗದಿದ್ದರೆ ತೊಗಲು ಗೊಂಬೆಯಾಟ ಆಡಿಸುವುದಾಗಿ ಹರಕೆ ಹೊರುವ ಸಂಪ್ರದಾಯ ಜಿಲ್ಲೆಯಲ್ಲಿ ಪ್ರಚಲಿತವಿತ್ತು ಇದರಂತೆ ಅನೂಚಾನವಾಗಿ ನಡೆದುಕೊಂಡು ಬಂದ ಈ ರಂಗ ಪ್ರಕಾರವು ಬೆಳಗಾವಿ ಜಿಲ್ಲೆಯ ಕಾಕನೂರು ಎಂಬ ಹಳ್ಳಿಯಲ್ಲಿ ಕಿಳ್ಳೆಕ್ಯಾತರ ಒಂದು ಸಂಸಾರ ಪ್ರತಿ ವರ್ಷ ದೀಪಾವಳಿಯ ಸಂದರ್ಭದಲ್ಲಿ, ವರ್ಷದ ಮಳೆ ಸರಿಯಾಗಿ ಬರಲಿ ಎಂದು ಬೇಡಿಕೊಂಡು ಪಾಂಡವರ ಕುರಿತು ತೊಗಲು ಗೊಂಬೆಯಾಟವನ್ನು ಆಡುವ ಸಂಪ್ರದಾಯ ಇಂದಿಗೂ ಉಳಿದಿದೆ ಎಂದು ಸಂಶೋಧಕ ಡಾ. ಬಸವರಾಜ ಮಲಶೆಟ್ಟಿಯವರು ಹೇಳುತ್ತಾರೆ.

**ಸೂತ್ರದ ಗೊಂಬೆಯಾಟ :** ಸೂತ್ರದ ಗೊಂಬೆಯಾಟವೂ ನಮ್ಮ ಕರ್ನಾಟಕದಲ್ಲಿ ಅತ್ಯಂತ ಪ್ರಾಚೀನವಾದ ಜನಪದ ರಂಗ ಪ್ರಕಾರ. ಇದು ವಿಜಯನಗರ ಅರಸರ ಕಾಲದ ಕ್ರಿ.ಶ. 1470 ಹಾಗೂ 1521 ರ ಎರಡು ಶಾಸನಗಳಲ್ಲಿ ಸಿಗುವ ಮಾಹಿತಿ ಪ್ರಕಾರ ಆಗಿನ ಕಾಲದಿಂದಲೇ ಬಹಳ ಜನಪ್ರಿಯ ರಂಗ ಪ್ರಕಾರವಾಗಿ ಪರಿಣಮಿಸಿದ್ದು ತಿಳಿದು ಬರುತ್ತದೆ. ಕನ್ನಡ ನಾಡಿನ ಅತ್ಯಂತ ಪ್ರಾಚೀನ ಕಲಾ ಸಂಸ್ಥೆಯೊಂದು ಸಂಸ್ಕೃತ ನಾಟಕಕ್ಕಿದ್ದ 'ಸೂತ್ರಧಾರ' ಪಾತ್ರವನ್ನು ಗೊಂಬೆಯಾಟಕ್ಕೂ ಅಳವಡಿಸಿಕೊಂಡು ಕತೆಗೆ ಮೆರುಗನ್ನು ತರುತ್ತಿದ್ದರೆಂದು ವಿದ್ವಾಂಸರ ಅಭಿಪ್ರಾಯ. ಇಲ್ಲಿ ಬರುವ ಕತೆಗಳು ಸಾಮಾನ್ಯವಾಗಿ ರಾಮಾಯಣ ಮಹಾಭಾರತಗಳ ಕಥಾ ಪ್ರಸಂಗಗಳೇ ಆಗಿವೆ. ಇಂಥ ಸೂತ್ರಧಾರಿಕೆಯನ್ನು ಬೆಳಗಾವಿಯ 'ಗೊಂಬೆ ಅನಂತಪ್ಪ' ಎಂಬ ಪರಿಣಿತ ಕಲಾವಿದನ ಕೈಯಲ್ಲಿ ಗೊಂಬೆ ಜೀವಂತ ಪಾತ್ರವೇ ಸರಿ. ಎಂದು ಮುದವೀಡು ಕೃಷ್ಣರಾಯರು ಗೊಂಬೆಯಾಟದ ಮೂಲಕ ಕೃಷ್ಣ ಪಾರಿಜಾತ ಕಥಾಭಿನಯಿಸಿದ್ದನ್ನು ಬಣ್ಣಿಸಿದ್ದಾರೆ.

**ಗೊಂದಲಿಗರಾಟ :** ಜನಪದ ರಂಗ ಚಟುವಟಿಕೆಯ ಸಾಲಿನಲ್ಲಿ ಬರುವ ಇನ್ನೊಂದು ಹೆಸರಾಂತ ಆಟವೆಂದರೆ_ ಗೊಂದಲಿಗರ ಆಟ. ಇದೂ ಕೂಡ ಇಬ್ಬರು ಮೂವರು ಕಲಾವಿದರಿಂದ ಸಂಭಾಷಣೆ, ಹಾಡು, ಹಾಸ್ಯ ಮುಂತಾದವುಗಳಿಗೆ ಒಳಪಟ್ಟು ಒಟ್ಟು ಅವರ ವಿಶಿಷ್ಟವಾದ ಅಭಿನಯ ಕಲೆ ಪ್ರಸ್ತುತ ಕಥಾ ಪ್ರಸಂಗವನ್ನು ಕಣ್ಮುಂದೆ ಕಟ್ಟಿಸುತ್ತಿತ್ತು. ಇವರು ರಾಮಾಯಣ ಮಹಾಭಾರತ ಕಥಾ ಪ್ರಸಂಗಗಳನ್ನಷ್ಟೇ ಆಯ್ದುಕೊಳ್ಳದೇ ಕಾಲ್ಪನಿಕ ಜಾನಪದ ಕಥೆಗಳನ್ನು ಹಾಗೂ ದೈವ, ಭೂತ ಹಾಗೂ ಅತಿಮಾನವಾಧಾರಿತ ಕಥೆಗಳನ್ನು ಮಾರ್ಮಿಕವಾಗಿ ಪ್ರಸ್ತುತ ಪಡಿಸುತ್ತಿದ್ದರು. ಇವರಿಗೆ ಯಾವುದೇ ವಿಶೇಷವಾದ ವೇಷಭೂಷಣ–ಪ್ರಸಾಧನದ ಅವಶ್ಯಕತೆ ಇದ್ದಿಲ್ಲ. ಯಾವುದೇ ದೃಶ್ಯಾವಳಿ ಹಾಗೂ ರಂಗ ಸಹಾಯಕಗಳನ್ನು ಬಳಸದೇ ಕೇವಲ ರಂಗ ರೂಢಿಗಳಿಂದಲೇ ಕಥಾ ಸನ್ನಿವೇಶದ ಚಿತ್ರಣವನ್ನು ನಿರ್ಮಿಸುತ್ತಿದ್ದರು. ಇವರ ವಾಚಿಕಾಭಿನಯ ಹಾಗೂ ಆಂಗಿಕಾಭಿನಯಕ್ಕೆ ಒತ್ತು ಕೊಡುವ ದಿಶೆಯಲ್ಲಿ ಚೌಡಕಿಯಂಥ ಒಂದು ವಾದ್ಯ ಮಾತ್ರ ಬೇಕೇ ಬೇಕಿತ್ತು. ಇಂಥ ಕಲಾವಿದರು ಬೈಲಹೊಂಗಲ ಹಾಗೂ ದೊಡ್ಡವಾಡ ಗ್ರಾಮದಲ್ಲಿಯೂ ಕಾಣಸಿಗುತ್ತಾರೆ.

**ಜೋಗತಿಯರ ಕುಣಿತದಾಟ :** ಬೆಳಗಾವಿ ಜಿಲ್ಲೆಯ ಸವದತ್ತಿ ಎಲ್ಲಮ್ಮ ಅಥವಾ ರೇಣುಕಾ ದೇವಿಯ ಭಕ್ತರಾದ ಜೋಗಪ್ಪ ಮತ್ತು ಜೋಗತಿಯರು ಪೀಳಿಗೆಯಿಂದ ಪೀಳಿಗೆಗೆ ಪ್ರಾಚೀನ ಕಾಲದಿಂದಲೂ, ವೈವಿಧ್ಯಪೂರ್ಣವಾದ ಸೇವೆಯನ್ನು ಕೈಕೊಳ್ಳುತ್ತ ಬಂದಿದ್ದಾರೆ. ಅವುಗಳಲ್ಲಿ ರಂಗ ಚಟುವಟಿಕೆಗೆ ಸಂಬಂಧ ಪಡುವಂತೆ ನೀರು ತುಂಬಿದ ಹಿತ್ತಾಳೆ ಇಲ್ಲವೆ ಸ್ಟೀಲಿನ ಕೊಡಗಳ ಕಂಠಕ್ಕೆ ದೇವಿಯ ಮುಖವಾಡವನ್ನು ಕಟ್ಟಿ ಅದನ್ನು ತಲೆಯ ಮೇಲೆ ಹೊತ್ತು, ದೇವಿಯ ಮಹಿಮೆಯನ್ನು ಕುರಿತಾದ ಸಂಭಾಷಣೆಯ ಗೀತರೂಪಕವನ್ನು, ಚೌಡಕಿ ವಾದನದ ಮೆರಗಿನೊಂದಿಗೆ ಜಾನಪದೀಯವಾಗಿ ಅಭಿನಯಿಸುವ ಕಲೆ ಧಾರ್ಮಿಕ ಹಾಗೂ ಭಕ್ತಿಯ ನೆಲೆಗಟ್ಟಿನಲ್ಲಿ ರಂಗ ಪರಂಪರೆಯಾಗಿ ನಡೆದುಕೊಂಡು ಬಂದದ್ದಾಗಿದೆ.

ಈ ಸಂದರ್ಭದಲ್ಲಿ ಅವರ ಶ್ವೇತಾಂಬರದ ವೇಶಭೂಷಣಗಳೂ ವಿಶಿಷ್ಟವಾಗಿರುತ್ತವೆ. ಜೋಗತಿಯರೆಂದರೆ ದೇವಿಗೆ ಹರಕೆ ಹೊತ್ತ ಗಂಡಸರೇ ಹೆಣ್ಣಿನ ಗುಣ – ಸ್ವಭಾವ, ಪ್ರಸಾಧನ, ವೇಷಭೂಷಣವನ್ನು ಮಾಡಿಕೊಂಡಿರುತ್ತಾರೆ ಅವರು ತಮ್ಮ ದಿನನಿತ್ಯದ ಜೀವನದಲ್ಲೂ ಅದೇ ರೀತಿಯ ಆಕಾರ–ಆಚಾರ–ವಿಚಾರ–ಸ್ವಭಾವವನ್ನು ಹೊಂದಿರುತ್ತಾರೆ. ಮೂಲತಃ ಸವದತ್ತಿಯಿಂದಲೇ ಪ್ರಾರಂಭವಾದ ಈ ರಂಗ ಪ್ರಕಾರದ ಪ್ರಭಾವವನ್ನು ಕರ್ನಾಟಕದ ಇತರೆ ಭಾಗಗಳಲ್ಲೂ ಹಾಗೂ ಮಹಾರಾಷ್ಟ್ರ, ಆಂಧ್ರ ಪ್ರದೇಶದ ಹಲವಾರು ಕಡೆಗಳಲ್ಲೂ ಕಾಣಬಹುದಾಗಿದೆ.

**ದಾಸರಾಟ :** ಈ ಆಟಗಳಲ್ಲಿ ನಾಯಕ ನಾಯಕಿಯ ಪಾತ್ರಗಳೇ ಪ್ರಮುಖವಾಗಿದ್ದು ಪ್ರಣಯ ಪ್ರಸಂಗವೇ ಕತೆಗೆ ಮೂಲವಾಗಿರುತ್ತದೆ. ಇಲ್ಲಿ ಬರುವ ನಾಯಕ ನಾಯಕಿಯರ ಸಂವಾದದಲ್ಲಿ ಹೆಣ್ಣು ಹೆಚ್ಚೊ ಗಂಡು ಹೆಚ್ಚೊ ಎಂಬ ವಿಷಯದ ಬಗ್ಗೆ ವರೆಗೆ ಹಚ್ಚುವ ಮೂಲಕ ಆಖ್ಯಾನಕ್ಕೆ ಸಮಯದ ಇತಿ–ಮಿತಿ, ಸ್ವರೂಪಗಳಿಲ್ಲದೆ ಕತೆ ಬಿಚ್ಚಿಕೊಳ್ಳುತ್ತಾ ಹೋಗುತ್ತದೆ. ಈ ಎಲ್ಲ ಆಖ್ಯಾನಗಳು ಶೃಂಗಾರ ರಸದಿಂದ ಕೂಡಿರುತ್ತಿದ್ದು ಮನರಂಜನೆಯೇ ಪ್ರಮುಖ ಉದ್ದೇಶವಾಗಿರುತ್ತಿತ್ತು. ಮನರಂಜನೆಯನ್ನು ಹುಟ್ಟು ಹಾಕುವಲ್ಲಿ ನಾಯಕ ನಾಯಕಿಯರ ನಡುವೆ ವಿದೂಷಕನ ಪಾತ್ರವೂ ಪ್ರಮುಖವಾಗಿರುತ್ತಿತ್ತು.

ದಾಸರಾಟದ ಒಂದು ಪರಂಪರೆ ಪಕ್ಕದ ಮಹಾರಾಷ್ಟ್ರದ ರಂಗ ಚಟುವಟಿಕೆಗಳಮೇಲೂ ಭಾರೀ ಪ್ರಭಾವ ಬೀರಿದ್ದಿತು ಎನ್ನಲಾಗಿದೆ. ಈ ದಾಸರಾಟದ ಪ್ರಯೋಗಗಳೇ ಬೆಳಗಾವಿ ಮೂಲಕ ಮಹಾರಾಷ್ಟ್ರಕ್ಕೆ ಒಲಸೆ ಹೋಗಿ ಅಲ್ಲಿಂದ ಮಹಾರಾಷ್ಟ್ರದ 'ತಮಾಷಾ' ಎಂಬ ರೂಪಾಂತರ ಹೊಂದಿ ಮತ್ತೆ ಬೆಳಗಾವಿಗೇ ಬಂದು ಜನಮನ ರಂಜಿಸಿದ್ದನ್ನು, ಖ್ಯಾತ ಸಾಹಿತಿ, ಸಂಶೋಧಕ ಬೆಟಗೇರಿ ಕೃಷ್ಣಶರ್ಮರು ಅಭಿಪ್ರಾಯಿಸಿದ್ದಾರೆಂದು ಡಾ. ಎಚ್. ಕೆ. ರಂಗನಾಥರು ಬರೆದಿದ್ದಾರೆ. ಇದೇ ಪ್ರಕಾರವು ಮುಂದೆ ಕರ್ನಾಟಕದ ಬಯಲು ಸೀಮೆಯಲ್ಲಿ 'ರಾಧಾನಾಟ' ವಾಗಿ ನಾಯಕ

ಗಲ್ಲೋಜಿ, ನಾಯಕಿ ರಾಧಾ ಎಂಬುವವರ ಪ್ರಣಯ ಪ್ರಸಂಗ ಬೆಳೆಯುತ್ತಲೇ ಹೋಗುತ್ತದೆಂದೂ ಕೂಡಾ ಬೆಟಗೇರಿಯವರೇ ಅಭಿಪ್ರಾಯಿಸಿರುತ್ತಾರೆ.

ಗಲ್ಲೋಜಿಯ ಪಾತ್ರವನ್ನು ಗ್ರಾಮೀಣ ಸಂಘಟಕರಲ್ಲಿಯೇ ಒಬ್ಬ ಆಸಕ್ತ ಕಲಾವಿದನು ವಹಿಸುತ್ತಿದ್ದುದು ವಾಡಿಕೆ. ನಾಯಕಿಯ ಪಾತ್ರಕ್ಕಾಗಿಯೇ ಪ್ರತ್ಯೇಕವಾಗಿ ತಯಾಗಿರುತ್ತಿದ್ದ ಬೆಳಗಾವಿ ಜಿಲ್ಲೆಯ ವೃತ್ತಿ ಕಲಾವಿದೆಯರಾದ (ಇವರಿಗೆ ಚಿಮಣಾ ಎಂತಲೂ ಕರೆಯುತ್ತಿದ್ದರು.) ಅಲತಗಿ ಯಮುನವ್ವ, ಭೀಮವ್ವ, ಶಂಕರವ್ವ, ನಾವಲಗಟ್ಟಿ ಸೀತವ್ವ, ಕಮಲವ್ವ, ಶಾಂತವ್ವ, ದುಳಗಣವಾಡಿ ಯಮುನವ್ವ, ಮೋದಗಾ ಸುಶೀಲಾ, ಸಕ್ರೆವ್ವ ಪಾತ್ರೋಟ, ಸಾಲಹಳ್ಳಿ ಲಕ್ಷ್ಮೀಬಾಯಿ ಮುಂತಾದವರು ಪ್ರಮುಖರು. ಇವರು ಕೇವಲ ದಾಸರಾಟವೆನ್ನದೇ ಒಟ್ಟು ಸಣ್ಣಾಟಗಳಿಗೆ ಸಂಬಂಧಿಸಿ ಪಾತ್ರಕ್ಕಾಗಿ ಸಿದ್ಧರಿರುತ್ತಿದ್ದರು.

ಇಂಥ ದಾಸರಾಟದ ಮೇಳಗಳನ್ನು ಕೂಡಿಸಿ ಬಹುಕಾಲ ಜನರನ್ನು ರಂಜಿಸಿದ ಮೇಳಕಾರರಲ್ಲಿ ಬೆಳಗಾವಿ ಜಿಲ್ಲೆಯ ಬಸರಗಿ ಗ್ರಾಮದ ಕುಂಬಾರನೊಬ್ಬನ ಪ್ರಸಿದ್ಧಿಯ ಮಾತು ಇಂದಿಗೂ ಆ ಭಾಗದ ಜನರ ಬಾಯಲ್ಲಿದೆ, ಬೆಳಗಾವಿ ಜಿಲ್ಲೆಯ ಬಹುತೇಕ ಗ್ರಾಮೀಣ ಪ್ರದೇಶಗಳಲ್ಲಿ ಈ ಪ್ರಕಾರದ ದಾಸರಾಟಗಳು ರೈತರ ಸುಗ್ಗಿಯ ದಿನಗಳಲ್ಲಿ ಹಾಗೂ ಜಾತ್ರಾ ಸಮಾರಂಭದ ಪ್ರಸಂಗಗಳಲ್ಲಿ ಇಂದಿಗೂ ಪ್ರಯೋಗಿಸಲ್ಪಡುತ್ತವೆ.

ಇನ್ನು ಈ ಪ್ರಕಾರಗಳ ಆಹಾರ್ಯದ ಬಗ್ಗೆ ಹೇಳಬೇಕೆಂದರೆ ನಾಯಕನಾದವನು ಧೋತರ, ಮೇಲೊಂದು ಬಣ್ಣದ ನೆಹರು ಶರ್ಟ, ಟೊಂಕಕ್ಕೊಂದು ಟವೆಲ್, ತಲೆಗೆ ಹಳದಿ ರೇಶ್ಮಿ ರೂಮಾಲು ಸುತ್ತಿದ್ದರೆ, ನಾಯಕಿಗೆ ಪರಾಸ್ಪೇಟಿ ದಡಿಯ ಏಳುವಾರಿನ ಸೀರೆ, ಮೂಗಿನಲ್ಲಿ ನತ್ತು, ಕೈತುಂಬ ಬಳೆ, ಮುಖಕ್ಕೆಲ್ಲ ಢಾಳವಾದ ಮುಖವರ್ಣಿಕೆ ಇರುತ್ತಿತ್ತು. ಇವರಿಗೆ ನಿರ್ದಿಷ್ಟವಾದ ಅಳತೆಯ ವೇದಿಕೆ ಬೇಕೆಂದೇನೂ ಕಟ್ಟು ನಿಟ್ಟು ಇರಲಿಲ್ಲ. ವೇದಿಕೆಗಳೇ ಇಲ್ಲದ ಗ್ರಾಮೀಣ ಪ್ರದೇಶದಲ್ಲಿ ಎರಡು ಟ್ರ್ಯಾಕ್ಟರ್ ಟ್ರೇಲರ್‌ಗಳನ್ನು ಒಂದಕ್ಕೊಂದು ಜೋಡಿಸಿಟ್ಟು ಮಾಡಿದ ವೇದಿಕೆಯಲ್ಲಿ ಇಂಥ ಆಟಗಳನ್ನು ಪ್ರಯೋಗಿಸುತ್ತಿದ್ದರು. ಕೃಷ್ಣ ಪಾರಿಜಾತ, ಸಂಗ್ಯಾಬಾಳ್ಯಾ ಆಖ್ಯಾನಗಳೂ ಈ ಪದ್ಧತಿಗೆ ಹೊರತಾಗಿರಲಿಲ್ಲವೆಂದೇ ಹೇಳಬಹುದು.

**ಕೃಷ್ಣ ಪಾರಿಜಾತ :** ಯಕ್ಷಗಾನ ಪ್ರಭಾವಿತ ಕೃಷ್ಣ ಪಾರಿಜಾತವು_ ಅಭಿನಯ, ಹಾಡುಗಾರಿಕೆ ಹಾಗೂ ಪ್ರಸ್ತುತಿಯಲ್ಲಿ ತನ್ನದೇ ಆದ ವೈಶಿಷ್ಟ್ಯತೆಯನ್ನು ಕಾಯ್ದುಕೊಂಡು ಹೊರಟಂಥ ಆಖ್ಯಾನವಾಗಿದ್ದು, ಕೃಷ್ಣ-ಭಾಮೆ ಹಾಗೂ ದೂತೆಯೂ ಸೇರಿದಂತೆ ನಡೆಯುವ ಸಂವಾದದಲ್ಲಿ ಭಾಮೆಯಲ್ಲಿದ್ದ ಸವತಿ ಮತ್ಸರದ ಭಾವನೆಯನ್ನು ಪ್ರತಿನಿಧಿಸುವ ಪ್ರಸ್ತುತ ಕತೆಯ ಮೂಲ ಕೃತಿ ರಾಯಚೂರಿನ ಅಪರಾಳ ತಮ್ಮಣ್ಣನೆಂಬ ಕವಿಯಿಂದ ರಚಿತವಾಗಿದ್ದರೂ, ಗೋಕಾಕ ತಾಲೂಕಿನ ಕುಲಗೋಡು ತಿಮ್ಮಣ್ಣನೆಂಬಾತನು ತನ್ನದೇ ಆದ ಕಲಾವಿದರ ತಂಡ ಮಾಡಿಕೊಂಡು

ಭಾಗವತಾರಾಟದ ಮಾದರಿಯಲ್ಲಿ ರೂಪಾಂತರಿಸಿ ರಾಜ್ಯದಾದ್ಯಂತ ಪ್ರಯೋಗಿಸಿದನೆಂದು ಪ್ರತೀತಿ ಎಂಬಮಾತನ್ನು ಜಾನಪದ ಸಂಶೋಧಕ ಎಂ.ಟಿ. ಧೂಪದವರ ಅಭಿಪ್ರಾಯವಾಗಿದೆ. ಈ ರೀತಿಯ ಸಾಧನೆಗೆ ಇಲ್ಲಿ ತಮ್ಮಣ್ಣನ ತಂತ್ರಯುಕ್ತ ನಾಟಕದ ಪರಿಜ್ಞಾನವೇ ಕಾರಣವೆನ್ನಲಾಗಿದೆ.

**ಸಂಗ್ಯಾಬಾಳ್ಯಾ :** ಉತ್ತರ ಕರ್ನಾಟಕದ ಬಯಲು ಸೀಮೆಯ ರಂಗ ಚಟುವಟಿಕೆಗಳಲ್ಲಿ 'ಬಯಲಾಟ' ಎಂಬ ರಂಗ ಪ್ರಕಾರಗಳಲ್ಲಿ ದೊಡ್ಡಾಟ, ಸಣ್ಣಾಟ ಎಂಬ ಉಪಪ್ರಕಾರಗಳೂ ಬರುತ್ತವೆ. ಸಣ್ಣಾಟದ ಪ್ರಕಾರಗಳಲ್ಲಿ ಬರುವ ಸಂಗ್ಯಾಬಾಳ್ಯಾ ಆಟವು ಇದೇ ಜಿಲ್ಲೆಯ ಬೈಲಹೊಂಗಲದಲ್ಲಿ ನಡೆದ ವಾಸ್ತವ ಘಟನೆಯೊಂದನ್ನು ವಸ್ತುವಾಗಿ ತೆಗೆದುಕೊಂಡು ಅತ್ಯಂತ ಪ್ರಸಿದ್ಧಿಗೆ ಬಂದಂಥ ಆಖ್ಯಾನ. ಗಂಗಾ ಎಂಬ ಗಂಡುಳ್ಳ ಹೆಣ್ಣಿನೊಂದಿಗಿನ ಆಕ್ರಮ ಸಂಬಂಧಕ್ಕೆ ಬಲಿಯಾಗುವ ಮಿತ್ರದ್ರೋಹಿ ಯುವಕನೋರ್ವನ ಕತೆ ಸಮಾಜಕ್ಕೊಂದು ನೀತಿಬೋಧಕ ಮಾದರಿಯದಾಗಿದೆ. ಈ ಕತೆಯನ್ನು ಗಂಗಾಳ ತವರೂರಾದ ಬೈಲವಾಡ ಗ್ರಾಮದ ರಾಯಪ್ಪ ಮಾಸ್ತರ ಎಂಬವರಿಂದ ರಚಿತವಾದದ್ದಾಗಿತ್ತು. ಅತ್ಯಂತ ಪರಿಣಾಮಕಾರಿಯಾದ ಇದೇ ಆಖ್ಯಾನವನ್ನು ಹೋಲುವ ಇನ್ನೊಂದು ಕತೆ 'ದುಂಡ್ಯಾಮೋದೀನ' ಎಂಬ ಜಾನಪದ ರೂಪಕವೂ ಅಲ್ಪ ಮಟ್ಟಿಗೆ ಆಗಿನ ಸಂದರ್ಭದಲ್ಲಿ ಪ್ರಚಾರದಲ್ಲಿತ್ತು.

# ವೃತ್ತಿ ರಂಗಭೂಮಿ

ಕನ್ನಡ ರಂಗಭೂಮಿಯ ಪ್ರಾಚೀನತೆಗೆ ಕನ್ನಡ ಶಾಸನ, ಕಾವ್ಯಗಳ ಆಧಾರಗಳೇ ಸಮರ್ಥವಾಗಿ ನಿಲ್ಲುತ್ತವೆ ಎಂಬುದು ಗಮನಿಸಬೇಕಾದ ಸಂಗತಿ. ಇವುಗಳ ಜೊತೆ ಜೊತೆಯಲ್ಲಿಯೇ ಅವ್ಯಾಹತವಾಗಿ ಸಾಗಿಬಂದ ಕನ್ನಡ ಜನಪದ ರಂಗಭೂಮಿಯ ಯಕ್ಷಗಾನದಿಂದಲೇ ಪ್ರೇರಿತವಾದ ಮಹಾರಾಷ್ಟ್ರ ರಂಗಭೂಮಿಯ ಚಟುವಟಿಕೆಗಳು ವೃತ್ತಿನಾಟಕಗಳ ಸ್ವರೂಪ ಹೊಂದಿ ಕರ್ನಾಟಕದಲ್ಲಿಯೇ ಪ್ರದರ್ಶನಕ್ಕಾಗಿ ಸಂಚಾರ ಕೈಕೊಂಡು ಅವುಗಳ ಪ್ರಭಾವ ಕನ್ನಡ ಜನತೆಯ ಮೇಲಾಗಿ ಮರಾಠಿ ರಂಗಪ್ರಯೋಗಗಳಲ್ಲಿ ಕನ್ನಡಿಗರ ಒಲವು ಕೇಂದ್ರಿಕೃತವಾಯಿತು.

ಈ ರೀತಿಯ ಹಗರಣಗಳಿಗೂ ಆಧಾರಗಳಿಲ್ಲದೇ ಇಲ್ಲ. ಆ ಸಮಯದಲ್ಲಿ ಪಾರ್ಸಿಯವರೂ ಕೂಡ ದಕ್ಷಿಣ ಹಾಗೂ ಉತ್ತರ ಕರ್ನಾಟಕದ ತುಂಬೆಲ್ಲ ಸಂಚರಿಸಿ ಉರ್ದು, ಹಿಂದಿ, ಪಾರ್ಸಿ ಭಾಷೆಯ ರಂಗಚಟುವಟಿಕೆಗಳನ್ನು ವೈಭವಾಡಂಬರದ ರಂಗವಿನ್ಯಾಸದಲ್ಲಿ ಪ್ರಯೋಗಿಸಿ ಕನ್ನಡಿಗರ ಮೇಲೆ ಅತಿಯಾದ ಪ್ರಭಾವ ಬೀರಿದ್ದರು. ಈ ರೀತಿಯ ಅನ್ಯಬಾಷಾ ರಂಗಚಟುವಟಿಕೆಗಳ ಪರಸ್ಪರ ಪ್ರಭಾವ ಕನ್ನಡ ಭಾಷೆ ಹಾಗೂ ಸಂಸ್ಕೃತಿಯ ಮೇಲಾಗಿ ನಾಡಿನ ಅರ್ಥಸಂಪತ್ತು ಕರಗಹತ್ತಿತು. ಈ ಸಂದರ್ಭದಲ್ಲಿ ಕನ್ನಡದ ದುಃಸ್ಥಿತಿಯನ್ನು ಕಂಡು ಮರುಗಿದ ಶಾಂತಕವಿ ಹಾಗೂ ಶ್ರೀನಿವಾಸ ಕವಿಗಳಂಥ ಅನೇಕರಲ್ಲಿ ಕನ್ನಡದ ಕೆಚ್ಚು ತನ್ನದೇ ಆದ ನಿಲುವು ಪಡೆದು ಜನಪದ ರಂಗಭೂಮಿಯಲ್ಲಿ ಆಧುನಿಕತೆ ತಂದದ್ದು ಒಂದು ಇತಿಹಾಸ.

ಬೆಳಗಾವಿ ಜಿಲ್ಲೆಯ ವೃತ್ತಿ ರಂಗಭೂಮಿಯ ಇತಿಹಾಸ ಅದ್ಭುತವಾಗಿತ್ತೆನ್ನಲಾಗಿದೆ. ಕರ್ನಾಟಕದ ವೃತ್ತಿ ರಂಗಭೂಮಿಯ ಉದ್ಭವಕ್ಕೆ ಉತ್ತರ ಕರ್ನಾಟಕವೇ ಕಾರಣವಾಗಿ ಅತ್ತ ಗದಗ ಜಿಲ್ಲೆಯ ಗದುಗಿನ ಶಾಂತಕವಿಗಳ ಕೃತಮರ ಸಂಗೀತ ನಾಟಕ ಮಂಡಳಿ ಮುಂದಾದರೆ, ಇತ್ತ ಬೆಳಗಾವಿಯ ಹಲಸಗಿ ವೆಂಕಣ್ಣಾಚಾರ್ಯರ ಹಲಸಗಿ ಸಂಗೀತ ನಾಟಕ ಮಂಡಳಿಯು ಕಾರಣೀ ಭೂತವಾಯಿತು. ಬೆಳಗಾವಿ ಜಿಲ್ಲೆಯಲ್ಲಿದ್ದಷ್ಟು ವೃತ್ತಿ ನಾಟಕ ಕಂಪನಿಗಳು ಬೇರೊಂದು ಜಿಲ್ಲೆಯಲ್ಲಿ ಇರಲಿಲ್ಲ. ಜಿಲ್ಲೆಯಲ್ಲಿದ್ದ ಸುಮಾರು ಮೂವತ್ತಕ್ಕಿಂತಲೂ ಹೆಚ್ಚು ನಾಟಕ ಕಂಪನಿಗಳಲ್ಲಿ ಅರ್ಧದಷ್ಟು ಕಂಪನಿಗಳು ಬೈಲಹೊಂಗಲ ತಾಲೂಕಿನಲ್ಲಿಯೇ ಇದ್ದವೆಂಬುದು ನಿಜಕ್ಕೂ ಅಭಿಮಾನದ ಸಂಗತಿ.

ಇನ್ನು ಉತ್ತರ ಕರ್ನಾಟಕದಲ್ಲಿಯೇ ಜಯಭೇರಿ ಹೊಡೆದಂತ ಕೊಣ್ಣೂರಿನ ಶ್ರೀ ಕಾಡಸಿದ್ಧೇಶ್ವರ ಸಂಗೀತ ನಾಟಕ ಕಂಪನಿ, ಚಿಕ್ಕೋಡಿಯ ಶ್ರೀ ಶಿವಲಿಂಗೇಶ್ವರ ನಾಟಕ

ಮಂಡಳಿ, ಗೋಕಾಕಿನ ಶ್ರೀ ಶಾರದಾ ಸಂಗೀತ ನಾಟಕ ಕಂಪನಿ, ಬೆಳಗಾವಿಯ ಕಲಾವೈಭವ ನಾಟ್ಯ ಸಂಘ, ದೊಡ್ಡವಾಡದ ಸಮಾಜವಿಕಾಸ ನಾಟ್ಯ ಸಂಘ ಹಾಗೂ ಶ್ರೀ ಸಂಗಮೇಶ್ವರ ನಾಟ್ಯ ಸಂಘ ಮುಂತಾದವುಗಳು ಜಿಲ್ಲೆಯ ರಂಗಸಂಸ್ಕೃತಿಯ ಶಿಖರಗಳು. ಪ್ರಾತಿನಿಧಿಕವಾಗಿ ಇವುಗಳಲ್ಲಿ ಹಲವನ್ನು ಈ ಮುಂದೆ ಚರ್ಚಿಸಿದೆ.

**ಹಲಸಗಿ ಸಂಗೀತ ನಾಟಕ ಮಂಡಳಿ, ಹಲಸಗಿ :** ಬೆಳಗಾವಿ ಜಿಲ್ಲೆ ಖಾನಾಪೂರ ತಾಲೂಕು ಹಲಸಗಿಯಲ್ಲಿ ಶ್ರೀನಿವಾಸ ಕವಿಗಳೆಂದೇ ಹೆಸರಾಗಿದ್ದ ಶ್ರೀ ವೆಂಕಣ್ಣಾಚಾರ್ಯ ಅಗಳಗಟ್ಟಿಯವರು ವಿದ್ಯಾಧೀಶಾಚಾರ್ಯ, ಅಣ್ಣಾಚಾರ್ಯ ಮಂಡಗಿ, ಹಲಸಗಿ ನರಾಚಾರ್ಯ ಮುಂತಾದವರು ಹಾಗೂ ಗ್ರಾಮಸ್ಥರನ್ನೆಲ್ಲ ಸೇರಿಸಿಕೊಂಡು ಪುರಾಣ, ಪ್ರವಚನ, ಹರಿಕೀರ್ತನೆ ಮುಂತಾದವುಗಳನ್ನು ಹೇಳುವ ಪರಿಪಾಟವನ್ನು ಇಟ್ಟುಕೊಂಡಿದ್ದರು ಎನ್ನಲಾಗಿದೆ.

ಸುಮಾರು 1869 ರಲ್ಲಿ ವೆಂಕಣ್ಣಾಚಾರ್ಯರು ಸೌಭದ್ರಾ ಪರಿಣಯ, ಸೀತಾ ಸ್ವಯಂವರ, ದ್ರೌಪದಿ ವಸ್ತ್ರಾಪಹರಣ ಹಾಗೂ ಭೌಮಾಸುರ ವಧೆ ಎಂಬ ಮುಂತಾದ ನಾಟಕಗಳನ್ನು ಬರೆದು ತಮ್ಮ ಮಿತ್ರಮಂಡಳಿಯೊಂದಿಗೆ ಹಲಸಗಿ ಸಂಗೀತ ನಾಟಕ ಮಂಡಳಿ, ಹಲಸಗಿ. ಎಂಬ ಸಂಘಟನೆಯೊಂದನ್ನು ಮಾಡಿಕೊಂಡು ತನ್ಮೂಲಕ ತಮ್ಮ ಸ್ವರಚಿತ ನಾಟಕಗಳನ್ನು ಜನಪದ ರಂಗಟುವಟಿಕೆಗಳಿಗಿಂತಲೂ ಕೊಂಚ ಭಿನ್ನವಾಗಿ ಪ್ರಯೋಗಕ್ಕೂ ಅಳವಡಿಸಿದ್ದರು. ವೆಂಕಣ್ಣಾಚಾರ್ಯ ಅಗಳಗಟ್ಟಿಯವರೂ ಸೇರಿದಂತೆ ಗೋಪಾಲಾಚಾರ್ಯ, ಹನುಮಂತಾಚಾರ್ಯರು, ಕಿತ್ತೂರು ಭಟ್ಟರು, ಅಣ್ಣಾಚಾರ್ಯ ಮಂಡಗಿ, ಸಂಡಗಿ, ಇವರೆಲ್ಲ ಮಂಡಳಿ ಪ್ರಯೋಗಿಸುತ್ತಿದ್ದ ನಾಟಕಗಳ ನಟರೂ ಆಗಿದ್ದರು.

ಆ ಸಂದರ್ಭದಲ್ಲಿ ಕರ್ನಾಟಕದ ಬೆಳಗಾವಿ ಭಾಗದಲ್ಲೆಲ್ಲ ಮರಾಠಿ ರಂಗಚಟುವಟಿಕೆಗಳೇ ಬಹಳವಾಗಿ ನಾಟಕಗಳನ್ನು ಪ್ರಯೋಗಿಸಲ್ಪಡುತ್ತಿದ್ದವು. ಹೀಗಿದ್ದಾಗ, ವೆಂಕಣ್ಣಾಚಾರ್ಯರು ಜನಪದ ರಂಗಭೂಮಿಯ ಚಟುವಟಿಕೆ ಗಳಿಗಿಂತಲೂ ಭಿನ್ನವಾಗಿ ಆಧುನಿಕವೆನ್ನುವಂತೆ ಪ್ರದರ್ಶನ ನೀಡಿದ್ದು ಆಗಿನ ಸಂದರ್ಭದ ಪಾರ್ಸಿ ಹಾಗೂ ಮರಾಠಿ ನಾಟಕಗಳ ಪ್ರಭಾವವೇ ಎನ್ನಬಹುದು. ಇದರ ಪರಿಣಾಮವಾಗಿ ಜನತೆಯ ಒಲವು ಮರಾಠೀ ನಾಟಕಗಳಿಂದ ಕ್ರಮೇಣ ಹಲಸಗಿಯವರಾಡುತ್ತಿದ್ದ ಕನ್ನಡ ನಾಟಕಗಳತ್ತ ತಿರುಗಹತ್ತಿ ಬೆಳಗಾವಿ ಭಾಗದ ರಂಗ ಕ್ಷೇತ್ರದಲ್ಲಿ ಭಾರೀ ಕ್ರಾಂತಿಯೇ ಪ್ರಾರಂಭವಾಯಿತೆನ್ನಬಹುದು. ಬೆಳಗಾವಿಯನ್ನು ಹೊರತುಪಡಿಸಿ ಕರ್ನಾಟಕದ ಇತರ ಭಾಗಗಳಲ್ಲೂ ಈ ಮಂಡಳಿಯು ಸಂಚಾರ ಕೈಕೊಂಡು ನಾಟಕಗಳನ್ನು ಪ್ರಯೋಗಿಸಿದ್ದಾಗಿದೆ.

**ಶ್ರೀ ಕಾಡಸಿದ್ಧೇಶ್ವರ ಸಂಗೀತ ನಾಟಕ ಕಂಪನಿ, ಕೊಣ್ಣೂರು :** ಇತ್ತ ಹಲಸಗಿ ವೆಂಕಣ್ಣಾಚಾರ್ಯರ ಹಲಸಗಿ ಸಂಗೀತ ನಾಟಕಮಂಡಳಿಯ, ಅತ್ತ ಗದುಗಿನ ಶಾಂತ

ಕವಿಗಳ ಕೃತಪುರ ನಾಟಕ ಮಂಡಳಿಯ ರಂಗ ಚಟುವಟಿಕೆಗಳಿಂದ ಪ್ರಭಾವಿತಗೊಂಡು ಗೋಕಾಕ್ ತಾಲೂಕ ಕೊಣ್ಣೂರಿನ ಶ್ರೀ ಶಿವಮೂರ್ತಿಸ್ವಾಮಿ ಕಣಬರ್ಗಿಮಠವರು ಅಪಾರ ಹಣವನ್ನು ವ್ಯಯಮಾಡಿ, ಅದ್ದೂರಿಯ ರಂಗ ಪರಿಕರಗಳನ್ನೆಲ್ಲ ತಯಾರಿಸಿಕೊಂಡು ಶ್ರೀ ಕಾಡಸಿದ್ಧೇಶ್ವರ ಸಂಗೀತ ನಾಟಕ ಮಂಡಳಿ, ಕೊಣ್ಣೂರು. ಎಂಬ ಬೃಹತ್ ನಾಟಕ ಕಂಪನಿಯನ್ನು ಕಟ್ಟಿ ಪೌರಾಣಿಕ ಕಥಾಧಾರಿತ ಭರ್ಜರಿ ನಾಟಕಗಳನ್ನು ಪ್ರದರ್ಶಿಸಹತ್ತಿದರು. ಮುರಗೋಡು ಗಂಗಾಧರಪ್ಪ, ಬೆಳವಿ ರಾಚಯ್ಯ ಸ್ವಾಮಿ, ತುಕಾರಾಂ ಬುವಾ, ಬಳ್ಳಾರಿ ಬಸವಪ್ಪಾ, ಚಿಕ್ಕೋಡಿ ಶಿವಲಿಂಗ ಶಾಸ್ತ್ರಿಗಳು, ಈರಪ್ಪ ಕಲಕೇರಿ, ಕಲ್ಲೋಳಿ ಶಾಮಭಟ್ಟರು ಮುತಾದವರು ಈ ಕಂಪನಿಯ ಪ್ರಮುಖ ನಟರಾಗಿದ್ದರು. ಎಲ್ಲೂಬಾಯಿ ಗುಳೇದಗುಡ್ಡ, ಲಕ್ಷ್ಮಸಾನಿ ಬಳ್ಳಾರಿ, ರೇಣುಕಾ ಗುಳೇದಗುಡ್ಡ ಮುಂತಾದವರು ನಟಿಯರು.

ಇನ್ನು ವಾದ್ಯಗಾರರಾಗಿ ಹಾರ್ಮೋನಿಯಂ– ಶಂಕರರಾವ್ ವಸಯಿ, ತಬಲಾ– ವಿಠ್ಠಲರಾವ್ ಕೋಲ್ಹಾಪೂರ, ಪಿಟೀಲು– ಭೀಮಪ್ಪ ಸಂಶಿ ಮುಂತಾದವರಾಗಿದ್ದರು. ಈ ಕಂಪನಿಯ ರಂಗಚಿತ್ರ ಕಲಾವಿದರಾಗಿ ರಘುವೀರ ಪೇಂಟರ್, ಬಳವಂತರಾವ್ ಪೇಂಟರ್ ಹಾಗೂ ಸದೋಬಾ ಪೇಂಟರ್ ಮುಂತಾದವರು ಹೆಸರಾಗಿದ್ದರು.

ಆ ಎಲ್ಲ ಪ್ರಯೋಗಗಳ ರಂಗವಿನ್ಯಾಸವು ಪಾರಸಿ ನಾಟಕಗಳ ಪ್ರಭಾವಕ್ಕೆ ಒಳಗಾದಂಥವೇ ಆಗಿದ್ದವು. ಶಿವಮೂರ್ತಿ ಸ್ವಾಮಿಗಳು ತಮ್ಮ ಕಂಪನಿಯಲ್ಲಿ ಏನೇ ಮಾಡಿದರೂ ಹೊಸ ಹೊಸದನ್ನೇ ಮಾಡುತ್ತ ನಡೆದರು. ರಂಗ ಸಜ್ಜಿಕೆಗೆ ವಿದ್ಯುತ್ ಬಳಸಿದ್ದು, ಸುತ್ತಿಕೊಂಡು ಮೇಲೆ ಹೋಗುವ ಹಾಗೂ ಕೆಳಗೆ ಬರುವ ರಂಗ ರಂಗಿನ ಪರದೆಗಳ ಮಾಯಾಲೋಕ ಸೃಷ್ಟಿಸಿದ್ದು, ಕಥಾ ಸಂದರ್ಭಕ್ಕನುಸಾರವಾಗಿ ಪಾರ್ಸಿಯವರಂತೆ ಕಟ್‌ಸೀನ್ಸ್, ಟ್ರಾನ್ಸಫರ್ ಸೀನ್ಸ್‌ಗಳ ಪವಾಡಮಯ ಅದ್ಭುತಗಳನ್ನು ಮಾಡಿತೋರಿಸಿದ್ದು, ಹಲವಾರು ರೀತಿಯ ರಂಗ ಚಮತ್ಕಾರಗಳಿಂದ ಪ್ರೇಕ್ಷಕರನ್ನು ಮೋಡಿ ಮಾಡಿದ್ದು, ರಂಗದ ಅಭಿನಯ ಕ್ಷೇತ್ರಕ್ಕೆ ಪ್ರಪ್ರಥಮವಾಗಿ ಸ್ತ್ರೀಯರನ್ನು ಸೇರಿಸಿಕೊಂಡದ್ದು, ನಾಟಕ ಸಂಗೀತಕ್ಕೆ ಹಾರ್ಮೋನಿಯಂ ಉಪಯೋಗಿಸಿಕೊಂಡದ್ದು ಹೀಗೆ ಹಲವಾರು ರೀತಿಯ ಪ್ರಥಮಗಳಿಗೆ ಕಾರಣವಾಗಿದ್ದ ಈ ಕಂಪನಿ 1920 ರ ಸುಮಾರಿಗೆ ಪ್ರದರ್ಶಿಸಿದ 'ದುರಾತ್ಮ ರಾವಣ' 'ವಿರಾಟ ಪರ್ವ' 'ಹರಿಶ್ಚಂದ್ರ' 'ಮದನ ಮೋಹನ' 'ಮಹಾತ್ಮಾ ಬಸವೇಶ್ವರ' ಮುಂತಾದ ನಾಟಕಗಳು ಅತ್ಯಂತ ಪ್ರಸಿದ್ಧಿಯ ಪ್ರಯೋಗಗಳಾಗಿದ್ದವು. ಹೀಗೆ, ಆಕರ್ಷಕ ಪ್ರದರ್ಶನಗಳನ್ನು ನೀಡುವ ಮೂಲಕ ವೃತ್ತಿರಂಗಭೂಮಿಯ ನಿರಂತರತೆಗೆ ಪ್ರಯತ್ನಿಸಿದವರು ಶ್ರೀ ಶಿವಮೂರ್ತಿ ಸ್ವಾಮಿಗಳು ಎಂದು ಹೇಳಬಹುದು.

**ಶ್ರೀ ಶಿವಲಿಂಗೇಶ್ವರ ಸಂಗೀತ ನಾಟಕ ಮಂಡಳಿ, ಚಿಕ್ಕೋಡಿ :** 1908ರಲ್ಲಿ ಚಿಕ್ಕೋಡಿಯ ಶ್ರೀ ಶಿವಲಿಂಗೇಶ್ವರ ಸ್ವಾಮಿಗಳ ಸಾರಥ್ಯದಲ್ಲಿ ಹುಟ್ಟಿಕೊಂಡ ಈ ಕಂಪನಿ

ಹೆಚ್ಚಿನ ಆಡಂಬರಕ್ಕೆ ಬೀಳದೇ ಅತ್ಯುತ್ತಮವಾದಂಥ ಸಾತ್ವಿಕ ನಾಟಕಗಳನ್ನು ಪ್ರೇಕ್ಷಕರಿಗೆ ನೀಡಿದೆಯನ್ನಲಾಗಿದೆ. ಸ್ವಾಮಿಗಳು ಸ್ವತಃ ಕವಿಗಳಾಗಿದ್ದರು. ಹೀಗಾಗಿ, ಅನೇಕ ನಾಟಕಗಳನ್ನು ಅವರೇ ಬರೆದು ರಂಗಕ್ಕಳವಡಿಸಿದ್ದೂ ಉಂಟು. ಅವರಾಡುತ್ತಿದ್ದ ನಾಟಕಗಳಲ್ಲಿ 'ಸೌಭದ್ರ' ಹಾಗೂ 'ಮಹಾನಂದ' ನಾಟಕಗಳು ಪ್ರಸಿದ್ಧಿಯಲ್ಲಿದ್ದವು. ಹಲವಾರು ವರ್ಷಗಳನಂತರ ಈ ಕಂಪನಿಯು ತಾತ್ಪೂರ್ತಿಕವಾಗಿ ವಿರಮಿಸಿತು. ಅಲ್ಲಿಯವರೆಗೆ ಸ್ವಾಮಿಗಳು ಶ್ರೀ ಕಾಡಸಿದ್ಧೇಶ್ವರ ಸಂಗೀತ ನಾಟಕ ಮಂಡಳಿಯಲ್ಲಿ ಸೇವೆಗೆ ಸೇರಿದ್ದರು. ನಂತರ 1921 ರಲ್ಲಿ ಮತ್ತೆ ಇದೇ ಹೆಸರಿನಿಂದ ಮಂಡಳಿ ಕಾರ್ಯ ಪ್ರವೃತ್ತವಾಯಿತು. ಜನತೆಯ ಭಾವನೆಯಲ್ಲಿ ರಾಷ್ಟ್ರೀಯತೆ ತುಂಬುವ ನಿಟ್ಟಿನಲ್ಲಿ ಅತ್ಯಂತ ಪರಿಣಾಮಕಾರಿಯಾದಂತ ರಾಣಿ ಕಿತ್ತೂರು ರುದ್ರಮ್ಮ, ರಾಣಿ ಕಿತ್ತೂರು ಚನ್ನಮ್ಮ ಹಾಗೂ ಪವಿತ್ರ ಖಾದಿ, ರಾಷ್ಟ್ರಧ್ವಜ ಮುಂತಾದ ನಾಟಕಗಳನ್ನು ಬರೆದು ಪ್ರಯೋಗಿಸಿದ್ದರು. ಈ ನಾಟಕಗಳು ಪ್ರೇಕ್ಷಕರ ಮೇಲೆ ಭಾರೀ ಪರಿಣಾಮ ಬೀರಿದ್ದವೆನ್ನಲಾಗಿದೆ.

ಸದರೀ ಮಂಡಳಿಯಲ್ಲಿ ಬಸವರಾಜ ಮನ್ಸೂರ, ಗುರಪ್ಪ ಮಾರೀಹಾಳ, ರಾವಸಾಹೇಬ ದೇಸಾಯಿ, ಮುರಗೋಡು ಗಂಗಾಧರಪ್ಪ, ಮಲ್ಲಾರಿರಾವ್ ಜೋಶಿ, ಹುಚ್ಚಪ್ಪ ಸೂಡಿ, ಏಣಿಗಿ ಬಾಳಪ್ಪ, ಗೋಹರ್‌ಜಾನ್ ಕರ್ನಾಟಕಿ, ವಜೀರಾಬಾಯಿ, ಬ್ಯಾಡಗಿ ಸಾವಿತ್ರಮ್ಮ ಮುಂತಾದ ನಟ ನಟಿಯರು ಅಭಿನಯ ಸೇವೆ ಸಲ್ಲಿದ್ದಾರೆ. ಈ ಕಂಪನಿಯ ಅವಸಾನದ ನಂತರವೂ ಸ್ವಾಮಿಗಳು ಸುಮ್ಮನೇ ಕೂಡದೆ 1931 ರಲ್ಲಿ ಸಿರಸಿಗೆ ಹೋಗಿ ಶ್ರೀ ಸಿರ್ಸಿ ಮಾರಿಕಾಂಬಾ ಪ್ರಾಸಾದಿಕ ನಾಟಕ ಮಂಡಳಿ ಎಂಬ ಮತ್ತೊಂದು ನಾಟಕ ಮಂಡಳಿಯನ್ನು ಹುಟ್ಟುಹಾಕಿ ಇವೇ ನಾಟಕಗಳೊಂದಿಗೆ 'ಗುರು ವಿರಕ್ತರ ಪ್ರಪಂಚ' ಎಂಬ ಸಾಮಾಜಿಕ ನಾಟಕವನ್ನು ಅತ್ಯಂತ ಪ್ರಭಾವಯುತವಾಗಿ ಪ್ರದರ್ಶಿಸಿದರು. ಒಟ್ಟಾರೆ ಸ್ವಾಮಿಗಳ ನಾಟಕಗಳು ಸಮಾಜ ಸುಧಾರಣೆ ಹಾಗೂ ರಾಷ್ಟ್ರ ಸೇವೆಯ ಮನೋಭಾವನೆಯನ್ನು ಬಿಂಬಿಸುವ ನಿಟ್ಟಿನಲ್ಲಿ ರಂಗಭೂಮಿಯ ಮೂಲಕವಾಗಿ ಅನನ್ಯ ಸೇವೆ ಸಲ್ಲಿಸಿದ್ದವು ಎಂದು ಹೇಳಬಹುದು.

**ಶ್ರೀ ಶಾರದಾ ಸಂಗೀತ ನಾಟಕ ಕಂಪನಿ, ಗೋಕಾಕ :** 1917 ರಲ್ಲಿ ತುಕಾರಾಂ ಬುವಾ ಹೊಸಮನಿ ಅವರು ಬೆಳಗಾವಿ ಜಿಲ್ಲೆ ಗೋಕಾಕಿನಲ್ಲಿ 'ವಿದ್ಯಾದರ್ಶಕ ಸಂಗೀತ ನಾಟಕ ಮಂಡಳಿ, ಗೋಕಾಕ್' ಎಂಬುದಾಗಿ ನಾಟಕ ಕಂಪನಿಯೊಂದನ್ನು ಹುಟ್ಟು ಹಾಕಿದರು. ಅದು ಕೆಲವು ವರ್ಷಗಳವರೆಗೆ ನಿರಂತರವಾಗಿ ಹಲವಾರು ನಾಟಕಗಳನ್ನು ಪ್ರೇಕ್ಷಕರಿಗೆ ನೀಡಿ ಕಂಪನಿ ಶಾಶ್ವತವಾಗಿ ವಿರಮಿಸಿಕೊಂಡಾದ ಮೇಲೆ ತುಕಾರಾಂ ಅವರ ಮೊಮ್ಮಗ ಬಸವರಾಜ ಹೊಸಮನಿಯವರು 1933 ರಲ್ಲಿ ಶ್ರೀ ಶಾರದಾ ಸಂಗೀತ ನಾಟಕ ಮಂಡಳಿ ಎಂಬ ಸಂಸ್ಥೆಯನ್ನು ಪ್ರಾರಂಭಿಸಿದರು. ಅಷ್ಟೊತ್ತಿಗಾಗಲೇ ಕರ್ನಾಟಕದ ತುಂಬೆಲ್ಲ ನೂರಾರು ನಾಟಕ ಕಂಪನಿಗಳು ಹುಟ್ಟಿಕೊಂಡು ಕನ್ನಡ ರಂಗಭೂಮಿಯ ಶ್ರೀಮಂತಿಕೆಯನ್ನು ಹೆಚ್ಚಿಸಿದ್ದವು. ಮೈಸೂರು ಭಾಗದಲ್ಲಂತೂ ಗುಬ್ಬಿ ಕಂಪನಿ ಬಹಳಷ್ಟು

ಹೆಸರು ಮಾಡಿ ಅದ್ದೂರಿಯ ಪ್ರದರ್ಶನಗಳನ್ನು ನೀಡುತ್ತಿತ್ತು. ಅದೇ ರೀತಿ ಅದಕ್ಕೆ ಸರಿ ಸಮಾನವಾಗಿ ಉತ್ತರ ಕರ್ನಾಟಕದ ಬೆಳಗಾವಿ ಜಿಲ್ಲೆಯ ಗೋಕಾಕಿನ ಶ್ರೀ ಶಾರದಾ ಸಂಗೀತ ನಾಟಕ ಮಂಡಳಿಯು ಅತ್ಯಂತ ಅದ್ಧೂರಿಯಿಂದ ನಾಟಕಗಳನ್ನು ಪ್ರದರ್ಶಿಸಿದ್ದುಂಟು.

ಸಂಗೀತ, ಸಾಹಿತ್ಯ, ಹಾಸ್ಯ, ರಂಗವಿನ್ಯಾಸ, ರಂಗ ಚಮತ್ಕಾರ ಎಲ್ಲದರಲ್ಲೂ ಈ ಕಂಪನಿಯದು ಎತ್ತಿದ ಕೈಯಾಗಿತ್ತು. ಇವರು ಪೌರಾಣಿಕ, ಐತಿಹಾಸಿಕ ಹಾಗೂ ಸಾಮಾಜಿಕ ನಾಟಕಗಳನ್ನೂ ಸಮರ್ಥ ರೀತಿಯಲ್ಲಿ ಪ್ರಯೋಗಿಸುತ್ತಿದ್ದರು. 1945ರ ಸುಮಾರಿಗೆ 'ರಕ್ತರಾತ್ರಿ' 'ದ್ರೌಪದಿ ವಸ್ತ್ರಾಪಹರಣ' 'ಕುರುಕ್ಷೇತ್ರ' 'ರಕ್ತರಾತ್ರಿ' 'ಚಿತ್ರಾಂಗದಾ' 'ಹೇಮರೆಡ್ಡಿ ಮಲ್ಲಮ್ಮ' 'ರಾಕ್ಷಸೀ ಮಹತ್ವಾಕಾಂಕ್ಷೆ' 'ಭೌಮಾಸುರ' 'ರಾಜದ್ರೋಹ' ಹಾಗೂ ಹಲವಾರು ಸಾಮಾಜಿಕ ನಾಟಕಗಳಿಂದಲೂ ಪ್ರೇಕ್ಷಕರನ್ನು ಬಹುವಾಗಿ ರಂಜಿಸಿದ್ದಾರೆ.

ಈ ಕಂಪನಿಯಲ್ಲಿದ್ದ ತುಕಾರಾಮ ಬುವಾ, ಲಕ್ಷ್ಮಣರಾವ್ ಪುರಿ, ರಟ್ಟಿಹಳ್ಳಿ ಗಂಗಾಧರಪ್ಪ, ಬಸವಣ್ಣೆಪ್ಪ ಹೊಸ್ಮನಿ, ಏಣಗಿ ಬಾಳಪ್ಪ, ಎಲಿವಾಳ ಸಿದ್ಧಯ್ಯ, ಓಬಳೇಶ್ವರ, ಹಲಗೇರಿ ಭೀಮರಾವ್. ಶಾಂತಪ್ಪ ಅಕ್ಕಲಕೋಟೆ, ರಾಜಾರಾಂ ಕಿತ್ತೂರ ಮುಂತಾದ ನಟರು ಹಾಗೂ ಕೆರೂರ ಶಾಂತಮ್ಮ ಮುರಗೋಡು ಹೀರಾಬಾಯಿ, ಕೊಟ್ಟೂರು ನಾಗರತ್ನಮ್ಮ, ಸುಮಿತ್ರಾ ಕುಂದಾಪೂರ, ಅಂಬುಜಮ್ಮ ಹೊಸ್ಮನಿ ಮುಂತಾದ ನಟಿಯರು ಹೀಗೆ ಪ್ರತಿಯೊಬ್ಬರೂ ಅತ್ಯಂತ ಶ್ರೇಷ್ಠಮಟ್ಟದ ಕಲಾವಿದರಾಗಿದ್ದರು.

ಭಗವಂತಪ್ಪ ಹೊಸ್ಮನಿ, ಬಾಬಯ್ಯ ಸ್ವಾಮಿ ಮುಂತಾದವರು ಹಾರ್ಮೋನಿಯಂ ಕಲಾವಿದರಾಗಿ, ದುಗ್ಗಪ್ಪ ಬಸರೂರ, ಹಾಗೂ ತುಮ್ಮಿನಕಟ್ಟಿ ತಬಲಾ ಕಲಾವಿದರಾಗಿ ಸೇವೆ ಸಲ್ಲಿಸಿದ್ದಾರೆ. ಅತ್ಯಂತ ಉನ್ನತ ಮಟ್ಟದಲ್ಲಿ ಬೆಳೆದು ನಿಂತಿದ್ದ ಈ ಕಂಪನಿ ಒಂದು ರೀತಿಯಿಂದ ನಟರನ್ನು ತಯಾರು ಮಾಡುವ ಕಾರಖಾನೆಯಂತಿತ್ತು ಎಂಬುದು ಬಹು ಜನರ ಅಭಿಪ್ರಾಯವಾಗಿತ್ತು.

**ಕಲಾವೈಭವ ನಾಟ್ಯ ಸಂಘ ಬೆಳಗಾವಿ :** ಏಣಗಿ ಬಾಳಪ್ಪನವರು ಹಾಗೂ ಸಂಗಡಿಗರಿಂದ 1941 ರಲ್ಲಿ ಪ್ರಾರಂಭವಾದ ವೈಭವಶಾಲಿ ನಾಟ್ಯ ಸಂಘವು ಒಂದೇ ವರ್ಷದಲ್ಲಿ ಹಲವಾರು ಕಾರಣಗಳಿಂದ ಒಡೆದು, 1942 ಲ್ಲಿ ಕೇವಲ ಏಣಗಿ ಬಾಳಪ್ಪನವರ ಒಡೆತನದಲ್ಲಿ ಮಾತ್ರ 'ಕಲಾವೈಭವ ನಾಟ್ಯ ಸಂಘ'ವೆಂದು ಬೆಳಗಾವಿಯ ಹೆಸರಿನಿಂದ ಅದ್ಧೂರಿಯ ಸಂಗೀತ ನಾಟಕ ಮಂಡಳಿಯಾಗಿ ಇಡೀ ಕರ್ನಾಟಕದ ತುಂಬೆಲ್ಲ ಕೀರ್ತಿ ಪತಾಕೆಯನ್ನು ಹಾರಿಸಿದೆ. ಇವರಾಡುತ್ತಿದ್ದ ಕಿತ್ತೂರು ರುದ್ರಮ್ಮ ಹಾಗೂ ಕಿತ್ತೂರು ಚನ್ನಮ್ಮ ನಾಟಕಗಳಲ್ಲಿ ಸ್ವತಃ ಬಾಳಪ್ಪನವರೇ ರುದ್ರಮ್ಮ, ಚನ್ನಮ್ಮನ ಪಾತ್ರದಲ್ಲಿ ಕಾಣಿಸಿಕೊಂಡು ಪ್ರೇಕ್ಷಕರನ್ನು ರಂಜಿಸಿದ್ದರು.

ಮುಂದೆ ಇವರ ನಾಟಕ ಕಂಪನಿ ಕ್ಷೀಣಿಸಿ ಮತ್ತೆ 1947-48ರ ಹೊತ್ತಿಗೆ ಮೈ ಕೊಡವಿಕೊಂಡೆದ್ದಿತು. ಇಲ್ಲಿ ಕ್ರಾಂತಿ ಪುರುಷ ಬಸವಣ್ಣ, ಅಸ್ಪೃಶ್ಯತಾ ನಿವಾರಣೆ, ಕುರುಕ್ಷೇತ್ರ, ರಕ್ತರಾತ್ರಿ, ಗೋರಾ ಕುಂಬಾರ, ಚಿತ್ರಾಂಗದಾ ಮುಂತಾದ ಪೌರಾಣಿಕ ನಾಟಕಗಳೊಂದಿಗೆ ವಧುವರ, ಕುಂಕುಮ, ದೇವರಮಗು, ಸಂಪತ್ತಿಗೆ ಸವಾಲ್ ಮುಂತಾದ ಸಾಮಾಜಿಕ ನಾಟಕಗಳನ್ನೂ ಬಹಳ ಯಶಸ್ವಿಯಾಗಿ ಪ್ರಯೋಗಿಸಿತು.

ಬಾಳಪ್ಪನವರ ಈ ಕಂಪನಿಯಲ್ಲಿ ಶಿರೂರ ಗಂಗಯ್ಯ, ಪಂಚಯ್ಯ ಸ್ವಾಮಿ ಮೆಳ್ಳಿಗೇರಿ, ಗುರುಸಿದ್ಧಯ್ಯ ಸುತಗಟ್ಟಿ, ವಿರುಪಾಕ್ಷಪ್ಪ ಬಳ್ಳಾರಿ, ಶಾಂತೇಶ ಡಂಬಳ, ಸದಾಶಿವ ಬ್ರಹ್ಮಾವರ, ಸಿರ್ಶಿ ಪೇಂಟರ್, ರಾಯಚೂರ ಪೇಂಟರ್, ಕಲಾದಗಿ ಪೇಂಟರ್, ಚನಬಸಯ್ಯ ಕರ್ಲವಾಡ, ಲಕ್ಷ್ಮೀ ಬಾಯಿ ಬಳ್ಳಾರಿ, ಸುಭದ್ರಮ್ಮ ಮನ್ಸೂರ, ಸುಮಿತ್ರಾ ಕುಂದಾಪೂರ, ಸುಶೀಲಾ ಕುಂದಾಪೂರ ಮುಂತಾದ ನಟ ನಟಿಯರು ಉತ್ತಮ ಕಲಾ ಸೇವೆ ಗೈದಿದ್ದಾರೆ.

ರಾಯಚೂರ ಪೇಂಟರ್, ಕಲಾದಗಿ ಪೇಂಟರ್, ಸಿರ್ಶಿ ಪೇಂಟರ್ ರಂಗಚಿತ್ರ ಕಲಾವಿದರಾಗಿಯೂ, ಉತ್ತಮ ನಟರಾಗಿಯೂ ಸಾಧನೆಗೈದಿದ್ದರು. ಬಾಬಯ್ಯ ಸ್ವಾಮಿ ಅಮ್ಮಿಣಗಿ, ಜಂಪಣ್ಣ ಮಾಸ್ತರ್ ಕಮತಗಿ ಇವರೀರ್ವರೂ ಅನೇಕ ವರ್ಷಗಳವರೆಗೆ ಹಾರ್ಮೋನಿಯಂ ಸೇವೆ ಗೈದರೆ, ಮಹಾಲಿಂಗಪ್ಪ ಜಕ್ಕಲಿ ತಬಲಾ ವಾದನದ ಮೂಲಕ ಕಲಾ ಸೇವೆ ಮಾಡಿದ್ದಾರೆ.

**ಸಮಾಜವಿಕಾಸ ನಾಟ್ಯಸಂಘ, ದೊಡ್ಡವಾಡ:** ಬೈಲಹೊಂಗಲ ತಾಲೂಕ ದೊಡ್ಡವಾಡ ಗ್ರಾಮಸ್ಥರ ಧನಸಹಾಯದಿಂದ ಸ್ಥಾಪಿಸಲ್ಪಟ್ಟ ಮಹಾನ್ ಕಲಾವಿದ ಸಿದ್ಧರಾಜ ಉಜ್ಜಯಿನಿಮಠವರ ಸಮಾಜ ವಿಕಾಸ ನಾಟ್ಯಸಂಘವು 1950 ರಲ್ಲಿ ರೂಪುಗೊಂಡು ಕರ್ನಾಟಕದ ಮೂಲೆ ಮೂಲೆಗಳಲ್ಲಿ ಜಯಭೇರಿ ಹೊಡೆಯಿತು. ಇವರ ಶನಿಮಹಾತ್ಮೆ, ಜಗಜ್ಯೋತಿ ಬಸವೇಶ್ವರ, ಚಂದ್ರಹಾಸ, ಚಿತ್ರಾಂಗದಾ, ಸಂಪೂರ್ಣ ರಾಮಾಯಣ, ಬಡತನದ ಭೂತ, ದಸರಾ, ತಾಯಿ ಕರಳು, ಮಾತಂಗಕನ್ಯಾ, ಟಿಪ್ಪು ಸುಲ್ತಾನ, ರೇಣುಕಾ ಮಹಾತ್ಮೆ ಮುಂತಾದ ನಾಟಕಗಳು ಒಳ್ಳೆ ಖ್ಯಾತಿವೆತ್ತಿದ್ದವು. ತಾಯಿ ಕರಳು ನಾಟಕದ ತಾಯಿ ಪಾತ್ರದ ಖ್ಯಾತಿವೆತ್ತ ದೊಡ್ಡವಾಡ ಫಕ್ರುಸಾಬ ಯಾವುದೇ ಸ್ತ್ರೀಯನ್ನೂ ಮೀರಿಸುವಷ್ಟು ಅಭಿನಯ ನಿಪುಣರಾಗಿದ್ದರು. ಇವರ ಜಗಜ್ಯೋತಿ ಬಸವೇಶ್ವರ ಹಾಗೂ ಶನಿಮಹಾತ್ಮೆ ನಾಟಕಗಳಂತೂ ವೈಭವೋಪೇತ ರಂಗಸಜ್ಜಿಕೆಯಲ್ಲಿ ಪ್ರದರ್ಶಿಸಲ್ಪಟ್ಟು ಪ್ರಚಂಡ ಪ್ರಚಾರ ಗಿಟ್ಟಿಸಿದ್ದವು. ಹೊಂಬಳದ ಅಬ್ದುಲ್‌ಸಾಬ ಪೇಂಟರ್, ಇಲಕಲ್ಲಿನ ಮಹಾಂತಪ್ಪ ಮರೋಳ ಪೇಂಟರ್, ಬೆಳವಡಿಯ ವೀರತ್ತಯ್ಯಸ್ವಾಮಿ ಪೂಜಾರ ಪೇಂಟರ್ ಮುಂತಾದವರು ದೃಶ್ಯಾವಳಿಯ ವಿನ್ಯಾಸಕಾರರಾಗಿದ್ದರು.

ಸಿದ್ಧಯ್ಯನವರಂತೂ ಒಬ್ಬ ಅಪರೂಪದ ಕಲಾವಿದರಾಗಿದ್ದರು. ಯಾವುದೇ ಪಾತ್ರಕ್ಕೂ ಹೇಳಿ ಮಾಡಿಸಿದ ವ್ಯಕ್ತಿತ್ವ. ಅದ್ಭುತವಾದ ಕಂಠ, ಆಕರ್ಷಕವಾದ

ಹಾಡುಗಾರಿಕೆ. ಅತ್ಯಂತ ಶಿಸ್ತಿನ ಮನುಷ್ಯ. ಇವರ ಜೊತೆ ಚನ್ನಬಸಯ್ಯ ಕರ್ಲವಾಡ, ಗುರುಸಿದ್ಧಯ್ಯ ಸುತಗಟ್ಟಿ, ಗಂಗಯ್ಯ ಶಿರೂರ, ಹಾವೇರಿ ಬಾಬು, ವರವಿ ವೀರಭದ್ರಯ್ಯ, ಜಮಾಲಸಾಬ ಮುಂತಾದವರೊಂದಿಗೆ ಹೊಸಪೇಟೆ ದೇವಕ್ಕಿವ್ವ, ಕೆರೂರ ಶಾಂತವ್ವ, ಶಿಗ್ಗಾವಿ ಶಾಂತವ್ವ ಮುಂತಾದ ನಟಿಯರು ಅದ್ಭುತ ಕಲಾವಿದರಾಗಿದ್ದರು. ಹಾರ್ಮೋನಿಯಂ ಕಲಾವಿದರಾಗಿ ದೊಡವಾಡ ಲಿಂಗಯ್ಯಸ್ವಾಮಿಗಳು, ತಬಲಾ ವಾದಕರಾಗಿ ಉಡಿಕೇರಿ ಶಂಕರಪ್ಪನವರು ಖ್ಯಾತಿವೆತ್ತಿದ್ದರು.

**ಶ್ರೀ ಸಂಗಮೇಶ್ವರ ನಾಟ್ಯ ಸಂಘ ದೊಡ್ಡವಾಡ :** ರಂಗಭೂಮಿಯ ಖ್ಯಾತ ಕಲಾವಿದ ಹಾಗೂ ದೊಡ್ಡವಾಡದ ಸಮಾಜವಿಕಾಸ ನಾಟ್ಯ ಸಂಘದ ಒಡೆಯರಾಗಿದ್ದ ಸಿದ್ಧರಾಜ ಉಜ್ಜಯಿನಿಮಠವರ ರಂಗೈಕ್ಯದ ನಂತರ ಸೋದರ ಸಂಬಂಧಿ ದೊಡ್ಡವಾಡ ಶಿವಪುತ್ರಯ್ಯ ಸ್ವಾಮಿಗಳ ಶ್ರೀ ಸಂಗಮೇಶ್ವರ ಕೃಪಾಪೋಷಿತ ನಾಟ್ಯ ಸಂಘವು 1975 ರಲ್ಲಿ ಬೆಳಕನ್ನು ಕಂಡಿತು. ಇದೂ ಕೂಡ ದೊಡ್ಡವಾಡದ ಮಹಾದಾನಿಗಳ ಸಹಾಯ ಹಸ್ತದಿಂದ ಉದ್ಧಾರವಾದ ಕಂಪನಿಯೆ. ಹೀಗಾಗಿ ಸಿದ್ಧರಾಜ ಉಜ್ಜಯಿನಿಮಠರ ನೆನಪು ಉಳಿಸುವ ನಿಟ್ಟಿನಲ್ಲಿ ಕಂಪನಿ ಒಳ್ಳೆ ಸಾಧನೆಯ ಪಥದಲ್ಲಿತ್ತು.

ಈ ಕಂಪನಿಯವರು ಶಿಶುನಾಳ ಶರೀಫ ಸಾಹೇಬರು. ಅಜಾತ ಶತ್ರು ನಾಗಲಿಂಗಲೀಲೆ, ಆದಿಶಕ್ತಿ ರೇಣುಕಾ, ನನ್ನವರು ನನ್ನ ಹಡೆದವರು, ಹೇಮರಡ್ಡಿ ಮಲ್ಲಮ್ಮ, ರಾಣಿ ಕಿತ್ತೂರು ಚನ್ನಮ್ಮ, ಸಿಂಧೂರ ಲಕ್ಷ್ಮಣ, ಬಸ್ ಹಮಾಲ, ಬಸ್ ಕಂಡಕ್ಟರ್, ಮಾವ ಬಂದನಪೋ ಮಾವ, ವರನೋಡಿ ಹೆಣ್ಣುಕೊಡು ಮುಂತಾದ ನಾಟಕಗಳನ್ನು ಪ್ರಯೋಗಿಸಿದ್ದಾರೆ. ದೊಡ್ಡವಾಡದ ಲಿಂಗಯ್ಯ ಸ್ವಾಮಿಗಳು ಹಾಗೂ ಅಡವಯ್ಯ ಸ್ವಾಮಿಗಳು ಹಾರ್ಮೋನಿಯಂ ಕಲಾವಿದರಾಗಿ, ದೊಡ್ಡವಾಡದ ಮೋದೀನಸಾಬ ನದಾಫ ತಬಲಾ ವಾದಕರಾಗಿ ಸೇವೆ ಸಲ್ಲಿಸಿದ್ದರು. ಬಣ್ಣ ಬೆಳಕಿನ ವಿನ್ಯಾಸಕಾರರಾಗಿ ಕೆಲವು ವರ್ಷ ಮಲ್ಲಿಕಾರ್ಜುನ ಕುಟಗಿನಕೇರಿ ಸೇವೆ ಸಲ್ಲಿಸಿದ್ದಾರೆ.

ಅತಿಥಿ ಕಲಾವಿದರಾಗಿ ಆಗಮಿಸುತ್ತಿದ್ದ ಹೇಮರೆಡ್ಡಿ ಮಲ್ಲಮ್ಮ ನಾಟಕದ ಮಲ್ಲಯ್ಯನ ಪಾತ್ರ ಖ್ಯಾತಿಯ ಅರ್ಜುನಸಾ ನಾಕೋಡ, ಸಿಂಧೂರ ಲಕ್ಷ್ಮಣ ಪಾತ್ರ ಖ್ಯಾತಿಯ ದೊಡ್ಡವಾಡದ ಬಸವರಾಜ ಹರಕುಣಿ, ಈರಯ್ಯ ಮಠಪತಿ, ಮಂಡಲೀಕ ವನಹಳ್ಳಿ, ಶಿವಲಿಂಗಪ್ಪ ಹಂಚಗಿ, ಹುಬ್ಬಳ್ಳಿಯ ಪುಷ್ಪಮಾಲಾ ಅಣ್ಣಿಗೇರಿ, ಹೆಲನ್ ಮುಂತಾದವರು

# ಹವ್ಯಾಸಿ ರಂಗಭೂಮಿ

ಹವ್ಯಾಸಿ ರಂಗಭೂಮಿಯ ಚಟುವಟಿಕೆಗಳಿಗೂ ಕೂಡ ಇಡೀ ಕರ್ನಾಟಕದಲ್ಲಿ ಉತ್ತರ ಕರ್ನಾಟಕವೇ ಪ್ರಪ್ರಥಮವಾಗಿ ರಂಗಸ್ಥಳವನ್ನು ಗಿಟ್ಟಿಸಿಕೊಂಡದ್ದು ಎಂಬುದರಲ್ಲಿ ಎಳ್ಳಷ್ಟೂ ಸಂಶಯವಿಲ್ಲ. ಏಕೆಂದರೆ, ಡಾ. ಎಚ್. ಕೆ. ರಂಗನಾಥವರು ಹವ್ಯಾಸಿ ರಂಗಭೂಮಿಯ ಪ್ರಾದುರ್ಭಾವವೂ ಗದುಗಿನಲ್ಲಿಯೇ ಆಗಿ ಮುಂದೆ ಬೆಳಗಾವಿ, ಧಾರವಾಡ, ಬಿಜಾಪೂರ ಮುಂತಾದ ಜಿಲ್ಲೆಗಳ ಶಾಲಾ ಹಾಗೂ ಕಾಲೇಜುಗಳ ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಮೊಳಕೆಯೊಡೆಯುತ್ತ ಹೋಯಿತೆಂದು ಅಭಿಪ್ರಾಯಿಸುತ್ತಾರೆ. ಇಂಥ ನಾಟಕಗಳ ಸೃಷ್ಟಿಯಲ್ಲಿಯೂ ಕೂಡ ಬೆಳಗಾವಿ ಜಿಲ್ಲೆಯ ಡಾ. ವಿ. ಕೆ. ಗೋಕಾಕರ ಹೆಸರೇ ಮೊದಲಾಗುತ್ತದೆ. 'ಯುಗಾಂತರ' ಹಾಗೂ 'ಜನನಾಯಕ' ದಂತಹ ಹಲವಾರು ಸಾಮಾಜಿಕ ನಾಟಕಗಳು ಶಾಲಾ ಕಾಲೇಜುಗಳ ಮೂಲಕವಾಗಿಯೇ ಹವ್ಯಾಸಿ ರಂಗಭೂಮಿಗೆ ಮೊದಲ್ಗೊಂಡವು. ಇವಗಳ ಜೊತೆ ಜೊತೆಗೇ ವೃತ್ತಿ ಮಾದರಿಯ ಗ್ರಾಮೀಣ ಹವ್ಯಾಸಿ ತಂಡಗಳು ಹುಟ್ಟಿಕೊಂಡು ಇಂದಿಗೂ ಸಾಕಷ್ಟು ಪ್ರಮಾಣದಲ್ಲಿ ಕಾಣಸಿಗುತ್ತವೆ.

ಸುಮಾರು 1935ರಲ್ಲಿ ಬೆಳಗಾವಿಯ ಸಾರ್ವಜನಿಕ ವಾಚನಾಲಯದಲ್ಲಿ ಕನ್ನಡಕ್ಕೆ ಆಗುತ್ತಿದ್ದ ಅಸಡ್ಡೆಯನ್ನು ದೂರ ಮಾಡಲು ಕನ್ನಡ ಸೇವಾ ಸಮಿತಿಯೊಂದು ರೂಪಗೊಂಡಿತು. ಇದರಡಿಯಲ್ಲಿ ಹುಟ್ಟಿಕೊಂಡ 'ಭುವನೇಶ್ವರಿ ಮೇಳ'ವು ಕೆರೂರು ವಾಸುದೇವಾಚಾರ್ಯರ ಪತಿವಶೀಕರಣ ಎಂಬ ದೊಡ್ಡ ನಾಟಕವನ್ನು ಶಿವಾಂದ ಥೇಟರಿನಲ್ಲಿ ಪ್ರಯೋಗಿಸಿತು. ಇದರಲ್ಲಿ ಜಿ.ವಿ. ಕಟ್ಟಿ ವಕೀಲರು, ನರಸಿಂಗರಾವ್ ಜೋಶಿ, ವೆಂಕಟರಾವ್ ಮುತಾಲಿಕ ದೇಸಾಯಿ, ಜಿ.ಜಿ. ಕುಲಕರ್ಣಿ, ಮತ್ತು ವಿ.ಪಿ. ಕಿತ್ತೂರ ಪ್ರಮುಖ ಪಾತ್ರ ವಹಿಸಿದ್ದರು. ಇದೇ ತಂಡ 1936ರಲ್ಲಿ ಕನ್ಯಾಶುಲ್ಕ ನಾಟಕವನ್ನೂ ಪ್ರಯೋಗಿಸಿತ್ತು. ದಿ. ನಾರಾಯಣರಾವ್ ಜೋಶಿಯವರ ಮನೆಯಲ್ಲಿ ತಿಂಗಳುಗಟ್ಟಲೇ ಇದರ ರಿಹರ್ಸಲ್ ನಡೆದಿತ್ತು.

1939ರಲ್ಲಿ ಕನ್ನಡ ಸಾಹಿತ್ಯ ಸಮ್ಮೇಳನ ನಡೆಯಿತು. ಆ ಸಂದರ್ಭದಲ್ಲಿ ಪ್ರೊ. ವಿ. ಜಿ. ಕುಲಕರ್ಣಿ. ಹಾಗೂ ಇತರರು 'ರನ್ನನ ಗದಾಯುದ್ಧ' ಹಾಗೂ ಕೃಷ್ಣಮೂರ್ತಿ ಪರಾಣಿಕರ 'ಸೈರಂಧ್ರಿ' ನಾಟಕಗಳು ಪ್ರಯೋಗಗೊಂಡಿದ್ದವು. 1940ರ ದಶಕದಲ್ಲಿ ಹವ್ಯಾಸಿ ರಂಗ ಚಟುವಟಿಕೆಗಳಿಗೆ ರಾಹುಕಾಲ. 1947 ಸುಮಾರಿಗೆ ಸಂಪಗಾವಿಯ ಕಲ್ಯಾಣಶರ್ಮರು ಬರೆದ 'ಸಂಗೊಳ್ಳಿ ರಾಯಣ್ಣ' ನಾಟಕವನ್ನು ಅಲ್ಲಿಯ ಹವ್ಯಾಸಿ

ಬಳಗದವರು ಎರಡು ವರ್ಷಗಳಗಳ ಕಾಲ ಯಶಸ್ವಿಯಾಗಿ ಪ್ರಯೋಗಿಸಿದ್ದರು. ಇದರಲ್ಲಿ ವಾಲಿ ಚನ್ನಪ್ಪನವರು ಹಾಸ್ಯ ಪಾತ್ರವನ್ನು ವಹಿಸಿದ್ದರೆನ್ನಲಾಗಿದೆ.

1948ರಲ್ಲಿ ಕರ್ನಾಟಕ ಏಕೀಕರಣದ ಚಳುವಳಿ ಸಂದರ್ಭ. ಆ ಸಮಯದಲ್ಲಿ ಬೆನೆನ್ಸಮಿತ್ ಹೈಸ್ಕೂಲಿನ ಕರ್ನಾಟಕ ಸಂಘದ ಆಶ್ರಯದಲ್ಲಿ ನಾಟ್ಯ ವಿಲಾಸಿಗಳು 'ಬ್ಲ್ಯಾಕ್ ಮಾರ್ಕೆಟ್' ಎಂಬ ದೊಡ್ಡ ನಾಟಕವನ್ನು ಪ್ರಯೋಗಿಸಿ ಅದರಿಂದ ಬಂದ 10700 ರೂ.ಗಳನ್ನು ಏಕೀಕರಣ ಸಮಿತಿಗೆ ಕಳಿಸಲಾಗಿದೆಯೆನ್ನಲಾಗಿದೆ. ಇದರಲ್ಲಿ ವೆಂಕಣ್ಣ ಕಲ್ಕೆ, ಧೃವರಾಜ ಮುತಾಲಿಕ ದೇಸಾಯಿ ಮುಂತಾದವರು ಪ್ರಮುಖ ಪಾತ್ರ ವಹಿಸಿದ್ದರು. ದೀಕ್ಷಿತ ಬುವಾ ಅವರ ಸಂಗೀತ ನಿರ್ದೇಶನವಿತ್ತು.

ಇದೇ ಮಂಡಳಿ 1950ರಲ್ಲಿ ಕೇವಲ ಸ್ತ್ರೀಯರನ್ನೇ ಕೂಡಿಸಿಕೊಂಡು 'ಪಾದುಕಾ ಪಟ್ಟಾಭಿಷೇಕ' ನಾಟಕವನ್ನು ಪ್ರಯೋಗಿಸಿತು. ಇದರಲ್ಲಿ ಶಕುಂತಲಾ ಕುಲಕರ್ಣಿ, ವತ್ಸಲಾ ಪಾಗೆ, ಮಾಲಾ ತೆರಗುಂಡಿ ಮುಂತಾದವರು ಪ್ರಮುಖ ಪಾತ್ರಧಾರಿಗಳಾಗಿದ್ದರು. 1950ರ ಸುಮಾರಿಗೆ ಧಾರವಾಡದ ಕಲೋಪಾಸನಾ ಮಂಡಳಿಯವರು ಜಿ.ಬಿ ಜೋಶಿಯವರ ನೇತೃತ್ವದಲ್ಲಿ 'ಭಾಗ್ಯ ಶ್ರೀ' 'ಪರಿವರ್ತನ' 'ಮನೆಗೆಲಸ' 'ಪತಿತೋದ್ಧಾರ' ಮುಂತಾದ ನಾಟಕಗಳನ್ನು ಆಡಿದರು. ಇದೇ ಸಂದರ್ಭದಲ್ಲಿ ಶ್ರೀರಂಗರ 'ಪ್ರಪಂಚ ಪಾಣಿಪತ್ತು' ಕೂಡ ಪ್ರಯೋಗಿಸಲ್ಪಟ್ಟಿತು.

1957 ಸ್ವಾಂತಂತ್ರ್ಯ ಸಂಗ್ರಾಮದ ಶತಮಾನೋತ್ಸವ ಸಂದರ್ಭದಲ್ಲಿ ಬೆನನ್ಸಮಿತ್ ಹೈಸ್ಕೂಲಿನ ವಿದ್ಯಾರ್ಥಿಗಳು ಶಿಕ್ಷಕ ಶಿರಹಟ್ಟಿಯವರ ಪ್ರೇರಣೆಯಿಂದ 'ಸ್ವಾತಂತ್ರ್ಯ ಸಂಗ್ರಾಮ' ಹಾಗೂ 'ನರಗುಂದ ಚರಿತ್ರೆ' ಎಂಬ ಎರಡು ನಾಟಕಗಳನ್ನು ಯಶಸ್ವಿಯಾಗಿ ಪ್ರಯೋಗಿಸಿದರು. ಇದೇ ಸಂದರ್ಭ ಘಟಪ್ರಭಾ ಎಡದಂಡೆ ಕಾಲುವೆ ಯೋಜನಾ ಕಾರ್ಯ ಭರದಿಂದ ಸಾಗಿದ್ದಿತು. ಸಮೀಪದ ಧುಪದಾಳದಲ್ಲಿದ್ದ ನಾಟಕಾಭಿರುಚಿಯ ಹಲವಾರು ಜನ ಎಂಜಿನಿಯರುಗಳು ಹಾಗೂ ಇನ್ನಿತರ ಅಧಿಕಾರಿಗಳು ರಂಗ ಚಟುವಟಿಕೆಗಳಲ್ಲಿ ಭಾಗವಹಿಸಿದ್ದರು. ತಮ್ಮದೇ ಆದ ರಂಗ ಮಂದಿರವನ್ನು ಕಟ್ಟಿಕೊಂಡು ಸಾಂಸ್ಕೃತಿಕ ಉತ್ಸವಗಳಿಗೆ ಹಲವಾರು ನಾಟಕಗಳನ್ನು ಪ್ರಯೋಗಿಸಿದರು. ಎಂಜಿನಿಯರ್ ಶ್ರೀ ಕಟ್ಟಿ ಹಾಗೂ ಅವರ ಪತ್ನಿ ಮಾಲತಿ, ವೆಂಕಣ್ಣ ಹಾಗೂ ಜಿ.ಸಿ. ಕುಲಕರ್ಣಿ ಮುಂತಾದವರು ಇಲ್ಲಿನ ರಂಗ ಚಟುವಟಿಕೆಗಳಿಗೆ ಸೂತ್ರಧಾರರಾಗಿದ್ದರು.

ಘಟಪ್ರಭಾಲ್ಲಿ ಶ್ರೀರಂಗರ 'ಸಂಧ್ಯಾಕಾಲ' ಪರ್ವತವಾಣಿಯವರ 'ಉಂಡಾಡಿ ಗುಂಡ' 'ಬಹಾದ್ದೂರ ಗಂಡ' ಮುಂತಾದ ನಾಟಕಗಳನ್ನು ಆಡಿದರಲ್ಲದೆ ಕೈಲಾಸಂ ಅವರ 'ಬಂಡವಾಳವಿಲ್ಲದ ಬಡಾಯಿ' ನಾಟಕದಲ್ಲಿ ಯುವ ಎಂಜಿನಿಯರ್ ಕಟ್ಟಿ ಮಾಧವರಾಯರು ಹಾಗೂ ಅವರ ಪತ್ನಿ ಪಾತ್ರವಹಿಸಿದ್ದರು. ನಿರ್ದೇಶನ ವೆಂಕಣ್ಣ ಕಟ್ಟಿಯವರದಾಗಿದ್ದಿತು.

ರಾಜ್ಯ ಪುನಃ ರಚನೆಯಾಗಿ ಬೆಳಗಾವಿಗೆ ಅನೇಕ ಜನ ನಾಟಕಾಸಕ್ತ ಕನ್ನಡ ಅಧಿಕಾರಿಗಳು ಬಂದಿದ್ದರು. ಆಗ ಕರ್ನಾಟಕ ಸಂಘದ ಕಲಾವಿದರು ಲಕ್ಷ್ಮಣರಾವ್ ಬೇಂದ್ರೆಯವರ 'ಜೂಜು' ನಾಟಕ ಪ್ರಯೋಗಿಸಿದರು. ಇದರಲ್ಲಿ ಜಿ.ಜಿ. ಪುರಾಣಿಕ ಶ್ರೀಮತಿ ಇಂದಿರಾ ಪುರಾಣಿಕ, ವೆಂಕಟೇಶ ಸಾಂಗಲಿ, ಪ್ರೊ. ಪಿ. ಕೆ. ಭಾಗೋಜಿ, ಕಮಲಾ ಕುಲಕರ್ಣಿ, ಧೃವರಾಜ ಮುತಾಲಿಕ ದೇಸಾಯಿ ಮುಂತಾದವರು ಭಾಗವಹಿಸಿದ್ದರು.

ಕೇಂದ್ರ ತೆರಿಗೆ ಅಧಿಕಾರಿಗಳಾಗಿ ಬಂದಿದ್ದ ಶ್ರೀಕಂಠಯ್ಯ, ಲಿಂಗಾರಾಜ ಕಾಲೇಜಿನ ಪ್ರಾಚಾರ್ಯ ಪಿ.ಕೆ. ರಾಮಾನುಜಂ ಮತ್ತು ವನಮಾಲಾ ಕವಟೆ, ನಾಗರಾಜ ಶರ್ಮಾ ಮತ್ತು ನ್ಯಾಯವಾದಿ ಆರ್.ಎಚ್. ಕುಲಕರ್ಣಿ ಅವರ ಬೆಂಬಲದಿಂದಾಗಿ ಬೆಳಗಾವಿಯ ಟಿಳಕವಾಡಿ ವಿಜಯನಗರ ಕರ್ನಾಟಕ ಸಂಘವು ತನ್ನ ನಾಟ್ಯ ಚಟುವಟಿಕೆಗಳನ್ನು ಚುರುಕುಗೊಳಿಸಿ ಟಿ.ಪಿ. ಕೈಲಾಸಂ ಅವರ 'ಬಂಡವಾಳವಿಲ್ಲದ ಬಡಾಯಿ' 'ಅನುಕೂಲಕ್ಕೊಬ್ಬಣ್ಣ' ಮುಂತಾದ ನಾಟಕಗಳನ್ನು ಪ್ರಯೋಗಿಸಿತ್ತು. ಕೈಲಾಸಂ ಅವರ ಹಾಸ್ಯ ಪಾತ್ರ ಪೋಷಣೆ, ಸನ್ನಿವೇಶ ರಚನೆ ಮುಂತಾದವುಗಳು ಬೆಳಗಾವಿ ಸಾಹಿತ್ಯ ಪ್ರಿಯರನ್ನು ಆಕರ್ಷಿಸಿದವು.

1958ರ ಆಸುಪಾಸಿನಲ್ಲಿ, ಬೆಳಗಾವಿಯ ಆದಾಯಕರ ಇಲಾಖೆಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ಜಿ. ಜಿ. ಪುರಾಣಿಕ ಮತ್ತು ಗುಂಪಿನವರು 'ನಟ ಸಂಪದ' ಎಂಬ ಹೆಸರಿನ ಹ್ಯಾವ್ಯಾಸಿ ತಂಡವನ್ನು ಹುಟ್ಟು ಹಾಕಿ ತನ್ಮೂಲಕ 'ಖರೋ ಖರ' (ಜಿ.ಜಿ. ಪುರಾಣಿಕ) ಹಾಗೂ ಇನ್ನೂ ಹಲವಾರು ನಾಟಕಗಳನ್ನು ಪ್ರದರ್ಶಿಸುವಲ್ಲಿ ಕ್ರಿಯಾಶೀಲವಾಗಿತ್ತು.

1960 ಕ್ಕೆ ಧಾರವಾಡದಿಂದ ಆಗಮಿಸಿದ ಕೃಷ್ಣ ಉಪಾಧ್ಯೆ ದಂಪತಿಗಳು ಎರಡು ವರ್ಷ ಪುರಾಣಿಕರ ಜೊತೆಗೂಡಿ ಹೊಸ ಹೊಸ ನಾಟಕಗಳನ್ನು ನಿರ್ದೇಶಿಸಿಸುವ ಮೂಲಕ ಹವ್ಯಾಸಿ ರಂಗ ಚಟುವಟಿಕೆಗಳನ್ನು ಬಡಿದೆಬ್ಬಿಸಿದರು. 1962 ರಲ್ಲಿ ಪುರಾಣಿಕರು ಬೆಂಗಳೂರಿಗೆ ವರ್ಗವಾಗಿ ಹೋದನಂತರ ಉಪಾಧ್ಯೆ ಅವರೇ ಬೆಳಗಾವಿಯಲ್ಲಿ ಅಧಿಕ ಸಂಖ್ಯೆಯಲ್ಲಿ ಪ್ರತಿಭಾವಂತ ಹಾಗೂ ಪ್ರತಿಭಾವಂತೆಯರನ್ನು ಹುಡಕಿ 'ನಾಟ್ಯ ವೃಂದ' ಎಂಬ ತಂಡವನ್ನು ಕಟ್ಟಿ ರಂಗಾಭಿವೃದ್ಧಿಗೆ ಟೊಂಕ ಕಟ್ಟಿದರು.

ಕೃಷ್ಣ ಉಪಾಧ್ಯೆ ಇವರಿಂದ ನಿರ್ದೇಶಿತ ಪ್ರೇಮ ಪಕ್ಷಿ, ಅಳಿಯ ಮನೆ ತೊಳಿಯ, ಬಂಡಲ್ ಬಹಾದ್ದೂರ, ಪ್ರಾರಬ್ಧ ಕರ್ಮ, ಸಾಕ್ರೇಟಿಸ್, ಮೃತ್ಯು ಚಕ್ರ, ನಾನೇ ನಾನು, ವಿಧೂಷಕ, ಹೆಜ್ಜೆಗಳು, ಕಣ್ಣುಗಳು, ಹಕ್ಕಿ ಹಾರುತಿದೆ ನೋಡಿದಿರಾ ಮುಂತಾದ ನಾಟಕಗಳನ್ನು ಬೆಳಗಾವಿ ತಾಲೂಕು ಹಾಗೂ ಕರ್ನಾಟಕ ರಾಜ್ಯದ ಒಳಗೂ ಹೊರಗೂ ಹಲವಾರು ಕಡೆ ಪ್ರದರ್ಶಿಸಿದ ಕೀರ್ತಿ ಶ್ರೀ ಕೃಷ್ಣ ಉಪಾಧ್ಯೆ ಹಾಗೂ ಅವರ ಶ್ರೀಮತಿ ಪದ್ಮಾವತಿ ಉಪಾಧ್ಯೆ ಮತ್ತು ಮಕ್ಕಳಿಗೆ ಸಲ್ಲಬೇಕು.

ಹೀಗೆ ಅವಿರತವಾಗಿ ಹವ್ಯಾಸಿ ರಂಗಚಟುವಟಿಕೆಗಳನ್ನು 25 ವರ್ಷಗಳವರೆಗೂ ನಡೆಸಿಕೊಂಡು ಹೋದರು. ಇದರ ನಂತರ ಬೆಳಗಾವಿಯ ಶ್ರೀಪತಿ ಮಂಜನಬೈಲವರು ಹುಟ್ಟು ಹಾಕಿದ 'ರಂಗ ಸಂಪದ' ಕಾರ್ಯೋನ್ಮುಖವಾಯಿತು.

ಉಪಾಧ್ಯೆ ಇವರ ನಾಟ್ಯ ವೃಂದದಲ್ಲಿ ಗೋಪಾಲ ಕೃಷ್ಣ, ಆರ್. ಎಸ್. ಪೂಜಾರ, ಆರ್. ಎನ್. ಹಲಗತ್ತಿ, ಗುರುನಾಥ ಕುಲಕರ್ಣಿ, ಸುಭಾಸ ಏಣಗಿ, ಎಂ. ಕೆ. ದೇಶಪಾಂಡೆ, ಪಿ. ಪಿ. ಅರಬೆಂಚಿ, ಟಿ. ಬಿ. ಹೇಮಾದ್ರಿ, ಎಸ್. ಆರ್. ಸುತಗಟ್ಟಿ, ಎ. ಕೆ. ಹುನಗುಂದ, ಎಸ್. ಡಿ. ಧರ್ಮಟ್ಟಿ, ಎಂ. ಎಸ್. ಪಾಟೀಲ, ಕೆ. ಎಸ್. ದುಮ್ಮದ, ಎಚ್. ಬಿರಾದಾರ ಪಾಟೀಲ, ಶಿವಣ್ಣ ತೊರವಿ, ಉಮೇಶ, ರಮೇಶ ಅನಿಗಲೆನ್. ಎಮ್. ಪ್ಯಾಟಿ, ಜೆ. ಕೇಶವ, ಆರ್. ಕೆ. ಉಪಾಧ್ಯೆ, ಯು. ಕೆ. ಉಪಾದ್ಯೆ, ರಾಮ ನೇತ್ರೇಕರ್, ರಮೇಶ ಕುಲಕರ್ಣಿ, ಶ್ರೀಮತಿ ಸತ್ತೀಗೇರಿ, ಪಾಗಾದ, ಪದ್ಮಾವತಿ ಮುಂತಾದವರು ಅಭಿನಯ ಕಲೆಯಲ್ಲಿ ಪ್ರಮುಖರಾಗಿದ್ದರು.

ನಂತರ, ಡಾ. ಬಾಳಣ್ಣ ಸೀಗೀಹಳ್ಳಿ ಹಾಗೂ ಸಂಗಡಿಗರಿಂದ 1980 ರ ಸುಮಾರಿಗೆ ಬೈಲಹೊಂಗಲ ತಾಲೂಕಿನ ಕಿತ್ತೂರಿನಲ್ಲಿ ಗ್ರಾಮೀಣ ರಂಗ ಚೇತನ, ಕಿತ್ತೂರು. ಎಂಬ ರಂಗ ಸೇವಾ ನಿರ್ವಾಹಕ ಸಂಸ್ಥೆಯೊಂದು ಹುಟ್ಟಿಕೊಂಡು ಸುಮಾರು ಒಂದು ದಶಕದವರೆಗೆ ಸೇವಾನಿರತವಾಗಿತ್ತನ್ನಲಾಗಿದೆ.

ಪ್ರಾರಂಭದಲ್ಲಿ ಕಿತ್ತೂರು 'ಗ್ರಾಮೀಣ ರಂಗಚೇತನ' ದ ವತಿಯಿಂದ ಏರ್ಪಡಿಸಲಾದ ರಂಗ ಶಿಬರದಲ್ಲಿ ಹಲವಾರು ಜನ ಸ್ಥಳೀಯ ರಂಗ ಕಲಾವಿದರು ರಾಷ್ಟ್ರೀಯ ನಾಟಕ ಶಾಲೆಯ ಪದವೀಧರರಾದ ಖ್ಯಾತ ರಂಗ ನಿರ್ದೇಶಕ ಜಯತೀರ್ಥ ಜೋಶಿ, ಹೆಗ್ಗೋಡು 'ನೀನಾಸಂ'ನ ಇಕ್ಬಾಲ ಅಹಮ್ಮದ ಹಾಗೂ ಪುರುಷೋತ್ತಮ ತಲವಾಟ ಇವರ ಮೂಲಕ ಒಂದು ತಿಂಗಳವರೆಗೆ ತರಬೇತು ಪಡೆದು ಶಿಬಿರದ ಕೊನೆಯಲ್ಲಿ ಬ್ರೆಟೋಲ್ಟ್ ಬ್ರೆಕ್ಟ್‌ನ ಜರ್ಮನ್ ನಾಟಕ 'ಕಕೇಶಿಯನ್ ಚಾಕ್ ಸರ್ಕಲ್' ನ್ನು 'ಧರ್ಮಪುರಿ ವೃತ್ತ' ಎಂದು ಕನ್ನಡಕ್ಕೆ ರೂಪಾಂತರ ಮಾಡಿಸಿ ಕಿತ್ತೂರು, ಧಾರವಾಡ, ಹುಬ್ಬಳ್ಳಿ, ಗದಗ, ಬೆಂಗಳೂರು, ಹಳಿಯಾಳ, ಹರಪನಳ್ಳಿ, ಹಿಡಕಲ್, ಹುಕ್ಕೇರಿ ಮುಂತಾದ ಊರುಗಳಲ್ಲಿ ಸುಮಾರು ಇಪ್ಪತ್ತಕ್ಕೂ ಹೆಚ್ಚು ಪ್ರದರ್ಶನಗಳನ್ನು ನೀಡಿದ ಹೆಗ್ಗಳಿಕೆ ಕಿತ್ತೂರಿನ ಗ್ರಾಮೀಣ ರಂಗ ಚೇತನದ್ದಾಗಿದೆ. ಇದು 'ಕಿತ್ತೂರು ಕರ್ನಾಟಕ' ದಲ್ಲಿಯೇ ಆದ ಒಂದು ಸಾಂಸ್ಕೃತಿಕ ದಾಖಲೆಯಾಗಿದೆ ಎನ್ನಬಹುದು.

ಇದೆ ಸಂದರ್ಭದಲ್ಲಿ 'ಅಮನಿ' 'ಅಲಿಬಾಬಾ ಮತ್ತು ನಲವತ್ತು ಕಳ್ಳರು' ಎಂಬ ನಾಟಕಗಳನ್ನು ಮಕ್ಕಳಿಂದ ಮಕ್ಕಳಿಗಾಗಿ ಆಡಿಸಿದ ಕೀರ್ತಿಯೂ ಗ್ರಾಮೀಣ ರಂಗ ಚೇತನಕ್ಕೇ ಸೇರಬೇಕಾದದ್ದು. ಮತ್ತು ಇದೇ ಕಲಾವಿದರು ಮುಂದಿನ ದಿನಗಳಲ್ಲಿ ಪರಿಷ್ಕೃತ 'ಪಾರಿಜಾತ' 'ಮೇಟಿ' ಕಿಂಗ ಲಿಯರ್ ನಾಟಕದ ಕನ್ನಡ ಅನುವಾದ– 'ನಂದಭೂಪತಿ' ಮುಂತಾದ ನಾಟಕಗಳನ್ನು ಪ್ರದರ್ಶಿಸಿದ್ದು ಮತ್ತು ಸಪ್ತಮಂಡಳಿ

ನಾಟಕೋತ್ಸವದಲ್ಲಿ ಪಾಲ್ಗೊಂಡದ್ದು ಕಿತ್ತೂರಿನಂಥ ಜನತೆಗೆ ಒಂದು ಅಪೂರ್ವರೋಮಾಂಚಕಾರೀ ಅನುಭವವಾಗಿದ್ದು ಈಗೊಂದು ಇತಿಹಾಸ.

1984 ಸುಮಾರಿಗೆ ಬೆಳಗಾವಿಯಲ್ಲಿ ಸ್ಪಷ್ಟವಾಗಿ ಹವ್ಯಾಸಿ ತಂಡಗಳು ಹುಟ್ಟಿಕೊಳಹತ್ತಿದವು. ಪ್ರಪ್ರಥಮವಾಗಿ ಡಿ. ಟಿ. ಚನ್ನಕೇಶವಮೂರ್ತಿ, ಶ್ರೀಪತಿ ಮಂಜನಬೈಲು, ಚಂದ್ರಕಾಂತ ಕುಸನೂರ ಮತ್ತು ಕೃಷ್ಣ ಉಪಾಧ್ಯೆ ಮುಂತಾದವರಿಂದ 'ಪ್ರತಿಭಾ ಹವ್ಯಾಸಿ ಕಲಾವಿದರ ತಂಡ' ವೊಂದು ಕ್ರಿಯಾಶೀಲವಾಯಿತು. ಮುಂದೆ ತಂಡವು ಸದೃಢವಾಗಲು ಪ್ರಾ. ಬಿ. ಎಸ್. ಗವಿಮಠ ಎಸ್. ಸಿ. ಪಾಟೀಲ, ಶ್ರೀ ಕಾಂತ ಸಂಗನಾಳಮಠ, ಎಸ್. ವಿ. ಸರೋದೆ, ಎಂ.ಜಿ. ತುಬಚಿ. ಡಾ. ಪಿ ಉಮಾಶಂಕರ ಮತ್ತು ಪ್ರೊ. ಎ. ಆರ್. ಪಾಟೀಲ ಮುಂತಾದವರು ಟೊಂಕಕಟ್ಟಿ ಬೆಳಗಾವಿ ಹಾಗೂ ಸಂಕೇಶ್ವರದಲ್ಲಿ ಹಲವಾರು ನಾಟಕಗಳನ್ನು ಯಶಸ್ವಿಯಾಗಿ ಪ್ರಯೋಗಿಸಿದರು.

ಈ 'ಪ್ರತಿಭಾ ಹವ್ಯಾಸಿ ನಾಟಕ ತಂಡ' ದವರು ಚಂದ್ರಕಾಂತ ಕುಸನೂರವರ 'ಹುಟ್ಟು ಸಾವಿನ ನಡುವೆ' ಡಾ. ಚಂದ್ರಶೇಖರ ಕಂಬಾರವರ ನಾಯಿಕತೆ, ಕುಂದರನಾಡು ಪಾಟೀಲರ 'ಸನಾದಿ ಅಪ್ಪಣ್ಣ' ಅಲ್ಲದೆ 'ಬಿಸಿಲ್ಗುದುರೆ' 'ಒಂದಾನೊಂದು ಕಾಡಿನಲ್ಲಿ' 'ಜಗಜ್ಯೋತಿ ಬಸವೇಶ್ವರ' 'ಎಲ್ಲಿದೆ ನರಕ' 'ಉದ್ಧಾರ' ಮುಂತಾದ ನಾಟಕಗಳನ್ನು ರಂಗಕ್ಕೆ ತಂದರು. ಇದರಲ್ಲಿ ಚಂದ್ರಕಾಂತ ಕುಸನೂರವರ 'ಹುಟ್ಟು ಸಾವಿನ ನಡುವೆ' ನಾಟಕ ಒಳ್ಳೆ ಯಶಸ್ವಿಯಾಗಿ ಪ್ರಯೋಗಿಸಲ್ಪಟ್ಟಿತೆನ್ನಲಾಗಿದೆ. ಇದೇ 'ಪ್ರತಿಭಾ ಹವ್ಯಾಸಿ ನಾಟಕ ತಂಡ' ಬೆಂಗಳೂರಿನ ಕಲಾಗಂಗೋತ್ರಿ ತಂಡದ ಸಹಕಾರದೊಂದಿಗೆ ಪ್ರಸ್ತುತ ಪಡಿಸಿದ 'ಮುಖ್ಯಮಂತ್ರಿ' ನಾಟಕದ ಎರಡು ಪ್ರಯೋಗಗಳು ಯಶಸ್ವಿಯಾಗಿ ರಂಗದಲ್ಲಿ ಮೆರೆದವು.

ಎ. ಎಂ. ರಾಮರಾವ್, ಶಂಕರ್ ಅರಕೇರಿ, ಶೇಷಗಿರಿ ಮುತಾಲಿಕ್ ದೇಸಾಯಿ, ಎಂ. ವಿ. ಅಜವಾನ, ಎಸ್. ವಿ. ಶಿರೋಳ, ಎಂ. ಎಂ. ಮುಲ್ಲಾ, ಪ್ರೊ. ನಾಗರಾಜ ದೊಡ್ಡಗೌಡರ, ಸುರೇಶ ಜಮಖಂಡಿ, ಶರಣಗೌಡ ಪಾಟೀಲ, ಎ. ಎ. ಸನದಿ, ಬಿ. ಎನ್. ಗಾರ್ಖಿ, ಪ್ರೊ. ಅಶೋಕ ಬೈಲವಾಡ ಮುಂತಾದವರು ಶ್ರೇಷ್ಠ ನಟರಾಗಿ ಕಾರ್ಯ ನಿರ್ವಹಿಸಿದ್ದರೆ, ನಟಿಯರಾಗಿ_ ಶುಭಾಂಗಿಣಿ ಸತ್ತಿಗೇರಿ, ಕುಮಾರಿ ಕುದರಿ, ನಾಡಿಗೇರ, ಬ್ರಹ್ಮಾವರ, ಕವಿತಾ ಏಣಗಿ, ಪಂಢರೀಬಾಯಿ ಹಿರೇಮಠ ಮುಂತಾದವರು ಶ್ರೇಷ್ಠ ನಟಿಯರಾಗಿ ವಿವಿಧ ನಾಟಕಗಳಲ್ಲಿ ಸೇವೆ ಸಲ್ಲಿಸಿದ್ದಾರೆ. ಆರು ವರ್ಷಗಳವರೆಗೆ ನಿರಂತರವಾಗಿ ಕ್ರಿಯಾಶೀಲವಾಗಿದ್ದ ಈ ಪ್ರತಿಭಾ ಹವ್ಯಾಸಿ ನಾಟಕ ತಂಡದ ಬಹುತೇಕ ಕಲಾವಿದರು ಸರಕಾರಿ ಅಧಿಕಾರಿ ಹಾಗೂ ನೌಕರರಾಗಿದ್ದು ಬೇರೆ ಬೇರೆ ಊರುಗಳಿಗೆ ವರ್ಗವಾಗಿ ಹೋದದ್ದರ ಪರಿಣಾಮವಾಗಿ ಕ್ರಮೇಣ ಅನಿವಾರ್ಯವಾಗಿ ತಂಡ ಬಡವಾಗಬೇಕಾಯಿತು.

ಗ್ರಾಮೀಣ ಪ್ರದೇಶಗಳಲ್ಲಿ ರಂಗ ಚಟುವಟಿಕೆಗಳನ್ನು ಅತ್ಯಂತ ಹುರುಪಿನಿಂದ ನಡೆಸಿಕೊಂಡು ಬಂದ ಇನ್ನೆರಡು ತಂಡಗಳೆಂದರೆ ಖಾನಾಪೂರ ತಾಲೂಕು ಇಟಗಿಯ ನವೋದಯ ಚಿತ್ರ ಸಮಾಜ ತಂಡ ಹಾಗೂ ಜ್ಯೋತಿ ಕಲಾವಿದರ ತಂಡ. 1983ರಲ್ಲಿ ಸ್ಥಾಪನೆಗೊಂಡ ನವೋದಯ ಚಿತ್ರ ಸಮಾಜ ನೀನಾಸಂ ಹೆಗ್ಗೋಡಿನ ತಿರುಗಾಟದ ನಾಟಕ ಪ್ರದರ್ಶನಗಳನ್ನು ಏರ್ಪಡಿಸಿ ಗ್ರಾಮೀಣ ಜನತೆಗೆ ಹವ್ಯಾಸಿ ನಾಟಕದ ರುಚಿ ತೋರಿಸಿದೆ. ಸ್ವತಃ ಈ ತಂಡವು 'ಮಾರಿಕೊಂಡವರು' 'ಸಂಸ್ಕಾರ' ಸಿಂಹಗಡ' 'ಜೋಕುಮಾರಸ್ವಾಮಿ' ಹಾಗೂ 'ಜೈಸಿದ್ಧನಾಯಕ' ನಾಟಕಗಳನ್ನಾಡಿ ಯಶಸ್ಸುಗಳಿಸಿದೆ. ನಂತರ 1977ರಲ್ಲಿ ಆರಂಭಗೊಂಡ ಜ್ಯೋತಿ ಕಲಾವಿದರ ತಂಡವು 'ಜೋಕುಮಾರ ಸ್ವಾಮಿ' 'ಕೊನೇ ನಮಸ್ಕಾರಗಳು' 'ಸತ್ಯವಾನ ಸಾವಿತ್ರಿ' ಹಾಗೂ 'ಸಂಗ್ಯಾಬಾಳ್ಯಾ' ನಾಟಕಗಳನ್ನು ಪ್ರದರ್ಶಿಸಿ ಅದೆಷ್ಟೋ ಜನರಿಗೆ ಮನರಂಜನೆ ನೀಡುವಲ್ಲಿ ಸಫಲವಾಯಿತು. ಈ ತಂಡದಲ್ಲಿ ಪ್ರಕಾಶ ಹಿರೇಮಠ ಹಾಗೂ ಸಂಗಡಿಗರು ಒಳಗೊಂಡಿದ್ದರು.

# ಬೆಳಗಾವಿಯಲ್ಲಿ ನಡೆದ ಸಂಭ್ರಮದ ವಿಶ್ವಕನ್ನಡ ಸಮ್ಮೇಳನ

## 11, 12, 13 ಮಾರ್ಚ 2011

## ಕಾರ್ಯಕ್ರಮ ಉದ್ಘಾಟನೆ

ದಿನಾಂಕ ಮಾರ್ಚ 11 ರಂದು ಬೆಳಿಗ್ಗೆ 10 ಗಂಟೆಗೆ ಬೆನನ್ನಸ್ಮಿತ್ ಪದವಿ ಕಾಲೇಜಿನಲ್ಲಿ ನಾಡೋಜ ಡಾ. ಏಣಗಿ ಬಾಳಪ್ಪನವರ ಉಪಸ್ಥಿತಿಯಲ್ಲಿ ಹಾಗೂ ಡಾ. ಬಿ.ವಿ. ರಾಜಾರಾಂ (ಅಧ್ಯಕ್ಷರು, ಕರ್ನಾಟಕ ನಾಟಕ ಅಕಾಡೆಮಿ) ಅವರ ಅಧ್ಯಕ್ಷತೆಯಲ್ಲಿ ಪ್ರೊ. ಲಿಂಗದೇವರು ಹಳೆಮನೆ ಇವರು ಸಂಸ್ಕೃತಿ ಅಂಗಳ ದರ್ಶನ–ಪ್ರದರ್ಶನವನ್ನು ಉದ್ಘಾಟಿಸಿದರು. ಟಿ.ಎಸ್. ನಾಗಾಭರಣ ಅವರು ಅತಿಥಿಗಳಾಗಿ ಆಗಮಿಸಿದ್ದರು.

## ವಿಶ್ವ ಕನ್ನಡ ರಂಗೋತ್ಸವದ ರೂಪರೇಷೆಗಳು
## ರಂಗ ಸಂವಾದ ಕಾರ್ಯಕ್ರಮ

ದಿನಾಂಕ ಮಾರ್ಚ 12 ರಂದು ಬೆಳಿಗ್ಗೆ 10 ಗಂಟೆಗೆ ಗೋಗಟೆ ರಂಗಮಂದಿರದಲ್ಲಿ ಸುರೇಶ ಅನಗಳ್ಳಿಯವರ ಉದ್ಘಾಟನೆಯೊಂದಿಗೆ ಅಥಣಿಯ ದೇವದಾಸಿ ವಿಮೋಚನಾ ಸಮಸ್ಥೆ ಶಾಲಾ ಮಕ್ಕಳಿಂದ 'ಗಿಡ್ಡೂ ಟೇಲರ್' ಮಕ್ಕಳ ನಾಟಕ ಪ್ರಯೋಗಿಸಲ್ಪಟ್ಟಿತು. ನಂತರ ಡಾ. ರಾಮಕೃಷ್ಣ ಮರಾಠೆ, ಸಭಾಷ ಏಣಗಿ ಮತ್ತು ಡಾ. ಎಚ್. ಬಿ. ಕೋಲ್ಕಾರ, ಶಿರೀಶ್ ಜೋಶಿ ಮತ್ತು ರವಿ ಕೊಟಾರಗಸ್ತಿ ಇವರಿಂದ ಕ್ರಮವಾಗಿ ವೃತ್ತಿ ರಂಗಭೂಮಿ, ಮಕ್ಕಳ ರಂಗಭೂಮಿ, ಮಹಿಳಾ ರಂಗಭೂಮಿ ಕುರಿತು ಸಂವಾದ ನಡೆಯಿತು.

ದಿನಾಂಕ ಮಾರ್ಚ 13 ರಂದು ಬೆಳಿಗ್ಗೆ 10 ಗಂಟೆಗೆ ಡಿ.ವಿ.ಎಸ್ ಗುಪ್ತಾ ಇವರ ಉದ್ಘಾಟನೆಯೊಂದಿಗೆ ಮುಚ್ಚಂಡಿಯ ಸರಕಾರಿ ಹಿರಿಯ ಪ್ರಾಥಮಿಕ ಶಾಲಾ ಮಕ್ಕಳಿಂದ 'ನಮಗೆ ನೀವು ನಿಮಗೆ ನಾವು' ಮಕ್ಕಳನಾಟಕ ಪ್ರದರ್ಶಿಸಲ್ಪಟ್ಟಿತು. ತರುವಾಯ, ಡಿ.ಎಸ್. ಚೌಗುಲೆ, ಶ್ರೀಮತಿ ಸಿದ್ಧಗಂಗಮ್ಮ, ಬಿ.ಎಸ್. ಗವಿಮಠ ಇವರಿಂದ ಕ್ರಮವಾಗಿ ಹವ್ಯಾಸಿ ರಂಗಭೂಮಿ, ಕಾಲೇಜು ರಂಗಭೂಮಿ, ಹೊರನಾಡು–ಹೊರದೇಶ ರಂಗಚಟುವಟಿಕೆಗಳ ಬಗ್ಗೆ ರಂಗ ಸಂವಾದ ನಡೆಯಿತು.

## ರಂಗ ಗೀತೆ ಹಾಡುಗಾರಿಕೆ ಹಾಗೂ ನಾಟಕ ಪ್ರದರ್ಶನಗಳು

ಮಾರ್ಚ 11, 12 ಮತ್ತು 13 ರ ಮೂರೂ ದಿನ ಗೋಗಟೆ ರಂಗಮಂದಿರ, ತಿಲಕವಾಡಿಯ ಕಲಾಮಂದಿರ ಹಾಗೂ ಚಿಂದೋಡಿ ಲೀಲಾ ರಂಗಮಂದಿರಗಳಲ್ಲಿ ನಿತ್ಯ ಸಾಯಂಕಾಲ 6 ರಿಂದ ರಾತ್ರಿ 09–30 ರವರೆಗೆ ವಿವಿಧ ಕಲಾವಿದರಿಂದ

ರಂಗಗೀತೆ ಹಾಗೂ ವಿವಿಧ ರಂಗ ತಂಡಗಳಿಂದ ಕ್ರಮವಾಗಿ ಓಥೆಲೊ, ಐ.ಪಿ.ಸಿ. ಸೆಕ್ಷೆನ್ 377, ಕರ್ಣಾಂತರಂಗ, ಚಿತ್ರಾಂಗದಾ, ಮೂರೂ ಬಿಟ್ಟವರು, ರಾಮಧಾನ್ಯ, ಧರ್ಮಾಕ್ರಸಿ, ಮಣಿಗಾರ, ಸಂತ ಶಿಶುನಾಳ ಶರೀಫ, ಅಗ್ನಿ ಮತ್ತು ಮಳೆ, ಮಂಟೇಸ್ವಾಮಿ ಕಥಾ ಪ್ರಸಂಗ, ಬುದ್ಧ ಪ್ರಬುದ್ಧ, ಶ್ರೀ ಕೃಷ್ಣ ಸಂಧಾನ, ಒಂದು ಸ್ವರದ ಸಾವು, ಶೂದ್ರ ತಪಸ್ವಿ, ಪಂಜರ ಶಾಲೆ, ಹರಿಶ್ಚಂದ್ರ, ಮೈಸೂರು ಮಲ್ಲಿಗೆ, ಜೋಕುಮಾರ ಸ್ವಾಮಿ, ಸದಾರಮೆ, ಕಾಗೆ ಕಣ್ಣು ಇರಿವೆ ಬಲ, ರಾಕ್ಷಸ, ಸಿದ್ಧತೆ, ವಿಷಮ ವಿವಾಹ, ಕೋರೆಗಾಂವ್, ಜಗಜ್ಯೋತಿ ಬಸವೇಶ್ವರ, ಅಜಾತ ಶತ್ರು ನವಲಗುಂದದ ನಾಗಲಿಂಗ ಲೀಲೆ, ವೀರರಾಣಿ ಕಿತ್ತೂರು ಚನ್ನಮ್ಮ, ನಿಜಗುಣ ಶಿವಯೋಗಿ, ತ್ಯಾಗವೀರ ಶಿರಸಂಗಿ ಲಿಂಗರಾಜರು, ಪ್ರಚಂಡ ರಾವಣ, ಕುರುಕ್ಷೇತ್ರ, ಸಂಪತ್ತಿಗೆ ಸವಾಲು, ಶಿವರಾತ್ರಿ, ಮಾದಾರ ಚನ್ನಯ್ಯ, ಸಂಗೊಳ್ಳಿ ರಾಯಣ್ಣ ಹಾಗೂ ಮುದುಕನ ಮದುವೆ ನಾಟಕಗಳು ಪ್ರದರ್ಶನಗೊಂಡವು. ಇದೇ ಸಂದರ್ಭದಲ್ಲಿ (ಬೆನನ್ಸಸ್ಮಿತ್ ಪದವಿ ಕಾಲೇಜಿನಲಿ) 1956 ರಿಂದ 2010 ರವರೆಗೆ ಕನ್ನಡ ರಂಗ ಚಟುವಟಿಕೆಗಳ ಸುಮಾರು 2000 ಪತ್ರಿಕಾ ವರದಿಗಳು ಹಾಗೂ ವಿಮರ್ಶೆಗಳಿಗೆ ಸಂಬಂಧಿಸಿ ದಾಖಲೆಗಳ ಪ್ರದರ್ಶನವೇರ್ಪಟ್ಟಿತ್ತು.

## ಬೆಳಗಾವಿಯ ಸುಮಾರು 200ಕ್ಕು ಹೆಚ್ಚು ಕಾಲೇಜು ವಿದ್ಯಾರ್ಥಿ ವಿದ್ಯಾರ್ಥಿನಿಯರ ಯುವರಂಗ ಕಾರ್ಯಕ್ರಮ

ರಂಗ ತರಬೇತಿ ಮೂಕಾಭಿನಯ / ಪ್ರದರ್ಶನ ಕಲಾಗಂಗೋತ್ರಿ ಮಂಜು, ಡಾ. ಸಾಸ್ವಿಹಳ್ಳಿ ಸತೀಶ, ವೈ.ಡಿ. ಬಾದಾಮಿ, ಜಿ.ವಿ. ಪ್ರಸನ್ನಕುಮಾರ, ಸುಕುಮಾರ ಮೋಹನ್, ಗಣೇಶ ಯಾಜಿ, ನಾ. ನಾಗಚಂದ್ರ ಇವರಿಂದ ನೆರವೇರಿದವು.

## "ವಿಶ್ವಕನ್ನಡ ರಂಗೋತ್ಸವ ಸಂಚಿಕೆ"

ಈ ಮಾಸ ನಾಟಕ, ರಂಗತೋರಣ, ರಂಗವಾಣಿ, ರಂಗ ಪ್ರಪಂಚ, ಹಾಲ್ಕುರಿಕೆ ಥಿಯೇಟರ್ ಮಿರರ್, ಸಂಸ ರಂಗ ಪತ್ರಿಕೆಗಳ "ವಿಶ್ವ ಕನ್ನಡ ರಂಗೋತ್ಸವ" ರಂಗ ಸಂಚಿಕೆ ಪ್ರಕಟಣೆ ಹಾಗೂ ವಿಶ್ವಕನ್ನಡ ಸಮ್ಮೇಳನದ ಅಂಗವಾಗಿ ವಿಶೇಷ ರಂಗ ಗೀತೆಗಳ ಸಿ.ಡಿ ಬಿಡುಗಡೆ ಕಾರ್ಯಕ್ರಮವೂ ಯಶಸ್ವಿಯಾಗಿ ನಡೆಯಿತು.

## ಕರ್ನಾಟಕ ಬೀದಿ ರಂಗ ಚಳುವಳಿಯ ರಂಗ ತಂಡಗಳಿಂದ ಬೆಳಗಾವಿ ಜಿಲ್ಲೆಯಲ್ಲಿ ರಂಗ ದೃಶ್ಯಾವಳಿ

ಈ ಕಾರ್ಯಕ್ರಮವು ಗೆಜ್ಜೆ ಹೆಜ್ಜೆ ರಮಾನಂದ, ರಂಗ ಜಂಗಮ ಬಳ್ಳಾರಿ, ನಾ. ಶ್ರೀನಿವಾಸ ಕೊಡಗು, ಕುಂದಾಪುರ ರಂಗಶಾಲೆ, ಐಶ್ವರ್ಯ ಕಲಾ ನಿಕೇತನ ಚಿಕ್ಕಬಳ್ಳಾಪುರ, ಜೆ.ಎಸ್.ಎಸ್. ಕಾಲೇಜು ಧಾರವಾಡ, ಪ್ರದರ್ಶನವಿಭಾಗ ಬೆಂಗಳೂರು ವಿ.ವಿ, ರಂಗವಾಣಿ ಮಹದೇವಪ್ಪ ವೃತ್ತಿ ತಂಡನ ಮುಂತಾದ ಕಲಾವಿದರಿಂದ ಅಗತ್ಯ ಪರಿಣಾಮಕಾರಿ ಚಟುವಟಿಕೆಗಳು ಜರುಗಿದವು.

## ಬೆಳಗಾವಿ ಜಿಲ್ಲೆಯಲ್ಲಿ ಹುಟ್ಟಿ ಮೆರೆದು ಗತಿಸಿದ ಒಟ್ಟು ವೃತ್ತಿರಂಗ ನಾಟಕ ಮಂಡಳಿಗಳು

1) ಶ್ರೀನಿವಾಸ ಕವಿಗಳ ಹಲಸಗಿ ಸಂಗೀತ ನಾಟಕ ಮಂಡಳಿ, ಹಲಸಗಿ. ತಾ: ಖಾನಾಪೂರ. [1869]

2) ಶಿವಮೂರ್ತಿ ಸ್ವಾಮಿಗಳ ಶ್ರೀ ಕಾಡಸಿದ್ಧೇಶ್ವರ ಸಂಗೀತ ನಾಟಕ ಮಂಡಳಿ, ಕೊಣ್ಣೂರ. ತಾ: ಗೋಕಾಕ [1899]

3) ನೇಕಾರ ಬಂಧುಗಳ ಆರ್ಯ ಸಂಗೀತ ನಾಟಕ ಮಂಡಳಿ, ರಾಮದುರ್ಗ. ತಾ: ರಾಮದುರ್ಗ [1906]

4) ಶಿವಲಿಂಗ ಸ್ವಾಮಿಗಳ ಶ್ರೀ ಶಿವಲಿಂಗೇಶ್ವರ ಸಂಗೀತ ನಾಟಕ ಮಂಡಳಿ, ಚಿಕ್ಕೋಡಿ. ತಾ: ಚಿಕ್ಕೋಡಿ [1908]

5) ತುಕಾರಾಮ ಬುವಾ ಅವರ ವಿದ್ಯಾ ದರ್ಶಕ ಸಂಗೀತ ನಾಟಕ ಮಂಡಳಿ, ಗೋಕಾಕ. ತಾ: ಗೋಕಾಕ [1917]

6) ಬಸವಪ್ರಭು ನಾಯ್ಕರವರ ಹುಕ್ಕೇರಿಕರ್ ಸಂಗೀತ ನಾಟಕ ಮಂಡಳಿ, ಹುಕ್ಕೇರಿ. ತಾ: ಹುಕ್ಕೇರಿ [1927]

7) ಶಿವಯೋಗಪ್ಪಾ ವಾಲಿಯವರ ಬಸವೇಶ್ವರ ಸಂಗೀತ ನಾಟಕ ಮಂಡಲಿ, ಸಂಪಗಾವಿ. ತಾ: ಬೈಲಹೊಂಗಲ [1928]

8) ಶಿವಬಸಪ್ಪ ಬೆಳವಡಿಯವರ ಲೋಕ ಸೇವಾ ಸಂಗೀತ ನಾಟಕ ಮಂಡಳಿ, ಸಂಪಗಾವಿ. ತಾ: ಬೈಲಹೊಂಗಲ [1928]

9) ಚಿಕ್ಕೋಡಿ ಶಿವಲಿಂಗೇಶ್ವರ ಸ್ವಾಮಿಗಳ ಶ್ರೀ ಮಾರಿಕಾಂಬಾ ಪ್ರಾಸಾದಿಕ ನಾಟಕ ಮಂಡಳಿ (ಶಿರಸಿ) ಚಿಕ್ಕೋಡಿ [1931]

10) ಹೂಗಾರ ಭೀಮಪ್ಪನವರ ಭಾಗ್ಯೋದಯ ಸಂಗೀತ ನಾಟಕ ಮಂಡಳಿ, ಅಥಣಿ ತಾ: ಅಥಣಿ [1933]

11) ಸೂಡಿ ಹುಚ್ಚಪ್ಪನವರು ಹಾಗೂ ಸಂಗಡಿಗರ ಗುರುಸೇವಾ ಸಂಗೀತ ನಾಟಕ ಮಂಡಳಿ, ಚಿಕ್ಕೋಡಿ. [1933]

12) ಬಸವರಾಜ ಹೊಸಮನಿಯವರ ಶ್ರೀ ಶಾರದಾ ಸಂಗೀತ ನಾಟಕ ಮಂಡಳಿ, ಗೋಕಾಗ ತಾ: ಗೋಕಾಕ [1933]

13) ಮಾರಿಹಾಳ ಗುರಪ್ಪನವರ ಕಿತ್ತೂರ ನಾಟಕ ಮಂಡಳಿ ಕಿತ್ತೂರ, ತಾ: ಬೈಲಹೊಂಗಲ [1935]

14) ಉಡಿಕೇರಿ ಶಂಕರಪ್ಪನವರ ಶ್ರೀ ದುರ್ಗಾದೇವಿ ಸಂಗೀತ ನಾಟಕ ಮಂಡಳಿ, ಉಡಿಕೇರಿ. ತಾ: ಬೈಲಹೊಂಗಲ [1936]

15) ಸೂಡಿ ಹುಚ್ಚಪ್ಪನವರ ಕಿತ್ತೂರು ಸಂಗೀತ ನಾಟಕ ಮಂಡಳಿ, ಕಿತ್ತೂರು. ತಾ: ಬೈಲಹೊಂಗಲ [1937]

16) ಏಣಿಗಿ ಬಾಳಪ್ಪ ಹಾಗೂ ಸಂಗಡಿಗರ ವೈಭವಶಾಲಿ ನಾಟ್ಯ ಸಂಘ, ಬೆಳಗಾವಿ [1941]

17) ಏಣಿಗಿ ಬಾಳಪ್ಪನವರ ಕಲಾ ವೈಭವ ನಾಟ್ಯ ಸಂಘ, ಬೆಳಗಾವಿ [1942]

18) ಅಮ್ಮಣಗಿ ದೇಸಾಯಿಯವರ ಶ್ರೀ ಮಲ್ಲಿಕಾರ್ಜುನ ನಾಟ್ಯ ಸಂಘ, ಅಮ್ಮಣಗಿ. ತಾ: ಹುಕ್ಕೇರಿ [1943]

19) ಅಪ್ಪುರಾಜ ಪೇಂಟರವರ ಶ್ರೀ ರೇಣುಕಾ ನಾಟ್ಯ ಸಂಘ, ಬೈಲಹೊಂಗಲ. ತಾ: ಬೈಲಹೊಂಗಲ [1943]

20) ಬಡಗಾವಿ ದುಂಡಪ್ಪನವರ ಹುಕ್ಕೇರಿ ನಾಟಕ ಮಂಡಳಿ, ಹುಕ್ಕೇರಿ. ತಾ: ಹುಕ್ಕೇರಿ [1943]

21) ಸಿದ್ಧರಾಜ ಉಜ್ಜಯಿನಿಮಠವರ ಸಮಾಜ ವಿಕಾಸ ನಾಟ್ಯ ಸಂಘ, ದೊಡ್ಡವಾಡ. ತಾ: ಬೈಲಹೊಂಗಲ [1950]

22) ಸೀಗೀಹಳ್ಳಿ ಬಸ್ಸಪ್ಪನವರ ಕಲೋಪಾಸಕ ನಾಟ್ಯ ಸಂಘ ದೇಗಾವಿ ತಾ: ಬೈಲಹೊಂಗಲ [1954]

23) ಮಾಗುಂಡಪ್ಪ ಬೆನ್ನೂರವರ ಶ್ರೀ ಪಾಂಡುರಂಗ ನಾಟ್ಯ ಸಂಘ. ರಾಮದುರ್ಗ. ಜಿ: ಬೆಳಗಾವಿ [1955]

24) ಹಂಚಗಿ ಬಸಪ್ಪನವರ ಶ್ರೀ ಸಂಗಮೇಶ್ವರ ಪ್ರಾಸಾದಿಕ ನಾಟ್ಯ ಸಂಘ, ದೊಡ್ಡವಾಡ. ತಾ: ಬೈಲಹೊಂಗಲ [1956]

25) ತಪಸಿ ಗೌಡರ ಕಲಾವಿಕಾಸ ನಾಟ್ಯಸಂಘ ಗೋಕಾಕ ತಾ: ಗೋಕಾಕ [1957]

26) ಲಿಂಗಯ್ಯಸ್ವಾಮಿ ಹಾಗೂ ಸಂಗಡಿಗರ ಶಾಂತೇಶ್ವರ ನಾಟ್ಯ ಸಂಘ, ದೊಡ್ಡವಾಡ. ತಾ: ಬೈಲಹೊಂಗಲ [1962]

27) ಜಂಪಣ್ಣ ಕಡಿವಾಲದವರ ಜಯಭಾರತಿ ನಾಟ್ಯ ಸಂಘ,
ರಾಮದುರ್ಗ ತಾ: ರಾಮದುರ್ಗ [1963]

28) ಎಸ್. ಬಿ. ನರಸಣ್ಣವರ ಅಮರೇಶ್ವರ ನಾಟ್ಯ ಸಂಘ, ಚಿಕ್ಕೊಪ್ಪ,
ತಾ: ಬೈಲಹೊಂಗಲ [1965]

29) ಲಿಂಗಯ್ಯಸ್ವಾಮಿಗಳ ರಾಜರಾಜೇಶ್ವರಿ ನಾಟ್ಯ ಸಂಘ, ದೊಡ್ಡವಾಡ.
ತಾ: ಬೈಲಹೊಂಗಲ [1967]

30) ಬಿ. ಡಿ. ಒಂಟಮೂರಿಮಠವರ ಶ್ರೀ ಗುರು ಚರಮೂರ್ತಿ ಕೃಪಾ ನಾಟ್ಯ
ಸಂಘ, ಹತ್ತರಕಿ ತಾ: ಹುಕ್ಕೇರಿ [1968]

31) ವೀರತ್ತಯ್ಯ ಸ್ವಾಮಿಗಳ ವಿಜಯ ವಾಹಿನಿ ನಾಟ್ಯ ಸಂಘ, ಸಂಪಗಾವಿ.
ತಾ: ಬೈಲಹೊಂಗಲ [1971]

32) ಶಿವಪುತ್ರಯ್ಯ ಸ್ವಾಮಿಗಳ ಶ್ರೀ ಸಂಗಮೇಶ್ವರ ನಾಟ್ಯ ಸಂಘ, ದೊಡ್ಡವಾಡ.
ತಾ: ಬೈಲಹೊಂಗಲ [1975]

33) ಇಂಗಳಗಿ ದೇಸಾಯಿಯವರ ಮಹಾಂತ ದುರುದುಂಡೇಶ್ವರ ನಾಟ್ಯ ಸಂಘ,
ಇಂಗಳಗಿ. ತಾ: ಬೈಲಹೊಂಗಲ [1972]

34) ಮುರಗೋಡ ಗಂಗಾಧರಪ್ಪನವರ ನಾಟಕ ಮಂಡಳಿ, ಮುರಗೋಡ.
ತಾ: ಬೈಲಹೊಂಗಲ.

35) ಲಕ್ಷ್ಮಣರಾವ್ ಅಸುಂಡಿಯವರ ಅಸುಂಡಿ ನಾಟಕ ಮಂಡಳಿ, ಅಸುಂಡಿ.
ತಾ: ಬೈಲಹೊಂಗಲ

36) ಬಸವರಾಜ ಎಮ್ಮಿಯವರ ಬಸವರಾಜ ನಾಟ್ಯ ಸಂಘ, ಕಿತ್ತೂರು.
ತಾ: ಬೈಲಹೊಂಗಲ

37) ಮಲ್ಲನಗೌಡರ ವಾಣಿವಿಲಾಸ ನಾಟ್ಯ ಸಂಘ, ವಕ್ಕುಂದ.
ತಾ: ಬೈಲಹೊಂಗಲ

38) ಅಕ್ತಂಗೇರಹಾಳ ವೀರಯ್ಯನವರ ಅಡವಿ ಸಿದ್ಧೇಶ್ವರ ನಾಟ್ಯ ಸಂಘ,
ಗೋಕಾಕ. ತಾ: ಗೋಕಾಕ

# ಬೆಳಗಾವಿ ನಗರದ ರಂಗ ತಂಡಗಳು

## 'ಕರ್ನಾಟಕ ರಂಗಭೂಮಿ ಸಹಕಾರಿ ಸಂಘ'

(ಬೆಲ್ಲದ ಬಾಗೇವಾಡಿ) ಬೆಳಗಾವಿ

1969 ರ ನವಂಬರ್ 18 ರಂದು ಸಹಕಾರಿ ಧುರೀಣ ಬಸವರಾಜ ಕತ್ತಿ ಇವರ ಅಧ್ಯಕ್ಷತೆ ಹಾಗೂ ನಾಟ್ಯಭೂಷಣ ಡಾ. ಏಣಗಿ ಬಾಳಪ್ಪನವರ ಉಪಾಧ್ಯಕ್ಷತೆಯಲ್ಲಿ ಪದ್ಮ ಭೂಷಣ ಡಾ. ರಾಜಕುಮಾರ ಅವರಿಂದ ಉದ್ಘಾಟಿಸಲ್ಪಟ್ಟ ಕರ್ನಾಟಕ ರಂಗಭೂಮಿ ಸಹಕಾರಿ ಸಂಘ ಬೆಳಗಾವಿ ಈ ಸಂಸ್ಥೆಯು 1998ರಲ್ಲಿ 'ನಾಟ್ಯಭೂಷಣ' ಎಂಬ ಅಭಿನಂದನ ಗ್ರಂಥವನ್ನು ಲೋಕಾರ್ಪಣೆ ಮಾಡಿದೆ. ಡಾ. ಏಣಗಿ ಬಾಳಪ್ಪನವರ ಸಾಧನೆ ಹಾಗೂ ಜೀವನ ಮತ್ತು ರಂಗಭೂಮಿಗೆ ಸಂಬಂಧಿಸಿದ ಮೌಲಿಕ ವಿಷಯಗಳನ್ನೊಳಗೊಂಡ ಈ ಗ್ರಂಥವನ್ನು ಡಾ. ಎಂ. ಎಂ ಕಲಬುರ್ಗಿಯವರ ಸಂಪಾದಕತ್ವದಲ್ಲಿ ಸಿದ್ಧಪಡಿಸಲಾಗಿದೆ. ಡಾ. ರಾಮಕೃಷ್ಣ ಮರಾಠೆಯವರು ಸಹ ಸಂಪಾದಕರಾಗಿ ಕೆಲಸ ಮಾಡಿದ್ದಾರೆ.

ಇನ್ನು ರಂಗ ಚಟುವಟಿಕೆಗಳಿಗೆ ಸಂಬಂಧಿಸಿ ಸಂಕೇಶ್ವರದಲ್ಲಿ 'ಸನಾದಿ ಅಪ್ಪಣ್ಣ' ನಾಟಕ ಪ್ರದರ್ಶನ ನೀಡಲಾಗಿದೆ. ಬೆಲ್ಲದ ಬಾಗೇವಾಡಿ, ಹುಕ್ಕೇರಿ ಹಾಗೂ ಕಟಕೋಳದಲ್ಲಿ ಗ್ರಾಮೀಣ ನಾಟಕೋತ್ಸವ ಮತ್ತು ಬೆಳಗಾವಿ, ಅಮ್ಮಣಗಿ, ಹುಕ್ಕೇರಿ ಕಟಕೋಳದಲ್ಲಿ ರಂಗ ಸಂಗೀತ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. 2001 ರಲ್ಲಿ ಕೊಣ್ಣೂರು ನಾಟಕ ಕಂಪನಿಯ ಶತಮಾನೋತ್ಸವ ಸಮಾರಂಭ ಹಾಗೂ ನಾಟಕ ಪ್ರದರ್ಶನವನ್ನೂ ಏರ್ಪಡಿಸಿತ್ತು. 2003 ರಲ್ಲಿ ಹುಬ್ಬಳ್ಳಿಯಲ್ಲಿ ವಿಚಾರ ಸಂಕಿರಣ ಆಯೋಜಿಸಲಾಗಿತ್ತು. 2006 ರಲ್ಲಿ 'ದಿಶಾಂತರ' 'ಖರೆಖರೆ ಸಂಗ್ಯಾಬಾಳ್ಯಾ' 'ಸಿಂಗಾರೆವ್ವಾ ಮತ್ತು ಅರಮನೆ' ಹಾಗೂ 'ಹೇಮರೆಡ್ಡಿ ಮಲ್ಲಮ್ಮ' ನಾಟಕಗಳನ್ನು ಬೆಳಗಾವಿಯ ನಾಟಕೋತ್ಸವ ನಿಮಿತ್ತ ಪ್ರದರ್ಶಿಸಲಾಯಿತು. ಅದರಂತೆ 2007 ರಲ್ಲಿ ನಿಪ್ಪಾಣಿಯಲ್ಲಿ ರಂಗ ಸಂಗೀತೋತ್ಸವ ಹಾಗೂ ನಾಟಕಕಾರ ಡಿ. ಎಸ್. ಚೌಗಲೆಯವರ ಚೌರಂಗೋತ್ಸವ. 2008 ರಲ್ಲಿ ವಿಶ್ವ ರಂಗಭೂಮಿ ದಿನಾಚರಣೆ 2009 ರಲ್ಲಿ ಶಿಕ್ಷಣದಲ್ಲಿ ರಂಭೂಮಿ ಕಾರ್ಯಾಗಾರ ಹೀಗೆ ಹಲವಾರು ಕಾರ್ಯಕ್ರಮಗಳನ್ನು ಸದರೀ ಸಂಸ್ಥೆ ಹಮ್ಮಿಕೊಂಡು ಬಂದಿದೆ,

ಶ್ರೀ ಬಿ.ಎಸ್. ಕತ್ತಿ, ಡಾ. ಏಣಗಿ ಬಾಳಪ್ಪ, ಬಿ. ಎಸ್. ಗವಿಮಠ, ಏಣಗಿ ಸುಭಾಸ. ರವೀಂದ್ರ ಪಟ್ಟಣಶೆಟ್ಟಿ, ಎ.ಎಸ್. ರಾಮರಾವ್, ಬಸವರಾಜ ಕತ್ತಿ, ಅಪ್ಪಣ್ಣ

ಕರಲಿಂಗಣ್ಣವರ, ಡಾ. ಬಸವರಾಜ ಜಗಜಂಪಿ, ಡಾ, ರಾಮಕೃಷ್ಣ ಮರಾಠೆ, ಪ್ರೊ. ಎಂ. ಎಸ್. ಇಂಚಲ ಪ್ರಾ. ಅಶೋಕ ಸಿಂಗೆ, ಮೋಹನ ಗುಂಡ್ಲೂರ, ಹೇಮಲತಾ ಇಂಡಿ, ಎ. ಬಿ. ದೇಸಾಯಿ ಬಿ. ಎ. ಸನದಿ, ಡಿ. ಎಸ್. ಚೌಗಲೆ, ಡಾ. ಆನಂದ ಮುಳಗುಂದ, ರಾ. ಕ. ನಾಯ್ಕ, ಹಾಗೂ ರವಿ ಕೊಟಾರಗಸ್ತಿ ಮುಂತಾದವರು ಸದರೀ ಸಂಸ್ಥೆಯ ಬೆಳವಣಿಗೆಗಾಗಿ ಸದಾ ಶ್ರಮಿಸುತ್ತಿರುವವರಾಗಿದ್ದಾರೆ.

## 'ಕಲಾರಂಗ' ಹವ್ಯಾಸಿ ಸಂಸ್ಥೆ, ಬೆಳಗಾವಿ

ಕನ್ನಡ, ಮರಾಠಿ, ಕೊಂಕಣಿ ಹೀಗೆ ಬಹುಭಾಷಾ ವಾತಾವರಣದ ಬೆಳಗಾವಿಯಲ್ಲಿ ಹವ್ಯಾಸಿ ರಂಗ ಕಲಾವಿದ, ನಿರ್ದೇಶಕ ರವಿ ಕೊಟಾರಗಸ್ತಿಯವರು ತಮ್ಮ ಕಲಾವಿದ ಗೆಳೆಯರನ್ನು ಕೂಡಿಸಿಕೊಂಡು 1988ರಲ್ಲಿ 'ಕಲಾರಂಗ' ಎಂಬ ರಂಗ ವೇದಿಕೆಯನ್ನು ಹುಟ್ಟು ಹಾಕಿದರು. ಈ ಸಂಸ್ಥೆ ಮಾಡಿದ ಪ್ರಥಮ ಕೆಲಸವೆಂದರೆ ರಂಗೋತ್ಸವಗಳನ್ನು ಏರ್ಪಡಿಸಿ ಜನತೆಯಲ್ಲಿ ರಂಗಾಸಕ್ತಿಯನ್ನು ಹುಟ್ಟಿಸುವದು. ಕ್ರಮೇಣ, ಯುವರಂಗ, ವೃತ್ತಿ ರಂಗ, ಯಕ್ಷ ರಂಗ ಎಂಬ ಉಪವೇದಿಕೆಗಳನ್ನು ಮಾಡಿಕೊಂಡು ಇವುಗಳ ಮೂಲಕವಾಗಿ ಡಾ. ಕಂಬಾರರ ಹೆಸರಿನಲ್ಲಿ ನಾಟಕೋತ್ಸವವನ್ನ ಏರ್ಪಡಿಸುತ್ತ ಜೊತೆಗೆ ರಂಗಕೃತಿ ಪ್ರಕಾಶನ, ಕಲಾವಿದರ ಸತ್ಕಾರ, ವಿಚಾರ ಸಂಕಿರಣ ಮುಂತಾದ ನಿರಂತರ ರಂಗ ಚಟುವಟಿಕೆಗಳನ್ನು ನಡೆಸಿಕೊಂಡು ಹೊರಡಲಾಗಿದೆ. ಮರಾಠಿ ರಂಗ ಸಂಸ್ಥೆಗಳೊಂದಿಗೆ ಹಾಗೂ ಮುಂಬೈ ಮಾತುಂಗದ ಕರ್ನಾಟಕ ಸಂಘ ರಂಗ ಚಟುವಟಿಕೆಗಳೊಂದಿಗೆ ನಾಡಿನ ರಂಗಾಸಕ್ತರ ಗಮನಸೆಳೆಯಲಾಗಿದೆ.

1989ರಲ್ಲಿ ಬೆಂಗಳೂರಿನ 'ಚಿತ್ತಾರ' ಹವ್ಯಾಸಿ ರಂಗ ಸಂಸ್ಥೆಯೊಂದಿಗೆ ಬೆಳಗಾವಿ ಗೋಗಟೆ ರಂಗ ಮಂದಿರದಲ್ಲಿ ಸಂಜೆಹಾಡು, ಬದಾಮರಾಣಿ ಚೌಪಟ್ ರಾಜಾ, ರಂಗ ಪ್ರಯೊಗಗಳನ್ನು ಮಾಡಲಾಗಿದೆ. ಇಂಡಾಲ ರಂಗೋತ್ಸವದಲ್ಲಿ ಭಾಗವಹಿಸಿ ಪಕ್ಕ ಬಲಿತರೂ ಹಾರದ ಗಿಳಿ ನಾಟಕದ ಪ್ರಥಮ ಪ್ರದರ್ಶನ ಏರ್ಪಡಿಸಿದ್ದಲ್ಲದೇ ಅಂತಿಮ ಪಯಣ ದಂತಹ ಹಲವಾರು ಪ್ರಯೋಗಗಳನ್ನು ಬೆಂಗಳೂರು, ಚಿಕ್ಕೋಡಿ, ಬೆಳಗಾವಿ, ಖಾನಾಪೂರ, ಹಲಸಿ ಮುಂತಾದೆಡೆಗಳಲ್ಲಿ ಪ್ರದರ್ಶನ ನೀಡಲಾಗಿದೆ. 2001–2006 ರವರೆಗೆ ನಾಟಕ ಅಕಾಡೆಮಿ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಧಾರವಾಡದ ಕಲೋದ್ಧಾರಕ ತಂಡದ ಸಹಯೋಗದೊಂದಿಗೆ ಯುವರಂಗ ನಾಟಕಗಳ ನಾಟಕೋತ್ಸವ ಆಚರಿಸಲಾಗಿದೆ. ಮೂರು ದಿನಗಳ ವೃತ್ತಿ ರಂಗ ನಾಟಕೋತ್ಸವ ಹಾಗೂ ಕಂಬಾರರ ನಾಟಗಳ ಉತ್ಸವವನ್ನೂ ಕೆ.ಬಿ.ಆರ್ ಡ್ರಾಮಾ ಕಂಪನಿಯಲ್ಲಿ ಪ್ರಯೋಗಿಸಲ್ಪಡಲಾಗಿದೆ. 2003 ರಿಂದ ಕಲಾರಂಗ ಸಂಸ್ಥೆಯು ಇಲ್ಲಿಯವರೆಗೆ ಕರಾವಳಿ ರಂಗ ಸಂಸ್ಥೆ ಕಲಾವಿದರ ಹಾಗೂ ಮಹಿಳಾ ಕಲಾವಿದರ ಮೂಲಕ ಕಂಸವಧೆ, ಕೃಷ್ಣ ಸಂಧಾನ, ಕೃಷ್ಣಾರ್ಜುನ ಮತ್ತು ಕರ್ಣಪರ್ವ ಯಕ್ಷಗಾನ ರಂಗ ಪ್ರಯೋಗಗಳನ್ನೂ ಪ್ರಯೋಗಿಸಲಾಗಿದೆ.

2004ರಲ್ಲಿ ಬೆಂಗಳೂರಲ್ಲಿ ಕರ್ನಾಟಕ ರಾಜ್ಯ ನೌಕರರ ಸಂಘ ಆಯೋಜಿಸಿದ 'ರಂಗ ಸ್ನೇಹ' ನಾಟಕಗಳ ಸ್ಪರ್ಧೆಯಲ್ಲಿ ರಂಗ ಸಂಸ್ಥೆ ದ್ವಿತೀಯ ಸ್ಥಾನ ಪಡೆದಿದೆ. ಪ್ರತಿ ಜನವರಿ ತಿಂಗಳಲ್ಲಿ 'ಸಪ್ದರ್ ಹಸ್ಮಿ' ಬದುಕು-ರಂಗ ಚಳುವಳಿ ಕುರಿತು ನೆನಪು ಮತ್ತು ವಿಚಾರ ಸಂಕಿರಣ, ಹೋರಾಟದ ಹಾಡುಗಳು, ಬೀದಿ ನಾಟಕಗಳ ಪ್ರದರ್ಶನ ಆಯೋಜಿಸಲಾಗಿತ್ತು. ರಂಗಭೂಮಿ ಕುರಿತು ಯುವರಂಗ ಭೂಮಿ ಸಂಪಾದಿತ ರಂಗ ವಿದ್ವಾಂಸರ ಲೇಖನಗಳ ಸಂಗ್ರಹ ಕೃತಿ ಹಾಗೂ ಡಾ. ಸರಜೂ ಕಾಟಕರ 'ಅಂಬೆ' ರಂಗಕೃತಿ ಪ್ರಕಾಶನಗೊಳಿಸಿ. ಬಿ.ವಿ ಕಾರಂತ, ಜಯತೀರ್ಥ ಜೋಷಿ, ಹಾಗೂ ಕೆ. ವಿ. ಸುಬ್ಬಣ್ಣ ಮತ್ತು ವೃತ್ತಿರಂಗ ಕಲಾವಿದರಾದ ಹಂದಿಗನೂರು ಸಿದ್ರಾಮಪ್ಪ ಮತ್ತು ಸೂಗಪ್ಪ ಮಾಸ್ತರ, ಅಪ್ಪಾಲಾಲ ಜಮಖಂಡಿ, ಯಲಿವಾಳ ಸಿದ್ಧಯ್ಯ ಸ್ವಾಮಿ ಹಾಗೂ ಕಂದಗಲ್ ಹನುಮಂತರಾಯ ಮುಂತಾದವರ ಬದುಕು, ನೆನಪುಗಳು ಇವತ್ತಿನ ಕಲಾವಿದರಿಗೆ ದಾರಿದೀಪವಾಗುವಂತೆ ಕಲಾರಂಗ ಸಂಸ್ಥೆಯು ಇಂದಿಗೂ ಕಾರ್ಯೋನ್ಮುಖವಾಗಿದೆ.

## ಕನ್ನಡ ವಿಭಾಗ ಮತ್ತು ಸಾಂಸ್ಕೃತಿಕ ಸಂಘ

ಲಿಂಗರಾಜ ಮಹಾವಿದ್ಯಾಲಯ (ಸ್ವಾಯತ್ತ), ಬೆಳಗಾವಿ

**2009– 2010 ರ ರಂಗ ಚಟುವಟಿಕೆಯ ವಿವರ**


1. 'ಕಣ್ಮರೆಯಾಗುತ್ತಿರುವ ಲೋಕಗಳು' ಎಂಬ ಕಾರ್ಯಾಗಾರವನ್ನು ನಡೆಸಲಾಗಿದೆ. ಸಹಯೋಗ: ನೀನಾಸಂ ಹೆಗ್ಗೋಡು, ಸಂಪನ್ಮೂಲವ್ಯಕ್ತಿಗಳು: ಶ್ರೀ. ಟಿ.ಪಿ. ಅಶೋಕ, ಡಾ. ಶ್ರೀಕಂಠಮೂರ್ತಿ, ಡಾ. ಎಲ್. ಸಿ. ಸುಮಿತ್ರಾ ಮತ್ತು ಶ್ರೀಮತಿ ಪೂರ್ಣಿಮಾ 2. 'ತಲೆದಂಡ' ಮತ್ತು 'ಗೋಕುಲ ನಿರ್ಗಮನ' ನಾಟಕಗಳ ವಿಕ್ಷೇಣೆ ಮತ್ತು ಸಂವಾದ ನಡೆಸಲಾಗಿದೆ. ಸಂಪನ್ಮೂಲ ವ್ಯಕ್ತಿಗಳು: ಶ್ರೀ. ಟಿ.ಪಿ. ಅಶೋಕ, ಡಾ. ಶ್ರೀಕಂಠಮೂರ್ತಿ, ಡಾ. ಎಲ್. ಸಿ. ಸುಮಿತ್ರಾ ಮತ್ತು ಶ್ರೀಮತಿ ಪೂರ್ಣಿಮಾ 3. 'ಆಯ್.ಪಿ.ಸಿ. 369' ನಾಟಕ. ನಿರ್ದೇಶನ: ಬಾಬಾಸಾಹೇಬ ಕಾಂಬಳೆ, ಗೋಕಾಕ. ಅಭಿನಯ: ಕನ್ನಡ ವಿಭಾಗದ ವಿದ್ಯಾರ್ಥಿಗಳಿಂದ. ಈ ನಾಟಕ ಕರ್ನಾಟಕ ವಿಶ್ವವಿದ್ಯಾಲಯದ ಯುವಜನೋತ್ಸವದಲ್ಲಿ ಶ್ರೇಷ್ಠ ನಾಟಕವೆಂದು ಪರಿಗಣಿತವಾಗಿದೆ. ಕರ್ನಾಟಕ ನಾಟಕ ಅಕಾಡೆಮಿಯಿಂದ ಪುರಸ್ಕಾರ ದೊರೆತಿದೆ. 4. ನೀನಾಸಂ, ಹೆಗ್ಗೋಡಿಗೆ ರಂಗ ತರಬೇತಿಗಾಗಿ ನಾಲ್ಕು ಜನ ಕನ್ನಡ ವಿಭಾಗದ ವಿದ್ಯಾರ್ಥಿಗಳನ್ನು ಕಳುಹಿಸಲಾಗಿತ್ತು. 5. ನೀನಾಸಂ, ಹೆಗ್ಗೋಡಿನ ತಿರುಗಾಟ ನಾಟಕಗಳ ವಿಕ್ಷಣೆಗೆ ವಿದ್ಯಾರ್ಥಿಗಳನ್ನು ಕಳುಹಿಸಲಾಗಿತ್ತು ಮತ್ತು ಅದರ ಕುರಿತು ಸಂವಾದ ಏರ್ಪಡಿಸಲಾಗಿತ್ತು.

2007–08ರಿಂದ ಈ ಮಹಾವಿದ್ಯಾಲಯವು ಸ್ವಾಯತ್ತತೆಯನ್ನು ಪಡೆದುಕೊಂಡಿದೆ. ಈ ಹಿನ್ನೆಲೆಯಲ್ಲಿ ಕನ್ನಡ ವಿಭಾಗವು ಅನೇಕ ರಂಗ ಚಟುವಟಿಕೆಗಳನ್ನು ಪಠ್ಯದ ಹಿನ್ನೆಲೆಯಲ್ಲಿ ನಡೆಸಿಕೊಂಡು ಬರುತ್ತಿದೆ. ನಾಟಕ ರಸಗ್ರಹಣವೆಂದು ಪಠ್ಯಕ್ರಮವನ್ನು

ಇಟ್ಟುಕೊಳ್ಳಲಾಗಿದೆ. ಪ್ರತಿವರ್ಷ ಎರಡು ನಾಟಕಗಳ ರಸಗ್ರಹಣವನ್ನು ವಿದ್ಯಾರ್ಥಿಗಳು ಅಭ್ಯಾಸ ಮಾಡುತ್ತಿದ್ದಾರೆ. ಜೊತೆಗೆ ಒಂದು ನಾಟಕವನ್ನು ಅಭಿನಯಿಸುತ್ತಾರೆ. ಇತರ ಚಟುವಟಿಕೆಗಳು–

**ನಾಟಕ ಓದು, ಉಪನ್ಯಾಸ :** 1) ಪೊ. ಡಿ. ಎಸ್. ನಿರ್ದೇಶಕ, ಚಿತ್ರಕಾರ, ಅನುವಾದಕ, ಉಪನ್ಯಾಸಕಾರ ಬಿ. ಕೆ. ಮಹಾವಿದ್ಯಾಲಯ ಬೆಳಗಾವಿ. 2) ನಾಟಕದಲ್ಲಿ ನಿರ್ದೇಶನ, ನೆರಳು–ಬೆಳಕು, ವೇಷಭೂಷಣ, ನೃತ್ಯ ಸಂಗೀತಗಳ ಪಾತ್ರ ವಿವರಣೆ: ಶ್ರೀ ಶಿರೀಷ ಜೋಶಿ. ರಂಗ ಸಂಪದ, ಬೆಳಗಾವಿ. 3) 'ಇಪ್ಪತ್ತೊಂದನೇ ಶತಮಾನ' : ನಾಟಕಕಾರ ದುಂಡಿರಾಜ, ರಂಗ ರಚನೆ ಮತ್ತು ನಿರ್ದೇಶನದ ಬಗ್ಗೆ... ಮತ್ತು ಕನ್ನಡ ವಿಭಾಗದ ವಿದ್ಯಾರ್ಥಿಗಳಿಂದ ಅಭಿನಯ. 4) ನಾಟಕದ ರಸಗ್ರಹಣದಲ್ಲಿ ಗಮನಿಸ ಬೇಕಾದ ಅಂಶಗಳು_ ಸಂವಾದ. 2008–09 5) ನಾಟಕವನ್ನು ರಂಗ ಕೃತಿಯಾಗಿ ನೋಡುವ ಕ್ರಮ: ಉಪನ್ಯಾಸ_ ಡಾ. ಪ್ರಕಾಶ ಗರುಡ. ನಿರ್ದೇಶಕ: ಗೊಂಬೆ ಮನೆ ಧಾರವಾಡ. 6) ರಂಗೀಲಾ ರಾಜನ ಕಥೆ–ನಿರ್ದೇಶನ ಅನುವಾದ ಹಾಗೂ ಕನ್ನಡ ವಿದ್ಯಾರ್ಥಿಗಳಿಂದ ಅಭಿನಯ. ನೀನಾಸಂ ನಾಟಕಗಳನ್ನು ವಿದ್ಯಾರ್ಥಿಗಳಿಗೆ ತೋರಿಸಿ ಅವುಗಳ ಹಿನ್ನೆಲೆಯಲ್ಲಿ ರಸಗ್ರಹಣ ಚರ್ಚೆ. 7) ಪದವಿ ವಿದ್ಯಾರ್ಥಿಗಳು. ಪಿಯುಸಿ ವಿದ್ಯಾರ್ಥಿಗಳು ನಾಟಕ ನಿರ್ದೇಶಿಸಿದರು. 8) ರಂಗಭೂಮಿ ರಸಗ್ರಹಣ ಕಾರ್ಯಕ್ರಮ– 2010 ಮುಂತಾದವುಗಳನ್ನು ಏರ್ಪಡಿಸಲಾಗಿತ್ತು.

# ನಟರು, ನಾಟಕಕಾರರು ಹಾಗೂ ರಂಗ ಕರ್ಮಿಗಳು




## **ಚಂದ್ರಕಾಂತ ಕುಸನೂರ,** ಬೆಳಗಾವಿ

ಸಾವಿರದೊಂಬೈನೂರಾ ಮೂವತ್ತೊಂದರಲ್ಲಿ ಜನಿಸಿದ ಚಂದ್ರಕಾಂತ ಕುಸನೂರವರು ಮೂಲತಃ ಗುಲಬುರ್ಗಾದವರು. ಎಂ.ಎ, ಎಂ.ಇಡಿ. ಪದವೀಧರರು. ಇವರು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಉಪ ನಿರ್ದೇಶಕರಾಗಿ ಸಮರ್ಥ ಸೇವೆ ಸಲ್ಲಿಸಿ ಸಧ್ಯ ಬೆಳಗಾವಿಯಲ್ಲಿ ನಿವೃತ್ತಿ ಜೀವನ ಸಾಗಿಸುತ್ತಿದ್ದಾರೆ. ಇವರು ಕನ್ನಡ ಮತ್ತು ಹಿಂದಿ ಭಾಷಾ ಸಾಹಿತ್ಯದಲ್ಲಿ ಒಳ್ಳೆ ಕೃಷಿ ಮಾಡಿದವರು. ಇದಕ್ಕಿಂತಲೂ ಹೆಚ್ಚಾಗಿ ಚಿತ್ರಕಲೆಯಲ್ಲಿ. ನಾಟಕ ಕ್ಷೇತ್ರದಲ್ಲಂತೂ ಇವರ ಸಾಧನೆ ಅಪೂರ್ವವಾದದ್ದೆನ್ನಬಹುದು. ಕನ್ನಡದ ನಂದೀಕೋಲಿನಿಂದ ಪ್ರಾರಂಭವಾದ ಇವರ ಕನ್ನಡ ಕಾವ್ಯ ಸಾಹಿತ್ಯ_ ರಂಗ ಕ್ಷೇತ್ರದಲ್ಲಿ ಇನ್ನೂ ಗರಿಗೆದರಿ 'ಕನಸು' 'ಹಳ್ಳಾ ಕೊಳ್ಳಾ ನೀರು' 'ಮೂರು ಅಸಂಗತ ನಾಟಕಗಳು' 'ನಾಲ್ಕು ಅಸಂಗತ ನಾಟಕಗಳು' 'ತೋಳ ಬಂತು ತೋಳ ಮತ್ತು ಇತರ ನಾಟಕಗಳು' 'ಸೆಳೆತ' 'ಎರಡು ನಾಟಕಗಳು' 'ಸುರೇಖಾ ಮ್ಯಾಡಂ' 'ದಿಂಡಿ' ಹಿಂದೀ ಭಾಷೆಯಲ್ಲಿ 'ಮಹಾ ಪುರುಷ' ಮುಂತಾದವುಗಳು ಕುಸನೂರವರ ಅಪೂರ್ವ ಸಾಧನೆಯ ಪ್ರತೀಕವಾಗಿ ನಿಲ್ಲುತ್ತದೆ. ಇವುಗಳಲ್ಲಿ ಹಲವಾರು ನಾಟಕಗಳು ರಂಗವನ್ನಲಂಕರಿಸಿವೆ. ಚಿತ್ರಕಲಾ ರಂಗದಲ್ಲೂ ಅದ್ವಿತೀಯ ಸಾಧನೆ ಗೈದಿದ್ದಾರೆ. ಪ್ರದರ್ಶನಗಳೂ ಏರ್ಪಟ್ಟಿವೆ.

ಕನ್ನಡ, ಇಂಗ್ಲಿಷ, ಹಿಂದಿ, ಮರಾಠಿ ಮತ್ತು ಉರ್ದು ಭಾಷೆಗಳನ್ನು ಬಲ್ಲ ಕುಸನೂರವರು ಇನ್ನೂ ಮುಂದುವರೆದು ಕಾದಂಬರಿ ಕ್ಷೇತ್ರದಲ್ಲಿ ಗೋಹರಜಾನ ಮಾಲತಿ ಮತ್ತು ನಾನು, ಯಾತನಾ ಶಿಬಿರ, ಚರ್ಚ ಗೇಟ್, ಕೆರೂರ ನಾಮಾ, ಒಂದು ಕೈಫಿಯತ್ ನಂತರ ವಿಮರ್ಶಾ ಲೋಕದಲ್ಲೂ ಮುನ್ನುಗ್ಗಿ ಕಲೆ ಅನುಭವ ಮತ್ತು ಅನುಭಾವ, ಸಾಹಿತ್ಯ ಮತ್ತು ಕಲೆ, ಕಲಾನುಭವ ಕೃತಿಗಳ ರಚನೆಗೂ ಕಾರಣರಾಗಿದ್ದಾರೆ. ಅನುವಾದಕ್ಕೆ ಸಂಬಂಧಿಸಿ ಯು. ಆರ್. ಅನಂತಮೂರ್ತಿ ಅವರ ಸಂಸ್ಕಾರ, ಆಲನಹಳ್ಳಿಯಯವರ ಕಾಡು ಹಿಂದಿಗೆ ತರ್ಜುಮೆಗೊಂಡಿವೆ. ಹಿಂದಿಯದೇ ಆದಂಥ ರೇಶಮ್ ಕೀ ಗುಡಿಯಾ ಕಥಾ ಸಂಕಲನ ಇಷ್ಟೆಲ್ಲ ಕುಸನೂರವರ ಅದ್ಭುತ ಸಾಧನೆಗೆ ಸಾಕ್ಷಿ. ಇವರು ಹಲವಾರು ಪ್ರತಿಷ್ಠಿತ ಪ್ರಶಸ್ತಿ, ಪುರಸ್ಕಾರಗಳನ್ನೂ ಪಡೆದಿದ್ದಾರೆ.

ವಿಳಾಸ : 534, ರಾಣಿಚೆನ್ನಮ್ಮ ನಗರ, 2ನೇಹಂತ, ಬೆಳಗಾವಿ ಮೊ: 9845580131

## ರಾ. ಕ. ನಾಯಕ, ಬೆಳಗಾವಿ



ರಾಮಚಂದ್ರ ಕಲ್ಲೋ ನಾಯಕ ಅವರು 1936ರಲ್ಲಿ ಜನಿಸಿದವರಾಗಿದ್ದು ಎಂ. ಎ. ಬಿ.ಎಡ್ ವಿದ್ಯಾರ್ಹತೆಯನ್ನು ಹೊಂದಿ ಅನೇಕ ವರ್ಷಗಳವರೆಗೆ ಕಸ್ತೂರಿ ಮಾಸ ಪತ್ರಿಯ ಉಪ ಸಂಪಾದಕರಾಗಿ, 1993ರ ಸುಮಾರಿಗೆ ಕಾಂಪೋಜಿಟ್ ಜ್ಯೂನಿಯರ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿ ನಿವೃತ್ತಿಯ ನಂತರವೂ ವಿವಿಧ ಕಡೆ ಬೋಧಕರಾಗಿ, ಪ್ರಾಂಶುಪಾಲರಾಗಿ ಕೆಲಸ ಮಾಡಿದ್ದಾರೆ. ಸರಕಾರಿ ವಸತಿ ಮೊರಾರಜಿ ದೇಸಾಯಿ ವಿಜ್ಞಾನ ಪದವಿ ಪೂರ್ವ ಕಾಲೇಜ ಬೆಳಗಾವಿಯಲ್ಲಿ ಸೇವೆ ಸಲ್ಲಿಸಿದ್ದಾರೆ. ಇನ್ನು, ಸಾಹಿತ್ಯ ಸೇವೆಯಲ್ಲೂ ಇವರು ಯಾವುದೇ ರೀತಿಯಿಂದ ಹಿಂದೆ ಉಳಿದಿಲ್ಲ. ಇವರ ಎಷ್ಟೋ ಕತೆಗಳು ಪತ್ರಿಕೆಗಳಲ್ಲಿ ಪ್ರಕಟಗೊಂಡಿವೆ. ಅದರಂತೆ ನಾಟಕಗಳಿಗೆ ಸಂಬಂಧಿಸಿ ಹಲವಾರು ವಿಮರ್ಶೆಗಳನ್ನೂ ಬರೆದಿದ್ದಾರೆ. ಹಲವಾರು ಸಣ್ಣಪುಟ್ಟ ಸ್ವತಂತ್ರ ನಾಟಕಗಳೂ ಪ್ರಕಟಗೊಂಡಿವೆ.

ಕೇಂದ್ರ ಸಾಹಿತ್ಯ ಅಕಾಡೆಮಿಗೂ ಮತು ನ್ಯಾಷನಲ್ ಬುಕ್ ಟ್ರಸ್ಟ್‌ಗೂ ಸಾಕಷ್ಟು ಅನುವಾದಗಳನ್ನೂ ಮಾಡಿಕೊಟ್ಟಿದ್ದಾರೆ. ಇತರೆ ರಾಜ್ಯಗಳ ಸಾಹಿತ್ಯ ಸೇವೆಯನ್ನೂ ಅನುವಾದದ ಮೂಲಕ ಮಾಡಿದ ಹೆಗ್ಗಳಿಕೆ ಇವರದಾಗಿದೆ. ಇನ್ನು, 1986ರಲ್ಲಿ 'ಓಡಿಸ್ಸಿ' ಎಂಬ ಗ್ರೀಕ್ ಮಹಾ ಕಾವ್ಯವನ್ನು ಆಧರಿಸಿದ ರಂಗ ನಾಟಕಕ್ಕೆ ಕರ್ನಾಟಕ ಅಕಾಡೆಮಿಯ ನಾಟಕ ರಚನಾ ಸ್ಪರ್ಧೆಯಲ್ಲಿ ಪ್ರಥಮ ಬಹುಮಾನ ಬಂದಿದೆ. 2002ರಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿಯ ನಾಟಕ ವಿಭಾಗ ಕುರಿತು ಪುರಸ್ಕಾರ 'ಘೂಳಿಮಡ್ಡಿ ಕತ್ತರಿ' ನಾಟಕಕ್ಕೆ ಲಭಿಸಿದೆ. ಇದೇ ನಾಟಕಕ್ಕೆ ಮುಂಬೈ ಸದಾನಂದ ಸುವರ್ಣ ಪ್ರತಿಷ್ಠಾನದ ಸ್ಪರ್ಧೆಯಲ್ಲಿ ಪ್ರಥಮ ಬಹುಮಾನ ಬಂದಿದೆ. 2002ರಲ್ಲಿ ಕರ್ನಾಟಕ ನಾಟಕ ಅಕಾಡೆಮಿ ಏರ್ಪಡಿಸಿದ್ದ ನಾಟಕ ರಚನಾ ಶಿಬಿರದಲ್ಲಿ ತಯಾರಿಸಿದ 'ಡೋಹರ ಕಕ್ಕಯ್ಯ' ನಾಟಕ ಅಕಾಡೆಮಿಯಿಂದ ಪ್ರಕಟವಾಗಿದೆ. 1996ರಲ್ಲಿ ಇವರಿಗೆ ನಾಟಕ ಅಕಾಡೆಮಿ ಪ್ರಶಸ್ತಿ ನೀಡಿ ಗೌರವಿಸಿದೆ. ಹೀಗೆ ರಾ. ಕ. ನಾಯಕರ ಸಾಧನೆ ರಂಗ ಕ್ಷೇತ್ರಕ್ಕೆ ಅಪಾರವೆಂದೇ ಹೇಳಬಹುದು.

ವಿಳಾಸ : ರಾ. ಕ. ನಾಯಕ, 42/1, ಸೋಮವಾರ ಪೇಟ, ಟಿಳಕವಾಡಿ, ಬೆಳಗಾವಿ– 590005 ದೂರವಾಣಿ ; 0837 2433421



## ಬಿ. ಎಸ್. ಗವಿಮಠ, ಬೆಳಗಾವಿ


ಕನ್ನಡ ಸಾಹಿತ್ಯ, ನಾಟಕ ಹಾಗೂ ಸಾಮಾಜಿಕ ಕ್ಷೇತ್ರದಲ್ಲಿ ಶ್ರೀ ಬಿ. ಎಸ್. ಗವಿಮಠವರ ಹೆಸರು, ಪ್ರಸಿದ್ಧಿ ಅದರಲ್ಲೂ ರಂಗಭೂಮಿಯ ಒಡನಾಟದಲ್ಲಿ ಬಹಳಷ್ಟು ಹೆಸರು ಮಾಡಿದಂಥ ಗವಿಮಠರು, ಒಬ್ಬ ನಿಷ್ಠಾವಂತ ಪ್ರಾಧ್ಯಾಪಕರಾಗಿ,

ಸಮರ್ಥ ಸೇವೆ ಸಲ್ಲಿಸಿ ನಿವೃತ್ತಿ ಹೊಂದಿದ್ದರೂ ಕೆ.ಎಲ್.ಇ ಶಿಕ್ಷಣಸಂಸ್ಥೆ ಹಾಗೂ ವೃತ್ತಿ, ಹವ್ಯಾಸಿ ರಂಗಕ್ಷೇತ್ರಕ್ಕೆ ನಿಕಟ ಸಂಬಂಧವನ್ನು ಇರಿಸಿ ಕೊಂಡಿದ್ದಾರೆ. ನಾಟ್ಯಭೂಷಣ ಡಾ, ಏಣಗಿ ಬಾಳಪ್ಪನವರ ಸಹವರ್ತಿಗಳಾದ ಇವರು ಬಾಳಪ್ಪನವರನ್ನು ಕುರಿತು 'ಕಲಾವೈಭವ' ಮತ್ತು ಚಿಕ್ಕೋಡಿ ಶಿವಲಿಂಗ ಸ್ವಾಮಿಗಳನ್ನು ಕುರಿತು 'ಮರೆಯಲಾಗದ ಚಿಕ್ಕೋಡಿ ಶಿವಲಿಂಗ ಸ್ವಾಮಿಗಳು ಪುಸ್ತಕಗಳನ್ನೂ ಬರೆದಿದ್ದಾರೆ. ರಂಗಭೂಮಿಯನ್ನು ಕುರಿತು ಹಲವಾರು ಪತ್ರಿಕೆಗಳಲ್ಲಿ ಹಲವಾರು ಲೇಖನಗಳನ್ನು ಬರೆದಿದ್ದಾರೆ. ಅಷ್ಟೇ ಅಲ್ಲದೆ, ಇವರಿಂದ ಸಂಪಾದಿತಗೊಂಡ ಸ್ಮರಣ ಸಂಚಿಕೆಗಳು, ವಾರ್ಷಿಕ ಪತ್ರಿಕೆಗಳು ಜನಪ್ರಿಯವಾಗಿವೆ.

ಕರ್ನಾಟಕ ನಾಟಕ ಅಕಾಡೆಮಿಯ ಸದಸ್ಯರಾಗಿಯೂ ಕೆಲಸ ಮಾಡಿದ ಇವರು ಹಲವಾರು ಸ್ಥಳೀಯ ಸಂಘ ಸಂಸ್ಥೆಗಳ ಪದಾಧಿಕಾರಿಗಳಾಗಿಯೂ ಸೇವೆ ಸಲ್ಲಿಸಿದ್ದಾರೆ. ರಂಗಭೂಮಿಯ ಶ್ರೇಯಸ್ಸಿಗಾಗಿಯೇ ದುಡಿಯುತ್ತಿರುವ 'ಕರ್ನಾಟಕ ರಂಗಭೂಮಿ ಸಹಕಾರಿ ಸಂಘ ನಿ. ಬೆಳಗಾವಿ' ಇದರ ನಿರ್ದೇಶಕರಲ್ಲೊಬ್ಬರಾದ ಇವರು ಹಲವಾರು ಕಡೆಯಿಂದ ಪ್ರಶಸ್ತಿ, ಪುರಸ್ಕಾರ ಹಾಗೂ ಗೌರವಗಳನ್ನೂ ಸಂಪಾದಿಸಿದ್ದರೆ. ನಿಸ್ಪೃಹ ಸೇವಾನೋಭಾವದ ಗವಿಮಠರು ಒಳ್ಳೆ ಸ್ನೇಹಜೀವಿಗಳು, ರಂಗಜೀವಿಗಳು, ಆಪದ್ಭಂಧುಗಳು.


ವಿಳಾಸ: ಬಿ.ಎಸ್. ಗವಿಮಠ, 641, 3 ನೇ ಸ್ಟೇಜ್, ಮುರಳೀಧರ ಕಾಲೋನಿ, ಹನುಮಾನ ನಗರ, ಬೆಳಗಾವಿ. ಮೊ: 944814576

## ಡಾ. ರಾಮಕೃಷ್ಣ ಮರಾಠೆ, ಬೆಳಗಾವಿ



ಇವರು 'ಉತ್ತರ ಕರ್ನಾಟಕ ವೃತ್ತಿ ರಂಗಭೂಮಿ' ಎಂಬ ಮಹಾ ಪ್ರಬಂಧವನ್ನು ರಚಿಸಿ ರಂಗಲೋಕಕ್ಕೆ ಅತ್ಯಂತ ಚಿರಪರಿಚಿತರಾಗಿದ್ದಾರೆ. ಕನ್ನಡ ಅಧ್ಯಾಪಕ ವೃತ್ತಿಯಲ್ಲಿ ತೊಡಗಿದ ಇವರು ರಂಗಭೂಮಿಗೆ ಸಂಬಂಧಿಸಿ 'ರಂಗಭೂಮಿ' 'ಕೊಣ್ಣೂರ ಕಂಪನಿ' 'ತೆರೆ ಮರೆ' 'ನಾಟಕ-ಕರ್ನಾಟಕ' ಕನ್ನಡ ರಂಗಭೂಮಿಯ ಸಂವೇದನೆ' ಮುಂತಾದ ಗ್ರಂಥಗಳನ್ನು ರಚಿಸಿರುವುದಲ್ಲದೇ 'ರಾಮಧಾನ್ಯ' ಎಂಬ ನಾಟಕವನ್ನೂ ರಚಿಸಿ ರಂಗಕ್ಕೆ ತಂದಿದ್ದಾರೆ. ಎಂ.ಎ, ಪಿಎಚ್. ಡಿ, ಪದವೀಧರರಾದ ಇವರು ರಂಗ ಸಂಘಟನೆ, ಸಾಹಿತ್ಯ, ಅನುವಾದ, ವಿಮರ್ಶೆ, ಸಂಪಾದನೆ ಮುಂತಾದ ಕ್ರಿಯೆಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದಾರೆ. ಡಾ. ಎಮ್. ಎಮ್. ಕಲಬುರ್ಗಿಯವರ ಪ್ರಧಾನ ಸಂಪಾದಕತ್ವದಲ್ಲಿ, ಡಾ. ಏಣಿಗಿ ಬಾಳಪ್ಪನವರನ್ನು ಕುರಿತು ತಯಾರಾದ 'ನಾಟ್ಯಭೂಷಣ' ಗ್ರಂಥದ ಸಂಪಾದಕರಾಗಿಯೂ ಇವರು ಕೆಲಸ ಮಾಡಿದ್ದಾರೆ.

ವಿಳಾಸ: ಡಾ. ರಾಮಕೃಷ್ಣ ಮರಾಠೆ. ಬಿ. ಕೆ. ಕಾಲೇಜು, ಕ್ಲಬ್ ರೋಡ, ಬೆಳಗಾವಿ. ಮೊ: 9448863818 ದೂ: 0831 2448052




## ಡಾ. ಬಸವರಾಜ ಜಗಜಂಪಿ, ಬೆಳಗಾವಿ

ರಂಗಭೂಮಿ, ವಚನಸಾಹಿತ್ಯ, ಹಾಗೂ ಜನಪದ ಸಾಹಿತ್ಯ ಈ ಮೂರೂ ಕ್ಷೇತ್ರಗಳ ಸಿಂಹ ಪಾಲಿನ ಸಾಧಕ, ಉತ್ತಮ ವಾಗ್ಮಿ, ಸುಮಧುರ ಶಾರೀರದ ಜನಪದ ಗಾಯಕ ಹಾಗೂ ಆಕರ್ಷಕ ವ್ಯಕ್ತಿತ್ವದ ಬಸವರಾಜ: ಬೆಳಗಾವಿಯಲ್ಲೇ ಕಾಲೇಜು ಶಿಕ್ಷಣ ಪಡೆದು, ಧಾರವಾಡದಲ್ಲಿ ಕನ್ನಡ ಎಂ. ಎ. ಪದವಿ ಗಿಟ್ಟಿಸಿಕೊಂಡರು. ನಂತರ 1990ರಲ್ಲಿ 'ಗರುಡ ಸದಾಶಿವರಾಯರು: ನಾಟಕ ಸಾಹಿತ್ಯ ಹಾಗೂ ವೃತ್ತಿ ರಂಗಭೂಮಿಯ ಅಧ್ಯಯನ' ಎಂಬ ವಿಷಯ ಕುರಿತಾದ ಮಹಾ ಪ್ರಬಂಧವನ್ನು ಮಂಡಿಸಿ, ಕರ್ನಾಟಕ ವಿಶ್ವವಿದ್ಯಾಲಯದಿಂದ ಪಿ. ಎಚ್‌ಡಿ ಪದವಿ ಪಡೆದರು. ಹಾಗೂ ಕೆ.ಎಲ್.ಇ ಸೊಸೈಟಿಯ ವಿದ್ಯಾ ಸಂಸ್ಥೆಗಳಲ್ಲಿ ಮೂವತ್ತಾರು ವರ್ಷಗಳ ಅಖಂಡ ಸೇವೆ ಪೂರೈಸಿದರು. ಕೊನೆಯ ನಾಲ್ಕು ವರ್ಷ ಬೆಳಗಾವಿಯ ಲಿಂಗರಾಜ ಕಾಲೇಜಿನ ಪ್ರಾಚಾರ್ಯರಾಗಿ ಸಧ್ಯ ಕೆ.ಎಲ್.ಇ ವಿಶ್ವವಿದ್ಯಾಲಯದಲ್ಲಿ ಗ್ರಂಥಾಲಯದ ಆಡಳಿತಾಧಿಕಾರಿಯಾಗಿ ಸೇವೆಯಲ್ಲಿದ್ದಾರೆ. ಹೀಗೆ, ಅನನ್ಯ ರೀತಿಯ ಶಿಕ್ಷಣ ಸೇವೆ, ಸಮಾಜ ಸೇವೆ, ಸಾಹಿತ್ಯ ಸೇವೆಯನ್ನು ಗೈದ ಡಾ, ಬಸವರಾಜ ಜಗಜಂಪಿಯವರದು ರಂಗಭೂಮಿಯ ಕೈಂಕರ್ಯದಲ್ಲೂ ಕೈ ಮೇಲಿಲ್ಲದಿಲ್ಲ.

ಗದುಗಿನ ಶ್ರೀ ಜಗದ್ಗುರು ತೋಂಟದಾರ್ಯ ಮಠದಿಂದ ಪ್ರಕಾಶಿತಗೊಂಡ 'ಗರುಡ ಸದಾಶಿವರಾಯರು' ಸಂಶೋಧನ ಗ್ರಂಥದ ಲೋಕಾರ್ಪಣೆ, ಐದನೇ ಶರಣ ಸಾಹಿತ್ಯದ ಸಮ್ಮೇಳನದ ಸಂದರ್ಭದ 2001ರಲ್ಲಿ ಕೊಣ್ಣೂರು ನಾಟಕ ಕಂಪನಿಯ ಶತಮಾನೋತ್ಸವ ಆಯೋಜನೆಯಲ್ಲಿ ಪ್ರಮುಖ ಪಾತ್ರ, ಕರ್ನಾಟಕ ರಾಜ್ಯಮಟ್ಟದ ಯುವಜನೋತ್ಸವ ಸಂದರ್ಭದಲ್ಲಿ ನಾಟಕೋತ್ಸವಕ್ಕೆ ಸಹಾಯ ಸಹಕಾರ, ಡಾ. ಚಂದ್ರಶೇಖರ ಕಂಬಾರರ ನಾಟಕಗಳು ಎಂಬ ವಿಷಯವಾಗಿ ಪ್ರಬಂಧ ಮಂಡನೆ, 'ವೃತ್ತರಂಗದ ನಡೆ– ಸಮತೆಂತೋ' ಬೆಳ್ಳಿ ಸಂಚಿಕೆ ಸಂಪಾದನೆ, ಗಿರೀಶ ಕಾರ್ನಾಡರ ನಾಟಕಗಳ ವಸ್ತು ಕುರಿತು ಆಕಾಶವಾಣಿಯಲ್ಲಿ ವಿಶೇಷ ಉಪನ್ಯಾಸ, ಉತ್ತರ ಕರ್ನಾಟಕದ ರಂಗ ಕಲಾವಿದರನ್ನು ಕುರಿತು ಕರ್ಮವೀರದಲ್ಲಿ ಹತ್ತು ಲೇಖನಗಳ ಮಾಲೆ ಪ್ರಕಟ, ಪ್ರತಿ ವರ್ಷ ವಿಶ್ವರಂಗ ದನಾಚರಣೆಯಲ್ಲಿ ನೀಡಿದ ಹಲವಾರು ಉಪನ್ಯಾಸಗಳು, ರಂಗಕಲಾವಿದೆ ಸೋನುಬಾಯಿ ದೊಡಮನಿಯವರನ್ನು ಕುರಿತು ಲೇಖನಗಳು, ಹೀಗೆ ಹಲವಾರು ರೀತಿಯ ರಂಗ ಸೇವೆಯನ್ನು ಸಲ್ಲಿಸಿದ ಡಾ. ಬಸವರಾಜ ಜಗಜಂಪಿಯವರಿಂದ ಶರಣ ಸಾಹಿತ್ಯದ ಬಗ್ಗೆಯೂ ಹಲವಾರು ಕೃತಿಗಳು ಕನ್ನಡ ಸಾರಸ್ವತ ಲೋಕಕ್ಕೆ ಸೇರಿವೆ. ಬೆಳಗಾವಿಯ ಹಲವಾರು ಕನ್ನಡ ಸಂಬಂಧೀ ಸಂಘ ಸಂಸ್ಥೆಗಳ ಪದಾಧಿಕಾರಿಗಳಾಗಿ, ಕರ್ನಾಟಕ ರಂಗಭೂಮಿ ಅಭಿವೃದ್ಧಿ ಸಂಘದ ನಿರ್ದೇಶಕರಾಗಿ ಇಂದಿಗೂ ನಿಸ್ಪೃಹ ಸೇವೆ ಸಲ್ಲಿಸುತ್ತಿದ್ದಾರೆ.

ವಿಳಾಸ: ಡಾ. ಬಸವರಾಜ ಜಗಜಂಪಿ, 'ವಾತ್ಸಲ್ಯ' ವಿನಾಯಕ ಕಾಲೋನಿ, ಶಾಹು ನಗರ, ಬೆಳಗಾವಿ– 590010 ದೂ: 0831 2477026 ಮೊ: 9480398426

## ರವಿ ಕೊಟಾರಗಸ್ತಿ, ಬೆಳಗಾವಿ




ಸಧ್ಯ ಬೆಳಗಾವಿಯ ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ ಮುಜರಾಯಿ ತಹಶೀಲದಾರ ಆಗಿ ಸೇವೆ ಸಲ್ಲಿಸುತ್ತಿದ್ದ ರವಿ ಕೊಟಾರಗಸ್ತಿಯವರು ಜೊತೆಜೊತೆಗೆ ಸಾಹಿತ್ಯ, ಸಂಸ್ಕೃತಿ ಹಾಗೂ ರಂಗಭೂಮಿಯ ಸೇವೆಯನ್ನೂ ನಿರಂತರವಾಗಿ ಗೈಯುತ್ತ ಬಂದಿದ್ದಾರೆ. 1988ರಲ್ಲಿ ಬೆಳಗಾವಿಯ 'ಕಲಾರಂಗ' ಹವ್ಯಾಸಿ ಕಲಾರಂಗ ಸಂಸ್ಥೆಯ ಸ್ಥಾಪಕ ಸಂಚಾಲಕರಾಗಿ ನಾಟಕೋತ್ಸವ, ವಿಚಾರ ಸಂಕಿರಣ ಮುಂತಾದವುಗಳಲ್ಲಿ ಸಕ್ರೀಯ ಪಾತ್ರವಹಿಸಿದ್ದಾರೆ. 2002-2003ರಲ್ಲಿ ಸ್ಥಾಪಿಸಲ್ಪಟ್ಟ 'ಯುವ ರಂಗಭೂಮಿ' ನಿರ್ದೇಶಕರಾಗಿಯೂ ಕಾರ್ಯ ನಿರ್ವಹಿಸಿದ್ದಾರೆ. ಇದೇ ತಂಡದಿಂದ 5 ದಿನಗಳ ರಾಜ್ಯ ಮಟ್ಟದ ನಾಟಕೋತ್ಸವವನ್ನೂ ಯಶಸ್ವಿಯಾಗಿ ನಡೆಸಿಕೊಟ್ಟಿದ್ದಾರೆ. ಇದೇ ಸಂದರ್ಭದಲ್ಲಿ ರಂಗ ಚಿಂತಕರ ಲೇಖನಗಳಿಂದ ಕೂಡಿದ 'ಯುವರಂಗಭೂಮಿ' ಎಂಬ ಗ್ರಂಥ ಸಂಪಾದನೆಯನ್ನೂ ಮಾಡಿದ್ದಾರೆ. ಹಲಾವಾರು ನಾಟಕ ರಚನೆ ಹಾಗೂ ನಿರ್ದೇಶನಗಳನ್ನೂ ಮಾಡಿದ್ದಾರೆ. 2003ರಲ್ಲಿ ಕರ್ನಾಟಕ ನಾಟಕ ಅಕಾಡೆಮಿ ಬೆಳ್ಳಿ ಹಬ್ಬದ ಅಂಗವಾಗಿ 3 ದಿನಗಳ ರಂಗೋತ್ಸವವನ್ನೂ ಕೈಕೊಂಡಿದ್ದಾರೆ. 'ಪಕ್ಕ ಬಲಿತರೂ ಹಾರದ ಗಿಳಿ' 'ಹಸರೆಲೆ ಹಣ್ಣೆಲೆ' 'ಕೇಳು ಜನಮೇಜಯ' 'ಆಯ' 'ಕಪ್ಪು ಹಲಗೆ' 'ಬದಾಮರಾಣಿ ಚೌಪಟ್ ಗುಲಾಮ್' ಮುಂತಾದ ನಾಟಕಗಳನ್ನು ನಿರ್ದೇಶಿಸಿ ಅಭಿನಯವನ್ನೂ ಮಾಡಿದ್ದಾರೆ. 'ಕರಡಿಮೂರ' ಚಲನ ಚಿತ್ರದಲ್ಲಿ ಅಭಿನಯ, 'ಶಕ್ತಿ' ಹಿಂದಿ ಕಿರುತೆರೆ ಧಾರಾವಾಹಿಯಲ್ಲಿಯೂ ಕಾಣಿಸಿಕೊಂಡಿದ್ದಾರೆ. ರಂಗಭೂಮಿಯ ಚಟುವಟಿಕೆಗಳನ್ನು ಹೊರತು ಪಡಿಸಿ ಸಾಹಿತ್ಯಕ ಚಟುವಟಿಕೆಗಳಲ್ಲಿಯೂ ಅವರ ಸಾಧನೆ ಅದ್ವಿತೀಯವೆಂದೇ ಹೇಳಬಹುದು. ಹಲವಾರು ಸಾಹಿತ್ಯ ಸಮ್ಮೇಳನಗಳಲ್ಲೂ ಕವನವಾಚನ. ಪ್ರಬಂಧ ಮಂಡನೆ, ವಿಚಾರ ಸಂಕಿರಣದಲ್ಲಿ ಪಾಲುಗಾರಿಕೆ ಮುಂತಾದವುಗಳಲ್ಲಿ ಭಾಗವಹಿಸಿದ್ದೂ ಅಲ್ಲದೆ, ಕವನ ಸಂಕಲನ, ಲೇಖನ ಸಂಕಲನ, ಸಂಪಾದನಾ ಗ್ರಂಥ ಮುಂತಾದವುಗಳನ್ನು ಹೊರತಂದಿದ್ದಾರೆ.

1901 ರಿಂದ 1904ರ ಅವಧಿಯವರೆಗೆ ಕರ್ನಾಟಕ ನಾಟಕ ಅಕಾಡೆಮಿಯ ಸದ್ಯರಾಗಿಯೂ ಕಾರ್ಯ ನಿರ್ವಹಿಸಿದ ಇವರಿಗೆ ಬಿಜಾಪೂರಿನ 'ಉತ್ತರ ಕನಾಟಕ ಶ್ರೇಷ್ಠ ಯುವ ಸಾಹಿತಿ ಪ್ರಶಸ್ತಿ' (2003) ಕಾಸರಗೋಡಿನ ಸುವರ್ಣ ಕನ್ನಡಿಗ ಪ್ರಶಸ್ತಿ (2006) ಇಂಡಾಲ್ ಪ್ರಶಸ್ತಿ (1989) ರಂಗ ಸ್ನೇಹ ಪ್ರಶಸ್ತಿ(1999) ಮುಂಬೈ ಪರ್ಫೆಕ್ಟ್ ಮಿಡಿಯಾ ಸಂಸ್ಥೆಯಿಂದ 'ಯುವ ಸಾಹಿತಿ' ಪ್ರಶಸ್ತಿ ಮುಂತಾದವು ಸಂದಿರುವುದು ಅಭಿಮಾನದ ಸಂಗತಿ.

ವಿಳಾಸ: ರವಿ ಕೊಟಾರಗಸ್ತಿ 'ಚಂದ್ರಬಿಂಬ' ಸಿಟಿಎಸ್, 5057/ 12
ಎರಡನೇ ಹಂತ ಹನುಮಾನ್ ನಗರ, ಬೆಳಗಾವಿ-01
ದೂರವಾಣಿ : 0831 2448050 ಮೊ : 9448158115

## ಡಿ. ಎಸ್. ಚೌಗುಲೆ, ಬೆಳಗಾವಿ



ಇವರು ಬೆಳಗಾವಿ ಜಿಲ್ಲೆ ಬೇಡ್ಕಿಹಾಳದಲ್ಲಿ ಇಸ್ವಿಸನ್ 1961 ರಲ್ಲಿ ಜನಿಸಿ ಎಳೆತನದಿಂದಲೇ ನಾಟಕ, ಸಾಹಿತ್ಯ, ಚಿತ್ರಕಲೆಯಲ್ಲಿ ವಿಶೇಷ ಆಸಕ್ತಿ ಮೂಡಿಸಿಕೊಂಡವರಾಗಿದ್ದಾರೆ. ಕನ್ನಡ ಭಾಷೆಯಲ್ಲಿ ಎಂ.ಎ. ಪದವೀಧರರಾದ ಚೌಗುಲೆಯವರು ಸಧ್ಯ ಬೆಳಗಾವಿಯ ಭಾಹುರಾವ್ ಕಾಕತ್ಕರ್ ಕಾಲೇಜಿನಲ್ಲಿ ಉಪನ್ಯಾಸಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಬಹುಮುಖ ಪ್ರತಿಭೆಯನ್ನು ಹೊಂದಿದ ಇವರು ನಾಟಕ ರಚನೆ ಹಾಗೂ ಚಿತ್ರಕಲೆಯಲ್ಲಿ ವಿಶೇಷ ಪರಿಣಿತಿಯನ್ನು ಪಡೆದವರಾಗಿದ್ದಾರೆ. ಅದರಲ್ಲೂ ಮರಾಠಿ ಕನ್ನಡ ಭಾಷಾಂತರಕೆಲಸವನ್ನೂ ಬಹುವಿಧವಾಗಿ ಮಾಡಿದ್ದಾರೆ. ರಂಗಚಟುವಟಿಕೆಗಳಿಗೆ ಸಂಬಂಧಿಸಿ ಇವರು 'ಗಾಂಧಿ ವಿರುದ್ಧ ಗಾಂಧಿ' ಮೂಲ ಮರಾಠಿ ನಾಟಕವನ್ನು ಕನ್ನಡಕ್ಕೆ ಅನುವಾದಿಸಿದ್ದು ಈ ನಾಟಕವನ್ನು 1998ರಲ್ಲಿ ರಂಗಾಯಣದವರು ಯಶಸ್ವಿಯಾಗಿ ಪ್ರದರ್ಶಿಸಿದ್ದಾರೆ. ಇವರ ಇನ್ನೊಂದು ಅನುವಾದಿತ ನಾಟಕ 'ಪೇಯಿಂಗ್ ಗೆಸ್ಟ್' ರಂಗಲೋಕದಲ್ಲಿ ಹೊಸ ಕ್ರಾಂತಿಯನ್ನೇ ಮಾಡಿದೆ. ಇವರ 'ದಿಶಾಂತರ' ಎಂಬ ನಾಟಕವನ್ನು ಧಾರವಾಡ ಸಮುದಾಯ ತಂಡದವರು ಪ್ರಯೋಗಿಸಿದ್ದರಿಂದ, ಇವರಿಗೆ ಚೌಗುಲೆಯವರಿಗೆ ಹೆಸರು ಬಂದಿತು. 'ತೆರೆ ಸರಿದಮೇಲೆ' ಗ್ರಂಥವು ರಂಗಭೂಮಿಗೆ ಸಂಬಂಧಿಸಿದ ಹಲವಾರು ಲೇಖನಗಳನ್ನೊಳಗೊಂಡಿದೆ. 'ಗಾಂಧೀ ಅಂಬೇಡ್ಕರ್' ಹಾಗೂ 'ಕಿರವಂತ' ಈ ಎರಡೂ ಅನುವಾದಿತ ನಾಟಕಗಳನ್ನು ಮೈಸೂರಿನ ನಟನ ತಂಡದವರು ಬಹಳ ಸಮರ್ಥವಾಗಿ ರಂಗಕ್ಕೆ ತಂದಿದ್ದಾರೆ.


ಶ್ರೀ ಡಿ.ಎಸ್. ಚೌಗುಲೆಯವರ ರಂಗೇತರ ಸಾಹಿತ್ಯವೂ ಗಮನಾರ್ಹವಾದುದು. ಬಿ.ಕೆ. ಹುಬ್ಬಳ್ಳಿಯವರ ಜೀವನ ಚರಿತ್ರೆ, 'ವಾರಸಾ' ಕಥಾ ಸಂಪಾದನೆ. 'ನಿನ್ನ ಮೇಲೆ ಸಿಟ್ಟಿಲ್ಲ ಮಾಯಿ' ಮೂಲ ಮರಾಠಿ ಸಂಪಾದನಾ ಗ್ರಂಥದ ಕನ್ನಡಾನುವಾದ, 'ಬಣ್ಣ ಬಯಲು' ಚಿತ್ರಕಲೆಯ ವಿಮರ್ಶಾ ಗ್ರಂಥ, ಮರಾಠಿಯಿಂದ ಕನ್ನಡಿಸಿದ 'ನೆರಳುಗಳು' ಕಾದಂಬರಿ, 'ಒಡಲ ಉರಿಯ ಹೊಟ್ಟು' ಕಥಾ ಸಂಕಲನ, 'ಚೌಗುಲೆ ಕಥೆಗಳು' ಕಥಾ ಸಂಕಲ, 'ಚೌರಂಗ' ವಿಚಾರಸಂಕಿರಣ ಲೇಖನಗಳ ಸಂಕಲನ ಮುಂತಾದವುಗಳು ಚೌಗುಲೆಯವರ ಸಾಹಿತ್ಯಕ್ಕೆ ಸಾಕ್ಷಿಯಾಗಿವೆ. ಚೌಗುಲೆಯವರ ಸಾಧನೆ ಚಿತ್ರಕಲೆಯಲ್ಲೂ ಗರಿ ಏರಿಸಿಕೊಂಡಿದೆ. ಇವರ ಏಕ ವ್ಯಕ್ತಿ ಚಿತ್ರಕಲಾ ಪ್ರದರ್ಶನಗಳೂ ಅನೇಕಕಡೆ ನೆರವೇರಿದ್ದು ಅವುಗಳಲ್ಲಿ– 1993ರಲ್ಲಿ ಬೆಳಗಾವಿಯಲ್ಲಿ, 1994ರಲ್ಲಿ ಬೆಂಗಳೂರಿನಲ್ಲಿ, 1999 ಹಾಗೂ 2000ದ ಸುಮಾರಿಗೆ ಮತ್ತೆ ಬೆಳಗಾವಿಯಲ್ಲಿ, 2002ರಲ್ಲಿ ಮುಂಬೈ, 2008ರಲ್ಲಿ ಪುಣೆ, ಮತ್ತು 1995–96ರಲ್ಲಿ ಸಮೂಹ ಪ್ರದರ್ಶನ(ಸಪ್ತರಂಗ) ಏರ್ಪಟ್ಟಿದ್ದಕ್ಕೆ ನಿದರ್ಶನಗಳುಂಟು. ಆನಂದಕಂದ, ವರದರಾಜ ಆದ್ಯ ಪ್ರಶಸ್ತಿಗಳು, ಗೊರೂರು ಸಾಹಿತ್ಯ ಪುರಸ್ಕಾರ, ಬೆಳಗಾವಿ ಜಿಲ್ಲಾ ಸಾಹಿತ್ಯ ಪ್ರತಿಷ್ಠಾನ ಪುರಸ್ಕಾರ, ರನ್ನ ಸಾಹಿತ್ಯ ಪ್ರಶಸ್ತಿ, ಆಜೂರ ಸಾಹಿತ್ಯ ಪುರಸ್ಕಾರ, ತುಷಾರ ಎಚ್.ಎಂ.ಟಿ. ಪ್ರಶಸ್ತಿ,

ಚದುರಂಗ ಅವಾರ್ಡ, ಕರ್ನಾಟಕ ಅನುವಾದ ಅಕಾಡೆಮಿಯಿಂದ ಪುರಸ್ಕಾರ ಮುಂತಾದವುಗಳನ್ನು ತಮ್ಮದಾಗಿಸಿಕೊಂಡ ಚೌಗುಲೆಯವರು ಕರ್ನಾಟಕ ನಾಟಕ ಅಕಾಡೆಮಿಯ ಮಾಜಿ ಸದಸ್ಯರೂ ಹೌದು.

ವಿಳಾಸ: ಶ್ರೀ ಡಿ. ಎಸ್. ಚೌಗುಲೆ. 716, 'ಚೌರಂಗ' ರಾಮತೀರ್ಥ ನಗರ. ಬೆಳಗಾವಿ: 590016 E-mail : chouranga@gmail.com ಮೊ : 9448231748 ದೂ : 0831 2459997

## ಕೆ. ಜಿ. ಉಪಾಧ್ಯೆ ಹಾಗೂ ಶ್ರೀಮತಿ ಪಿ. ಕೆ. ಉಪಾಧ್ಯೆ

ಬೆಳಗಾವಿ



ಪಿ.ಡಬ್ಲ್ಯೂ.ಡಿ ಇಲಾಖಾ ನೌಕರರಾಗಿ ಕೃಷ್ಣ ಉಪಾಧ್ಯೆ ಇವರು ಧಾರವಾಡದಲ್ಲಿ ಸೇವಾ ನಿರತರಾಗಿದ್ದಾಗ ಧಾರವಾಡದ 'ಕರ್ನಾಟಕ ಕಲೋದ್ಧಾರಕ ಸಂಘ' ದ ಪ್ರತಿಭಾವಂತ ಕಲಾವಿದರೂ ಆಗಿದ್ದರು. ಅಲ್ಲಿಂದ 1960ರಲ್ಲಿ ಅಧೀಕ್ಷಕ ಅಭಿಯಂತರ ಆಪ್ತ ಸಹಾಯಕರಾಗಿ ಬೆಳಗಾವಿಗೆ ಬಡತಿ ಮೇಲೆ ಬಂದಾದ ಮೇಲೆ 1963 ರಲ್ಲಿ ಪಿ.ಡಬ್ಲ್ಯೂ.ಡಿ ಸಹೋದ್ಯೋಗಿಗಳೊಂದಿಗೆ ಪತಿ ಪತ್ನಿಯರು ಕೂಡಿಕೊಂಡು 'ನಾಟ್ಯ ವೃಂದ' ಎಂಬ ರಂಗ ಸಂಸ್ಥೆಯನ್ನು ಹುಟ್ಟುಹಾಕಿ ಅವಿರತವಾಗಿ ರಂಗ ಸೇವೆಯನ್ನು ಕೈಕೊಂಡರು. ತನ್ಮೂಲಕ 'ನಾನೇ ನಾನು' 'ಬಿಡುಗಡೆ' 'ಶಿಡ್ಲುಮರಿ' 'ಪತ್ನಿ ಸೇವಕರು' 'ಡನ್ಲಪ್ ಗರ್ಲ' 'ಅಳಿಯ ದೇವರು' ಮುಂತಾದ ನಾಟಕಗಳನ್ನು ಪ್ರದರ್ಶಿಸಿದರು.


ಇದಕ್ಕಿಂತಲೂ ಪೂರ್ವದಲ್ಲಿ ಶ್ರೀ ಜಿ. ಜಿ. ಪುರಾಣಿಕ ಮತ್ತು ಗುಂಪಿನವರ ಹವ್ಯಾಸಿ ತಂಡ ಮಾತ್ರ ಕಿಯಾಶೀಲವಾಗಿತ್ತು. ಕೃಷ್ಣ ಉಪಾಧ್ಯೆ ಇವರು ಪ್ರತಿಭಾವಂತ ನಟರು ಮಾತ್ರವಾಗಿರದೇ ಸಮರ್ಥ ನಿರ್ದೇಶಕರೂ ಆಗಿದ್ದರು. ಪ್ರಥಮಬಾರಿಗೆ 'ಹೆಣ್ಣಿಗೊಂದು ಗಂಡು' ನಾಟಕ ನಿರ್ದೇಶಿಸಿ ಬೆಳಗಾವಿಯ ಇಂಡಾಲ್ ಕ್ಲಬ್‌ದವರಿಂದ ಬಹುಮಾನ ಪಡೆದರು. ಎರಡನೆಯ ವರ್ಷವೂ ಇವರ ನಿರ್ದೇಶಿತ ನಾಟಕ 'ದೇವರ ಗೊಂಬೆ' ಯೂ ಪ್ರಥಮ ಬಹುಮಾನಕ್ಕೆ ಪಾತ್ರವಾಯಿತು. ಮುಂದೆ 'ಜಯಿಸಿದ ನಾಯಕ' 'ಪ್ರಪಂಚ ಪಾನೀಪತ್ತು' ಇವರ 'ಹಕ್ಕಿ ಹಾರುತಿದೆ ನೋಡಾ' ನಾಟಕ ರಾಜ್ಯ ಮಟ್ಟದಲ್ಲಿ ಪ್ರಥಮ ಬಹುಮಾನ ದಕ್ಕಿದ್ದಲ್ಲದೆ 1982 ರಲ್ಲಿ ಉಪಾಧ್ಯೆ ದಂಪತಿಗಳಿಗೆ ಹಾಗೂ ಮಕ್ಕಳಿಗೆ ವೈಯಕ್ತಿಕ ಬಹುಮಾನಗಳೂ ಸಂದಿವೆ.

ಬೆಳಗಾವಿಯಲ್ಲಿ ಉಪಾಧ್ಯೆ ದಂಪತಿಗಳು ಸುಮಾರು 24-25 ವರ್ಷ ಅವಿರತವಾಗಿ ರಂಗ ಸೇವೆಯನ್ನು ಕೈಕೊಂಡು ಅನೇಕ ಹೊಸ ಕಲಾವಿದ ಕಲಾವಿದೆಯರನ್ನು ತಯಾರಿಸಿ ಹವ್ಯಾಸಿ ರಂಗಭೂಮಿಯನ್ನು ಜೀವಂತವಾಗಿ ಇಡುವಲ್ಲಿ ಪ್ರಾಮಾಣಿಕ ಪ್ರಯತ್ನ ಮಾಡಿದ್ದಾರೆಂದು ನಿಸ್ಸಂದೇಹವಾಗಿ ಹೇಳಬಹುದು. ಕೃಷ್ಣ ಉಪಾಧ್ಯೆ ಇವರ ಪ್ರಯತ್ನದಿಂದ ಅದುವರೆಗೆ 88 ಜನ ಕಲಾವಿದರನ್ನು 23 ಜನ ಕಲಾವಿದೆಯರನ್ನು

ರಂಗಭೂಮಿಗೆ ತೊಡಗಿಸಿದ್ದು ನಿಜಕ್ಕೂ ಶ್ಲಾಘನೀಯ. 'ನಾಟ್ಯ ವೃಂದ' ದ ಮುಖೇನ ಉಪಾಧ್ಯೆ ದಂಪತಿಗಳು ಕನ್ನಡ ಮಾತ್ರವಲ್ಲದೆ ಹಿಂದಿ ಮರಾಠಿಯಲ್ಲೂ ಕೂಡ ನಾಟಕಗಳನ್ನು ನಿರ್ದೇಶಿಸಿ, ಅಭಿನಯಿಸಿ ಒಟ್ಟು 118 ಪ್ರಯೋಗಕ್ರಮದಲ್ಲಿ ವಿವಿಧ ನಾಟಕಗಳನ್ನು ಪ್ರದರ್ಶಿಸಿದ್ದಾರೆ. ಹಲವಾರು ಚಲನ ಚಿತ್ರಗಳಲ್ಲೂ ಪಾತ್ರ ಮಾಡಿದ್ದಾರೆ. ಕೃಷ್ಣ ಉಪಾಧ್ಯೆ ಇವರು ಅಪ್ರಕಟಿತ ಹಲವಾರು ನಾಟಕಗಳ ರಚೇತರೂ ಹೌದು. ಅಭಿಯ ಭಾರತಿ ರಂಗ ಪ್ರಶಸ್ತಿಯೂ ಸೇರಿದಂತೆ ಹಲವಾರು ಪುರಸ್ಕಾರಗಳಿಗೂ ಭಾಜನರಾಗಿದ್ದಾರೆ. ಸಧ್ಯ 81 ವಯಸ್ಸಿನವರಾದ ಇವರು ಧಾರವಾಡ ವಾಸಿಯಾಗಿದ್ದಾರೆ. ಇಂದಿಗೂ ಈ ದಂಪತಿಗಳಲ್ಲಿ ಅಭಿನಯಿಸುವ ಗೀಳು ಹಸಿರಾಗಿಯೇ ಇದೆ.


ವಿಳಾಸ: ಕೆ. ಜಿ. ಉಪಾಧ್ಯೆ. ಮನೆ ನಂ. 2, ಕೆ. ಎಚ್. ಬಿ ಕಾಲೋನಿ ಎಂ.ಬಿ. ನಗರ ಕೊಪ್ಪದ ಕೆರೆ. ಧಾರವಾಡ ದೂರವಾಣಿ: 0836 2743407

## **ಜಿ. ಕೇಶವ,** ಬೆಳಗಾವಿ



ಇವರು 1977 – 1996 ರವರೆಗೆ ಲೋಕೋಪಯೋಗಿ ಹಾಗೂ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿದ್ದಾಗ ಶ್ರೀಕೃಷ್ಣ ಉಪಾಧ್ಯೆ ಇವರ ಮಾರ್ಗದರ್ಶನದಲ್ಲಿ ವಿವಿಧ ನಾಟಕಗಳನ್ನು ಅಭಿನಯಿಸಿದ್ದು ಬೆಳಗಾವಿ ಜಿಲ್ಲೆಯ ವಿವಿಧೆಡೆ ಬೆಂಗಳೂರು ಮತ್ತು ಧಾರವಾಡದಲ್ಲಿಯೂ ಹಲವಾರು ನಾಟಕಗಳನ್ನು ಪ್ರದರ್ಶಿಸಿ ಹಲವಾರು ಪ್ರಶಸ್ತಿಗಳನ್ನು ಪಡೆದಿದ್ದಾರೆ. ಇವರ ಅತ್ಯಂತ ಜನಪ್ರಿಯ ನಾಟಕವೆಂದರೆ 'ಮೃತ್ಯುಚಕ್ರ' 'ನಾನೆ ನಾನು' ಎನ್ನಲಾಗಿದೆ.

ವಿಳಾಸ: ಜಿ. ಕೇಶವ. c/o ಎಮ್. ಜಿ. ಕಲಬುರ್ಗಿ ಮ.ನಂ: 32, ಟ್ರಿನಿಟಿ ಲೇಔಟ್, ಅರುಣ ಕಾಲೊನಿ, ಗೋಕುಲ ರೋಡ್. ಹುಬ್ಬಳ್ಳಿ. ಮೊ : 7760991953




## **ಸಂತೋಷಕುಮಾರ ಕುಸನೂರ,** ಬೆಳಗಾವಿ

ಬೆಳಗಾವಿಯ ಖ್ಯಾತ ನಾಟಕಕಾರ ಚಂದ್ರಕಾಂತ ಕುಸನೂರವರ ಮಗನಾದ ಇವರು ಎಳೆತನದಿಂದಲೇ ರಂಗಾಸಕ್ತರಾಗಿದ್ದು ಮೈಸೂರು ರಂಗಾಯಣದದಿಂದ ಅಧಿಕೃತವಾಗಿ ರಂಗ ನಿರ್ದೇಶನದ ತರಬೇತು ಪಡೆದವರಾಗಿದ್ದಾರೆ. ಅಲ್ಲದೆ, ಕಳೆದ ಇಪ್ಪತ್ತೂರು ವರ್ಷಗಳಿಂದ ರಂಗಾಯಣದಲ್ಲಿ ಕಲಾವಿದರಾಗಿ ಕಾರ್ಯ ನಿರ್ವಹಿಸಿದ್ದಾರೆ. ದೇಶ ವಿದೇಶದ ಅನೇಕ ರಂಗ ನಿರ್ದೇಶಕರ ಜೊತೆ ಕೆಲಸ ಮಾಡಿದ್ದಾರೆ. ರಂಗಾಯಣ ನಾಟಕ ಪ್ರದರ್ಶನಕ್ಕೆ ಅಮೇರಿಕಾ, ಜರ್ಮನಿ, ಆಸ್ಟ್ರಿಯಾ

ದೇಶಗಳಿಗೆ ಪ್ರವಾಸ ಮಾಡಿದ್ದಾರೆ. ಭಾರತದ ಎಲ್ಲ ರಾಜ್ಯಗಳಲ್ಲೂ ನಾಟಕ ಪ್ರದರ್ಶನ ನೀಡಿದ್ದಾರೆ. ಇವರು ಆನಿಬಂತಾನಿ, ಹೀಗೊಂದೂರಾಗ, ಕದಡಿದ ನೀರು, ದಿಂಡಿ ಮುಂತಾದ ನಾಟಕಗಳ ನಿರ್ದೇಶನ ಮಾಡಿದ್ದಾರೆ. ಮುಖವಾಡ ತಯಾರಿಕೆ, ಪ್ರಸಾಧನ, ರಂಗ ಪರಿಕರಗಳಲ್ಲಿ ವಿಶೇಷ ಪರಿಣಿತಿ ಪಡೆದಿದ್ದಾರೆ. ರಾಷ್ಟ್ರೀಯ ಮುಖವಾಡ ತಯಾರಿಕಾ ಕಾರ್ಯಾಗಾರ ಪೂನಾದಲ್ಲಿ ನಡೆದಾಗ ಕರ್ನಾಟಕವನ್ನು ಪ್ರತಿನಿಧಿಸಿದ್ದಾರೆ. ಇದುವರೆಗೂ ಸುಮಾರು ಹತ್ತು ಸಾವಿರ ಮುಖವಾಡ ತಯಾರಿಸಿದ್ದಾರೆ. ಸಾಕ್ಷರತಾ ಅಂದೋಲನಕ್ಕಾಗಿ ಮಂಡ್ಯ, ಗುಲಬರ್ಗಾ, ಚಿತ್ರದುರ್ಗದಲ್ಲಿ ಕೆಲಸ ಮಾಡಿದ್ದಾರೆ. ಅನೇಕ ಬೀದೀ ನಾಟಕಗಳ ರಚನೆ, ನಿರ್ದೇಶನ ಮಾಡಿದ್ದಾರೆ.

ದೂರದರ್ಶನದಲ್ಲಿ ಅನೇಕ ಸಾಕ್ಷ್ಯ ಚಿತ್ರಗಳಲ್ಲಿ ಅಭಿನಯಿಸಿದ್ದಾರೆ. ಗುಲಬರ್ಗಾ ಆಕಾಶವಾಣಿಯ ನಾಟಕ ವಿಭಾಗದಲ್ಲಿ ಕೆಲಸ ಮಾಡಿದ್ದಾರೆ. ಬಿ. ವಿ. ಕಾರಾಂತ, ಸಿ. ಬಸವಲಿಂಗಯ್ಯ, ಜಯತೀರ್ಥ ಜೋಶಿ, ಬೆನ್ವಿಜ್, ವಿಶೀಲಿ, ಸ್ಟೂಕೂಲ್ ಮುಂತಾದ ಖ್ಯಾತ ನಿರ್ದೇಶಕರ ನಾಟಕಗಳಲ್ಲಿ ಅಭಿನಯ ಮಾಡಿದ್ದಾರೆ. ಸಧ್ಯ ಇವರು ಧಾರವಾಡ ರಂಗಾಯಣದಲ್ಲಿ ಮುಖ್ಯಸ್ಥರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ.

ವಿಳಾಸ: ಸಂತೋಷ ಕುಮಾರ ಕುಸನೂರ. ಮುಖ್ಯಸ್ಥರು, ರಂಗಾಯಣ ಘಟಕ, ಧಾರವಾಡ. ಮೊ: 9845570659




## ಡಾ. ಎಚ್. ಆಯ್. ತಿಮ್ಮಾಪೂರ, ಬೆಳಗಾವಿ

ಬೆಳಗಾವಿಯ ಅಂಜುಮನ್ ಕಲಾ ಹಾಗೂ ವಾಣಿಜ್ಯ ಮಹಾ ವಿದ್ಯಾಲಯದ ಪ್ರಾಚಾರ್ಯರಾಗಿ ಸೇವೆ ಸಲ್ಲಿಸುತ್ತಿದ್ದ ಡಾ. ಎಚ್. ಆಯ್. ತಿಮ್ಮಾಪೂರವರು 1963 ರಲ್ಲಿ ಜನಿಸಿದರು. ಇವರು 1987 ರಲ್ಲಿ 'ಬಯಲಾಟದ ಕಥೆಗಳು: ಒಂದು ಸಾಂಸ್ಕೃತಿಕ ಅಧ್ಯಯನ' ಎಂಬ ವಿಷಯವಾಗಿ ಕರ್ನಾಟಕ ವಿಶ್ವವಿದ್ಯಾಲಯದಿಂದ ಪಿ.ಎಚ್.ಡಿ ಪದವಿಯನ್ನು ಪಡೆದವರಾಗಿದ್ದಾರೆ. ಸಾಹಿತ್ಯಕವಾಗಿ, ಸಾಂಸ್ಕೃತಿಕವಾಗಿ, ಪರಿಸರಕ್ಕೆ ಹಾಗೂ ರಂಗಭೂಮಿಗೆ ಅನನ್ಯ ಸೇವೆ ಸಲ್ಲಿಸಿದ ಇವರು ಹಲವಾರು ಗ್ರಂಥಗಳನ್ನೂ ರಚಿಸಿದ್ದಾರೆ. ಇವುಗಳಲ್ಲಿ ಕೆಲವು ಕೃತಿಗಳು ಪ್ರಶಸ್ತಿ, ಪುರಸ್ಕಾರಗಳನ್ನು ಪಡೆದಿವೆ. ಅನೇಕ ಸಂಘ ಸಂಸ್ಥೆಗಳ ಪದಾಧಿಕಾರಿಗಳ ಪಟ್ಟಿಗಳಲ್ಲಿಯೂ ಇವರ ಹೆಸರು ಮುಂಚೂಣಿಯಲ್ಲಿದೆ, ಜನಪದ ರಂಗಭೂಮಿಗೆ ಸಂಬಂಧಿಸಿ ಇವರು ರಚಿಸಿದ 'ಸಣ್ಣಾಟಗಳು' ಎಂಬ ಸಂಶೋಧನ ಕೃತಿಯನ್ನು ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯವು ಪ್ರಕಾಶಿಸಿದೆ. ಅದರಂತೆ 'ಬಯಲಾಟದ ಕಥೆಗಳು' ಸಂಶೋಧನ ಕೃತಿಯನ್ನು ಮಲ್ಲಾಡಿಹಳ್ಳಿಯ ಸೂರ್ಯ ಪ್ರಕಾಶನದವರು ಹೊರತಂದಿದ್ದಾರೆ.

ಇವರು ಹಲವಾರು ನಾಟಕಗಳಲ್ಲೂ ಅಭಿನಯಿಸಿ ಉತ್ತಮ ನಟರೆಂದೂ

ನಿರ್ದೇಶಿಸಿದ 'ಸನಾದಿ ಸಪ್ಪಣ್ಣ' ನಾಟಕದಲ್ಲಿ ಸನಾದಿ ಅಪ್ಪಣ್ಣನ ಮಗನ ಪಾತ್ರವಹಿಸಿ ಪ್ರೇಕ್ಷಕರ ಮೆಚ್ಚುಗೆ ಪಡೆದಿದ್ದಾರೆ. ಹೀಗೆ ಬಾಲ್ಯದಿಂದಲೂ ರಂಗಭೂಮಿಯ ಗೀಳನ್ನು ಹಚ್ಚಿಕೊಂಡು ಬಂದವರು ಡಾ. ಎಚ್. ಐ. ತಿಮ್ಮಾಪೂರ.

ವಿಳಾಸ: ಡಾ.ಎಚ್.ಐ. ತಿಮ್ಮಾಪೂರ. ಸೌದಾಗರ ಬಿಲ್ಡಿಂಗ್, 4ನೇ ಅಡ್ಡ ರಸ್ತೆ. ಅಜಮ್ ನಗರ್, ಬೆಳಗಾವಿ–590010 ದೂ: 0831 478661 ಮೊ: 9844136708



## ಶಿರೀಷ ಜೋಶಿ, ಬೆಳಗಾವಿ


ಶಿರೀಷ ಜೋಶಿ ಇವರು ಜಲಸಂಪನ್ಮೂಲ ಇಲಾಖೆಯಲ್ಲಿ 1983 ರಿಂದ ಸೇವೆ ಸಲ್ಲಿಸುತ್ತಿದ್ದಾರೆ. ಇವರು ಪ್ರವೃತ್ತಿಯಿಂದ ಹಲವಾರು ರೀತಿಯ ಸಾಹಿತ್ಯ–ಸಂಗೀತ– ಸಾಂಸ್ಕೃತಿಕ ಚಟುವಟಿಕೆಗಳನ್ನು ಹಾಗೂ ರಂಗ ಸೇವೆಯನ್ನು ಮಾಡುತ್ತ ನಡೆದಿದ್ದಾರೆ. ಹುಡುಕಾಟ, ವೇಷಾಂತರ ಪ್ರಸಂಗ, ಅಜ್ಜಿಕತೆ, ದಾರಿಯಾವುದಯ್ಯ ವೈಕುಂತಕೆ, ಕಪ್ಪು ಬಿಳುಪು, ಪಶ್ಚಾತ್ತಾಪ, ಇಪ್ಪತ್ತೊಂದನೆ ಶತಮಾನ, ಆಧುನಿಕ ಮಹಾಭಾರತ ಮುಂತಾದವು ಇವರು ನಿರ್ದೇಶಿಸಿದ ನಾಟಕಗಳು. ಮೆಟ್ಟಿಲೇರುವ ಗಡಿಬಿಡಿಯಲ್ಲಿ, ಕೊಡೆ ಮರೆತವನು ಪ್ರದರ್ಶನ: ರಂಗಆರಾಧನಾ ಸಂಸ್ಥೆ ಸವದತ್ತಿ, ನಿರ್ದೇಶನ: ಝೂಕೀರ ನದಾಫ ಹಾಗೂ ಜಿ.ಕೆ. ಮಾಸ್ತರರ ಪ್ರಣಯ ಪ್ರಸಂಗ ಪ್ರದರ್ಶನ: ರಂಗಸಂಪದ ಬೆಳಗಾವಿ, ನಿರ್ದೇಶನ: ಜಯತೀರ್ಥ ಜೋಶಿ ಮತ್ತು ಬೆಸುಗೆಗೊಳ್ಳದ ಹಳಿಗಳು. ಮೂಲಕತೆ: ಡಿ.ಎಸ್.ಚೌಗಲೆ. ಪ್ರದರ್ಶನ: ರಂಗಸಂಪದ ಬೆಳಗಾವಿ. ನಿರ್ದೇಶನ: ಶ್ರೀಪತಿ ಮಂಜನಬೈಲು, ನಿಮಿತ್ತ (2007) ಮೂಲಕತೆ: ಜಯಂತ ಕಾಯ್ಕಿಣಿ. ಪ್ರದರ್ಶನ: ಅಭಿನಯಭಾರತಿ ಧಾರವಾಡ, ನಿರ್ದೇಶನ; ಶ್ರೀಪತಿ ಮಂಜನಬೈಲು ನೋ ಪ್ರೆಸೆಂಟ್ಸ್ ಪ್ಲೀಸ್(2008,) ಮೂಲಕತೆ: ಜಯಂತ ಕಾಯ್ಕಿಣಿ; ಪ್ರದರ್ಶನ: ಅಭಿನಯ ಭಾರತಿ ಧಾರವಾಡ, ನಿರ್ದೇಶನ; ಶ್ರೀಪತಿ ಮಂಜನಬೈಲು ಇವೆಲ್ಲ ರಂಗ ಪ್ರಯೋಗದ ಸಂಗತಿಗಳು. ಮಿಂಚು, ಬೆಳ್ಳಕ್ಕಿಗಳ ಲೋಕದಲ್ಲಿ, ಬೆಸುಗೆಗೊಳ್ಳದ ಹಳಿಗಳು, ಓಡಿ ಹೋಗ್ಯಾರ, ನಿಶ್ಶಬ್ದೆಯ ಗರ್ಭದೊಳಗೆ ಮುಂತಾದವು ಇವರ ಪ್ರಕಟಿತ ನಾಟಕಗಳು. ಗರ್ಭಗುಡಿ, ದಿಂಡಿ, ಆಗಮನ, ಎಸ್. ಮಿಸ್ಟರ್ ಪಂಡಿತರಾವ, ಮಿಂಚು, ಕಪ್ಪುಬಿಳುಪು, ನಾಪತ್ತೆ ಕಲೆಯಕೊಲೆ, ಅಧ್ವಾನಪುರ, ರಿಹರ್ಸಲ್, ಬೀಳ್ಕೊಡುಗೆ, ಮೃಗಜಲ, ಗೌರಿ, ನಿಶ್ಶಬ್ದೆಯ ಗರ್ಭದೊಳಗೆ, ಬೆಸುಗೆಗೊಳ್ಳದ ಹಳಿಗಳು ಇತ್ಯಾದಿ ಸುಮಾರು 20ಕ್ಕೂ ಹೆಚ್ಚು ನಾಟಕಗಳು ಹಾಗೂ 100ಕ್ಕೂ ಹೆಚ್ಚು ಪ್ರಯೋಗಗಳಲ್ಲಿ ಇವರು ಅಭಿನಯಿಸಿದ್ದುಂಟು.

ಪ್ರಜಾವಾಣಿ, ಕನ್ನಡಪ್ರಭ, ಸಂಯುಕ್ತ ಕರ್ನಾಟಕ, ವಿಜಯ ಕರ್ನಾಟಕ, ಲಂಕೇಶ ಪತ್ರಿಕೆ, ರಂಗತೋರಣ, ಈ ಮಾಸ ನಾಟಕ, ಲೋಕದರ್ಶನ, ನಾಡೋಜ, ಕನ್ನಡಮ್ಮ ಮೊದಲಾದ ಪತ್ರಿಕೆಗಳಲ್ಲಿ ರಂಗ ವಿಮರ್ಶೆ ಪ್ರಕಟವಾಗಿವೆ. ನಾಟ್ಯಭೂಷಣ ಏಣಗಿ ಬಾಳಪ್ಪನವರೊಡನೆ 'ಉತ್ತರ ಕರ್ನಾಟಕದ ರಂಗಗೀತೆಗಳು' ಕಾರ್ಯಕ್ರಮಕ್ಕೆ ಸಹಕಾರ

ನೀಡಿದ್ದಾರೆ. ರಂಗ ಸಂಪದ ಬೆಳಗಾವಿ ತಂಡದ ಸಕ್ರಿಯ ಸದಸ್ಯನಾಗಿ ಕಳೆದ ಇಪ್ಪತ್ತು ವರ್ಷಗಳಿಂದ ರಂಗಭೂಮಿಯೊಡನೆ ತೊಡಗಿಕೊಂಡಿದ್ದು. ಕರ್ನಾಟಕ ನಾಟಕ ಅಕಾಡೆಮಿಯಿಂದ ಬೆಳಗಾವಿ ಜಿಲ್ಲೆಯ ಸಂಚಾಲಕ ಸಮಿತಿಯ ಸದಸ್ಯ (2003 ರಿಂದ 2008) 1998–ಅಖಿಲ ಭಾರತ ಕನ್ನಡ ನಾಟಕ ರಚನಾ ಸ್ಪರ್ಧೆಯಲ್ಲಿ ಪ್ರಥಮ 2006– ಸಿರಿಗನ್ನಡ ಪುಸ್ತಕ ಪ್ರಶಸ್ತಿ 2007– ಸುವರ್ಣಕರ್ನಾಟಕ ಗೌರವ ಪುರಸ್ಕಾರ (ಕರ್ನಾಟಕ ನಾಟಕ ಅಕಾಡೆಮಿಯಿಂದ) 2008– ಕನ್ನಡಜ್ಯೋತಿ ಸದ್ಭಾವನಾ ಪ್ರಶಸ್ತಿ ಮುಂತಾದ ಪ್ರಶಸ್ತಿ–ಪುರಸ್ಕಾರ ಪಡೆದಿದ್ದಾರೆ. ರಂಗಸಂಪದ ಬೆಳಗಾವಿ ಇದರ ಕಾರ್ಯದರ್ಶಿಯಾಗಿಯೂ ಕೆಲಸ ನಿರ್ವಹಿಸಿದ್ದಾರೆ,

ವಿಳಾಸ: ಶಿರೀಷ ಜೋಶಿ: 4/3 ಬಿ, ಶ್ರೀ ಕೃಪೆ, ನರಗುಂದಕರ ಕಾಲೋನಿ ಹತ್ತಿರ, ಉದ್ಯಮಬಾಗ ಅಂಚೆ, ಬೆಳಗಾವಿ–59008
ದೂರವಾಣಿ : 0831–2443264 / 9448637797


## ಶಂಭುಲಿಂಗಯ್ಯ ಯಲಿವಾಳ, ಬೆಳಗಾವಿ



ಇವರು ದಿವಂಗತ ಖ್ಯಾತ ರಂಗನಟ ಯಲಿವಾಳ ಸಿದ್ಧಯ್ಯನವರ ಪುತ್ರರಾಗಿ ತಂದೆಯಂತೆ ರಂಗ ಕ್ಷೇತ್ರದಲ್ಲಿ ಗಣನೀಯ ಹೆಸರು ಮಾಡುವಲ್ಲಿ ಎಡಬಿಡದೇ ಪರಿಶ್ರಮಿಸುತ್ತಿದ್ದಾರೆ. ಎಮ್.ಎ. ಪದವೀಧರರಾದ ಇವರು ತಂದೆಯವರ ಜೊತೆಯಲ್ಲಿಯೇ ಆರನೇ ವಯಸ್ಸಿಗೇ ಬಣ್ಣ ಹಚ್ಚಿಕೊಂಡು 'ಎಚ್ಚಮ ನಾಯಕ' ನಾಟಕದ ಮುಖೇನ ರಂಗ ಪ್ರವೇಶ ಮಾಡಿದ್ದಾರೆ. ಪ್ರಾಥಮಿಕ, ಪ್ರೌಢ ಹಾಗೂ ಉಚ್ಚ ಶಿಕ್ಷಣ ಸಂದರ್ಭದಲ್ಲೂ ಯುವಜನೋತ್ಸವ ಕಾರ್ಯಕ್ರಮಗಳಲ್ಲಿ ರಂಗ ಕ್ಷೇತ್ರಕ್ಕೆ ಸಂಬಂಧಿಸಿ ಏಳು ಬಾರಿ ಪ್ರಶಸ್ತಿ ಪಡೆದಿದ್ದಾರೆ. ನೀನಾಸಂ ಪದವೀಧರರಿಂದ ತರಬೇತನ್ನೂ ಹೊಂದಿದ್ದಾರೆ. ಹಲವಾರು ನಾಟಕಗಳಲ್ಲಿ ಅಭಿನಯ ಶ್ರೇಷ್ಠರಾಗಿಯೂ ಕಂಡಿದ್ದಾರೆ. ಕಿರು ತೆರೆಯ ಹಲವಾರು ಧಾರಾವಾಹಿಗಳಲ್ಲೂ ಕಾಣಿಸಿಕೊಂಡಿದ್ದಾರೆ. ಸಹ ನಿರ್ದೇಶಕರಾಗಿಯೂ ಕೆಲಸ ಮಾಡಿದ್ದಾರೆ.

ಪ್ರಸ್ತುತ ಟಿ.ವಿ ಕನ್ನಡ ಚಾನೆಲ್ಲಿನ 'ಇನ್ ಹೌಸ್' ಕಾರ್ಯಕ್ರಮಗಳಿಗೆ ಬರಹಗಾರರಾಗಿ, ಸಹನಿರ್ದೇಶಕರಾಗಿ ಕೆಲಸ ಮಾಡುತ್ತಿದ್ದಾರೆ. ಚಲನ ಚಿತ್ರಗಳಲ್ಲೂ ಅಭಿನಯಿಸಿದ್ದಾರೆ. ಸಧ್ಯಕ್ಕೆ ಬೆಳಗಾವಿಯಲ್ಲಿ 'ಸಿದ್ಧರಂಗ' ತಂಡವನ್ನು ಹುಟ್ಟು ಹಾಕಿದ್ದು ತನ್ಮೂಲಕ ಬೆಳಗಾವಿಯಲ್ಲಿ ಜಿಲ್ಲಾ ನಾಟಕೋತ್ಸವ ಆಯೋಜಿಸಿದ ಯಶಸ್ಸು ಇವರದ್ದಾಗಿದೆ.

ವಿಳಾಸ: ಶಂಭುಲಿಂಗಯ್ಯ ಯಲಿವಾಳ. 'ಸಿದ್ಧರಂಗ' c/o ರುದ್ರೇಶ. ಚಿಂದೋಡಿ ಲೀಲಾ ರಂಗಮಂದಿರ, ಸದಾಶಿವ ನಗರ, ಬೆಳಗಾವಿ ಮೊ: 8880693599




## ವಿನೋದ ಅಂಬೇಕರ, ಬೆಳಗಾವಿ

ವಿಠ್ಠಲರಾವ್ ಅಂಬೇಕರವರ ಚಿರಂಜೀವ ವಿನೋದ ಹದಿನೆಂಟನೇ ನವೆಂಬರ 1963ರಲ್ಲಿ ಜನಿಸಿ ಬಾಲ್ಯದಿಂದಲೇ ರಂಗ ಚಟುವಟಿಕೆಗಳಲ್ಲಿ ಆಸಕ್ತಿ ಹೊಂದಿದವರಾಗಿದ್ದರು. ಹೆಗ್ಗೋಡಿನಲ್ಲಿ ಡಿಪ್ಲೋಮಾ ಇನ್ ಥಿಯೇಟರ್ ಆರ್ಟ ವಿದ್ಯಾರ್ಹತೆಯನ್ನು ಪಡೆದ ಇವರು ಮೂರು ವರ್ಷ ನೀನಾಸಂ ತಿರುಗಾಟದಲ್ಲಿ ನಟ ಹಾಗೂ ತಾಂತ್ರಿಕ ಕೆಲಸಗಾರಾಗಿ ಕಾರ್ಯ ನಿರ್ವಹಿಸಿದ್ದಾರೆ. ಟಾಯ್ ಶಾಲಾ ರಂಗ ಮಕ್ಕಳ ಶಿಕ್ಷಣ ನಿರ್ದೇಶಕನಾಗಿ ಒಂದು ವರ್ಷದ ಅನುಭವವನ್ನೂ ಪಡೆದಿದ್ದಾರೆ. ದೃವ ರಂಗ ತಂಡದ ಸಂಸ್ಥಾಪಕರೂ ಹೌದು. ನೀನಾಸಂ ಮುಖಾಂತರ ಫೋರ್ಡ ಫೌಂಡೇಶನ್‌ದವರಿಂದ ನಡೆದ ಕರ್ನಾಟಕ ರಂಗ ಮಂದಿರಗಳ ಸಮೀಕ್ಷೆಯನ್ನೂ ಮಾಡಿದ್ದಾರೆ. ಸೌತ್ ಸೆಂಟ್ರಲ್ ಝೋನ್ ಸಾಂಸ್ಕೃತಿಕ ಸಂಸ್ಥೆಗಾಗಿ ಮಕ್ಕಳ ರಂಗ ಶಿಬಿರದ ನಿರ್ದೇಶನ, ಕರ್ನಾಟಕ ಮಹಾರಾಷ್ಟ್ರ ಮಕ್ಕಳ ನಾಟಕ ಶಿಬಿರದ ಮುಂದಾಳತ್ವ, ಹಂಪಿ ವಿ.ವಿ.ಯಲ್ಲಿ ನಡೆದ ರಂಗ ನಿರ್ದೇಶಕರ ಶಿಬಿರಕ್ಕೆ ಆಯ್ಕೆ, ರಂಗ ನಿರ್ದೇಶಕರಾಗಿ, ನೆಳಲು ಬೆಳಕಿನ ವಿನ್ಯಾಸರಾಗಿ, ಸೇವೆ ಸಲ್ಲಿಸಿದ್ದಾರೆ.

ಅಲ್ಲದೆ, ದೂರದರ್ಶನದ ನಾಟಕಗಳಲ್ಲಿ ಅಭಿನಯ ಮತ್ತು ಮಕ್ಕಳ ನಾಟಕಗಳ ನಿರ್ದೇಶನ ಮಾಡಿದ ಅನುಭವವನ್ನೂ ಪಡೆದಿದ್ದಾರೆ. ಕರ್ನಾಟಕದ ಶೇಕ್ಸ್‌ಪಿಯರ್ ಎಂದೇ ಖ್ಯಾತಿ ಪಡೆದ ಕಂದಗಲ್ ಹನುಮಂತರಾಯರ ಹತ್ತಿರದ ಸಂಬಂಧಿಯಾದ ಇವರು ಸಧ್ಯ ರಂಗಭೂಮಿಯ ತಾಂತ್ರಿಕ ಕೆಲಸಕ್ಕಾಗಿ ಸಂಪೂರ್ಣವಾಗಿ ತೊಡಗಿಸಿಕೊಂಡಿದ್ದು ಬೆಳಗಾವಿ ಹಾಗೂ ಬಿಜಾಪೂರ ಜಿಲ್ಲೆಗಳಲ್ಲಿ ಎಡಬಿಡದೆ ಕಾರ್ಯೋನ್ಮುಖರಾಗಿದ್ದಾರೆ.

ವಿಳಾಸ: ವಿನೋದ ಅಂಬೇಕರ. 'ವಿಜಯ ರಂಗ' ಗಂಗಾ ನಿಲಯ. ನಂ: 2181 ಸೆ: 11 ಮಹಾಂತೇಶ ನಗರ. ಬೆಳಗಾವಿ. ಮೊ: 9844095518




## ಪ್ರಮೋದ ಅಂಬೇಕರ, ಬೆಳಗಾವಿ

ಇವರು ಕೆ.ಎಲ್.ಇ ಸೊಸೈಟಿಯ ಗೋಗಟೆ ತಾಂತ್ರಿಕ ಮಹಾವಿದ್ಯಾಲಯದಲ್ಲಿ ಸಿವಿಲ್ ಎಂಜಿನಿಯರ್ ವಿಭಾಗದಲ್ಲಿ ಸೇವೆ ಸಲ್ಲಿಸುತ್ತಿದ್ದು, ಒಳ್ಳೆ ನಟರಾಗಿದ್ದಾರೆ. ಇವರ ತಾತ ದಿವಂಗತ ಕಂದಗಲ್ ಹನುಮಂತರಾಯರು ಪ್ರಸಿದ್ಧ ನಾಟಕಕಾರರು. ಇವರ ತಂದೆ ವಿಠ್ಠಲರಾವ ಕೂಡ ನಾಟಕ ಕರ್ತೃಗಾಳಗಿದ್ದರು ಇವರ ನಾಟಕಗಳು ಧಾರವಾಡ ಆಕಾಶವಾಣಿಯಿಂದ ಪ್ರಸಾರವಾಗಿವೆ. ಉತ್ತಮ ಸಾಹಿತಿಗಳೂ ಹೌದು. ಇವರು 1977 ರಿಂದ ರಂಗಭೂಮಿ

ಚಟುವಟಿಕೆಗಳಲ್ಲಿ ಭಾಗ ವಹಿಸುತ್ತಿದ್ದು ಖ್ಯಾತ ನಿರ್ದೇಶಕರಾದ ದಿ. ಶ್ರೀನಿವಾಸ ತಾವರಗೆರೆ, ಜಯತೀರ್ಥ ಜೋಶಿ, ಬಿ. ವಿ ಕಾರಾಂತ, ಅಶೋಕ ಬಾದರದಿನ್ನಿ, ಶ್ರೀನಿವಾಸ ಪ್ರಭು, ಶ್ರೀಪತಿ ಮಂಜನಬೈಲು ಮುಂತಾದವರ ಮಾರ್ಗದರ್ಶನದಲ್ಲಿ ಅಭಿನಯಿಸಿದ ಅನುಭವವೂ ಇವರಿಗಿದೆ. ಸತ್ತವರ ನೆರಳು, ಮೃಗಜಲ, ಮ್ಯಾಕ್‌ಬೆತ್, ಸುರಪುರದ ವೆಂಕಟಪ್ಪ ನಾಯಕ, ಸೂರ್ಯಾಸ್ತದಿಂದ ಸೂರ್ಯೋದಯದವರೆಗೆ, ಘಾಸೀರಾಮ ಕೊತ್ವಾಲ್‌ರು, ಸಾಹೇಬರು ಬರುತ್ತಾರೆ, ಜಿ.ಕೆ. ಮಾಸ್ತರ ಪ್ರಣಯ ಪ್ರಸಂಗ, ಮಿಂಚು, ವಾಸಾಂಸಿ ಜೀರ್ಣಾನಿ ಮುಂತಾದ ನಾಟಕಗಳಲ್ಲಿ ಅಭಿನಯಿಸಿದ್ದಾರೆ. ಮಿಂಚು, ವಾಸಾಂಸಿ ಜೀರ್ಣಾನಿ ಇವು ದೂರದರ್ಶನದ ನಾಟಕಗಳಾಗಿವೆ. ಮೂಡಲಮನೆ, ಇದು ಎಂಥ ಲೋಕವಯ್ಯ ಹಾಗೂ ಕಿನ್ನರಿ ಧಾರಾವಾಹಿಗಳಲ್ಲಿಯೂ ಅಭಿನಯಿಸಿದ್ದಾರೆ ಹಾಗೂ ಚಂದ್ರಕಾಂತ ಕುಸನೂರವರ ರಿಹರ್ಸಲ್ ನಾಟಕದ ಇವರ ಬಾಳಾಚಾರಿ ಪಾತ್ರ ಸ್ಮರಣೀಯ.

ವಿಳಾಸ: ಪ್ರಮೋದ ಅಂಬೇಕರ, ಬಿ ಬ್ಲಾಕ್, ಮ.ನಂ. 10, ಭಾಗ್ಯನಗರ, ಬೆಳಗಾವಿ ಮೊ: 9844039532



## ಭೈರೋಬಾ ಶಿವಾಜಿ ಕಾಂಬಳೆ, ಬೆಳಗಾವಿ

ಇವರ ಜನ್ಮದಿನಾಂಕ: 07-09-1986 ಜನ್ಮಸ್ಥಳ: ಸುಳೇಭಾವಿ, ಎಂ.ಎ ಕನ್ನಡ, ಎಂ.ಎ. ಪತ್ರಿಕೋದ್ಯಮದ ವಿದ್ಯಾರ್ಹತೆಯನ್ನು ಹೊಂದಿದ ಇವರು ನಾಟಕದಲ್ಲಿ ಅಭಿನಯ, ವಿಮರ್ಶೆ ಬರವಣಿಗೆ, ಸಾಹಿತ್ಯಿಕ ಲೇಖನಗಳು, ಕತೆ, ಕವನ ಬರವಣಿಗೆ, ನೆರಳು-ಬೆಳಕು ಇತ್ಯಾದಿ ಅನುಭವ ಉಳ್ಳವರು. ಜಾನಪದ, ತತ್ವಪದ ಹಾಗೂ ಭಾವಗೀತೆ ಹಾಡುಗಾರಿಕೆಯ ಕಲೆಯೂ ಇವರದಾಗಿದೆ. ಸಾರ್ವಜನಿಕ ಶಿಕ್ಷಣ ಇಲಾಖೆಯ ಜಿಲ್ಲಾ ಮಟ್ಟದ ನಾಟಕ ಸ್ಪರ್ಧೆಯಲ್ಲಿ ಪ್ರಥಮ ಬಹುಮಾನ ಪಡೆದಿದ್ದಾರೆ. ಬೆಳಗಾವಿಯಲ್ಲಿ ಇವರು ಅಭಿನಯಿಸಿದ ನಾಟಕಗಳು: 'ಬೆಸುಗೆಗೊಳ್ಳದ ಹಳಿಗಳು' 'ನಿಷ್ಠೆಯ ಗರ್ಭದೊಳಗೆ' 'ರಿಹರ್ಸಲ್ ಪ್ರಸಂಗ' 'ಕಪ್ಪು ಬಿಳುಪು ಹಾಗೂ 'ಮಿಂಚು'.

ಇವರು ಬೆಳಗಾವಿಯ ರಂಗಸಂಪದ ತಂಡದ ಸಹ ಕಾರ್ಯದರ್ಶಿಯಾಗಿ ಹಲವು ವರ್ಷ ಕಾರ್ಯ ನಿರ್ವಹಣೆ ಮಾಡಿದ್ದಾರೆ. ನಾಟಕಕಾರ್ತಿ, ನಿರ್ದೇಶಕಿ, ವಿಮರ್ಶಕಿ ಎಸ್.ಮಾಲತಿ ಹಾಗೂ ವಸ್ತ್ರ ವಿನ್ಯಾಸಕ ಪುರಷೋತ್ತಮ ಹಾಗೂ ಗಗ್ಗರ ತುಳು ಸಿನೆಮಾದಲ್ಲಿ ಅತ್ಯುತ್ತಮ ಪೋಷಕ ನಟ ರಾಜ್ಯ ಪ್ರಶಸ್ತಿ ವಿಜೇತ ಎಂ.ಕೆ. ಮಠ ಅವರ ಸಂದರ್ಶನ ದಾಖಲಿಸಿದ್ದಾರೆ. ಆ ಊರು ಈ ಊರು ನಾಟಕ, ಕಮಲಮಣಿ ಕಾಮೆಡಿ ಕಲ್ಯಾಣ ನಾಟಕ ಸೇರಿದಂತೆ ಅನೇಕ ನಾಟಕಗಳ ವಿಮರ್ಶೆ ಮಾಡಿದ್ದಾರೆ. ನಿರ್ದೇಶಕ ನಾಗತಿಹಳ್ಳಿ ಚಂದ್ರಶೇಖರ ಅವರು ಮಹಾರಾಷ್ಟ್ರದಲ್ಲಿ ಕೈಗೊಂಡ ಕೃಷಿ ಅಧ್ಯಯನ ಪ್ರವಾಸದಲ್ಲಿ ಅವರ ಜೊತೆ ಭಾಗವಹಿಸಿದ್ದಾರೆ. ನಿಂಪೂ ಪ್ರತಿಷ್ಠಾನ ಗೋಕಾಕದಲ್ಲಿ

ನಡೆಸಿದ ರಂಗಭೂಮಿ ಕುರಿತ ಗೋಷ್ಠಿಯಲ್ಲೂ ಭಾಗವಹಿಸಿದ್ದಾರೆ. ಪ್ರಸ್ತುತ ಇವರು ಹುಬ್ಬಳ್ಳಿಯಲ್ಲಿ ಸಂಜೆವಾಣಿ ಪತ್ರಿಕೆಯ ಉಪಸಂಪಾದಕರಾಗಿದ್ದಾರೆ.

ವಿಳಾಸ: ಭೈರೋಬಾ ಶಿವಾಜಿ ಕಾಂಬಳೆ. ಉಪ ಸಂಪಾದಕರು. ಸಂಜೆವಾಣಿ ಕನ್ನಡ ಪತ್ರಿಕೆ, ಹುಬ್ಬಳ್ಳಿ ಮೊ: 9741584738



## ಶ್ರೀಮತಿ ನಿರ್ಮಲಾ ಪ್ರಕಾಶ, ಬೆಳಗಾವಿ

ಇವರು 1948ರಲ್ಲಿ ಅಶ್ವತ್ಥಪುರದಲ್ಲಿ ಜನಿಸಿ, ಹಿಂದುಸ್ತಾನೀ ಶಾಸ್ತ್ರೀಯ ಸಂಗೀತದಲ್ಲಿ ವಿಶಾರದ ಪದವಿಯನ್ನು ಹೊಂದಿದ ನಿರ್ಮಲಾ ಹವ್ಯಾಸಿ ರಂಗಕಲಾವಿದೆಯಾಗಿಯೂ ಅನೇಕ ವರ್ಷಗಳವರೆಗೆ ಬೆಳಗಾವಿಯಲ್ಲಿ ತಮ್ಮ ಆಸಕ್ತಿಯನ್ನು ಕುದುರಿಸಿಕೊಂಡಿದ್ದಾರೆ. ಇಲ್ಲಿಂದು 'ರಂಗಸಂಪದ' ತಂಡದವರು ಸಾದರಪಡಿಸಿದ ಹಲವಾರು ನಾಟಕಗಳಲ್ಲಿ ಅಭಿನಯ ಸೇವೆಯನ್ನು ಸಲ್ಲಿಸಿದ್ದಾರೆ. ಅವುಗಳಲ್ಲಿ ಪ್ರಮುಖವಾದವುಗಳೆಂದರೆ– 'ಮಿಂಚು' 'ವಾಸಾಂಸಿ ಜೀರ್ಣಾನಿ'. ಇವು ಬೆಂಗಳೂರು ಹಾಗೂ ಗುಲಬರ್ಗಾ ಆಕಾಶವಾಣಿಯಿಂದಲೂ ಪ್ರಸಾರವಾಗಿವೆ. ಕರ್ನಾಟಕ ನಾಟಕ ಅಕಾಡೆಮಿ ಮತ್ತು ಹೂವಿನ ಹಡಗಲಿಯ ರಂಗಮಲ್ಲಿಗೆಯವರಿಂದ ಪುರಸ್ಕಾರವನ್ನು ಪಡೆದಿದ್ದಾರೆ. 'ಹೆಣ್ಣು ಭ್ರೂಣ ಹತ್ಯೆ ಒಂದು ಅಮಾನವೀಯ ಕೃತ್ಯ' ಎಂಬ ವಿಷಯವಾಗಿ ಕಿರುನಾಟಕವನ್ನು ಪ್ರಸ್ತುತ ಪಡಿಸಿದ್ದಾರೆ. ಸಂಗೀತ ಕಲಾವಿದೆಯಾಗಿಯೂ ಸಂಗೀತ ಶಿಕ್ಷಕಿಯಾಗಿಯೂ 'ಸಪ್ತಸ್ವರ ಸಂಗೀತ ವಿದ್ಯಾಲಯ' ಎಂಬ ಸಂಸ್ಥೆಯನ್ನು ಹುಟ್ಟುಹಾಕಿ ಸಂಗೀತ ಸೇವೆಯನ್ನು ಗೈಯುತ್ತಿದ್ದಾರೆ.

ವಿಳಾಸ: ಶ್ರೀಮತಿ ನಿರ್ಮಲಾ ಪ್ರಕಾಶ. 112, 'ಮಲ' ಗುರು ಪ್ರಸಾದ ನಗರ, ಬೆಳಗಾವಿ– 590008 ಮೊ: 9449200201


## ಶಂಕರಪ್ಪ ಶಿವಬಸಪ್ಪ ದನದಮನಿ, ಬೆಳಗಾವಿ



ಎಸ್. ಎಸ್. ದನದಮನಿ ಇವರು ಹಿರೇಬಾಗೇವಾಡಿಯ ಗ್ರಾಮದವರಾಗಿದ್ದು ನಾಟಕ ಸಂಗೀತದ ವ್ಯಾಮೋಹಕ್ಕೆ ಒಳಗಾಗಿ ತಮ್ಮ ಬದುಕನ್ನೇ ರಂಗಕಲೆಗಾಗಿ ಅರ್ಪಿಸಿಕೊಂಡ ಕಲಾವಿದರಾಗಿದ್ದಾರೆ. 1938 ರಲ್ಲಿ ಜನಿಸಿದ ಇವರು ನಾಲ್ಕನೇ ವರ್ಗದವರೆಗೂ ಶಿಕ್ಷಣ ಪಡೆದಿದ್ದಾರೆ. ಸಂಗೀತ ವಿಶಾರದ ಪರೀಕ್ಷೆಯನ್ನು ಪಾಸುಮಾಡಿದ್ದಾರೆ. ಇವರು ತಮ್ಮ ಹದಿಮೂರನೇ ವಯಸ್ಸಿಗೇ ನಾಟಕ ಕ್ಷೇತ್ರಕ್ಕೆ ಕಾಲಿಟ್ಟರು. ಇವರ ಅಭಿನಯ ಚಾತುರ್ಯವನ್ನು ಗುರುತಿಸಿದ ಶ್ರೀ ಎಸ್. ಆರ್. ಬಾಬುರಾವ್ ಅವರ ಪ್ರೋತ್ಸಾಹದಲ್ಲಿ ನಟನೆ, ನಿರ್ದೇಶನ, ಸಂಗೀತ ವಿಭಾಗದಲ್ಲಿ ನಿರಂತರ ಕಾರ್ಯ ನಿರ್ವಹಣೆ ಮುಂತಾದವುಗಳನ್ನು ಮಾಡುತ್ತ ಬಂದಿದ್ದಾರೆ. ಆರಂಭದಲ್ಲಿ ಬಬ್ರುವಾಹನ, ಅಭಿಮನ್ಯು,

ಚಿತ್ರಾಂಗದ, ಪುತ್ಥಳಿ, ಗಂಡನ ಮನೆ, ಜೀವನ ನೌಕೆ ಇತ್ಯಾದಿ ನಾಟಕಗಳಲ್ಲಿ ನಟಿಸಿದ್ದರೂ ನಾಟಕ ಕಲಿಸುವ ಗುರುವಾಗಿ ಸೇವೆ ಸಲ್ಲಿಸಿದ್ದಾರೆ. ಕೈಕೊಟ್ಟ ದೇವರು, ಜಗಜ್ಯೋತಿ ಬಸವೇಶ್ವರ, ಕಳ್ಳ ಕಟ್ಟಿದ ತಾಳಿ, ಸೋತು ಗೆದ್ದ ಸುದ್ದಿ, ಶಿಶುನಾಳ ಶರೀಫ, ಮುಂತಾದ ನಾಟಕಗಳನ್ನು ರಂಗದ ಮೇಲೆ ತರಲು ಅಪಾರ ಶ್ರಮವಹಿಸಿದ್ದಾರೆ. ಹೊರ ರಾಜ್ಯವಾದ ಗೋವಾದಲ್ಲಿಯೂ ಕನ್ನಡದ ಕಂಪನ್ನು ಸೂಸಿ ಅಣ್ಣ ತಂಗಿ ನಾಟಕವನ್ನು ಪ್ರದರ್ಶಿಸಿದ್ದಾರೆ. ಹಿರೇಬಾಗೇವಾಡಿಯ ಹರಿಜನ ಗಿರಿಜನ ಹೆಣ್ಣುಮಕ್ಕಳಿಗೆ ಸಂಗೀತದ ಆಸಕ್ತಿ ತುಂಬಿ ಧಾರವಾಡ ಆಕಾಶವಾಣಿಯಲ್ಲಿ ಕಾರ್ಯಕ್ರಮ ಕೊಡಿಸಿದ್ದಾರೆ. ಇವರಿಗೆ ಕರ್ನಾಟಕ ನಾಟಕ ಅಕಾಡೆಮಿ 2000 ದಲ್ಲಿ ಗೌರವ ಪ್ರಶಸ್ತಿ ನೀಡಿ ಪುರಸ್ಕರಿಸಿದೆ.

ವಿಳಾಸ: ಎಸ್. ಎಸ್. ದನದಮನಿ. ಹಿರೇಬಾಗೇವಾಡಿ. ತಾ: / ಜಿ: ಬೆಳಗಾವಿ.



## ಎಸ್. ಪಿ. ಕಳಸದ, ಬೆಳಗಾವಿ

ಬೆಳಗಾವಿ ತಾಲೂಕಿನ ಹಿರೇಬಾಗೇವಾಡಿಯ ಕರ್ನಾಟಕ ಕಿರಿಯ ಮಹಾವಿದ್ಯಾಲಯದಲ್ಲಿ ಶಿಕ್ಷಕ ವೃತ್ತಿಯನ್ನು ಪೂರೈಸಿದ ಶ್ರೀಶೈಲ ಪ. ಕಳಸದ ಇವರು ಮೊದಲಿನಿಂದಲೂ ಆಧ್ಯಾತ್ಮ ಹಾಗೂ ಯೋಗ ಚಟುವಟಿಕೆಗಳ ವೈವಿಧ್ಯತೆಗಳನ್ನು ಮೈಗೂಡಿಸಿಕೊಂಡು ಬಂದವರಾಗಿದ್ದಾರೆ. ಜೊತೆಗೆ ಸಾಹಿತ್ಯ, ಸಂಸ್ಕೃತಿ, ಪುರಾಣ ಪ್ರವಚನ, ರಂಗಭೂಮಿ ಮುಂತಾದ ಚಟುವಟಿಕೆಗಳಲ್ಲೂ ಸಕ್ರಿಯವಾಗಿ ತಮ್ಮನ್ನು ತಾವು ತೊಡಗಿಸಿಕೊಳ್ಳುತ್ತಲೇ ನಡೆದಿದ್ದಾರೆ. 'ಮುತ್ತಿನ ಮೂಗುತಿ' ಅರ್ಥಾತ್ 'ಸಂಪೂರ್ಣ ಹೇಮರೆಡ್ಡಿ ಮಲ್ಲಮ್ಮ' (ಪ್ರಕಟಿತ) ಎಂಬ ಭಕ್ತಿ ರಸ ಪ್ರಧಾನ ನಾಟಕವನ್ನು ರಚಿಸಿ ರಂಗವನ್ನೇರಿಸಲು ಅನುಕೂಲ ಮಾಡಿದ್ದಾರೆ. 'ಜಿತೇಂದ್ರಿಯ' (ಪ್ರಕಟಿತ) 'ಸಂಘ ಶಕ್ತಿ' 'ವರದಕ್ಷಿಣೆ' 'ಕುಡುಕನ ಸಹವಾಸ' 'ವಿಧವಾ ವಿವಾಹ' 'ಹೆಣ್ಣು ಬಾಳಿನ ಕಣ್ಣು' ಮುಂತಾದ ಕಿರು ನಾಟಕಗಳನ್ನೂ ರಚಿಸಿ ಅವುಗಳ ಮೂಲಕ ಶಾಲಾ ಮಕ್ಕಳ ಪ್ರತಿಭೆಯನ್ನು ರಂಗದಲ್ಲಿ ಮೆರೆಯುವಂತೆ ಮಾಡಿದ್ದಾರೆ. 'ಪತ್ರ ಪ್ರಸಂಗ' 'ಉಷಾ ಹರಣ' ಮುಂತಾದ ನಾಟಕಗಳಲ್ಲಿ ಅಭಿನಯಿಸಿದ್ದಾರೆ.

ಇವರ ಹಲವಾರು ಕತೆ, ಕವನಗಳು ನಾಡಿನ ಖ್ಯಾತ ಪತ್ರಿಕೆಗಳಲ್ಲಿ ಪ್ರಕಟಗೊಂಡಿವೆ. ಮಕ್ಕಳ ಕಥಾ ಸಂಕಲನ 'ಇಂದ್ರ ಚಂದ್ರ' 'ಪತ್ತೇದಾರ ಪಂಚಾಕ್ಷರಿ' 'ರಾಜರ್ಷಿ ದೇವಾಂಗ' ಮುಂತಾದವುಗಳು ಪ್ರಕಟಗೊಂಡಿವೆ. ಹಿಂದೀ ಸಾಹಿತ್ಯದಲ್ಲೂ ಇವರ ಕೊಡುಗೆ ಅನನ್ಯ. ಆದ್ಯವಚನಕಾರ ದೇವರ ದಾಸಿಮಯ್ಯನವರ ಎಲ್ಲ ವಚನಗಳನ್ನೂ ಹಿಂದಿ ಭಾಷೆಗೆ ಅನುವಾದಿಸಿದ ಗ್ರಂಥವೂ ಲೋಕಾರ್ಪಣೆಯಾಗಿದೆ. ಸಧ್ಯ 'ಬಡೇಕೊಳ್ಳದ ಶಿವಯೋಗೀಶ್ವರ ಮಹಾತ್ಮೆ' ಎಂಬ ಭಕ್ತಿ ಪ್ರಧಾನ ರಂಗನಾಟಕವೂ ಪ್ರಕಟಗೊಂಡಿದೆ.

ವಿಳಾಸ : 'ಶ್ರೀಶೈಲ' ಬಸವನಗರ, ಹಿರೇಬಾಗೇವಾಡಿ. ತಾ: ಜಿ: ಬೆಳಗಾವಿ
ಮೊ: 9481656411 ದೂ: 0831-2564997



## ಶಿವಲಿಂಗಪ್ಪ ಬಸವಂತಪ್ಪ ಬೋಡ್ಕಿಯವರ, ಬೆಳಗಾವಿ

ಇವರು ಬೆಳಗಾವಿ ತಾಲೂಕಿನ ಹಿರೇಬಾಗೇವಾಡಿಯ ಗ್ರಾಮದವರು. 1-4-1924 ರಂದು ಜನಿಸಿದ್ದಾರೆ. ಇವರು ಸಂಗೀತ ಹಾಗೂ ನಾಟಕದ ಮಾಸ್ತರ ಆಗಿ ಒಳ್ಳೆ ಹೆಸರು ಮಾಡಿದವರು. 1942ರ ಚಲೇಜಾವ್ ಚಳುವಳಿಯಲ್ಲಿ ಸಕ್ರಿಯವಾಗಿ ಭಾಗವಹಿಸಿದ ಇವರು ಬೆಳಗಾವಿಯ ಕಿಲ್ಲಾ ಕಾರಾಗ್ರಹದಲ್ಲಿ ಒಂದೂವರಿ ವರ್ಷ ಶಿಕ್ಷೆಯನ್ನನುಭವಿಸಿದ್ದಾರೆ. ಹಿಂದೂಸ್ತಾನಿ ಸಂಗೀತ ಪರೀಕ್ಷೆಯಲ್ಲಿ ವಿದ್ವತ್ ಪಡೆದ ಇವರು ಸರಕಾರಿ ಪ್ರಾಥಮಿಕ ಹಾಗೂ ಮಾಧ್ಯಮಿಕ ಶಾಲೆಗಳಲ್ಲಿ ಸಂಗೀತ ಶಿಕ್ಷಕರಾಗಿ ಸುದೀರ್ಘ ಸೇವೆಯನ್ನು ಸಲ್ಲಿಸಿದ್ದಾರೆ.

ಎಂ. ಕೆ. ಹುಬ್ಬಳ್ಳಿಯ ಶ್ರೀಗುರು ಪಂಚಾಕ್ಷರಿ ಸಂಗೀತ ಶಾಲೆಯ ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸಿದ್ದಾರೆ. ಹಲವಾರು ನಾಟಕಗಳನ್ನು ನಿರ್ದೇಶಿಸಿದ ಇವರದು ಸ್ತ್ರೀ ಪಾತ್ರ ಮಾಡುವುದರಲ್ಲಿ ಎತ್ತಿದ ಕೈಯಾಗಿತ್ತು. ಕಿತ್ತೂರು ಚನ್ನಮ್ಮ ಹಾಗೂ ಸಂಗೊಳ್ಳಿ ರಾಯಣ್ಣ ನಾಟಕದಲ್ಲಿ ಚನ್ನಮ್ಮನ ಪಾತ್ರ, ಚಿತ್ರಾಂಗದ ನಾಟಕದಲ್ಲಿ ಚಿತ್ರಾಂಗದ, ಹೇಮರೆಡ್ಡಿ ಮಲ್ಲಮ್ಮದಲ್ಲಿ ಮಲ್ಲಮ್ಮ, ಕುರುಕ್ಷೇತ್ರದಲ್ಲಿ ದ್ರೌಪತಿ ಪಾತ್ರ ಹೀಗೆ ಇನ್ನೂ ಹಲವಾರು ನಾಟಕಗಳಲ್ಲಿ ಸ್ತ್ರೀ ಪಾತ್ರವನ್ನೇ ಮಾಡಿದ್ದಾರೆ. ಹಲವಾರು ಕಿರು ನಾಟಕಗಳನ್ನೂ ಬರೆದಿದ್ದಾರೆ. ಹನ್ನೆರಡು ವರ್ಷಕಾಲ ಸುಗಮ ಸಂಗೀತದ ಕಾರ್ಯಕ್ರಮಗಳನ್ನು ಧಾರವಾಡ ಆಕಾಶವಾಣಿಯಲ್ಲಿ ನೀಡಿದ್ದಾರೆ. ಶಾಲಾ ಮಕ್ಕಳಿಗೆ ಕಲಿಸಿದ ಕೋಲಾಟ, ನೃತ್ಯ ಹಾಗೂ ರಾಷ್ಟ್ರೀಯ ಗೀತೆಗಳು ಜಿಲ್ಲಾ ಮತ್ತು ರಾಜ್ಯ ಮಟ್ಟದಲ್ಲಿ ನೂರಾರು ಕಡೆ ಪ್ರಥಮ ಬಹುಮಾನಗಳನ್ನೇ ಪಡೆದಿವೆ. ಶ್ರೀಯುತರಿಗೆ ಹಲವಾರು ಪ್ರಶಸ್ತಿ ಪುರಸ್ಕಾರಗಳೂ ಲಭಿಸಿವೆ.

ವಿಳಾಸ: ಹಿರೇಬಾಗೇವಾಡಿ. ತಾ: / ಜಿ: ಬೆಳಗಾವಿ, ದೂ: 0831,3298504

## ಸುಭಾಷ ಬಾಳಪ್ಪ ಏಣಗಿ, ಬೆಳಗಾವಿ

ವೃತ್ತಿ ರಂಗಭೂಮಿಯ ಮೇರು ನಟ, ಬೆಳಗಾವಿಯ ಕಲಾ ವೈಭವ ನಾಟ್ಯ ಸಂಘದ ಮಾಲೀಕ ಡಾ. ಏಣಗಿ ಬಾಳಪ್ಪನವರ ಚಿರಂಜೀವ ಸುಭಾಷ ಏಣಗಿಯವರು ವೃತ್ತಿಯಿಂದ ಎಂಜಿನೀಯರ ಆಗಿ ನಿವೃತ್ತಿ ಹೊಂದಿದ್ದರೂ ಸಧ್ಯ ಪ್ರವೃತ್ತಿಯಿಂದ ರಂಗ ಸೇವಕರಾಗಿ ಮುನ್ನಡೆದಿದ್ದಾರೆ. ತಂದೆಯವರೊಂದಿಗೆ ಬಾಲ್ಯದಿಂದಲೇ ರಂಗದ ಗೀಳು ಹಚ್ಚಿಕೊಂಡ ಸುಭಾಷ ಇವರು ಮಕ್ಕಳ ರಂಗಕ್ಕೆ ವಿಶೇಷವಾದ ಕೊಡುಗೆ ಸಲ್ಲಿಸಿದ್ದಾರೆ. ಹಲವಾರು ಮಕ್ಕಳ ನಾಟಕಗಳನ್ನೂ ನಿರ್ದೇಶಿಸಿದ್ದಾರೆ, ರಚಿಸಿದ್ದಾರೆ, ಮಕ್ಕಳ ರಂಗೋತ್ಸವಗಳನ್ನೂ ಆಯೋಜಿಸಿದ್ದಾರೆ.

ಮೊ : 9448309508

## ದ್ರುವರಾಜ ಮುತಾಲಿಕ ದೇಸಾಯಿ, ಬೆಳಗಾವಿ

ವಕೀಲಿ ವೃತ್ತಿ ಮತ್ತು ಪತ್ರಿಕಾ ಕರ್ತರಾಗಿ ಸೇವೆ ಸಲ್ಲಿಸಿರುವ ಶ್ರೀ ದೃವರಾಜ ಮುತಾಲಿಕ ದೇಸಾಯಿ ಅವರು, ಚಿಕ್ಕಂದಿನಿಂದಲೇ ಹವ್ಯಾಸಿ ರಂಗಭೂಮಿಯ ಕಲಾವಿದರು. ಅದೇ ರೀತಿ ಸಂಘಟಕರೂ ಹೌದು. 1948ರಲ್ಲಿ ಬೆಳಗಾವಿಯಲ್ಲಿ ನಾಟ್ಯ ವಿಲಾಸಿ ಸಂಘವನ್ನು ರಚಿಸಿದವರಲ್ಲಿ ಇವರೂ ಒಬ್ಬರು. 1953ರಲ್ಲಿ ಬೆಳಗಾವಿ ಕರ್ನಾಟಕ ಸಂಘವನ್ನು ಅನೇಕ ಸ್ನೇಹಿತರ ಸಹಕಾರದಿಂದ ಪುನಶ್ಚೇತನಗೊಳಿಸಿ ತನ್ಮೂಲಕ ಹಲವಾರು ನಾಟಕಗಳು ಪ್ರದರ್ಶನಗೊಳ್ಳುವಂತೆ ಮಾಡಿದರು. ಹವ್ಯಾಸಿ ರಂಗಭೂಮಿಯೊಂದಿಗೆ ನಿಕಟ ಸಂಪರ್ಕವಿರಿಸಿಕೊಂಡು ಅಲ್ಲಿನ ಚಟುವಟಿಕೆಗಳು ಪತ್ರಿಕೆಯಲ್ಲಿ ಬೆಳಕು ಕಾಣುವಂತೆ ಮಾಡಿದ್ದಾರೆ. ಬೆಳಗಾವಿಯವರೇ ಆದ ಇವರು ಆ ಜಿಲ್ಲೆಯ ಹವ್ಯಾಸಿ ರಂಭೂಮಿಯ ಇಡಿಯಾದ ಐತಿಹಾಸಿಕ ಚಿತ್ರಣವನ್ನು ಮಾನಸಿಕವಾಗಿ ಹೊಂದಿದವರಾಗಿದ್ದಾರೆ.

ವಿಳಾಸ: 52, ಶ್ರೀನಗರ, ಉಣಕಲ್. ಹುಬ್ಬಳ್ಳಿ. ದೂ: 0836 2372918

## ಡಾ. ಸರಜೂ ಕಾಟಿಕರ್, ಬೆಳಗಾವಿ

ಇವರು ಖ್ಯಾತ ಸಾಹಿತಿಗಳು, ಅನುವಾದಕರು, ನಾಟಕಕಾರರು, ನಟರು, ನಿರ್ದೇಶಕರು. ಇವರ 'ಜಯ ಅಂಬೆ' ಹಾಗೂ ಇನ್ನೂ ಹಲವಾರು ನಾಟಕಗಳು ಪ್ರಕಟವಾಗಿವೆ ಮತ್ತು ಪ್ರದರ್ಶನಗೊಂಡಿವೆ. ಸಧ್ಯ ಇಂಡಿಯನ್ ಎಕ್ಸಪ್ರೆಸ್ ಪತ್ರಿಕೆಯ ಪತ್ರಕರ್ತರಾಗಿ ಕಾರ್ಯ ನಿರ್ವಹಿಸುತ್ತ ಬೆಳಗಾವಿಯಲ್ಲಿದ್ದಾರೆ.

ಮೊ : 9341029321

## ಶ್ರೀಪತಿ ಮಂಜನಬೈಲು, ಬೆಳಗಾವಿ

ಅನೇಕ ವರ್ಷಗಳವರೆಗೆ ಬೆಳಗಾವಿಯಲ್ಲಿದ್ದು ರಂಗ ಸೇವೆ ಮಾಡಿದವರು. ಒಳ್ಳೆ ರಂಗ ಸಂಘಟರು, 'ರಂಗ ಸಂಪದ' ಎಂಬ ರಂಗ ತಂಡವನ್ನು ಕಟ್ಟಿ ಅನೇಕ ನಾಟಕಗಳನ್ನು ನಿರ್ದೇಶಿಸಿ, ಹಲವಾರು ನಾಟಕಗಳಲ್ಲಿ ನಟಿಸಿ ಹವ್ಯಾಸಿ ರಂಗ ಭೂಮಿಯಲ್ಲಿ ಹೆಸರು ಮಾಡಿದವರಾಗಿದ್ದಾರೆ. ಆದರೆ ಸಧ್ಯ ಬೆಂಗಳೂರು ನಿವಾಸಿಯಾಗಿದ್ದಾರೆ.

ಮೊ: 9448188965

## ರಾಜು ಮಠಪತಿ, ಬೆಳಗಾವಿ

ಹವ್ಯಾಸಿ ರಂಗಭೂಮಿಯಲ್ಲಿ ಸಾಕಷ್ಟು ಕೆಲಸ ಮಾಡಿದ ರಾಜು ಮಠಪತಿ ಹಲವಾರು ನಾಟಕಗಳನ್ನು ನಿರ್ದೇಸಿದ್ದಾರೆ. ಹಲವಾರು ನಾಟಕಗಳಲ್ಲಿ ಅಭಿನಯಿಸಿದ್ದಾರೆ. ಸಧ್ಯ ಬೆಳಗಾವಿ ಹಾಗೂ ಜಿಲ್ಲೆ, ತಾಲೂಕಿನ ಇತರೆಡೆಗಳಲ್ಲಿ ರಂಗ

ಸಂಬಂಧೀ ಕಾರ್ಯಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದಾರೆ.

ಮೊ: 9980074832

ಅನಂತ ಕಲ್ಲೋಳ. ದೂ : 0831– 2462063, ರಂ.ಶಾ. ಲೋಕಾಪೂರ, ಡಾ. ಶ್ರೀರಾಮ ಇಟ್ಟಣ್ಣವರ, ಸುಬ್ರಹ್ಮಣ್ಯ ಭಟ್. ಮೊ: 9448850016, ಗುರುನಾಥ ಕುಲಕರ್ಣಿ ಮ: 9886004004, ನಳಿನಿ ವಿದ್ಯಾಸಾಗರ, ರಾಮಚಂದ್ರ ನೇತ್ರೇಕರ. ಮೊ: 9738677634, ಸಂಧ್ಯಾ ದೇಶಪಾಂಡೆ, ಮಹಾಂತೇಶ ರಾಮದುರ್ಗ, ಶ್ರೀನಿವಾಸ ಕುಲಕರ್ಣಿ. 0831–2485079, ಬೀಮಸೇನ ತೋರಗಲ್, ಹುನಗುಂದ ಅರವಿಂದ, ನಾಡಿಗೇರ, ರಾಘವೇಂದ್ರ ಹಲಗತ್ತಿ ಮುಂತಾದವರೆಲ್ಲ ಬೆಳಗಾವಿ ಭಾಗದಲ್ಲಿ ನಡೆಯುತ್ತಿದ್ದ ಹಲವಾರು ರಂಗ ಚಟುವಟಿಕೆಗಳಲ್ಲಿ ಹಲವಾರು ವರ್ಷಗಳಿಂದ ಕ್ರಿಯಾಶೀಲರಾಗಿದ್ದರು.

## ರಂಗ ಪರಿಕರ ಪೂರೈಕಾ ಕೇಂದ್ರಗಳು

1) ಕಿರಣ ಇಲೆಕ್ಟ್ರಿಕಲ್ಸ್, ಭಾಗ್ಯನಗರ ಬೆಳಗಾವಿ. ಮೊ : 9036678402

2) ರತನ್ ಆರ್ಟ್ಸ್. ಗಣಪತಿ ಗಲ್ಲಿ ಬೆಳಗಾವಿ.

3) ಪೆಡನೇಕರ್ ಆರ್ಟ್ಸ್. ಗಣಪತಿ ಗಲ್ಲಿ ಬೆಳಗಾವಿ.

4) ಮಲಗೌಡ ಎಫ್. ಪಾಟೀಲ, ರಂಗ ಪರದೆ ಪೂರೈಕೆದಾರರು. ವಕ್ಕುಂದ ಮೊ: 9740650338

5) ಮಹಾಂತೇಶ ಗೋಂತಮಾರ್. ವಕ್ಕುಂದ. ತಾ: ಬೈಲಹೊಂಗಲ

# ಬೆಳಗಾವಿ ಜಿಲ್ಲೆಯಲ್ಲಿ
## ನೀನಾಸಂ ರಂಗ ಶಿಕ್ಷಣ ಪಡೆದ ಕಲಾವಿದರು

1) ಏಣಗಿ ನಟರಾಜ, ಬೆಳಗಾವಿ ( ಧಾರವಾಡ) 1980–1981
2) ವಿಶ್ವೇಶ್ವರಿ ಆರ್. ಕಲ್ಮಠ ಕಿತ್ತೂರು 1984–1985
3) ಶ್ರೀಕಾಂತ ಕಾಂಬಳೆ. ಕಾಂಬಳೆ. ನಾಗರಮುಳೆ. ಚಿಕ್ಕೋಡಿ 1987–1988
4) ಇಮಾ ನಟರಾಜ ಏಣಗಿ. ಬೆಳಗಾವಿ 1987–1988
5) ರಮೇಶ ಡಿ. ಸಂಗೊಳ್ಳಿ. ಸವದತ್ತಿ 1988–1989
6) ಮಹಾಂತೇಶ ಎಂ. ಸವದತ್ತಿ. ಬೆಳಗಾವಿ 1994 –1995
7) ಕಸ್ತೂರಿ ಹ. ದಳವಾಯಿ. ಗೋಕಾಕ. 1998 – 1999
8) ಮಹಾಂಟೇಶ ರಾಮದುರ್ಗ. 2002–2003
9) ಬಾಲಾಜಿರಾವ್ ಕಾಮೋಜಿ. ಹುಕ್ಕೇರಿ 2003–2004
10) ಓಂಕಾರ ಕಿಬೆ. ಬೆಳಗಾವಿ. 2003–2004
11) ಮಹಾದೇವ ಹಡಪದ. ರಾಮದುರ್ಗ. 2004–2005
12) ಕಲ್ಲಪ್ಪ ಹನುಮಂತ ಹೂಗೇರಾ ಸಾಲಾಪೂರ. ಬೆಳಗಾವಿ 2007–2008
13) ಬಸಲಿಂಗಯ್ಯ ಹಿರೇಮಠ, ಬೈಲೂರು. ಬೈಲಹೊಂಗಲ
14) ವಿನೋದ ಅಂಬೇಕರ್. ಬೆಳಗಾವಿ.

## ರಂಗಭೂಮಿ ಕುರಿತು ಡಾಕ್ಟರೇಟ್ ಪದವಿ ಪಡೆದವರು

1) ಡಾ. ಬಸವರಾಜ ಮಲಶೆಟ್ಟಿ. ತಿಗಡೊಳ್ಳಿ. ತಾ: ಬೈಲಹೊಂಗಲ
'ಉತ್ತರ ಕರ್ನಾಟಕದ ಬಯಲಾಟಗಳು' 1978
2) ಡಾ. ರಾಮಕೃಷ್ಣ ಮರಾಠೆ ಬೆಳಗಾವಿ.
'ಉತ್ತರ ಕರ್ನಾಟಕ ವೃತ್ತಿ ರಂಗಭೂಮಿ'
3) ಡಾ. ಎಚ್. ಆಯ್. ತಿಮ್ಮಾಪೂರ ಬೆಳಗಾವಿ
'ಬಯಲಾಟದ ಕಥೆಗಳು: ಒಂದು ಸಾಂಸ್ಕೃತಿಕ ಅಧ್ಯಯನ' 1987
4) ಡಾ. ಬಸವರಾಜ ಜಗಜಂಪಿ ಬೆಳಗಾವಿ 'ಗರುಡ ಸದಾಶಿವರಾಯರು : ನಾಟಕಸಾಹಿತ್ಯ / ವೃತ್ತಿರಂಗಭೂಮಿ ಅಧ್ಯಯನ' 1990
5) ಡಾ. ದೇವದಾಸ ಕಳಸದ. ದೊಡ್ಡವಾಡ. ತಾ. ಬೈಲಹೊಂಗಲ
'ಕನ್ನಡ ವೃತ್ತಿರಂಗಭೂಮಿ ಹಾಗೂ ರಂಗವಿನ್ಯಾಸ:
ಒಂದು ಶಾಸ್ತ್ರೀಯ ಅಧ್ಯಯನ' 2000

# ಬೆಳಗಾವಿ ಜಿಲ್ಲೆಯ ರಂಗಮಂದಿರಗಳು

- ಕೆ. ಬಿ. ಆರ್. ಚಿಂದೋಡಿ ಲೀಲಾ ರಂಗಮಂದಿರ. ಸದಾಶಿವ ನಗರ ಬೆಳಗಾವಿ
- ಗೋಗಟೆ ರಂಗಮಂದಿರ. ಕ್ಯಾಂಪ ಬೆಳಗಾವಿ, ಮೊ: 9242335834
- ವರೇಕರ್ ನಾಟ್ಯ ಮಂದಿರ. ಬೆಳಗಾವಿ, ಮೊ: 934110846
- ಕುಮಾರ ಗಂಧರ್ವ ರಂಗಮಂದಿರ. ಕೋಲ್ಹಾಪೂರ ರಸ್ತೆ ಬೆಳಗಾವಿ
- ಡಾ. ಬಿ. ಎಸ್. ಜೀರಗೆ ಸಭಾಗೃಹ. ನೆಹರು ನಗರ. ಬೆಳಗಾವಿ ದೂ: 0831 1471350
- ಲೋಕಮಾನ್ಯ ರಂಗಮಂದಿರ. ಕೋನವಾಳ ಗಲ್ಲಿ ಬೆಳಗಾವಿ, ಮೊ: 9739776845
- ಕಲಾಮಂದಿರ ಟಿಳಕವಾಡಿ ಬೆಳಗಾವಿ




ಕೆ.ಬಿ.ಆರ್. ಚಿಂದೋಡಿಲೀಲಾ ರಂಗಮಂದಿರ. ಸದಾಶಿವನಗರ, ಬೆಳಗಾವಿ



ಗೋಗಟೆ ರಂಗಮಂದಿರ. ಕ್ಯಾಂಪ್ ಬೆಳಗಾವಿ



ವರೇಕರ್ ನಾಟ್ಯ ಮಂದಿರ. ಬೆಳಗಾವಿ



ಕುಮಾರ ಗಂಧರ್ವ ರಂಗಮಂದಿರ. ಕೋಲ್ಹಾಪೂರ ರಸ್ತೆ ಬೆಳಗಾವಿ



ಡಾ. ಬಿ. ಎಸ್. ಜೀರಗೆ ಸಭಾಗೃಹ. ನೆಹರುನಗರ. ಬೆಳಗಾವಿ




ಲೋಕಮಾನ್ಯ ರಂಗಮಂದಿರ. ಕೋನವಾಳ ಗಲ್ಲಿ ಬೆಳಗಾವಿ



ಕಲಾಮಂದಿರ ಟಿಳಕವಾಡಿ ಬೆಳಗಾವಿ

# ಬೆಳಗಾವಿ ತಾಲೂಕು ಜಾನಪದ ರಂಗ ತಂಡಗಳು



## ಶಿವಲಿಂಗಪ್ಪ ಕರವಿನಕೊಪ್ಪವರ ಸಂಗ್ಯಾಬಾಳ್ಯಾ ನಾಟಕ ತಂಡ, ಮಾರೀಹಾಳ. ತಾ: ಬೆಳಗಾವಿ

ಬೆಳಗಾವಿ ನಗರದ ಸೆರಗಿನಲ್ಲಿ ಬರುವ ಮಾರೀಹಾಳ ಗ್ರಾಮದ ಜಾನಪದ ಕಲಾವಿದ ಶಿವಲಿಂಗಪ್ಪ ಬಸಪ್ಪ ಕರವಿನಕೊಪ್ಪ ಇವರು "ಸಂಗ್ಯಾಬಾಳ್ಯಾ ಬಯಲಾಟದ ಮೇಳ, ಮಾರೀಹಾಳ" ಎಂಬ ಜಾನಪದ ನಾಟಕ ತಂಡವನ್ನು ಮಾಡಿಕೊಂಡು ಸುಮಾರು ನಲ್ವತ್ತು ವರ್ಷಗಳಿಂದ ರಂಗ ಸೇವೆ ಸಲ್ಲಿಸುತ್ತಿದ್ದಾರೆ. ಇವರು ಸ್ವತಃ ಆಕಾಶವಾಣಿ ಹಾಗೂ ದೂರದರ್ಶನದ ಜಾನಪದ ಕಲಾವಿದರಾಗಿದ್ದು ಎಳೆತನದಲ್ಲಿಯೇ ರಂಗಭೂಮಿಯ ಗೀಳು ಹಚ್ಚಿಕೊಂಡವರಾಗಿದ್ದರು. ಇವರ ದೊಡ್ಡಪ್ಪನವರಾದ ಮಲ್ಲಪ್ಪ ಕರವಿನಕೊಪ್ಪ ಇವರ ಮಾರ್ಗದರ್ಶನದಲ್ಲಿ ರಂಗ ತರಬೇತಿ ಪಡೆದು ಜಾನಪದ ಸಣ್ಣಾಟದ ಕಲೆಯನ್ನು ಮುಂದುವರೆಸಿಕೊಂಡು ಬಂದಿದ್ದಾರೆ. ಈ ಮೇಳದವರು ನಗರ ಹಾಗೂ ಗ್ರಾಮೀಣ ಪ್ರದೇಶದ ರಂಗಾಸಕ್ತರ ಆಹ್ವಾನದ ಮೇರೆಗೆ 'ರಾಧಾನಾಟ' 'ಸಂಗ್ಯಾಬಾಳ್ಯಾ' 'ಶ್ರೀ ಕೃಷ್ಣ ಪಾರಿಜಾತ' 'ಕಡ್ಲಿಮಟ್ಟಿ ಶ್ಟೇಶನ್ ಮಾಸ್ತರ' ಮುಂತಾದ ವೃತ್ತಿಪರ ಆಖ್ಯಾನಗಳ ಪ್ರದರ್ಶನ ನೀಡುತ್ತಾರೆ.

ಮೇಳದ ಮುಖ್ಯಸ್ಥರಾದ ಶಿವಲಿಂಗಪ್ಪ ಕರವಿನಕೊಪ್ಪ ಇವರು ಆಸಕ್ತ ಯುವಕರಿಗೆ ರಂಗ ತರಬೇತಿ ನೀಡಿ ಹೊಸ ತಂಡ ಕಟ್ಟಿಕೊಡುತ್ತಾರೆ. ಯುವಜನ ಮತ್ತು ಕ್ರೀಡಾ ಇಲಾಖೆಯಲ್ಲಿಯೂ ತರಬೇತು ನೀಡಿದ್ದಾರೆ. ಇಂಥ ಅನೇಕ ತಂಡಗಳು ಈಗ ಆಕಾಶವಾಣಿ ಹಾಗೂ ದೂರದರ್ಶನದಲ್ಲಿ ಪ್ರದರ್ಶನವನ್ನೂ ನೀಡಿವೆ. ಅಲ್ಲದೇ ಸ್ವತಃ ಇವರ ತಂಡವೇ ಜಿಲ್ಲಾ ಮಟ್ಟ, ವಿಭಾಗ ಮಟ್ಟ ಹಾಗೂ ರಾಜ್ಯಮಟ್ಟದ ಜಾನಪದ ರಂಗೋತ್ಸವ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಪಡೆದಿರುತ್ತದೆ.

ಇವರು ಪ್ರಸಾಧನ-ವೇಷಭೂಷಣ, ಹಿನ್ನಲೆ ವಾದನ, ಹಿನ್ನಲೆ ಗಾಯನ, ಪಾತ್ರಧಾರಿ ಹಾಗೂ ಕಥೆಗಾರನಾಗಿಯೂ ವೈವಿಧ್ಯಪೂರ್ಣ ಸೇವೆಯನ್ನು ಸಲ್ಲಿಸುತ್ತಾ ಬಂದಿದ್ದಾರೆ. ಇವರ ತಂಡವು ಆಕಾಶವಾಣಿ ದೆಹಲಿಯಿಂದ ಜರುಗಿದ 1989ರ ರಾಷ್ಟ್ರೀಯ ಸಣ್ಣಾಟ ಸ್ಪರ್ಧೆಯಲ್ಲಿ ದ್ವಿತೀಯ ಪುರಸ್ಕಾರ, 1994ರಲ್ಲಿ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು ಇವರಿಂದ ಗೌರವ ಪ್ರಶಸ್ತಿ,

1999ರಲ್ಲಿ ಜಾನಪದ ಸಂಶೋಧನಾ ಕೇಂದ್ರ ಇವರಿಂದ ಗೌರವ ಪ್ರಶಸ್ತಿ, 2003ರಲ್ಲಿ ಕರ್ನಾಟಕ ಜಾನಪದ ಪರಿಷತ್ತು ಬೆಂಗಳೂರು ಇವರಿಂದ ಜಾನಪದ ಲೋಕ ಪ್ರಶಸ್ತಿ ಹಾಗೂ ಇನ್ನೂ ಹಲವಾರು ವಿಶೇಷ ಪುರಸ್ಕಾರಗಳನ್ನು ಪಡೆದಿದೆ.

ಈ ತಂಡದ ಮುಖ್ಯ ಕಲಾವಿದರು: ಶಿವಲಿಂಗಪ್ಪ ಬಸಪ್ಪ ಕರವಿನಕೊಪ್ಪ, ಗಿರೆಪ್ಪ ರಾಮಪ್ಪ ಇರಕಿನಕೊಪ್ಪ, ಮಲ್ಲಪ್ಪ ಬಸಪ್ಪ ಗೌಡರ, ಗಿರೆಪ್ಪ ಗಂಗಪ್ಪ ತುರಮರಿ, ರುದ್ರಪ್ಪ ಗಿರೆಪ್ಪ ಮೂಡಲಗಿ, ಮಾರುತಿ ಮಡಿವಾಳಪ್ಪ ಸವಡಿ, ನಾಗಪ್ಪ ಭೀಮಪ್ಪ ಇರಕಿನಕೊಪ್ಪ, ರುದ್ರಗೌಡ ಶಿವನಪ್ಪ ಗೌಡರ, ಶ್ರೀಮತಿ ಸಕ್ರೆವ್ವ ಪಾತ್ರೋಟ, ಕೆಂಪವ್ವ ಹರಿಜನ ಮುಂತಾದವರು.

ಮುಖ್ಯಸ್ಥರ ವಿಳಾಸ: ಶಿವಲಿಂಗಪ್ಪ ಬಸಪ್ಪ ಕರವಿನಕೊಪ್ಪ,
ಮು: ಪೋ: ಮಾರೀಹಾಳ ತಾ: ಜಿ: ಬೆಳಗಾವಿ ಮೊ: 9632261487



## ಸಕ್ರೆವ್ವಾ ಪಾತ್ರೋಟವರ ರಾಧಾನಾಟದ ಮೇಳ

ಬೆಳಗಾವಿ

ಮೂಲತಃ ಬೆಳಗಾವಿ ತಾಲೂಕು ಅಲತಗಿ ಗ್ರಾಮದವರಾದ ಜಾನಪದ ಕಲಾವಿದೆ ಶ್ರೀಮತಿ ಸಕ್ರೆವ್ವ ಎಲ್ಲಪ್ಪ ಪಾತ್ರೋಟಿ ಇವರು "ರಾಧಾನಾಟದ ಮೇಳ, ಬೆಳಗಾವಿ" ಎಂಬ ಜಾನಪದ ನಾಟಕ ರಂಗಮೇಳವನ್ನು ಮಾಡಿಕೊಂಡು ಸುಮಾರು ನಲ್ವತ್ತೈದು ವರ್ಷಗಳಿಂದ ರಂಗ ಸೇವೆ ಸಲ್ಲಿಸುತ್ತಿದ್ದಾರೆ. ಇವರು ಸ್ವತಃ ಆಕಾಶವಾಣಿ ಹಾಗೂ ದೂರದರ್ಶನದ ಜಾನಪದ ಕಲಾವಿದರಾಗಿದ್ದು ಎಳೆತನದಲ್ಲಿಯೇ ರಂಗಭೂಮಿಯ ಗೀಳು ಹಚ್ಚಿಕೊಂಡವರಾಗಿದ್ದರು. ಹಿರಿಯ ಜಾನಪದ ರಂಗಕಲಾವಿದರ ಮಾರ್ಗದರ್ಶನದಲ್ಲಿ ರಂಗ ತರಬೇತಿ ಪಡೆದು ಜಾನಪದ ಸಣ್ಣಾಟಗಳಾದ 'ರಾಧಾನಾಟ' ಹಾಗೂ 'ಸಂಗ್ಯಾಬಾಳ್ಯಾ' ಆಟಗಳ ಕಲೆಯನ್ನು ಮುಂದುವರೆಸಿಕೊಂಡು ಬಂದಿದ್ದಾರೆ. ಈ ಮೇಳದ ಮುಖ್ಯಸ್ಥೆ ಸಕ್ರೆವ್ವ ಪಾತ್ರೋಟ ಇವರು ನಗರ ಹಾಗೂ ಗ್ರಾಮೀಣ ಪ್ರದೇಶದ ರಂಗಾಸಕ್ತರ ಆಹ್ವಾನದ ಮೇರೆಗೆ 'ರಾಧಾನಾಟ' 'ಸಂಗ್ಯಾಬಾಳ್ಯಾ' ವೃತ್ತಿಪರ ಆಖ್ಯಾನಗಳ ಪ್ರದರ್ಶನ ನೀಡುತ್ತ ಬಂದಿದ್ದಾರೆ.

ಮೇಳದ ಮುಖ್ಯಸ್ಥರಾದ ಸಕ್ರೆವ್ವ ಕರವಿನಕೊಪ್ಪ ಇವರು ಆಕಾಶವಾಣಿ ಹಾಗೂ ದೂರದರ್ಶನದಲ್ಲಿಯೂ ಕಲಾ ಸೇವೆಗೈದಿದ್ದಾರೆ. ಅಲ್ಲದೇ ಸ್ವತಃ ಇವರ ತಂಡವೇ ಜಿಲ್ಲಾ ಮಟ್ಟ, ವಿಭಾಗ ಮಟ್ಟ ಹಾಗೂ ರಾಜ್ಯಮಟ್ಟದ ಜಾನಪದ ರಂಗೋತ್ಸವ ಸ್ಪರ್ಧೆಯಲ್ಲಿ ಪುರಸ್ಕಾರ ಪಡೆದಿರುತ್ತದೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಗೋವಾ, ಮಹಾರಾಷ್ಟ್ರಗಳಲ್ಲೂ ರಂಗ ಸೇವೆ ಸಲ್ಲಿಸಿದ್ದಾರೆ. ಹಲವಾರು ಮಠ ಮಾನ್ಯ, ಜಾತ್ರೆ ಉತ್ಸವ ಮುಂತಾದೆಡೆಗಳಲ್ಲಿ ಇವರ ತಂಡ ಪ್ರದರ್ಶನ ನೀಡಿದೆ. 'ಶ್ರೀ ಕೃಷ್ಣ ಪಾರಿಜಾತ'


'ಕಡ್ಲಿಮಟ್ಟಿ ಶ್ಟೇಶನ್ ಮಾಸ್ತರ' ಮುಂತಾದ ವೃತ್ತಿಪರ ಆಖ್ಯಾನಗಳಲ್ಲಿ ಸಕ್ರೆವ್ವ ಇವರು ಸ್ತ್ರೀ ಹಾಗೂ ಪುರುಷ ಪಾತ್ರಗಳನ್ನು ಮಾಡಿದ್ದಾರೆ.

ಇವರ ತಂಡವು ಆಕಾಶವಾಣಿ ದೆಹಲಿಯಿಂದ ಜರುಗಿದ 1989ರ ರಾಷ್ಟ್ರೀಯ ಸಣ್ಣಾಟ ಸ್ಪರ್ಧೆಯಲ್ಲಿ ದ್ವಿತೀಯ ಪುರಸ್ಕಾರ, 1999ರಲ್ಲಿ ಜಾನಪದ ಸಂಶೋಧನಾ ಕೇಂದ್ರ ಇವರಿಂದ ದೊಡ್ಡಾಟದ ಗೌರವ ಪ್ರಶಸ್ತಿ, 2001ರಲ್ಲಿ ಕರ್ನಾಟಕ ಜಾನಪದ ಪರಿಷತ್ತು ಬೆಂಗಳೂರು ಇವರಿಂದ ಜಾನಪದ ಲೋಕ ಪ್ರಶಸ್ತಿ ಹಾಗೂ ಇನ್ನೂ ಹಲವಾರು ಕಡೆಯಿಂದ ವಿಶೇಷ ಪುರಸ್ಕಾರಗಳನ್ನು ಪಡೆದಿದೆ. 2005ಕರ್ನಾಟಕ ಜಾನಪದ ಹಾಗೂ ಯಕ್ಷಗಾನ ಅಕಾಡೆಮಿಯಿಂದ ಪುರಸ್ಕಾರವನ್ನೂ ಪಡೆದಿದ್ದಾರೆ. ಹಾಗೂ ಇದರಲ್ಲಿ ಮೂರು ವರ್ಷಗಳಕಾಲ ಸದಸ್ಯರಾಗಿಯೂ ಗೌರವ ಸಂಪಾದಿಸಿದ್ದಾರೆ.

ಈ ತಂಡದ ಮುಖ್ಯ ಕಲಾವಿದರು: ಶ್ರೀಮತಿ ಸಕ್ರೆವ್ವಾ ಪಾತ್ರೋಟ, ಭೀಮಪ್ಪ ಗೋವಿಂದಪ್ಪ ಮಾಯಣ್ಣವರ, ಶಿವಪ್ಪ ಅಪ್ಪಯ್ಯ ಸಾವಳಗಿ, ಬೀರಪ್ಪ ಹುಚ್ಚಪ್ಪ ಗೋಟೂರಿ, ಅಶೋಕ ಸಿದ್ಧಪ್ಪ ಪಾಟೀಲ, ಚಂಪಣ್ಣ ಬಾಳಪ್ಪ ಸನದಿ, ಲಕ್ಕನಗೌಡ ಅಪರೇಗೌಡ ಪಾಟೀಲ, ರಾಯಗೌಡ ಅಪರೇಗೌಡ ಪಾಟೀಲ, ಬಾಬು ಭರಮಪ್ಪ ಮಾದರ, ಶ್ರೀಮತಿ ಕೆಂಪವ್ವ ಹರಿಜನ ಮುಂತಾದವರು.

ಮುಖ್ಯಸ್ಥರ ವಿಳಾಸ: ಶ್ರೀಮತಿ ಸಕ್ರೆವ್ವ ಎಲ್ಲಪ್ಪ ಪಾತ್ರೋಟ, ನಂ. 78, 'ಅದಿತಿ' ಅನ್ನಪೂರ್ಣವಾಡಿ, ಬಾಕ್ಸಾಯಿಟ್ ರೋಡ್, ಬೆಳಗಾವಿ–10 ಫೋ: 0831 2401699


# ಬೆಳಗಾವಿ ನಗರದ ವಾದ್ಯಗಾರರು



## ಮಹಾಬಳೇಶ್ವರ ಸಾಬಣ್ಣವರ, ಬೆಳಗಾವಿ

ವಿಶ್ವಕರ್ಮಸ್ಥರ ಮನೆತನದ ಇವರು ಬೆಳಗಾವಿ ಭಾಗದ ಒಬ್ಬ ಪ್ರಸಿದ್ಧ ತಬಲಾ ವಾದಕ. ಜನಪದ, ವೃತ್ತಿ ಹಾಗೂ ಹವ್ಯಾಸಿ ರಂಗಭೂಮಿಯ ಮತ್ತು ಲಘು ಹಾಗೂ ಶಾಸ್ತ್ರೀಯ ಸಂಗೀತಕ್ಕೂ ಸೈ ಎನ್ನುವ ಪ್ರತಿಭಾನ್ವಿತ ಕಲಾವಿದ. ಅವರ ತಂದೆಯವರಿಂದಲೇ ಬಳುವಳಿಯಾಗಿ ಬಂದ ತಬಲಾ ವಾದನ ಕಲೆ ಬೆಳಗಾವಿಯ ಸಂಗೀತ ಹಾಗೂ ರಂಗಕ್ಷೇತ್ರದ ಎಲ್ಲರನ್ನೂ ರಂಜಿಸುತ್ತಿದೆ. ಬೆಳಗಾವಿಯ ಮತ್ತೊಬ್ಬ ಶ್ರೇಷ್ಠ ಹಿರಿಯ ತಬಲಾ ವಾದಕ ಬಂಡು ಕುಲಕರ್ಣಿಯವರನ್ನು ಗುರು ಸಮಾನ ದೃಷ್ಟಿಯಿಂದ ಕಾಣುವ ಸಾಬಣ್ಣವರು ಶಹಪೂರನಲ್ಲಿ ಡಾ. ರಾಜಕುಮಾರ ಅಭಿಮಾನಿಗಳ ಸಂಘದ ಕಾರ್ಯದರ್ಶಿಯಾಗಿಯೂ ಹಾಗೂ ಅಲ್ಲಿಯ ಹನುಮಂತದೇವರ ಗುಡಿಯ ಪೂಜಾರಿಯಾಗಿಯೂ ಸೇವೆ ಸಲ್ಲಿಸುತ್ತಿದ್ದಾರೆ. ಇವರು 2003ರಲ್ಲಿ ಕರ್ನಾಟಕ ನಾಟಕ ಅಕಾಡೆಮಿ ಬೆಳಗಾವಿಯಲ್ಲಿ ಹಮ್ಮಿಕೊಂಡಿದ್ದ ವೃತ್ತಿ ರಂಗಭೂಮಿಯ ನಾಟಕೋತ್ಸವದಲ್ಲಿ ತಬಲಾ ವಾದನದ ಸೇವೆಗೈದು ಸನ್ಮಾನವನ್ನು ಗಿಟ್ಟಿಸಿಕೊಂಡಿದ್ದಾರೆ. ಅದರಂತೆ 2009 ರಲ್ಲಿ, ದಾವಣಗೆರೆಯಲ್ಲಿ ನೆರವೇರಿದ ಕೆ. ಬಿ. ಆರ್. ಡ್ರಾಮಾ ಕಂಪನಿಯ ಅಮೃತ ಮಹೋತ್ಸವ ಸಂದರ್ಭದಲ್ಲೂ ಕೈಕೊಂಡ ತಬಲಾ ಸೇವೆಗೆ ಪುರಸ್ಕೃತರಾಗಿದ್ದಾರೆ, 'ಬಿ' ಗ್ರೇಡ್ ಆಕಾಶವಾಣಿ ಕಲಾವಿದರಾದ ಮಹಾಬಳೇಶ್ವರ ಇದೇ ಸಾಲಿನಲ್ಲಿ ಬೆಳಗಾವಿಯ ಹೊಂಬೆಳಕು ಸಾಂಸ್ಕೃತಿ ಸಂಘ ದಿಂದಲೂ ವಿಶೇಷ ರೀತಿಯಲ್ಲಿ ಸನ್ಮಾನಿತರಾಗಿದ್ದಾರೆ.

ವಿಳಾಸ: ಮಹಾಬಳೇಶ್ವರ ಸಾಬಣ್ಣವರ, ತಬಲಾವಾದಕರು, ಶಹಪೂರ. ಬೆಳಗಾವಿ.
ಮೊ: 9449202709



## **ವಾಮನ್ ವಾಗೂಕರ,** ಬೆಳಗಾವಿ

ಹಾರ್ಮೋನಿಯಂ ವಾದಕ ವಾಮನ್ ವಾಗೂಕರ್ ಕೂಡ ಸಾಬಣ್ಣವರಹಾಗೆ ಜನಪದ, ವೃತ್ತಿ ಹಾಗೂ ಹವ್ಯಾಸಿ ಮತ್ತು ಲಘು, ಶಾಸ್ತ್ರೀಯ ಸಂಗೀತಕ್ಕೂ ಹಾರ್ಮೋನಿಯಂ ಸಾಥ ನಿಡುತ್ತ ಬಂದವರು. ಇವರ ತಂದೆ ಯಶವಂತರಾವ ವಾಗೂಕರವರೂ ಪ್ರಸಿದ್ಧ ಹಾರ್ಮೋನಿಯಂ ವಾದಕರಾಗಿದ್ದರು. ಭಜನೆ ಪದ ಹಾಡುವ ಹಾಗೂ ಅವುಗಳಿಗೆ ಹಾರ್ಮೋನಿಯಂ ಸಾಥ ನೀಡುವ ಪರಿ ಅವರ ಮಗ ವಾಮನಗೂ ಕೂಡ ಹರಿದು ಬಂದಿತ್ತು. ಹೀಗಾಗಿ ಬಾಲ್ಯದಿಂದಲೇ ವಾಮನ್ ಒಳ್ಳೆ ಹಾಡುಗಾರರೂ ಹೌದು.

ವಾಮನ್ ಬೆಳಗಾವಿ ಹಾಗೂ ಸುತ್ತುಮುತ್ತಲ ಭಾಗದಲ್ಲೆಲ್ಲ ರಂಗಭೂಮಿಯ ಹಾಗೂ ಸಂಗೀತದ ಯಾವುದೇ ಕಾರ್ಯಕ್ರಮವಿದ್ದರೂ ಹಾರ್ಮೋನಿಯಂ ಸಾಥಿಗೆ ಇವರು ಇದ್ದೇ ಇರುತ್ತಾರೆ. ಬೆಳಗಾವಿಯ ಹಿರಿಯ ರಂಗಜೀವಿ ಡಾ. ಏಣಿಗಿ ಬಾಳಪ್ಪನವರ ಆಸೆಯಂತೆ ಸುಮಾರು ಎರಡು ನೂರಕ್ಕೂ ಮಿಕ್ಕಿ ರಂಗ ಗೀತೆಗಳಿಗೆ ಇವರು ತಬಲಾ ಸಾಥ ನೀಡಿದ್ದಾರೆ. ಒಟ್ಟಾರೆ, ಬೆಳಗಾವಿ ಹಾಗೂ ಧಾರವಾಡ ಭಾಗದಲೂ ವಾಗೂಕರ್ ಒಳ್ಳೆಯ ಹಾರ್ಮೋನಿಯಂ ವಾದಕರೆಂದು ಪ್ರಸಿದ್ಧರಾಗಿದ್ದಾರೆ. ಆಕಾಶವಾಣಿಯಲ್ಲೂ ಇವರ ಹಾರ್ಮೋನಿಯಂ ಸೇವೆ ಸಂದಿದೆ.

ವಿಳಾಸ: ವಾಮನ್ ವಾಗೂಕರ, ಹಾರ್ಮೋನಿಯಂ ವಾದಕರು, ಆಚಾರ್ಯ ಗಲ್ಲಿ, ಬೆಳಗಾವಿ. ಮೊ: 9342939355

# ಬೈಲಹೊಂಗಲ ತಾಲೂಕಿನಲ್ಲಿಯ

## ಜಾನಪದ ರಂಗ ತಂಡಗಳು

1) ಪರಪ್ಪ ನಂದೆಣ್ಣವರ ಪಾರಿಜಾತ ತಂಡ ಜಾಲಿಕೊಪ್ಪ. ತಾ: ಬೈಲಹೊಂಗಲ

1) ದುಂಡಪ್ಪ ಬೆಲ್ಲದವರ ಸಂಗೊಳ್ಳಿ ರಾಯಣ್ಣ ನಾಟಕ ಸಂಘ ಗದ್ದಿ ಕರವಿನಕೊಪ್ಪ ತಾ: ಬೈಲಹೊಂಗಲ

2) ಸುಭಾಷ ಪೂಜೇರಿಯವರ ಬಯಲಾಟದ ತಂಡ, ದೇವಲಾಪೂರ. ತಾ: ಬೈಲಹೊಂಗಲ

3) ಮಲ್ಲಮ್ಮ ಮ್ಯಾಗೇರಿಯವರ ಪಾರಿಜಾತ ತಂಡ, ತಾ: ಬೈಲಹೊಂಗಲ.

4) ಫಕೀರಪ್ಪ ನಾಗಮೇತ್ರಿಯವರ ಪಾರಿಜಾತ ತಂಡ, ನಾಗನೂರ, ತಾ: ಬೈಲಹೊಂಗಲ

5) ಪೌರಾಣಿಕ ನಾಟಕ ಮಂಡಳಿ, ಆನಿಗೋಳ. ತಾ: ಬೈಲಹೊಂಗಲ

6) ಜಾನಪದ ಸಂಶೋಧನಾ ಕೇಂದ್ರ, ಕಿತ್ತೂರು. ತಾ: ಬೈಲಹೊಂಗಲ

## ಜಾನಪದ ಸಂಶೋಧನಾ ಕೇಂದ್ರ

### ಕಿತ್ತೂರು. ತಾ: ಬೈಲಹೊಂಗಲ

19090 ರ ಸುಮಾರಿಗೆ ಬೈಲಹೊಂಗಲ ತಾಲೂಕು ಕಿತ್ತೂರಿನಲ್ಲಿ ಶ್ರೀ ಬಸವಲಿಂಗಯ್ಯ ಹಿರೇಮಠ ಹಾಗೂ ಅವರ ಪತ್ನಿ ವಿಶ್ವೇಶ್ವರಿ ಹಿರೇಮಠ ಇವರಿಂದ ಜಾನಪದ ಸಂಶೋಧನಾ ಕೇಂದ್ರ ಹುಟ್ಟಿಕೊಂಡಿತು. ಜನಪರ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಈ ಸಂಸ್ಥೆ 1995 ರಿಂದ 1998ರ ವರೆಗೆ ಅಂದರೆ, ಎಡೆಬಿಡದೆ ಮೂರು ವರ್ಷಗಳ ಕಾಲ 'ಪಾರಿಜಾತ ಉತ್ಸವ' 'ಸಣ್ಣಾಟದ ಉತ್ಸವ' ಹಾಗೂ 'ಸೋಗುಗಳ ಉತ್ಸವ' ಗಳನ್ನು ಮಾಡಿ ರಾಜ್ಯ ಮಟ್ಟದಲ್ಲಿ ತನ್ನದೇ ಆದ ಛಾಪನ್ನು ಮೂಡಿಸಿದೆ. ಮುಂದೆ ಈ ಸಂಸ್ಥೆ ಧಾರವಾಡಕ್ಕೆ ಸ್ಥಳಾಂತರಿತವಾಗಿದೆ.

# ನಟರು, ನಾಟಕಕಾರರು ಹಾಗೂ ರಂಗ ಕರ್ಮಿಗಳು




## ಡಾ. ಏಣಗಿ ಬಾಳಪ್ಪ, ಏಣಗಿ

ಬೈಲಹೊಂಗಲ ತಾಲೂಕು ಏಣಗಿ ಗ್ರಾಮದ ಬಾಳಪ್ಪನವರು ತಮ್ಮ 8ನೇ ವರ್ಷಕ್ಕಾಗಲೇ ರಂಗ ಪ್ರವೇಶ ಮಾಡಿ, 12ನೇ ವಯಸ್ಸಿನಲ್ಲಿ ನಟನಾಗಿ, 25 ನೇ ವಯಸ್ಸಿಗೆ ಕಂಪನಿ ಮಾಲೀಕರಾಗಿ ಮೆರೆದ ಇವರು ಸಂಗಡಿಗರೊಂದಿಗೆ 1941 ರಲ್ಲಿ ಪ್ರಾರಂಭವಾದ ವೈಭವಶಾಲಿ ನಾಟ್ಯ ಸಂಘ ಸ್ಥಾಪಿಸಿಯಾದನಂತರ 1942 ರಲ್ಲಿ ಕಲಾವೈಭವ ನಾಟ್ಯ ಸಂಘ ಬೆಳಗಾವಿಯ ಎಂಬ ಹೆಸರಿನಿಂದ ಅದ್ದೂರಿಯ ಸಂಗೀತ ನಾಟಕ ಮಂಡಳಿಯನ್ನು ಹುಟ್ಟು ಹಾಕಿ ಇಡೀ ಕರ್ನಾಟಕದ ತುಂಬೆಲ್ಲ ಕೀರ್ತಿ ಪತಾಕೆಯನ್ನು ಹಾರಿಸಿದರು. ಇವರಾಡುತ್ತಿದ್ದ ಕಿತ್ತೂರು ರುದ್ರಮ್ಮ ಹಾಗೂ ಕಿತ್ತೂರು ಚನ್ನಮ್ಮ ನಾಟಕದಲ್ಲಿ ಸ್ವತಃ ಬಾಳಪ್ಪನವರೇ ರುದ್ರಮ್ಮ, ಚನ್ನಮ್ಮನ ಪಾತ್ರದಲ್ಲಿ ಕಾಣಿಸಿಕೊಂಡು ಪ್ರೇಕ್ಷಕರನ್ನು ರಂಜಿಸಿದ್ದರು. ಮುಂದೆ ಇವರ ನಾಟಕ ಕಂಪನಿ ಕ್ಷೀಣಿಸಿ ಮತ್ತೆ 1947-48ರ ಹೊತ್ತಿಗೆ ಮೈ ಕೊಡವಿಕೊಂಡೆದ್ದಿತು. ಇಲ್ಲಿ ಕ್ರಾಂತಿ ಪುರುಷ ಬಸವಣ್ಣ, ಅಸ್ಪೃಶ್ಯತಾ ನಿವಾರಣೆ, ಕುರುಕ್ಷೇತ್ರ, ರಕ್ತರಾತ್ರಿ, ಗೋರಾ ಕುಂಬಾರ, ಚಿತ್ರಾಂಗದಾಮುಂತಾದ ಪೌರಾಣಿಕ ನಾಟಕಗಳೊಂದಿಗೆ ವಧುವರ, ಕುಂಕುಮ, ದೇವರಮಗು, ಸಂಪತ್ತಿಗೆ ಸವಾಲ್ ಮುಂತಾದ ಸಾಮಾಜಿಕ ನಾಟಕಗಳನ್ನೂ ಬಹಳ ಯಶಸ್ವಿಯಾಗಿ ಪ್ರಯೋಗಿಸಿತು.

ಬಾಳಪ್ಪನವರ ಈ ಕಂಪನಿಯಲ್ಲಿ ಶಿರೂರ ಗಂಗಯ್ಯ, ಪಂಚಯ್ಯ ಸ್ವಾಮಿ ಮೆಳ್ಳಿಗೇರಿ, ಗುರುಸಿದ್ಧಯ್ಯ ಸುತಗಟ್ಟಿ, ವಿರುಪಾಕ್ಷಪ್ಪ ಬಳ್ಳಾರಿ, ಶಾಂತೇಶ ಡಂಬಳ, ಸದಾಶಿವ ಬ್ರಹ್ಮಾವರ, ಸಿರ್ಶಿ ಪೇಂಟರ್, ರಾಯಚೂರ ಪೇಂಟರ್, ಕಲಾದಗಿ ಪೇಂಟರ್, ಚನಬಸಯ್ಯ ಕರ್ಲವಾಡ, ಲಕ್ಷ್ಮೀ ಬಾಯಿ ಬಳ್ಳಾರಿ, ಸುಭದ್ರಮ್ಮ ಮನ್ಸೂರ, ಸುಮಿತ್ರಾ ಕುಂದಾಪೂರ, ಸುಶೀಲಾ ಕುಂದಾಪೂರ ಮುಂತಾದ ನಟ ನಟಿಯರು ಕಲಾಸೇವೆಗೈದಿದ್ದಾರೆ. ರಾಯಚೂರ ಪೇಂಟರ್, ಕಲಾದಗಿ ಪೇಂಟರ್, ಸಿರ್ಶಿ ಪೇಂಟರ್ ರಂಗಚಿತ್ರ ಕಲಾವಿದರಾಗಿಯೂ, ಉತ್ತಮ ನಟರಾಗಿಯೂ ಸಾಧನೆಗೈದಿದ್ದರು. ಬಾಬಯ್ಯ ಸ್ವಾಮಿ ಅಮ್ಮಣಗಿ, ಜಂಪಣ್ಣ ಮಾಸ್ತರ್ ಕಮತಗಿ ಇವರೀರ್ವರೂ ಅನೇಕ ವರ್ಷಗಳವರೆಗೆ ಹಾರ್ಮೋನಿಯಂ ಸೇವೆ ಗೈದರೆ, ಮಹಾಲಿಂಗಪ್ಪ ಜಕ್ಕಲಿ ತಬಲಾ ವಾದನದ ಮೂಲಕ ಕಲಾ ಸೇವೆ ಮಾಡಿದ್ದಾರೆ. ಬಾಳಪ್ಪನವರ ನಿಸ್ಪೃಹ ರಂಗ ಸೇವಾ ಮನೋಭಾವನೆಯನ್ನು ಮೆಚ್ಚಿಕೊಂಡು 1973 ರಲ್ಲಿ ಕರ್ನಾಟಕ ರಾಜ್ಯ ಪ್ರಶಸ್ತಿ, 1971 ರಲ್ಲಿ ಕರ್ನಾಟಕ ನಾಟಕ ಅಕಾಡೆಮಿಯ ಪ್ರಶಸ್ತಿ, 1978ರಲ್ಲಿ ಕರ್ನಾಟಕ ಸಾಹಿತ್ಯ ಪರಿಷತ್ ಪ್ರಶಸ್ತಿ, ಪಡೆದಾದಮೇಲೆ 1991 ರಿಂದ 1995

ರವರೆಗೆ ಕರ್ನಾಟಕ ನಾಟಕ ಅಕಾಡೆಮಿ ಸದಸ್ಯತ್ವ, 1992 ರಿಂದ 1994ರವರೆಗೆ ಭಾರತ ಸಂಸ್ಕೃತಿ ಅಕಾಡೆಮಿ ಸದಸ್ಯತ್ವ, 1972 ರಿಂದ ಮಲಪ್ರಭಾ ಶಿಕ್ಷಣ ಸಮಿತಿ ಅಧ್ಯಕ್ಷತೆಯನ್ನೂ ವಹಿಸಿದ್ದರು. 1998ರಲ್ಲಿ ಮಹಾರಾಷ್ಟ್ರ ಬಸವ ಸಮಿತಿಯಿಂದ ಬಸವ ತತ್ವ ಭೂಷಣ ಪದವಿ, 1979ರಲ್ಲಿ ನಾಟ್ಯ ಗಂಧರ್ವ ಪದವಿ, 1995 ರಲ್ಲಿ ಕರ್ನಾಟಕ ನಾಟಕ ಅಕಾಡೆಮಿಯ ಪ್ರಶಸ್ತಿ ಹಾಗೂ ಗುಬ್ಬಿ ವೀರಣ್ಣ ಪ್ರಶಸ್ತಿ, 2005ರಲ್ಲಿ ನಾಡೋಜ ಗೌರವ ಪ್ರಶಸ್ತಿ, 2006ರಲ್ಲಿ ಕರ್ನಾಟಕ ವಿ. ವಿ. ಯಿಂದ ಗೌರವ ಡಾಕ್ಟರೇಟ್ ಪದವಿ ಮುಂತಾದವುಗಳು ಸಂದಿವೆ.

ವಿಳಾಸ : ಡಾ. ಏಣಗಿ ಬಾಳಪ್ಪ, ಏಣಗಿ. ತಾ: ಸೌದತ್ತಿ, ಜಿ: ಬೆಳಗಾವಿ.
ದೂ: 0831–40946191 ಮೊ : 099001 48334



## ಬಸಲಿಂಗಯ್ಯ ಹಿರೇಮಠ, ಬೈಲೂರು

ಬೈಲಹೊಂಗಲ ತಾ॥ ಬೈಲೂರಿನಲ್ಲಿ ಹುಟ್ಟಿ ಕಿತ್ತೂರಿನಲ್ಲಿ ಬೆಳೆದ ಇವರು ಐದನೇ ವರ್ಷದಿಂದಲೇ ಹಾರ್ಮೋನಿಯಂ ಬಾರಿಸುತ್ತ ಭಜನಾ ಸಂಗೀತ ರೂಢಿಸುತ್ತ ಹಳ್ಳಿಹಳ್ಳಿ ಸಂಚರಿಸಿದ್ದರು. ಮುಂದೆ ಪಾರಿಜಾತ, ಸಂಗ್ಯಾ ಬಾಳ್ಯಾ ಜಾನಪದ ಆಟಗಳಲ್ಲೂ ಹಿಮ್ಮೇಳಕ್ಕೆ ಸಾಥ ಕೊಟ್ಟಿದ್ದಾರೆ. ಶಾಲಾ ಕಾಲೇಜು ರಂಗದಲ್ಲೂ ರಂಗ ಚಟುವಟಿಕೆಗಳಲ್ಲಿ ಸಕ್ರಿಯ ಪಾತ್ರವಹಿಸಿದ್ದರು. ಜಾನಪದ ಎಮ್.ಎ. ಪದವೀಧರರಾದ ಇವರು ಸಂಗೀತದಲ್ಲಿ ಸೀನಿಯರ್ ಹೊಂದಿ ನೀನಾಸಂ ಶಿಕ್ಷಣವನ್ನೂ ಪಡೆದಿದ್ದಾರೆ. 1984 ರಿಂದ 87ರ ವರೆಗೆ ಜನಪದ ರಂಗ ಭೂಮಿಯ ಎಲ್ಲ ಚಟುವಟಿಕೆಗಳಲ್ಲಿ ಹೆಸರು ಮಾಡಿದರು. ಜೊತೆಗೆ ಹವ್ಯಾಸಿ ರಂಗ ಚಟುವಟಿಕೆಗಳಲ್ಲಿ ತೊಡಗಿದರು. ನೀನಾಸಂ ತಿರುಗಾಟದಲ್ಲಿ ನಾನೂರಕ್ಕೂ ಹೆಚ್ಚು ನಾಟಕಗಳಲ್ಲಿ ಅಭಿನಯಸೇವೆ ಸಲ್ಲಿಸಿದ್ದಾರೆ. ಹಲವಾರು ನಾಟಕಗಳಿಗೆ ಸಂಗೀತ ನಿರ್ದೇಶನ ಮಾಡಿದ್ದಾರೆ. ಹಲವಾರು ಜಾನಪದ ರಂಗೋತ್ಸವಗಳನ್ನೂ ಮಾಡಿದ್ದಾರೆ. 1997ರಲ್ಲಿ ಕರ್ನಾಟಕ ಜಾನಪದ ಅಕಾಡೆಮಿಯ ಸದಸ್ಯರಾಗಿಯೂ ಸೇವೆ ಸಲ್ಲಿಸಿದ್ದಾರೆ. 1997 ನವೆಂಬರ್‌ನಲ್ಲಿ 'ಬಸವಾ ಇಂಟರ್ ನ್ಯಾಶನಲ್ ಫೌಂಡೇಶನ್' ಲಂಡನ್ ಇವರು ಏರ್ಪಡಿಸಿದ ಕಾರ್ಯಕ್ರಮಕ್ಕಾಗಿ ಒಂದು ತಿಂಗಳ ಲಂಡನ್ ಪ್ರವಾಸ ಕೈಕೊಂಡಿದ್ದಾರೆ.

ತಮ್ಮ ಈ ಸಂಶೋಧನ ಕೇಂದ್ರದಿಂದ 'ಸೋಗುಗಳ ಉತ್ಸವ' ಮುಂತಾದವುಗಳನ್ನು ಏರ್ಪಡಿಸಿದ್ದಾರೆ. ಡಾ. ಕಲಬುರ್ಗಿಯವರ ಖರೆ ಖರೆ ಸಂಗ್ಯಾಬಾಳ್ಯಾ ನಾಟಕದ ಇಪ್ಪತ್ತೈದು ಪ್ರಯೋಗಗಳನ್ನೂ ರಾಜ್ಯದಾದ್ಯಂತ ಪ್ರದರ್ಶಿಸಿದ್ದಾರೆ. ಲಾವಣಿ, ಗೀಗೀ ಉತ್ಸವವನ್ನು ಏರ್ಪಡಿಸಿ ವಿದ್ವಾಂಸರಿಂದ ವಿಚಾರ ಸಂಕಿರಣ ನಡೆಸಿದ್ದಾರೆ. ಇದುವರೆಗೆ ಹಲವಾರು ಧ್ವನಿಸುರುಳಿಗಳನ್ನು ಹೊರತಂದಿದ್ದಾರೆ. ಏಳು ರಂಗ ಗ್ರಂಥಗಳು ಪ್ರಕಟಗೊಂಡಿವೆ. ಕರ್ನಾಟಕ ಜಾನಪದ ಪ್ರವರ್ಧಕ, ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ,

ಅತ್ತಿಮಬ್ಬೆ ಪ್ರಶಸ್ತಿ, ಅಭಿನವ ಶರೀಫ, ಕಂಚಿನ ಕಂಠದ ಗಾಯಕ, ಗಾನ ಕೋಕಿಲೆ, ಗಾನ ಗಾರುಡಿಗ, ಜಾನಪದ ಶ್ರೀ, ಸತ್ಯಪ್ಪ ಶರಣ, ಕನ್ನಡ ಜ್ಯೋತಿ ಮುಂತಾದ ಪ್ರಶಸ್ತಿಗಳು ಬಸಲಿಂಗಯ್ಯನವರಿಗೆ ಲಭಿಸಿದ್ದು ಅಭಿಮಾನದ ಸಂಗತಿ.


ವಿಳಾಸ: ಬಸಲಿಂಗಯ್ಯ ಹಿರೇಮಠ. ಅಧ್ಯಕ್ಷರು ಜಾನಪದ ಸಂಶೋಧನ ಕೇಂದ್ರ, ಏಳನೇ ಅಡ್ಡ ರಸ್ತೆ ಸಪ್ತಾಪೂರ, ಹಳಿಯಾಳ ರಸ್ತೆ, ಧಾರವಾಡ-1 ಮೊ: 944831525 ದೂ: 0836-2779402



## ವಿಶ್ವೇಶ್ವರಿ ಹಿರೇಮಠ, ಕಿತ್ತೂರು

ಬಸಲಿಂಗಯ್ಯ ಹಿರೇಮಠವರು ತಮ್ಮ ರಂಗ ಸ್ನೇಹಿತೆಯನ್ನೇ ಜೀವನ ಸಂಗಾತಿಯನ್ನಾಗಿ ರೂಪಿಸಿ ಕೊಂಡದ್ದು ವಿಶ್ವೇಶ್ವರಿಯವರನ್ನೇ ! ಇವರೂ ಕೂಡ ಪತಿಯ ರಂಗ ಸೇವೆಗೆ ಸದಾ ಅಣಿಯಾಗಿದ್ದುಕೊಂಡೇ ಸಾಧಿಸಿದ್ದು ಅಪ್ರತಿಮವೆಂದೇ ಹೇಳಬಹುದು. ಇವರೂ ಕೂಡ ಜಾನಪದ ಎಮ್.ಎ. ಪದವೀಧರೆ. ನೀನಾಸಂ ರಂಗ ಶಿಕ್ಷಣವನ್ನೂ ಪಡೆದವರಾಗಿದ್ದಾರೆ. ರಂಗ ನಿರೂಪಣೆಯೊಂದಿಗೆ ಅಭಿನಯ ಕಲೆಯನ್ನೂ ವಿಶೇಷವಾಗಿ ರೂಢಿಸಿಕೊಂಡಿದ್ದಾರೆ.

ವಿಳಾಸ : ಜಾನಪದ ಸಂಶೋಧನ ಕೇಂದ್ರ, ಏಳನೇ ಅಡ್ಡರಸ್ತೆ ಸಪ್ತಾಪೂರ, ಹಳಿಯಾಳ ರಸ್ತೆ, ಧಾರವಾಡ-1 ಮೊ: 944831525 ದೂ: 0836-2779402




## ಡಾ. ಬಸವರಾಜ ಮಲಶೆಟ್ಟಿ, ತಿಗಡೊಳ್ಳಿ

1949ರಲ್ಲಿ ಬೈಲಹೊಂಗಲ ತಾಲೂಕು ತಿಗಡೊಳ್ಳಿಯಲ್ಲಿ ಜನಿಸಿದ ಇವರು ಕರ್ನಾಟಕ ವಿಶ್ವ ವಿದ್ಯಾಲಯದಿಂದ 1978 ರಲ್ಲಿ 'ಉತ್ತರ ಕರ್ನಾಟಕದ ಬಯಲಾಟಗಳು' ಎಂಬ ವಿಷಯವಾಗಿ ಪಿ.ಎಚ್.ಡಿ ಪದವಿ ಪಡೆದ ಜಾನಪದ ತಜ್ಞ, 10 ವರ್ಷದ ಎಳೆತನದಲ್ಲಿಯೇ ಇವರು ನಿಜಗುಣ ಶಿವಯೋಗಿ ಸಣ್ಣಾಟಕ್ಕೆ ಹಾರ್ಮೋನಿಯಂ ನುಡಿಸಿದ್ದರು. ಕಾಲೇಜಿನಲ್ಲಿ ಹಲವು ನಾಟಕ, ದೊಡ್ಡಾಟಗಳನ್ನು ಪ್ರದರ್ಶಿಸಿದ್ದರು. ಲಂಕೇಶರ 'ನನ್ನ ತಂಗಿಗೊಂದು ಗಂಡು ಕೊಡಿ' ಚಂಪಾ ಅವರ 'ಗೋಕರ್ಣದ ಗೌಡಶಾನಿ' ನಾಟಕದಲ್ಲಿಯೂ ಅಭಿನಯಿಸಿದ್ದರು. ಆಕಾಶವಾಣಿಯಲ್ಲೂ ಸುಮಾರು ಇಪ್ಪತ್ತು ವರ್ಷದಿಂದ ನಾಟಕಾಭಿನಯ ಮಾಡಿದ್ದಾರೆ. 1988 ರಲ್ಲಿ 'ಗಿರಿಜಾ ಕಲ್ಯಾಣ' ದೊಡ್ಡಾಟವನ್ನು ರಚಿಸಿ, ನಿರ್ದೇಶಿಸಿ, ರಾಜ್ಯ ಮಟ್ಟದ ಜಾನಪದ ಸಮ್ಮೇಳನಗಳಲ್ಲಿ, ಉತ್ಸವಗಳಲ್ಲಿ ಹಾಗೂ ಮುಂಬೈ, ಬೆಂಗಳೂರು ಮಾಹಾನಗರಗಳಲ್ಲಿ ಒಟ್ಟು ನೂರಾರು ಪ್ರಯೋಗಗಳಲ್ಲಿ ಪ್ರದರ್ಶಿತಗೊಂಡಿದೆ.

ಮಹಾಕವಿ ಹರಿಹರನ ಕೃತಿಗಳ ಪದಕೋಶ, ಉತ್ತರ ಕರ್ನಾಟಕದ ಜಾನಪದ ವಾದ್ಯಗಳು, ಪ್ರಾಚೀನ ಕರ್ನಾಟಕದಲ್ಲಿ ನಾಟಕ ಪರಂಪರೆ, ಶರಣರು ಮತ್ತು ಕಾಯಕ, ಬಳ್ಳಾರಿ ಜಿಲ್ಲೆಯ ಜಾನಪದ ಕಥೆಗಳು, ಜೋಳದರಾಶಿ ದೊಡ್ಡನಗೌಡರು, ಉತ್ತರ ಕರ್ನಾಟಕದ ರಂಗ ಗೀತೆಗಳು, ಉತ್ತರ ಕರ್ನಾಟಕದ ರಂಗಭೂಮಿ ಮುಂತಾದ ನಲವತ್ತು ಕೃತಿಗಳನ್ನು ಪ್ರಕಟಿಸಿದ್ದಾರೆ. ಹಲವು ಪ್ರಶಸ್ತಿಗಳೂ ಸಂದಿವೆ. ಗುಬ್ಬಿ ವೀರಣ್ಣ ಪ್ರಶಸ್ತಿ ಸಮಿತಿಯ ಸದಸ್ಯರಾಗಿಯೂ ಇದ್ದ ಇವರು ಕರ್ನಾಟಕ ನಾಟಕ ಅಕಾಡೆಮಿಯ ಸದ್ಯರಾಗಿಯೂ ಸೇವೆ ಸಲ್ಲಿಸಿದ್ದು ಸದ್ಯ ಹೊಸಪೇಟೆ ನಿವಾಸಿಯಾಗಿದ್ದಾರೆ.

ವಿಳಾಸ: ಡಾ. ಬಸವರಾಜ ಮಲಶೆಟ್ಟಿ 'ನಿನಾದ' ಎರಡನೇ ಮುಖ್ಯರಸ್ತೆ, ಬಸವೇಶ್ವರ ಕಾಲೋನಿ, ಹೊಸಪೇಟೆ– 583201 ದೂ: 08394–227207 ಮೊ: 09741352949



## ಡಾ. ದೇವದಾಸ ಕಳಸದ, ದೊಡ್ಡವಾಡ

ಎಳೆತನದಿಂದಲೇ ಚಿತ್ರಕಲೆಯಲ್ಲಿ ಆಸಕ್ತರಾಗಿದ್ದ ಡಾ. ದೇವದಾಸ ಕಳಸದ ಇವರು–ಸಾಹಿತ್ಯ ಕೃಷಿ, ಚಿತ್ರಕಲೆ, ನಾಟಕ ರಚನೆ, ಅಭಿನಯ, ನಿರ್ದೇಶನ, ಹಾಗೂ ರಂಗಚಮತ್ಕಾರ ಸೃಷ್ಟಿಯನ್ನು ಮೈಗೂಡಿಸಿಕೊಂಡು ಬಂದಿದ್ದಾರೆ. ಶೈಕ್ಷಣಿಕ ಹಾಗೂ ಸಾಮಾಜಿಕ ಸೇವೆಯಲ್ಲೂ ಇವರ ಕೊಡುಗೆ ಅನನ್ಯ.

'ವೃತ್ತಿ ರಂಗ ಸಂಸ್ಕೃತಿ' ಸಂಶೋಧನಾ ಗ್ರಂಥ, 'ಎಡಬಿಂಡಂಗಿ ಒಡಂಬಡಿಕೆಯ ವಿಡಂಬನೆಗಳು' (ಲಲಿತ ಬರಹಗಳ ಸಂಕಲನ) 'ರಂಗ ನೇಪಥ್ಯದ ನಿಸ್ಸೀಮರು' ಹಾಗೂ 'ರಂಗ ಚಿತ್ರಕಲಾ ನಿಪುಣರು' 'ಸಂಘರ್ಷ' (ಐದು ಕಿರು ನಾಟಗಳ ಸಂಗ್ರಹ) ಎಂಬ ಗ್ರಂಥಗಳು ಅಚ್ಚುಕಂಡಿವೆ. 'ಸತಿಪತಿಗಳೊಂದಾದ ಭಕ್ತಿ...' ರಂಗ ನಾಟಕ, 'ರಜತ ದುಂದುಭಿ' ಸ್ಮರಣ ಸಂಚಿಕೆಯ ಸಂಪಾದನಾ ಕಾರ್ಯ ಹಾಗೂ 'ಜನಪದ ರಂಗಾನ್ವೇಷಕ ಮುದೇನೂರು ಸಂಗಣ್ಣನವರು' 'ಬೆಳಗಾವಿ ಜಿಲ್ಲಾ ರಂಗಮಾಹಿತಿ' ಸಂಪಾದನೆ ಮುಂತಾದವುಗಳನ್ನು ಮಾಡಿದ್ದಾರೆ.

ಇವರ ನಾಟಕಗಳು ಮತ್ತು ಭಾಷಣಗಳು ಆಕಾಶವಾಣಿಯಲ್ಲೂ ಬಿತ್ತರಗೊಂಡಿವೆ. ಇವರ ಹಲವಾರು ಸಂಶೋಧನಾ ಲೇಖನಗಳು, ವಿಮರ್ಶೆ, ಕಥೆ, ಕವನ, ಮುಂತಾದವುಗಳು ಪ್ರಜಾವಾಣಿ, ಸುಧಾ, ಮಯೂರ, ಸಂಯುಕ್ತ ಕರ್ನಾಟಕ, ವಿಜಯ ಕರ್ನಾಟಕ, ತುಷಾರ ಮುಂತಾದ ಪತ್ರಿಕೆಗಳಲ್ಲಿ ಪ್ರಕಟಗೊಂಡಿವೆ. ಪ್ರಸ್ತುತ ಇವರು ಧಾರವಾಡದ ನಿವಾಸಿಯಾಗಿದ್ದಾರೆ.

ವಿಳಾಸ: ಡಾ. ದೇವದಾಸ ಕಳಸದ. 137 'ಕಲಾಸಿಂಧು' ರಾಣಿ ಚೆನ್ನಮ್ಮ ನಗರ, ಧಾರವಾಡ_ 580001 ದೂ: 0836 2770066 ಮೊ: 9900521066




## ಡಾ. ಬಾಳಣ್ಣ ಸೀಗಿಹಳ್ಳಿ, ದೇಗಾವಿ

ಬೈಲಹೊಂಗಲ ತಾಲೂಕಿನ ದೇಗಾವಿ ಗ್ರಾಮದವರಾದ ಇವರು ಪ್ರಾಥಮಿಕ ಐದನೇ ತರಗತಿಯಲ್ಲಿದ್ದಾಗಿನಿಂದೇ ರಂಗದ ಗೀಳು ಹಚ್ಚಿಕೊಂಡವರಾಗಿದ್ದರು. ಆ ಸಂದರ್ಭದಲ್ಲಿಯೇ ದೇಗಾವಿಯ ಗೌಡರ ಕುಟುಂಬದವರು ಹಾಗೂ ಇವರ ತಂದೆಯವರಾದ ಸೀಗೀಹಳ್ಳಿ ಬಸಪ್ಪನವರು ಸೇರಿಕೊಂಡು 'ಕಲೋಪಾಸಕ ನಾಟ್ಯ ಸಂಘ' ವನ್ನು ಹುಟ್ಟು ಹಾಕಿ ತನ್ಮೂಲಕ ಮದಲಸಾ, ಜಗಜ್ಯೋತಿ ಬಸವೇಶ್ವರ, ಬಡತನದ ಭೂತ, ಸೌಭಾಗ್ಯಲಕ್ಷ್ಮಿ ಮುಂತಾದ ನಾಟಕಗಳನ್ನು ವೃತ್ತಿ ಮೂಲವಾಗಿ ಆಡುತ್ತಿದ್ದರು. ಅಲ್ಲದೇ ಐರಾವಣ ಮೈರಾವಣ, ಇಂದ್ರಜಿತು ಕಾಳಗ, ಬಬ್ರುವಾಹನ, ಸಿಂಧೂರ ಲಕ್ಷ್ಮಣ ಮುಂತಾದ ದೊಡ್ಡಾಟಗಳನ್ನೂ ಆಖ್ಯಾಯಿನಿಸಿದ್ದರು. ಅವುಗಳಲ್ಲಿ ಬಾಳಣ್ಣನವರೂ ಬಾಲ ಪಾತ್ರಗಳ ಮೂಲಕ ರಂಗ ಪ್ರವೇಶ ಮಾಡಿದ್ದರು. ಮುಂದೆ ಇದೇ ಹವ್ಯಾಸವು ಪ್ರಬಲವಾಗಿ ಮೈಗೂಡಿದ್ದರ ಕಾರಣ 'ಗ್ರಾಮೀಣ ರಂಗ ಚೇತನ' ಎನ್ನುವ ಹವ್ಯಾಸಿ ರಂಗ ಸಂಸ್ಥೆಯನ್ನು ಇವರು ಕಿತ್ತೂರು ಕಾಲೇಜಿನ ಪ್ರಾಧ್ಯಾಪಕರಾಗಿದ್ದಾಗಲೇ ಆಸಕ್ತ ಬಳಗದೊಂದಿಗೆ 1980 ರಲ್ಲಿ ಹುಟ್ಟು ಹಾಕಿದ್ದರು.

ನೀನಾಸಂ ತರಬೇತಿ ಪಡೆದು ಬಂದಾದ ಮೇಲೆ ಇವರು ಜಯತೀರ್ಥ ಜೋಶಿ, ಮಹಮ್ಮದ ಇಕ್ಬಾಲ, ಪುರುಷೋತ್ತಮ ಮುಂತಾದವರೊಂದಿಗೆ ರಂಗ ಶಿಬಿರಗಳನ್ನು ನಡೆಸಿ ಬ್ರೆಕ್ಟ್‌ನ ನಾಟಕಗಳನ್ನು ನಾಡಿನ ಹಲವಾರು ಕಡೆ ಪ್ರಯೋಗಕ್ಕೆ ತಂದು ಹೆಸರು ಮಾಡಿದ್ದರು. ಇವರ 'ಗ್ರಾಮೀಣ ರಂಗ ಚೇತನ'ವು ಹಲವಾರು ಮಕ್ಕಳ ನಾಟಕಗಳನ್ನೂ ಪ್ರದರ್ಶಿಸಿ ಕರ್ನಾಟಕದ ಹ್ಯಾಸಿ ರಂಗಭೂಮಿಯ ಚರಿತ್ರೆಯಲ್ಲಿ ಒಂದು ಗಮನಾರ್ಹ ಸಾಧನೆಯಿಂದ ಗುರುತಿಸಿಕೊಂಡಿದೆ. ಈ ಎಲ್ಲ ಅನುಭವಗಳ ಹಿನ್ನೆಲೆಯಲ್ಲಿ ಡಾ. ಬಾಳಣ್ಣ ಸೀಗಿಹಳ್ಳಿಯವರು ಸುಮಾರು ಇಪ್ಪತ್ತು ವರ್ಷಗಳಿಂದ 'ರಂಗ ತೋರಣ' ಪತ್ರಿಕೆಯ ಸಲಹೆಗಾರರಾಗಿ, ರಂಗ ಲೇಖಕರಾಗಿ, ವಿಮರ್ಶಕರಾಗಿ, ರಂಗ ಸಂಪಾದನಾ ಕಾರ್ಯವನ್ನೂ ಮಾಡಿದ್ದಾರೆ. 'ರಂಗ ಸಂಗಾತಿ' ಎಂಬ ಕಿರು ಗ್ರಂಥವನ್ನೂ ರಚಿಸಿ, ಬೀಬೀ ಇಂಗಳಗಿ ಹಸನ ಸಾಹೇಬರ ರಾಧಾನಾಟವನ್ನೂ ಸಂಪಾದಿಸಿ ಪ್ರಕಟಿಸಿದ ಇವರು ಧಾರವಾಡದ ಜೆ. ಎಸ್.ಎಸ್ ಕಾಲೇಜಿನಲ್ಲಿ ಕನ್ನಡ ಪ್ರಾಧ್ಯಾಪಕರಾಗಿ ಹಲವಾರು ವರ್ಷ ಸೇವೆ ಸಲ್ಲಿಸಿ ಈಗ ಧಾರವಾಡದಲ್ಲಿಯೇ ನಿವೃತ್ತಿ ಜೀವನ ಸಾಗಿಸುತ್ತಿದ್ದಾರೆ.

ವಿಳಾಸ: ಡಾ. ಬಾಳಣ್ಣ ಸೀಗಿಹಳ್ಳಿ, ಕೆ.ಯು.ಡಿ ವೃತ್ತದ ಹತ್ತಿರ. ಶ್ರೀನಗರ. ಭಾವಿಕಟ್ಟಿ ಪ್ಲಾಟ್ ಕ್ರಾಸ್, ಧಾರವಾಡ. ಮೊ: 9481729696

## ವೀರತ್ತಯ್ಯ ಪೂಜಾರ, ಬೆಳವಡಿ




ಮೂಲತಃ ಮಲ್ಲಮ್ಮನ ಬೆಳವಡಿಯವರಾದ ಇವರು ಅಲ್ಲಿಯೇ ಮುಲ್ಕೀ ಪರೀಕ್ಷೆ ಪಾಸು ಮಾಡಿಕೊಂಡಿದ್ದರು. ಅಭಿನಯಾಸಕ್ತರಾದ ಇವರು ತಮ್ಮ ಹದಿನಾರನೇ ವಯಸ್ಸಿಗೆ ಚಿತ್ತರಗಿ ಗಂಗಾಧರ ಶಾಸ್ತ್ರಿಗಳ ನಾಟಕ ಕಂಪನ ಸೇರಿ ಸಣ್ಣಪುಟ್ಟ ಕೈ ಬಾಯ್ ಕೆಲಸಗಳಿಗೆ ಸೆರೆಯಾದರು. ಕಲೆಯ ವಾತಾವರಣದಲ್ಲಿ ಅತ್ಯಂತ ಶ್ರದ್ಧೆಯಿಂದ ಕೆಲಸ ಮಾಡುತ್ತಿದ್ದ ಶ್ರೀ ವೀರತ್ತಯ್ಯನವರಿಗೆ ಪಾತ್ರಧಾರಿ ಪಟ್ಟ ಸಿಗುವುದು ತಡವಾಗಲಿಲ್ಲ. ಅನೇಕ ನಾಟಕಗಳಲ್ಲಿ ಚಿಕ್ಕ ಚಿಕ್ಕ ಪಾತ್ರವಹಿಸಿದರು. ಒಳ್ಳೆ ಹಾಡುಗಾರರೂ ಇವರಾಗಿದ್ದರು. ಆದರೆ ಈ ನಾಟಕ ಕಲೆಗಿಂತ ನಾಟಕ ರಂಗದ ಚಿತ್ರ ಕಲೆಯಲ್ಲಿ ಇವರ ಮನಸ್ಸು ಕೇಂದ್ರೀಕೃತವಾಯಿತು. ಮುಂದೆ ಸಂಗಮೇಶ್ವರ ನಾಟ್ಯ ಸಂಘ ಗುಡಿಗೇರಿ, ಕಲಾವೈಭವ ನಾಟ್ಯ ಸಂಘ ಬೆಳಗಾವಿ, ಮುಂತಾದ ಕಂಪನಿಗಳಲ್ಲಿ ಇದ್ದುಕೊಂಡು ಖ್ಯಾತ ರಂಗಚಿತ್ರ ಕಲಾವಿದರಾದ ಶ್ರೀ ಮರೋಳ ಪೇಂಟರ್ ಹಾಗೂ ಶ್ರೀ ಥೋತ್ರೆ ಪೇಂಟರ್ ಕೈಯಾಳಾಗಿ ದುಡಿದು ಅವರ ಮಾರ್ಗದರ್ಶನದಿಂದ ಇವರೂ ಕೂಡ ಸ್ವತಂತ್ರವಾಗಿ ರಂಗ ದೃಶ್ಯಗಳನ್ನು ಚಿತ್ರಿಸಹತ್ತಿದರು.

ಮುಂದೆ ಸಿದ್ಧರಾಜ ಉಜ್ಜಯಿನಿಮಠವರ ಸಮಾಜವಿಕಾಸ ನಾಟ್ಯ ಸಂಘ ದೊಡವಾಡ ಕಂಪನಿಗೆ ಸೇರಿ ಶ್ರೀ ಮರೋಳ ಪೇಂಟರ್ ನಿರ್ದೇಶನದಂತೆ ಅಲ್ಲಿ ಪೌರಾಣಿಕ ನಾಟಕಗಳಿಗೆ ಉಪಯೋಗವಾಗುವ ಭವ್ಯವಾದ ಒಂದು ಸೆಟ್ಟಿಂಗನ್ನು ಪ್ರಪ್ರಥಮವಾಗಿ ತಯಾರಿಸಿದರು. ಈ ಎಲ್ಲ ದೃಶ್ಯಾವಳಿಗಳೂ ಹೆಚ್ಚು ತೇಜಪೂರ್ಣ ಬಣ್ಣಗಳಿಂದ ಆಕರ್ಷಕವಾಗಿದ್ದವೆನ್ನಲಾಗಿದೆ. ಅದರಂತೆ ಮತ್ತೋರ್ವ ಹೆಸರಾಂತ ದೃಶ್ಯ ಕಲಾವಿದರಾದ ಶ್ರೀ ಮರಿಸ್ವಾಮಿ ಪೇಂಟರ್ ಮೈಸೂರ್ ಇವರೊಂದಿಗೆ ಕೂಡಿಕೊಂಡು ಶ್ರೀ ಸಂಗಮೇಶ್ವರ ನಾಟ್ಯಸಂಘ ಗುಡಿಗೇರಿ ಇವರ ಕಂಪನಿಗೆ ಡಬಲ್ ಫ್ರೇಮ್ ಸ್ಟೇಜ ಸೆಟ್ಟನ್ನು ಆಕರ್ಷಕ ವರ್ಣಗಳಿಂದ ವಿನ್ಯಾಸಗೊಳಿಸಿ ಕೊಟ್ಟಿದ್ದಾರೆ. ಈ ಫ್ರೇಮಂತೂ ಒಳ್ಳೆ ಆಕರ್ಷಕವಾ ಗಿತ್ತೆನ್ನಲಾಗದೆ. ಪೌರಾಣಿಕ ನಾಟಕಗಳಿಗೆ ಸಂಬಂಧಿಸಿ ಇವರು ಸೃಷ್ಟಿಸಿದ ರಾಣೀವಾಸದ ಮಹಲಿನ ದೃಶ್ಯಾವಳಿಯಂತೂ ಬಹಳ ಅದ್ಭುತವಾಗಿತ್ತೆನ್ನಲಾಗಿದೆ. ಇಲ್ಲಿ ಗೋಲ್ಡ ಕಲರಿಗೆ ಬದಲಾಗಿ ಹಳದಿ ಹಾಗೂ ಕಂದು ಬಣ್ಣಗಳನ್ನೇ ಹೆಚ್ಚಾಗಿ ಉಪಯೋಗ ಮಾಡಿದ್ದರೆನ್ನಲಾಗಿದೆ. ವೀರತ್ತಯ್ಯ ಸ್ವಾಮಿಗಳಿಗೆ ಒಂದು ಅಪರೂಪದ ತಿರುವು ಕೊಟ್ಟು ಇವರನ್ನು ಒಬ್ಬ ಕಲಾ ತಪಸ್ವಿಯನ್ನಾಗಿಸಿದ ಶ್ರೀ ಮರೋಳ ಪೇಂಟರ್, ಶ್ರೀ ಥೋತ್ರೆ ಪೇಂಟರ್ ಹಾಗೂ ಶ್ರೀ ಮರಿಸ್ವಾಮಿ ಪೇಂಟರ್‌ಗಳನ್ನು ಸ್ಮರಿಸಿಕೊಳ್ಳುತ್ತಾರೆ.

ಶ್ರೀ ವೀರತ್ತಯ್ಯ ಕೇವಲ ರಂಗಚಿತ್ರ ಕಲೆಗೇ ಮೀಸಲಾಗದೇ ನಾಟಕ ಕಂಪನಿಯನ್ನು ಮಾಡುವ ಹವ್ಯಾಸಕ್ಕೂ ಮುಂದಾದರು. ಈ ಘನ ಕಾರ್ಯಕ್ಕೆ 1971 ರಲ್ಲಿ ಬೆಳಗಾವಿ ಜಿಲ್ಲೆಯ ಬೈಲಹೊಂಗಲ ತಾಲೂಕ ಸಂಪಗಾವಿಯ ಊರವರ ಸಹಕಾರದಿಂದ ವಿಜಯ ವಾಹಿನೀ ನಾಟ್ಯಸಂಘ ಸಂಪಗಾವಿ ಎಂದು ನಾಟಕ ಕಂಪನಿ ಪ್ರಾರಂಭಿಸಿದ್ದರು.

ಆದರೆ, ಅದು ಹಲವಾರು ರೀತಿಯ ತೊಂದರೆಗಳನ್ನು ಅನುಭವಿಸಿ ಬಹಳ ಕಾಲ ಬಾಳದೇ ಇಲ್ಲದಾಗಿ ಹೋಯಿತು. ಇಲ್ಲಿಂದಲೇ ಇವರಿಗೆ ರಂಗಭೂಮಿಯ ಬಗ್ಗೆ ಜಿಗುಪ್ಸೆ ಪ್ರಾರಂಭವಾಗಿ ಸಧ್ಯ ಇವರು ವೃತ್ತಿ ರಂಗಭೂಮಿಯ ಸಂಪರ್ಕದಿಂದ ದೂರವಾಗಿದ್ದು ಬೈಲಹೊಂಗಲ ತಾಲೂಕ ಬೆಳವಡಿ-ದೊಡವಾಡ ಗ್ರಾಮಗಳ ನಡುವಿನ ಪ್ರದೇಶದಲ್ಲಿದ್ದ ಶ್ರೀ ಮರಡಿ ವೀರಭದ್ರೇಶ್ವರ ದೇವಸ್ಥಾನದ ಪೂಜಾರಿಯಾಗಿ ಭಕ್ತಿ ಸೇವೆ ಸಲ್ಲಿಸುತ್ತಿದ್ದಾರೆ.

ವಿಳಾಸ: ವೀರತ್ತಯ್ಯ ಸ್ವಾಮಿಗಳು, ಬೆಳವಡಿ. ತಾ: ಬೈಲಹೊಂಗಲ. ಜಿ: ಬೆಳಗಾವಿ



## ಶ್ರೀ ಸೋಮಶೇಖರಯ್ಯ ಹಿರೇಮಠ


ಶ್ರೀ ಶಿವಲಿಂಗಯ್ಯ ಹಿರೇಮಠವರು ಒಳ್ಳೆ ಹಾಡುಗಾರರೂ ಆಗಿದ್ದರು. ಕಂಠಾಕರ್ಷಣೆ ಮಾತ್ರ ಅಮೋಘವಾದದ್ದಾಗಿತ್ತು! ಆಗಿನ ಸಮಯದಲ್ಲಂತೂ ಇಂಥ ಪ್ರತಿಭೆಯನ್ನು ನಾಟಕ ಕಂಪನಿಯವರು ಹುಡುಕಿಕೊಂಡು ಬರುತ್ತಿದ್ದರು. ಒಮ್ಮೆ, ಕಂಪನಿಯ ಮಾಲೀಕರಾದ ಗುಡಗೇರಿ ಬಸವರಾಜರ ಒತ್ತಾಸೆಗೆ ಮಣಿದು ರಂಗಭೂಮಿಯ ಪ್ರವೇಶಕ್ಕೆ ನಾಂದಿಯಾಯಿತು. ಇದೊಂದೇ ಕಂಪನಿಯಲ್ಲಿ 15 ವರ್ಷ ಧೀರ್ಘಾಯುವಾಗಿ ಸೇವೆ ಸಲ್ಲಿಸಿದ್ದಲ್ಲದೇ, ಕೆ.ಬಿ. ಆರ್. ಡ್ರಾಮಾ ಕಂಪನಿಯಲ್ಲಿ 16 ವರ್ಷ ಹಾರ್ಮೋನಿಯಂ ವಾದಕರೆಂದು ಕೆಲಸ ಮಾಡಿದ್ದಾರೆ. ಹಾರ್ಮೋನಿಯಂ ನುಡಿಸುವುದರಲ್ಲಿ ಒಳ್ಳೆ ಪರಿಣಿತಿಯನ್ನು ಪಡೆದು ಯಶಸ್ಸು ಸಾಧಿಸಿದ ಇವರ ಅಭಿಪ್ರಾಯದಂತೆ ಹಾಡುಗಳಿಲ್ಲದೇ ನಾಟಕವನ್ನು ಬೇಕಾದಷ್ಟು ಯಶಸ್ವಿಯಾಗಿ ಆಡಿಸಬಹುದು. ಆದರೆ ಹಿನ್ನೆಲೆ ಸಂಗೀತ ಮಾತ್ರ ಬೇಕೇಬೇಕು ಎನ್ನುತ್ತಾರೆ.

ನಾಡಿನ ಹಲವಾರು ನಾಟಕ ಕಂಪನಿಗಳಲ್ಲಿ ಸೇವೆ ಸಲ್ಲಿಸಿ, ಅಮರೇಶ್ವರ ನಾಟ್ಯ ಸಂಘದ ಸಂಪೂರ್ಣ ಜವಾಬ್ದಾರಿಯನ್ನು ಹೊತ್ತು ಕೆಲಸ ಮಾಡಿದ್ದಾರೆ. ಒಟ್ಟು ಮೂವತ್ತೆಂಟು ವರ್ಷ ಹಿನ್ನಲೆ ಸಂಗೀತಗರರಾಗಿ ಕೆಲಸ ಮಾಡಿದ ಶ್ರೀ ಸೋಮಶೇಖರಯ್ಯನವರು ಮೆಟ್ರಿಕ್ ಪರೀಕ್ಷೆ ಮುಗಿಸಿದ್ದು 30 ವರ್ಷದಿಂದ ರೇಡಿಯೋ ಕಲಾವಿದರಾಗಿಯೂ ಬೆಳೆದು ಬಂದಿದ್ದಾರೆ.

ಇವರು ಬೆಳಗಾವಿ ಜಿಲ್ಲೆಯ ವೀರ ರಾಣಿ ಚನ್ನಮ್ಮನ ಕಿತ್ತೂರಿನಲ್ಲಿ 1927ರಂದು ತಾಯಿ ಗದಿಗೆವ್ವನವರ ಉದರದಿಂದ ಜನಿಸಿದರು. ಶಾಸ್ತ್ರೀಯ ಸಂಗೀತಕ್ಕೆ ಕಟ್ಟು ಬೀಳದೆ ನಾಟ್ಯ ಸಂಗೀತ ಹಾಗೂ ಹಿನ್ನೆಲೆ ವಾದನಕ್ಕೆ ಹೆಚ್ಚು ಪ್ರಾಮುಖ್ಯತೆಯನ್ನು ಕೊಟ್ಟರು. ಶ್ರೀ ಅಜಿತ ಕುಮಾರ ಪಾಂಜಾ ಅವರಿಂದ ದೆಹಲಿ ಕರ್ನಾಟಕ ಸಂಘದಲ್ಲಿ ಸನ್ಮಾನ ಸಿಕ್ಕಿದೆ. ಬೆಂಗಳೂರು ಗುಬ್ಬಿ ರಂಗಮಂದಿರ ಉದ್ಘಾಟನಾ ಸಮಯದಲ್ಲಿ ಸನ್ಮಾನ್ಯ ಮಾಜಿ ಮುಖ್ಯಮಂತ್ರಿ ಶ್ರೀ ಎಸ್. ಬಂಗಾರಪ್ಪನವರಿಂದ ಸನ್ಮಾನ, 1994 ರಲ್ಲಿ

ಕರ್ನಾಟಕ ನಾಟಕ ಅಕಾಡೆಮಿಯಿಂದ ಪುರಸ್ಕಾರ, 1998 ರಲ್ಲಿ ಇದೇ ಕರ್ನಾಟಕ ಅಕಾಡಮಿಯಿಂದ ಗೌರವ ಪ್ರಶಸ್ತಿಯನ್ನು ಪಡೆದು,

ಸಧ್ಯ ಇವರು ರಂಗಭೂಮಿಯ ಸೇವೆಯಿಂದ ನಿವೃತ್ತಿ ಹೊಂದಿ ಹವ್ಯಾಸಿ ವೃತ್ತಿ ತಂಡಗಳ ಜೀವಾಳವಾಗಿ ಕಿತ್ತೂರಿನಲ್ಲಿಯೇ ವಾಸವಾಗಿದ್ದಾರೆ. ವಿಳಾಸ: ಸೋಮಶೇಖರಯ್ಯ ಹಿರೇಮಠ. ಕಿತ್ತೂರು. ತಾ: ಬೈಲಹೊಂಗಲ ಜಿ: ಬೆಳಗಾವಿ.




## ಮಕಬುಲ್ ಹುಣಶೀಕಟ್ಟಿ, ದೊಡ್ಡವಾಡ

ಇವರು ಬೈಲಹಂಗಲ ತಾಲೂಕ ದೊಡ್ಡವಾಡ ಗ್ರಾಮದಲ್ಲಿ 1968ರಲ್ಲಿ ಜನಿಸಿದವರಾಗಿದ್ದು ಅಲ್ಲಿಯ ಶ್ರೀ ವೀರಭದ್ರೇಶ್ವರ ಪ್ರೌಢ ಶಾಲೆಯಲ್ಲಿ ಎಸ್. ಎಸ್. ಎಲ್. ಸಿ. ಮುಗಿಸುವ ಪೂರ್ವದಲ್ಲಿಯೇ ಶಾಲಾ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಭಾಗವಹಿಸುತ್ತ ರಂಗಾಸಕ್ತಿಯನ್ನು ಬೆಳೆಸಿಕೊಂಡವರು. ಅಲ್ಲಿಯ ವಾರ್ಷಿಕ ಸ್ನೇಹ ಸಮ್ಮೇಲನದಲ್ಲಿ ಪ್ರಯೋಗಿಸಲ್ಪಡುವ ನಾಟಕ ಹಾಗೂ ಪ್ರಹಸನಗಳಲ್ಲಿ ಮಕಬುಲ್ ಸ್ತ್ರೀ ಪಾತ್ರಕ್ಕಾಗಿ ಮೀಸಲಿದ್ದರು. ಇವರು ಒಳ್ಳೆ ಜನಪದ ಹಾಡುಗಾರರೂ ಆಗಿದ್ದರು. ಹೀಗಾಗಿ ದೊಡ್ಡವಾಡದ ಸಾಂಸ್ಕೃತಿಕ ಚಟುವಟಿಕೆಗಳಲ್ಲಿಯ ಜೋಕುಮಾರನ ಒಂದು ಸಾಂಪ್ರದಾಯಿಕ ಸನ್ನಿವೇಶದಲ್ಲಿ ಸ್ತ್ರೀ ಪಾತ್ರವಹಿಸಿ ಜೋಕುಮಾರ ಹಾಡುಗಳನ್ನು ಒಳ್ಳೆ ಮಾರ್ಮಿಕವಾಗಿ ಜನಮನರಂಜಿಸಿದ್ದರು. ಅಲ್ಲಿಂದಲೇ ಇವರಿಗೆ ರಂಗದ ಗೀಳು ಗಟ್ಟಿಯಾಗಿ ಹಿಡಿಯಿತು. ಇವರೊಂದಿಗೆ ಇವರ ಮಿತ್ರ ಶ್ರೀಧರ ಗುಜ್ಜರ ಕೂಡ ರಂಗ ಸ್ನೇಹಿಯಾಗಿ ಹಲವಾರು ಸನ್ನಿವೇಶಗಳಲ್ಲಿ ರಂಗವನ್ನೇರಿದ್ದಾರೆ.

ಕಾಲೇಜು ಶಿಕ್ಷಣಕ್ಕಾಗಿ ಧಾರವಾಡ ಸೇರಿದ ಮೇಲಂತೂ ಈ ರಂಗದ ನಂಟು ಇನ್ನೂ ಬಲವಾಗಿ ಧಾರವಾಡದ ರಂಗ ಪ್ರಭಾವ ಇವರ ಮೇಲೆ ವಿಶೇಷ ರೀತಿಯಿಂದಾಗಿ ಹಲವಾರು ನಾಟಕಗಳಲ್ಲಿ ಅಭಿನಯ ಚಾತುರ್ಯವನ್ನು ತೋರಿಸಿದ್ದಾರೆ. ಇವರು ಧಾರವಾಡದಲ್ಲಿ ಅಭಿನಯಿಸಿದ ಮೊದಲ ನಾಟಕವೆಂದರೆ 'ಪೋಷ್ಟರ'. ಕರ್ನಾಟಕ ವಿದ್ಯಾವರ್ಧಕ ಸಂಘ ಹಾಗೂ ಕರ್ನಾಟಕ ನಾಟಕ ಅಕಾಡೆಮಿ ಇವರ ಸಂಯುಕ್ತ ಆಶ್ರಯದಲ್ಲಿ ಧಾರವಾಡದ 'ರಂಗ ಪುರೋಭಿವೃದ್ಧಿ' ತಂಡದ ಈ ನಾಟಕವನ್ನು ದೇವಪ್ಪ ನಾಯಕ ಅವರು ನಿರ್ದೇಶಿಸಿದ್ದು. ಇಲ್ಲಿಂದಲೇ ಮಕಬುಲ್ ಮತ್ತೆ ಹಲವಾರು ನಾಟಕಗಳಲ್ಲಿ ಯಶಸ್ವಿಯಾಗಿ ಅಭಿನಯ ನೀಡಿದ್ದಾರೆ. ಬಿ.ಎ. ಪದವೀಧರರಾದ ಮಕಬುಲ್ ಇವರು ಅಭಿನಯಿಸಿದ ಪ್ರಮುಖ ನಾಟಕಗಳೆಂದರೆ ಖರೇಖರೇ ಸಂಗ್ಯಾಬಾಳ್ಯಾ, ಧರ್ಮಪುರಿಯ ಶ್ವೇತ ವೃತ್ತ, ಬೇಲಿ ಮತ್ತು ಹೊಲ, ಹಯವದನ, ಜಗಜ್ಯೋತಿ ಬಸವೇಶ್ವರ, ರಾಜಾ ವೆಂಕಟಪ್ಪ ನಾಯಕ, ದಿಶಾಂತರ, ಸಿಂಧೂರ ಲಕ್ಷ್ಮಣ, ದಫನ್, ಮೈಲಾರ ಮಹಾದೇವ, ಸಂಗೊಳ್ಳಿ ರಾಯಣ್ಣ, ಸತ್ರು ಅಂದ್ರ ಸಾಯತಾರ? ಮುಂತಾದವುಗಳು. ಮಹಾನವಮಿ, ಓಂ ನಮೋ ಮುಂತಾದ

ಕಿರುತೆರೆ ಧಾರಾವಾಹಿಗಳಲ್ಲಿಯೂ ಮತ್ತು ಮಠಾಣಿ ಪಾರ್ಟಿ, ಕತೆಯಾದ ಕಾಳ ಚಲನಚಿತ್ರಗಳಲ್ಲೂ ಕಾಣಿಸಿಕೊಂಡಿದ್ದಾರೆ. ಪ್ರತಿಷ್ಠಿತ ರಂಗ ಸಂಸ್ಥೆಗಳಿಂದ ಸನ್ಮಾನವನ್ನೂ ಹೊಂದಿದ್ದಾರೆ.

ವಿಳಾಸ: ರಾಮಲಿಂಗೇಶ್ವರ ಗಲ್ಲಿ, ದೊಡ್ಡವಾಡ ತಾ: ಬೈಲಹೊಂಗಲ. ಜಿ: ಬೆಳಗಾವಿ C/o ಆರ್.ಟಿ.ಓ ಏಜೆಂಟ್, ಆರ್.ಟಿ.ಓ. ಆಫೀಸ್ ಧಾರವಾಡ. ಮೊ: 9341060240



## ಲಿಂಗಯ್ಯಸ್ವಾಮಿ ಕುಲಕರ್ಣಿ, ಬೈಲಹೊಂಗಲ


ಇವರು ಬೆಳಗಾವಿ ಜಿಲ್ಲೆ ಬೈಲಹೊಂಗಲದ ನಿವಾಸಿ. ಶ್ರೀ ಲಿಂಗಯ್ಯ ಸ್ವಾಮಿಗಳಿಗೆ ಚಿಕ್ಕಂದಿನಿಂದಲೇ ನಾಟಕದ ಗೀಳು. ಜೊತೆಗೆ ಸಂಗೀತದ ಬಗ್ಗೆಯೂ ಅಪಾರ ಆಸಕ್ತಿ. ನಾಟಕಗಳಲ್ಲಿ ಅಭಿನಯಿಸುವ ಗೀಳು ಕೂಡ ಇವರಿಗಿತ್ತು. ತಂದೆಯವರ ಹಾರ್ಮೋನಿಯಂ ಕಲೆ ಇವರಿಗೂ ಕರಗತವಾಗುವುದರಲ್ಲಿ ತಡವಾಗಲಿಲ್ಲ. ಶ್ರೀ ಏಣಿಗಿ ಬಾಳಪ್ಪನವರ ನಾಟಕ ಕಂಪನಿಯಲ್ಲಿ ಬಹಳ ವರ್ಷಗಳವರೆಗೆ ಹಾರ್ಮೋನಿಯಂ ಮಾಸ್ತರರಾಗಿ ಸೇವೆ ಸಲ್ಲಿಸಿ ಜೊತೆಗೆ ಹಲವಾರುನಾಟಕಗಳಲ್ಲೂ ಶ್ರೇಷ್ಠ ನಟರಾಗಿಯೂ ತಮ್ಮ ನಟನಾ ಸಾಮರ್ಥ್ಯವನ್ನು ಪ್ರದರ್ಶಿಸಿದ್ದಾರೆ. ಇವರು ಒಳ್ಳೆಗಾಯಕರೂ ಹೌದು. ಸಮಾಜ ವಿಕಾಸ ನಾಟ್ಯ ಸಂಘ ದೊಡವಾಡದ ನಟಶ್ರೇಷ್ಠ ಶ್ರೀ ಸಿದ್ಧರಾಜ ಉಜ್ಜಯನಿಮಠವರ ಸಂಪರ್ಕದಿಂದ ಸಿರಿಕಂಠವನ್ನು ಸಂಪಾದಿಸಿದವರು.

ಸ್ತ್ರೀ ಪಾತ್ರ ಮಾಡುವಲ್ಲಿ ಸ್ತ್ರೀಯನ್ನೂ ಮೀರಿಸುವಂತೆ ಪಾತ್ರ ನಿರ್ವಹಿಸುವ ಸಾಮರ್ಥ್ಯದವರು. 'ತಾಯಿಯ ಕರುಳು' ನಾಟಕದಲ್ಲಿಯ ತಾಯಿ ಪಾತ್ರದ ಖ್ಯಾತಿವೆತ್ತ ದೊಡ್ಡವಾಡ ದ ಶ್ರೀ ಫಕ್ರು ಸಾಹೇಬರು, ಪಟ್ಟದಕಲ್ಲಿನ ಶಿವಪುತ್ರಯ್ಯ ಸ್ವಾಮಿಗಳು, ಅಣಿಗೇರಿ ಅಬ್ದುಲ್ ಸಾಹೇಬರು ಹಾಗೂ ಲಿಂಗಯ್ಯ ಸ್ವಾಮಿಗಳು; ಈ ನಾಲ್ವರೂ ದೊಡ್ಡವಾಡದ ಜನತೆಯ ಸಹಕಾರದಲ್ಲಿ 'ಶ್ರೀ ಶಾಂತೇಶ್ವರ ನಾಟ್ಯ ಸಂಘ ದೊಡವಾಡ ಎಂಬ ನಾಟಕ ಕಂಪನಿಯನ್ನು ಕಟ್ಟಿ ನಾಲ್ಕೈದು ವರ್ಷಗಳವರೆಗೆ ನಾಡಿನಾದ್ಯಂತ ಪ್ರದರ್ಶನ ನೀಡಿದರು. ಮುಂದೆ ಹಲವಾರು ಅನಿವಾರ್ಯ ಕಾರಣಗಳಿಂದ ತೊಂದರೆಯನ್ನು ಅನುಭವಿಸಿ ಕಂಪನಿ ಇತಿಶ್ರೀ ಹೊಂದಿತು. ಮತ್ತೆ ದೊಡ್ಡವಾಡದ ಕಲಾಸಕ್ತರೆಲ್ಲ ಒಂದಾಗಿ ಸ್ವತಂತ್ರ ನಾಟಕ ಕಂಪನಿ ಕಟ್ಟಲು ಶ್ರೀ ಲಿಂಗಯ್ಯ ಸ್ವಾಮಿಗಳಿಗೆ ಸಹಾಯ ಮಾಡಿದರು. ಅದುವೇ' ಶ್ರೀ ರಾಜರಾಜೇಶ್ವರಿ ನಾಟ್ಯ ಸಂಘ ದೊಡ್ಡವಾಡ'. ಇದು 1967–68 ರಲ್ಲಿ ಪ್ರಾರಂಭವಾಯಿತು. ಮುಂದೆ ಈ ಕಂಪನಿ ನಾಡಿನ ಹಲವಾರು ಕಡೆ ಪ್ರದರ್ಶನ ನೀಡಿ 1972 ರಲ್ಲಿ ವಿರಮಿಸಿತು.

ನಂತರ, 1972ರಲ್ಲಿ ಇಂಗಳಗಿ ದೇಸಾಯಿಯವರ ಸಹಾಯದಿಂದ 'ಶ್ರೀ ಮಹಾಂತ ದುರುದುಂಡೇಶ್ವರ ನಾಟ್ಯ ಸಂಘ' ಎಂಬುದಾಗಿ ಹೊಸ ಸ್ವರೂಪ ಪಡೆದು ಮತ್ತೆ ತಲೆ

ಎತ್ತಿ ನಿಂತಿತು. ಈ ಹೆಸರಿನಿಂದಲೂ ಶ್ರೀ ಲಿಂಗಯ್ಯ ಸ್ವಾಮಿಗಳ ಕಂಪನಿ ಹಲವಾರು ಕಡೆ ಸಾಮಾಜಿಕ, ಐತಿಹಾಸಿಕ ಹಾಗೂ ಪೌರಾಣಿಕ ನಾಟಕಗಳನ್ನಾಡಿ ಒಳ್ಳೆ ಹೆಸರು ಮಾಡಿ ಕೊನಗೆ ಅಪಾರ ಹಾನಿಯನ್ನು ಅನುಭವಿಸಿ, ಕಂಪನಿ ಸಂಪೂರ್ಣ ಸ್ಥಗಿತವಾಯಿತು. ಸಧ್ಯ ಎಪ್ಪತ್ತೆರಡರ ಲಿಂಗಯ್ಯ ಸ್ವಾಮಿಗಳು ವೃತ್ತಿರಂಗಭೂಮಿಯಿಂದ ಸಂಪೂರ್ಣ ನಿವೃತ್ತಿಯಾಗಿದ್ದಾರೆಂದರೂ ಗ್ರಾಮೀಣ ಹವ್ಯಾಸಿ ರಂಗಭೂಮಿಯಿಂದ ದೂರಾಗದೇ ನಾಟಕದ ಮಾಸ್ತರ ಆಗಿ ಕರೆಬಂದ ಹಳ್ಳಿಗಳತ್ತ ಮುಖ ಮಾಡಿ ಜೀವನ ಸಾಗಿಸುತ್ತಿದ್ದಾರೆ. ಇಂಥ ಮಹಾನ್ ಕಲಾವಿದರಿಗೆ ಕರ್ನಾಟಕ ನಾಟಕ ಅಕಾಡೆಮಿ 2006 ರಲ್ಲಿ ಗುರುತಿಸಿ ಪುರಸ್ಕರಿಸಿದ್ದು ಅಭಿಮಾನದ ಸಂಗತಿ.

ವಿಳಾಸ: ನಾಟಕದ ಮಾಸ್ತರ. ಮಾರ್ಕೆಟ್ ರೋಡ. ಬೈಲಹೊಂಗಲ.



## ಈರಯ್ಯ ಮೂಗಯ್ಯ ಮಠಪತಿ, ದೊಡ್ಡವಾಡ

1956ರಲ್ಲಿ ಜನಿಸಿದ ಈರಯ್ಯ ಮೂಗಯ್ಯ ಮಠಪತಿ, ಇವರು ಮೂಲತಃ ಬೈಲಹೊಂಗಲ ತಾಲೂಕು ದೊಡ್ಡವಾಡ ಗ್ರಾಮದವರಾಗಿದ್ದು ಸಧ್ಯ ಮಹಿಳಾ ಮತ್ತು ಮಕ್ಕಳ ಇಲಾಖೆಗೆ ಸಂಬಂಧಿಸಿದಂತೆ ಸರಕಾರೀ ಸೇವೆಯಲ್ಲಿದ್ದು ಬೆಳಗಾವಿ ನಿವಾಸಿಯಾಗಿದ್ದಾರೆ. ಬಾಲ್ಯದಿಂದಲೇ ಸಾಂಸ್ಕೃತಿಕ ಕ್ಷೇತ್ರದತ್ತ ಒಲವನ್ನಿರಿಸಿಕೊಂಡಿದ್ದ ಇವರು ಪ್ರೌಢ ಶಾಲಾ ಹಂತದಲ್ಲಿಯೇ ರಂಗ ಚಟುವಟಿಕೆಗಳಲ್ಲಿ ಸಾಕಷ್ಟು ಹೆಸರುಗಳಿಸಿದ್ದರು. ಕಾಲೇಜು ಹಂತದಲ್ಲಿ ಕಿರು ನಾಟಕಗಳ ರಚನೆಗೂ ಮುಂದಾದರು. ಅಭಿನಯದಲ್ಲೂ ಮೇಲುಗೈ ಸಾಧಿಸಿದವರು. ಹಲವು ನಾಟಕಗಳಿಗೆ ನಿರ್ದೇಶನವನ್ನೂ ಕೊಟ್ಟಿದ್ದಾರೆ.

1977ರಲ್ಲಿ ಇವರು ರಚಿಸಿದ 'ವರದಕ್ಷಿಣೆ' 'ಶರಣ-ಸಂತ' 'ಪೋಷ್ಟಮಾಸ್ತರ' ಮುಂತಾದ ನಾಟಕಗಳು ಅತ್ಯುತ್ತಮ ರೀತಿಯಿಂದ ಪ್ರಯೋಗಿಸಲ್ಪಟ್ಟು ಜನಮೆಚ್ಚುಗೆಗೆ ಪಾತ್ರವಾಗಿವೆ. 1976 ರಲ್ಲಿ ಹಿರಿತನದ ಹೆಣ್ಣು ನಾಟಕದಲ್ಲಿ ಪಂಡಿತಪ್ಪನ ಪಾತ್ರದಲ್ಲಿ ಕಾಣಿಸಿಕೊಂಡು ಕಲ್ಲೂರಿ ಉಡಚವ್ವ ದೇವಿ ಹವ್ಯಾಸಿ ಕಲಾ ಬಳಗದ ಮುಖೇನ ಪ್ರೇಕ್ಷಕರ ಮನತಣಿಸಿದ್ದಾರೆ. ಅದರಂತೆ 1984ರಲ್ಲಿ ಇದೇ ಬಳಗದ ಆಶ್ರಯದಲ್ಲಿ ಅಭಿನಯಿಸಲ್ಪಟ್ಟ ಜಗಜ್ಯೋತಿ ಬಸವೇಶ್ವರ ನಾಟಕದಲ್ಲಿ ಹರಳಯ್ಯ ಹಾಗೂ ಬಸವೇಶ್ವರನ ಪಾತ್ರದಲ್ಲೂ ಮಿಂಚಿದ್ದಾರೆ.

ಇದೇ ರೀತಿಯಾಗಿ ಆದರ್ಶ ಪ್ರೇಮದಲ್ಲಿರವಿಯ ಪಾತ್ರ, ಕಲಿತ ಕಳ್ಳ ನಾಟಕದಲ್ಲಿ ಜಗದೀಶನ ಪಾತ್ರ, ಜಾರಿಬಿದ್ದ ಜಾಣ ನಾಟಕದಲ್ಲಿ ಶಂಕ್ರಣ್ಣನ ಪಾತ್ರ, ದಸರಾದಲ್ಲಿ ಮಹೇಶ ಪಾತ್ರ, ಸಿಂಧೂರ ಲಕ್ಷ್ಮಣದಲ್ಲಿ ಕುಲಕರ್ಣಿಯ ಪಾತ್ರವನ್ನು ಮಾಡಿ ರಂಗ ಸೇವೆಗೆ ತಮ್ಮದೇ ಆದ ಕೊಡುಗೆಯನ್ನು ನೀಡಿದ್ದಾರೆ. ಪ್ರಶಸ್ತಿ, ಪುರಸ್ಕಾರಗಳನ್ನೂ ಪಡೆದಿದ್ದಾರೆ.

ವಿಳಾಸ: ನಂ: 1004 'ಅಭಿಯಾನ' ವಂಟಮುರಿ ಕಾಲೊನಿ, ಬೆಳಗಾವಿ
ಮೊ: 9845143614




## ಅಡವಯ್ಯ ಸ್ವಾಮಿಗಳು ಕುಲಕರ್ಣಿ, ದೊಡ್ಡವಾಡ

ಇವರು ಬೈಲಹೊಂಗಲ ತಾಲೂಕ ದೊಡ್ಡವಾಡ ಗ್ರಾಮದ ನಿವಾಸಿ. 1-6-1948ರಂದು ದೊಡ್ಡವಾಡದಲ್ಲಿ ಜನಿಸಿದರು. ಇವರ ತಂದೆಯವರೂ ಪ್ರಸಿದ್ಧ ಹಾರ್ಮೋನಿಯಂ ವಾದಕರಾಗಿದ್ದರು. ಇವರು ಮೂಲವಾಗಿ ಬೂದಿಹಾಳ ಗ್ರಾಮದವರು, ಶ್ರೀ ಅಡವಯ್ಯ ಸ್ವಾಮಿಗಳಿಗೆ ಚಿಕ್ಕಂದಿನಿಂದಲೇ ಸಂಗೀತದ ಬಗ್ಗೆಯೂ ಅಪಾರ ಆಸಕ್ತಿ. ಹೀಗಾಗಿ ಇವರು ಕನ್ನಡ ಏಳನೆಯ ಇಯತ್ತೆ ಓದುತ್ತಿದ್ದಾಗಲೇ ಶಾಲೆಗೆ ಶರಣು ಹೊಡೆದು ಸವದತ್ತಿ ಹತ್ತಿರದ ತೆಗ್ಗಿನಹಾಳ ಗ್ರಾಮಕ್ಕೆ 'ಹಳ್ಳಿಯಿಂದ ದಿಲ್ಲಿಯವರೆಗೆ' ಎಂಬ ನಾಟಕ ಕಲಿಸಲು ಹೋಗಿದ್ದರೆಂದು ತಿಳಿದುಬರುತ್ತದೆ. ಹಿನ್ನೆಲೆ ಗಾಯನದ ರೂಢಿಯೂ ಇವರಿಗೆ ಬಹಳವಾಗಿತ್ತು.

ಹೀಗಾಗಿ, 1967-68 ರಲ್ಲಿ ಪ್ರಾರಂಭವಾಗಿದ್ದ ಶ್ರೀ ರಾಜರಾಜೇಶ್ವರಿ ನಾಟ್ಯ ಸಂಘ ದೊಡ್ಡವಾಡದಲ್ಲಿ, 1972 ರಲ್ಲಿ ಇಂಗಳಗಿ ದೇಸಾಯಿಯವರ ಶ್ರೀ ಮಹಾಂತ ದುರುದುಂಡೇಶ್ವರ ನಾಟ್ಯ ಸಂಘದಲ್ಲಿ, ನ್ಯಾಮತಿಯ ಮಹೇಶ ನಾಟ್ಯ ಸಂಘದಲ್ಲಿ, ಕಟಗೇರಿಯ ವಿಜಯ ಮಹಂತೇಶ್ವರ ನಾಟ್ಯ ಸಂಘದಲ್ಲಿ , ಗುಡಗೇರಿಯ ಶ್ರೀ ಸಂಗಮೇಶ್ವರ ನಾಟ್ಯ ಸಂಘದಲ್ಲಿ ಹೀಗೆ ಇನ್ನೂ ಅನೇಕ ಖ್ಯಾತ ಕಂಪನಿಗಳಲ್ಲಿ ಒಳ್ಳೆ ಹಿನ್ನೆಲೆ ಹಾರ್ಮೋನಿಯಂ ವಾದಕರಾಗಿ ಸೇವೆಸಲ್ಲಿಸಿದ್ದಾರೆ. ಅಲ್ಲದೇ ಶಾಲಾ ಕಾಲೇಜು ವಿದ್ಯಾರ್ಥಿಗಳಿಗೂ ಸಂಗೀತ ನಾಟಕಗಳನ್ನು ಕಲಿಸಿದ್ದಾರೆ. ಕೊನೆ ಕೊನೆಯಲ್ಲಿ ದೊಡ್ಡವಾಡದ ಶ್ರೀ ಶಿವಪತ್ರಯ್ಯ ಸ್ವಾಮಿಗಳ ಶ್ರೀ ಸಂಗಮೇಶ್ವರ ನಾಟ್ಯ ಸಂಘದಲ್ಲಿ ಮೂರುವರ್ಷ ಸೇವೆ ಸಲ್ಲಿಸಿ ಕಣ್ಣಿನ ದೋಷ ಹಾಗೂ ಇಳಿ ವಯಸ್ಸಿನ ಪ್ರಭಾವದಿಂದ ರಂಗಭೂಮಿಯ ಸೇವಾವೃತ್ತಿಯಿಂದ ದೂರ ಸರಿದಿದ್ದಾರೆ.

ವಿಳಾಸ: ಅಡವಯ್ಯ ಸ್ವಾಮಿಗಳು ಕುಲಕರ್ಣಿ, ನಾಟಕದ ಮಾಸ್ತರ. ದೊಡ್ಡವಾಡ.
ತಾ: ಬೈಲಹೊಂಗಲ. ಜಿ: ಬೆಳಗಾವಿ



## ಶ್ರೀಧರ ಗುಜ್ಜರ, ದೊಡ್ಡವಾಡ

ಶ್ರೀಧರ ಗುಜ್ಜರ ಕೂಡ ಮಕಬುಲ್ ಹುಣಶಿಕಟ್ಟಿಯತರಹ ಪ್ರೌಢಶಾಲಾ ಹಂತದಿಂದಲೇ ರಂಗದ ಗೀಳನ್ನು ಹಚ್ಚಿಕೊಂಡವರು. 1972ರಲ್ಲಿ ಜನಿಸಿದ ಶ್ರೀಧರ ದೊಡ್ಡವಾಡ ಗ್ರಾಮದ ಶ್ರೀ ವೀರಭದ್ರೇಶ್ವರ ಪ್ರೌಢ ಶಾಲೆಯಲ್ಲಿ ಎಸ್.ಎಸ್. ಎಲ್.ಸಿ. ಮುಗಿಸುವಷ್ಟೊತ್ತಿಗೆ ಸಾಕಷ್ಟು ರಂಗ

ಚಟುವಟಿಕೆಗಳಲ್ಲಿ ಭಾಗವಹಿಸಿದ್ದರು. ಕಾಲೇಜು ಶಿಕ್ಷಣಕ್ಕಾಗಿ ಧಾರವಾಡಕ್ಕೆ ಬಂದ ಮೇಲಂತೂ ರಂಗದ ಒಡನಾಟವನ್ನು ಇಮ್ಮಡಿಗೊಳಿಸಿಕೊಂಡರು. ರಂಗ ಸ್ನೇಹಿತ ಮಕಬುಲ್ ಇವರೊಂದಿಗೆ ಕೂಡಿಕೊಂಡು ಹಲವಾರು ನಾಟಕಗಳಲ್ಲಿ ಒಳ್ಳೆ ಯಶಸ್ವಿಯಾಗಿ ಅಭಿನಯವನ್ನು ಗೈಯುತ್ತಿದ್ದಾರೆ. ಬಿ.ಎ. ಪದವೀಧರರಾದ ಇವರು ನೌಕರಿಯಿಂದ ವಂಚಿತರಾಗಿ ಸಣ್ಣಪುಟ್ಟ ವ್ಯಾಪಾರ ವಹಿವಾಟಿನಿಂದ ಬದುಕು ನೂಕುತ್ತಿದ್ದಾರೆ.

ಇವರು ಅಭಿನಯಿಸಿದ ಪ್ರಮುಖ ನಾಟಕಗಳೆಂದರೆ ಖರೇಖರೇ ಸಂಗ್ಯಾಬಾಳ್ಯಾ, ಜಗಜ್ಯೋತಿ ಬಸವೇಶ್ವರ, ಮೈಲಾರ ಮಹಾದೇವ, ಸಂಗೊಳ್ಳಿ ರಾಯಣ್ಣ, ಸತ್ತು ಅಂದ್ರ ಸಾಯತಾರ? ಶ್ರೀಕೃಷ್ಣ ಗಾರುಡಿ ಮುಂತಾದ ನಾಟಕಗಳಲ್ಲಿ ಭಾವಪೂರ್ಣ ಅಭಿನಯ ನೀಡಿ ಹೆಸರಾಗಿದ್ದಾರೆ. ಇವರೂ ಕೂಡ ಮಹಾನವಮಿ, ಓಂ ನಮೋ ಮುಂತಾದ ಕಿರುತೆರೆ ಧಾರಾವಾಹಿಗಳಲ್ಲಿಯೂ ಮತ್ತು ಪುತಾಣಿ ಪಾರ್ಟಿ, ಕತೆಯಾದ ಕಾಳ ಚಲನಚಿತ್ರಗಳಲ್ಲೂ ಕಾಣಿಸಿಕೊಂಡಿದ್ದಾರೆ. ಪ್ರತಿಷ್ಠಿತ ರಂಗ ಸಂಸ್ಥೆಗಳಿಂದ ಸನ್ಮಾನವನ್ನೂ ಹೊಂದಿದ್ದಾರೆ.

ವಿಳಾಸ : ಶ್ರೀಧರ ಗುಜ್ಜರ, ಮಾರ್ಕೆಟ್ ರೋಡ, ದೊಡ್ಡವಾಡ ತಾ: ಬೈಲಹೊಂಗಲ C/o ಮೋರೆ ಪ್ಲಾಟ, ಹಜೇರಿ ಬಿಲ್ಡಿಂಗ್, ಹಾವೇರಿ ಪೇಟ್. ಧಾರವಾಡ.

### ಮೋದೀನಸಾಬ ನದಾಫ, ದೊಡ್ಡವಾಡ

ಮೋದೀನಸಾಬ ಮೆಹಬೂಸಾಬ ನದಾಫ ಇವರು ಬ್ಯಾಂಡ್ ಕಂಪನಿ ಮಾಸ್ತರ ಇಮಾಮ್‌ಸಾಬ ಮುಲ್ಲಾ ಇವರ ಸಂಪರ್ಕದಿಂದ ಬ್ಯಾಂಡ್ ಸೆಟ್ಟಿನ ಎಲ್ಲ ವಾದ್ಯಗಳನ್ನು ಬಾರಿಸಲು ಕಲಿತವರು. ಇವರು ಸೌದತ್ತಿ ತಾಲೂಕ ಇನಾಂ ಹೊಂಗಲದಲ್ಲಿ 1942ರಲ್ಲಿ ಹುಟ್ಟಿದರು. ಇವರ ವಾಸಸ್ಥಳ ಬೈಲಹೊಂಗಲ ತಾಲೂಕು ದೊಡವಾಡ ಗ್ರಾಮ. ಇವರು ತಮ್ಮ ಬಿಡುವಿನ ವೇಳೆಯಲ್ಲಿ ರಂಗಭೂಮಿಯ ತಬಲಾವಾದನವನ್ನು ಕಲಿತದ್ದೂ ಇಮಾಮ್‌ಸಾಬ ಮುಲ್ಲಾ ಗುರುಗಳಿಂದಲೇ. ನಾಡಿನ ಖ್ಯಾತ ವೃತ್ತಿರಂಗ ಸಂಸ್ಥೆಗಳಾದ ವಸಂತಸಾ ನಾಕೋಡರ ಕಂಪನಿ, ಉಪ್ಪಿನ ಬೇಟಗೇರಿಯ ಚಂದ್ರಯ್ಯನವರ ನಿರ್ಮಲಾ ನಾಟ್ಯ ಸಂಘ, ಸೂಡಿ ಶೇಖರಯ್ಯನವರ ನಾಟಕ ಕಂಪನಿ, ದೊಡವಾಡ ಶಿವಪುತ್ರಯ್ಯನವರ ಕಂಪನಿ ಮುಂತಾದ ಕಡೆಗಳಲೆಲ್ಲ ತಬಲಾವಾದನವನ್ನು ಅತ್ಯಂತ ಪರಿಣಾಮಕಾರಿಯಾಗಿ ಬಾರಿಸಿ ಪ್ರಸಿದ್ಧರಾಗಿದ್ದಾರೆ. ಒಂದೊಂದು ನಾಟಕದ ಸನ್ನಿವೇಶಗಳಿಗೆ ಇಫೆಕ್ಟ ಕೊಡುವಲ್ಲಿ ತಬಲಾ, ಕಾಂಗೋ, ಬ್ಯಾಂಗೋ, ಜಾಂಜ್, ಗೆಜ್ಜೆ, ಮುಂತಾದವುಗಳನ್ನು ಒಬ್ಬರೇ ನಾದ ವಿನ್ಯಾಸಗೊಳಿಸಿ ರಸ ಭಾವನೆಗಳಿಗೆ ಪೂರಕವಾಗಿ

ಮೋದೀನಸಾಬ ಅವರು ಸಮರ್ಪಕ ಕೆಲಸ ತೋರಿಸುತ್ತಿದ್ದರು. ಡೋಲ್, ಡ್ರಮ್, ಕ್ಲ್ಯಾರೋನೆಟ್ ಕೂಡ ಬಾರಿಸುವಕಲೆ ಇವರಿಗೆ ಕರಗತವಾಗಿತ್ತು. ನಾಟಕಗಳ ಸೀಜನ್‌ಗೆ ಬರ ಬಿದ್ದಾಗ ಶಾಲಾ ಕಾಲೇಜ್ ವಿದ್ಯಾರ್ಥಿಗಳ ಸಾಂಸ್ಕೃತಿಕ ಚಟುವಟಿಕೆಗಳಿಗೆ ಸಂಬಂಧಿಸಿ ಹಾಡು, ನೃತ್ಯಗಳಿಗೆ ತಬಲಾ ಸಾಥ ನೀಡುವ ಉತ್ತಮ ಹವ್ಯಾಸವೂ ಇವರದಾಗಿದ್ದಿತು.

ವಿಳಾಸ: ದೊಡ್ಡವಾಡ. ತಾ: ಬೈಲಹೊಂಗಲ. ಜಿ: ಬೆಳಗಾವಿ



## **ಕಾಶೀಮಸಾಬ ಜಮಾದಾರ,** ಬೈಲಹೊಂಗಲ

ಇವರು ಅದ್ಭುತವಾದ ತಬಲಾವಾದನ ಕಲೆ ಮೆರೆಸಿದ್ದಾರೆ. ಶ್ರೀ ಕಾಶೀಮಸಾಬರು ತಮ್ಮ ಈ ಅದ್ಭುತ ಕಲೆಯ ಪ್ರದರ್ಶನ ನೀಡುವ ಮೂಲಕವಾಗಿ ದಾಂಡೇಲಿಯ ಒಂದು ಕಾರ್ಯಕ್ರಮದಲ್ಲಿ ಸತತ 52 ತಾಸು ತಬಲಾ ನುಡಿಸಿ ದಾಖಲೆ ನಿರ್ಮಿಸಿದ್ದಾರೆ. ಇಂಥ ಅಪೂರ್ವ ಕಲಾನೈಪುಣ್ಯತೆಯನ್ನು ಪಡೆದ ಕಾಶೀಮಸಾಬ ಜಮಾದಾರರು 'ಜಮಾದಾರ ಮಾಸ್ತರ' ಎಂದೇ ಖ್ಯಾತಿ ಪಡೆದಿದ್ದಾರೆ.

ಇವರು ಬೆಳಗಾಂವಿ ಜಿಲ್ಲೆಯ ಬೈಲಹೊಂಗಲದ ಕೃಷಿಕ ಮನೆತನದಲ್ಲಿ ಜನಿಸಿದ್ದು 1937ರಲ್ಲಿ. ಚಿಕ್ಕ ವಯಸ್ಸಿನಲ್ಲಿಯೇ ತಬಲಾ ವಾದನಕ್ಕೆ ವಲಿದ ಮನಸ್ಸು ಶಾಲಾಭ್ಯಾಸದ ಕಡೆ ಜಗ್ಗಲಿಲ್ಲ. ತಬಲಾ ವಾದನ ಕಲಿಯುವ ಹಂಬಲದಿಂದ ಗುರುಗಳಿಗಾಗಿ ಬಹಳ ಹುಡುಕಾಡಿ ಮನೆಬಿಟ್ಟು ಹೊರ ಬೀಳಬೇಕಾಯಿತು. ಪ್ರಾಥಮಿಕ ಶಾಲಾ ವಿದ್ಯಾಭ್ಯಾಸಕ್ಕೆ ಶರಣು ಹೊಡೆದು, ತಮ್ಮ ಹನ್ನೊಂದನೇ ವಯಸ್ಸಿಗೆ ಹಠಮಾರಿ ಸ್ವಭಾವದ ಇವರು ಕೊನೆಗೂ ಬೈಲ ಹೊಂಗಲದಲ್ಲಿ ಶ್ರೀ ಎ.ಪಿ. ಚಿನ್ಮಯ ಶಾಸ್ತ್ರಿಗಳೆಂಬ ಗುರುಗಳನ್ನು ಪಡೆದುಕೊಂಡರು. ಮನಸಾರೆ ತಬಲಾ ವಿದ್ಯೆಯನ್ನು ಕಲಿತು 1948 ರಿಂದ ರಂಗಭೂಮಿಯ ಕಲಾ ಸೇವೆಗೆ ಸನ್ನದ್ಧರಾದರು.

ನಾಡಿನ ಖ್ಯಾತ ವೃತ್ತಿರಂಗ ಸಂಸ್ಥೆಗಳಾದ ದೊಡವಾಡ ಶಿವಪುತ್ರಯ್ಯನವರ ಕಂಪನಿ, ಏಣಿಗಿ ಬಾಳಪ್ಪನವರ ಕಂಪನಿ, ಸುಳ್ಳದ ದೇಸಾಯಿಯವರ ಕಂಪನಿ, ಹೀಗೆ ಅನೇಕ ಕಂಪನಿಗಳಲ್ಲಿ ಸಂಗೀತ ಸೇವೆ ಮಾಡಿ ಇನ್ನೂ ಹೆಚ್ಚಿನ ವಿದ್ಯೆಯನ್ನು ಕಲಿಯಬೇಕೆಂಬ ಹಂಬಲದಿಂದ ಉಸ್ತಾದ ದಾದಾ ಸಾಹೇಬ ಮಿರಜಕರ ಇವರಲ್ಲಿ ಗುರುಕುಲ ಪದ್ಧತಿಯ ಶಿಕ್ಷಣ ಪಡೆದರು. ಇದರಿಂದ ಇನ್ನೂ ಹೆಚ್ಚಿನ ರಂಗಭೂಮಿ ಸೇವೆ ಮಾಡಲು ಅವಕಾಶ ಸಿಕ್ಕಂತಾಯಿತು. ಇವರ ಕಲಾ ಜೀವನಕ್ಕೆ ಋಣಿಯಾಗಿ ನಮ್ಮ ಕರ್ನಾಟಕ ಸರಕಾರ ಮಾಶಾಸನ ನೀಡಿ ಗೌರವಸಿದೆ. ಕರ್ನಾಟಕ ನಾಟಕ ಅಕಾಡಮಿ 1998 ರಲ್ಲಿ ಪುರಸ್ಕಾರ ನೀಡಿಯೂ ಸನ್ಮಾನಿಸಿದೆ.


ವಿಳಾಸ : ಕಾಶೀಮಸಾಬ ಜಮಾದಾರ. ಬೈಲಹೊಂಗಲ. ಜಿ: ಬೆಳಗಾವಿ

**ಕೆ. ಡಿ. ನದಾಫ, ವಕ್ಕುಂದ**

ಬಾಲ್ಯದಿಂದಲೇ ಸಂಗೀತದ ಗೀಳು ಹಚ್ಚಿಕೊಂಡ ಇವರು, ಬೆಳಗಾಂವಿ ಜಿಲ್ಲೆಯ ತಿರುಳಗನ್ನಡ ನಾಡಾದ ವಕ್ಕುಂದದಲ್ಲಿ ಜನಿಸಿದರು. ಇವರು ಮುಸಲ್ಮಾನ ಧರ್ಮದವರಾದರೂ ಹಿಂದುತ್ವವೇ ಇವರ ಉಸಿರಾಗಿತ್ತು. ಕನ್ನಡ ಪ್ರಾಥಮಿಕ ಶಾಲೆಯಲ್ಲಿ ಮೂರನೇ ತರಗತಿಯವರೆಗೆ ಮಾತ್ರ ಕಲಿತ ಇವರು ಬಡತನದ ಪರಿಸ್ಥಿತಿಯ ಪರಿಣಾಮದಿಂದ ಶಾಲೆಗೆ ಶರಣು ಹೊಡೆದು ತಮ್ಮ ಹಳ್ಳಿಗೆ ಬಂದು ಸಣ್ಣ ಪುಟ್ಟ ನಾಟಕ ಕಂಪನಿಗಳ ಸಂಪರ್ಕದಿಂದ ರಂಗಭೂಮಿಯ ಎಲ್ಲ ಕಲೆಗಳಿಗೆ ಮಾರು ಹೋದರು. ಅವುಗಳಲ್ಲಿ ಇವನ್ನು ಗಟ್ಟಿಯಾಗಿ ಕಟ್ಟಿ ಹಾಕಿದ್ದು ರಂಗ ಸಂಗೀತ ಹಾಗೂ ಹಾರ್ಮೋನಿಯಂ ವಾದನ ಕಲೆ. ಪ್ರಾರಂಭದಲ್ಲಿ ಪಾರಿಜಾತದ ಅಪ್ಪಾಲಾಲರಲ್ಲಿ ಸಂಗೀತದ ಪ್ರಾರಂಭಿಕ ಶಿಕ್ಷಣ ಶುರುವಾಯಿತು. ಶಾಸ್ತ್ರೀಯ ಸಂಗೀತದ ವಿಶೇಷ ಜ್ಞಾನಕ್ಕಾಗಿ ಬಸವರಾಜ ಕಂಬಾರವರನ್ನು ಆಶ್ರಯಿಸ ಬೇಕಾಯಿತು. ನಾಟ್ಯ ಸಂಗೀತಕ್ಕಾಗಿ ಅಸುಂಡಿಯ ಶುಭಾನರಾವ ಇವರಲ್ಲಿ ಮೊರೆ ಹೋಗ ಬೇಕಾಯಿತು. ಸಂಗೀತ ಕಲೆಯಲ್ಲಿ ನದಾಫ ಅವರು ಪ್ರಾವೀಣ್ಯತೆಯನ್ನು ಸಾಧಿಸಿದರು.

ಜನಾಬ್ ಕಾಶೀಮ ಸಾಬ್ ಅವರು ರಂಗಭೂಮಿಯ ಸೇವೆಗಾಗಿ ಹಾಗೂ ಜೀವನಕ್ಕೋಸ್ಕರವಾಗಿ ಪ್ರಾರಂಭದಲ್ಲಿ ಶಾರದಾ ಸಂಗೀತ ನಾಟ್ಯ ಸಂಘ ಗೋಕಾಕ್‌ದಲ್ಲಿ ಹಾರ್ಮೋನಿಯಂ ವಾದಕರಾಗಿ ಕೆಲಸಕ್ಕೆ ಸೇರಿಕೊಂಡರು, ಅಲ್ಲಿಂದ 1985 ರಿಂದ ನ್ಯಾಮತಿಯ ಮಹೇಶ ನಾಟ್ಯ ಸಂಘದಲ್ಲಿ ಮೂರು ನಾಲ್ಕು ವರ್ಷ ಹಾರ್ಮೋನಿಯಂ ವಾದಕರಾಗಿ ಸೇವೆಸಲ್ಲಿಸಿದರು. ಶುಭಾನರಾವ ಅಸುಂಡಿ ಇವರ ನಾಟಕ ಕಂಪನಿಯಲ್ಲೂ ಅನೇಕ ವರ್ಷ ಇವರು ಹಾರ್ಮೋನಿಯಂ ವಾದಕರಾಗಿ ಕೆಲಸ ಮಾಡಿದ್ದಾರೆ. ಇಲ್ಲಿದ್ದಾಗಲೇ ತಬಲಾ ವಾದನವನ್ನೂ ಚೆನ್ನಾಗಿ ಕಲಿತರು. ಹಾರ್ಮೋನಿಯಂ ಹಾಗೂ ತಬಲಾವಾದನದಲ್ಲಿ ಪ್ರೌಢಿಮೆಯನ್ನು ಸಾಧಿಸಿದ ಕಾಶೀಮಸಾಬ ಇವರು ಕುರುಕ್ಷೇತ್ರ, ಹೇಮರಡ್ಡಿಮಲ್ಲಮ್ಮ, ರಕ್ತ ರಾತ್ರಿ, ಮುಂತಾದ ಪೌರಾಣಿಕ ನಾಟಕಗಳಿಗೆ ಭಾವಪೂರ್ಣ ಹಾಗೂ ಪರಿಣಾಮಕಾರಿ ಹಿನ್ನೆಲೆ ಸಂಗೀತವನ್ನೊದಗಿಸುವ ಕಲೆಯನ್ನು ಕರಗತಮಾಡಿಕೊಂಡರು. ಇವರ ಹಾರ್ಮೋನಿಯಂ ವಾದನ ಶ್ರೋತೃಗಳಿಗೆ ಅತ್ಯಂತ ರಂಜನೀಯವೆನಿಸುತ್ತಿತ್ತು, ಇಷ್ಟೇ ಅಲ್ಲದೆ, ನಾಟಕಗಳಿಗೆ ಹಿನ್ನೆಲೆ ಧ್ವನಿಯನ್ನೂ ನೀಡುತ್ತಿದ್ದ ಕಾಶೀಮಸಾಬ ಶಾಸ್ತ್ರೀಯ ಗಾಯನದಲ್ಲೂ ನಿಷ್ಣಾತರು. ಇವರು ತಬಲಾ ಸಾಥ ಕೂಡ ಉತ್ತಮ ರೀತಿಯಿಂದ ಕೊಡುತ್ತಿತ್ತು. ಗದುಗಿನ ಕೊಟ್ರೇಶ್ವರ ನಾಟ್ಯ ಸಂಘದಲ್ಲಿ ತಬಲಾ ವಾದಕರಾಗಿಯೂ ಎರಡು ವರ್ಷ ಸೇವೆ ಸಲ್ಲಿಸಿದ್ದಾರೆ. ಬಹುಮುಖ ಪ್ರತಿಭೆಯ ಕಾಶೀಮಸಾಬ ಅನೇಕ ನಾಟಕಗಳಲ್ಲಿ ಸಣ್ಣಪುಟ್ಟ ಪಾತ್ರಗಳನ್ನು ಮಾಡಿದ್ದಾರೆ.

ವಿಳಾಸ: ಕೆ. ಡಿ. ನದಾಫ. ವಕ್ಕುಂದ ತಾ: ಬೈಲಹೊಂಗಲ. ಜಿ: ಬೆಳಗಾವಿ



## ಪರಪ್ಪ ಗುರುಲಿಂಗಪ್ಪ ನಂದೆಣ್ಣವರ, ಜಾಲಿಕೊಪ್ಪ

ತಾ: ಬೈಲಹೊಂಗಲ: ಜಾಲಿಕೊಪ್ಪ ಗ್ರಾಮದವರಾದ ಇವರು ಚಿಕ್ಕ ವಯಸ್ಸಿನಲ್ಲಿಯೇ ರಂಗಭೂಮಿಯ ನಂಟನ್ನು ಬೆಳೆಸಿಕೊಂಡು ಬಂದವರಾಗಿದ್ದರು. 1997– 98 ರಲ್ಲಿ ಶ್ರೀ ಪಾಂಡುರಂಗ ನಾಟ್ಯ ಸಂಘ ಜಾಲಿಕೊಪ್ಪ ಎಂಬ ಸಂಘವನ್ನು ಹುಟ್ಟುಹಾಕಿ ಹಲವಾರು ರೀತಿಯ ರಂಗ ಸೇವೆಯನ್ನು ಮಾಡಿದ ಪರಪ್ಪ ಇವರು ಪ್ರಾರಂಭದಲ್ಲಿ ಪಾರಿಜಾತ, ನಿಜಗುಣ ಶಿವಯೋಗಿ ಎಮ ಎರಡೇ ನಾಟಕಗಳನ್ನು ರೂಢಿಸಿಕೊಂಡು ಅನೇಕ ಕಡೆ ಪ್ರದರ್ಶಿಸಿದರು. ಇದರ ನಂತರ ಹೆತ್ತವರಾಣೆ, ಸಿಂಧೂರ ಲಕ್ಷ್ಮಣ, ಗುಡಾಗಿರಿ ಧನಿಕರ ದೌರ್ಜನ್ಯ, ಯಾರ ವಿಶ್ವಾಸ ಯಾರಿಗೆ, ಸಂಗ್ಯಾ ಬಾಳ್ಯಾ, ಸಿಡಿದೆದ್ದ ಶಿವಶಕ್ತಿ ಮುಂತಾದ ನಾಟಕಗಳನ್ನೂ ಪ್ರದರ್ಶನ ನೀಡಿದ್ದಾರೆ.

ಗುರುಪಾದಸ್ವಾಮಿ ಹಿರೇಮಠ, ಬಸಲಿಂಗಪ್ಪ ಮೂಲಿಮನಿ, ಪತ್ರಯ್ಯ ಹಿರೇಮಠ, ಬಸಪ್ಪ ಕೊಡ್ಲಿ, ಪರಪ್ಪ ಬೋಳಶೆಟ್ಟಿ, ಮುಂತಾದ ಕಲಾವಿದರು ರಂಗಭೂಮಿಯಲ್ಲಿ ಉತ್ತಮ ಕೃಷಿಯನ್ನು ಮಾಡಿ ಮುಂದಿನ ರಂಗ ಜನಾಂಗಕ್ಕೆ ಮಾದರಿಯಾದರು. ಸಧ್ಯದ ಆಧುನಿಕ ಸಮಾಜದಲ್ಲಿ ಟಿ.ವಿ. ಮತ್ತು ಸಿನೇಮಾಗಳ ಹಾವಳಿ ಮಿತಿ ಮೀರಿದ ಈ ಸಂದರ್ಭದಲ್ಲೂ ನಂದೆಣ್ಣವರ ಜಾನಪದ ಕಲೆಯ ಉಳಿವಿಗಾಗಿ ಸಾಕಷ್ಟು ಶ್ರಮವಹಿಸಿ ದುಡಿದಿದ್ದಾರೆ ದುಡಿಯುತ್ತಿದ್ದಾರೆ. ಇವರ ನಾಟಕ ಪ್ರದರ್ಶನಗಳು ಧಾರವಾಡ ಆಕಾಶವಾಣಿಯಲ್ಲೂ ಬಿತ್ತರಗೊಂಡಿವೆ. ಈ ನಾಟಕ ತಂಡವು ಹಲವಾರು ರಾಜ್ಯ ಮಟ್ಟದ ಕಲಾಮೇಳದಲ್ಲೂ ಭಾವವಹಿಸಿ ಪ್ರಶಸ್ತಿ ಪ್ರಮಾಣ ಪತ್ರಗಳನ್ನೂ ಪಡೆದಿದೆ. ಮಾರುತಿ ಮುರಗೋಡ, ಪರಪ್ಪ ನಂದೆಣ್ಣವರ, ಶಂಕರ ಮೂಲಿಮನಿ, ಪ್ರಕಾಶ ಹಳ್ಳೂರ, ಹಣಮಂತ ಮುಗದ, ನಿಂಗಪ್ಪ ಹೊಳಿ, ಶೇಖಯ್ಯ ಹೂಗಾರ, ಮಲ್ಲಯ್ಯ ಹೂಗಾರ ಬಸನಗೌಡ ಸಂಕಣ್ಣವರ, ಬಾಲಚಂದ್ರ ಕುಡಚಿ, ನಿಂಬಣ್ಣ ಬಡವಣ್ಣವರ, ಮುಂತಾದವರು ಇವರ ಪಾರಿಜಾತ ನಾಟಕದ ಪಾತ್ರಧಾರಿಗಳು.

ವಿಳಾಸ: ಪರಪ್ಪ ನಂದೆಣ್ಣವರ ಶ್ರೀ ಪಾಂಡುರಂಗ ನಾಟ್ಯ ಸಂಘ ಜಾಲಿಕೊಪ್ಪ ತಾ: ಬೈಲಹೊಂಗಲ. ಜಿಲ್ಲಾ: ಬೆಳಗಾವಿ ಮೊ: 9591852648

# ಗೋಕಾಕ ತಾಲೂಕು

## ಜಾನಪದ ರಂಗ ತಂಡಗಳು

1) ಬಸವರಾಜ ಬೇಮಲಾಪೂರಿಯವರ ಶಿವಶಕ್ತಿ ಸಣ್ಣಾಟದ ತಂಡ, ಪಾಮಲದಿನ್ನಿ. ತಾ: ಗೋಕಾಕ

2) ಆನಂದ ಮಗುದುಮ್ಮವರ ಶ್ರೀ ಕೃಷ್ಣ ಪಾರಿಜಾತ ತಂಡ ಪಾಮಲದಿನ್ನಿ, ತಾ: ಗೋಕಾಕ

3) ಲಗಮಣ್ಣ ದೊಡಮನಿಯವರ ನಾಟಕ ಸಂಘ, ತಳಕಡಿನಾಳ. ತಾ: ಗೋಕಾಕ

4) ಪ್ರಕಾಶ ನಡಗಟ್ಟಿಯವರ ರಾಧಾಕೃಷ್ಣನಾಟದ ತಂಡ, ಧೂಪದಾಳ. ತಾ: ಗೋಕಾಕ


5) ಈಶ್ವರಚಂದ್ರ ಬೆಟಗೇರಿಯವರ ಬಯಲಾಟದ ತಂಡ, ಗೋಕಾಕ

6) ತ್ರಿಮೂರ್ತಿ ಪೌರಾಣಿಕ ನಾಟಕ ಸಂಘ, ಅಂಬಿಗೇರ ಗಲ್ಲಿ, ಗೋಕಾಕ

7) ಸೋಮಪ್ಪ ಮಳಗಲಿಯವರ ಬಯಲಾಟದ ತಂಡ, ಹಿರೇಬೂದಿಹಾಳ. ತಾ: ಗೋಕಾಕ

8) ಶ್ರೀ ಬಸವೇಶ್ವರ ನಾಟ್ಯ ಸಂಘ, ಪಾಮಲದಿನ್ನಿ, ತಾ: ಗೋಕಾಕ

# ನಟರು, ನಾಟಕಕಾರರು ಹಾಗೂ ರಂಗ ಕರ್ಮಿಗಳು



## ಶ್ರೀ ಬಸವರಾಜ ಹಾಲಪ್ಪ ಖೇಮಲಾಪುರೆ

ಪಾಮಲದಿನ್ನಿ


ಪಾರೀಶಪ್ಪ ಖೇಮಲಾಪುರೆ ಇವರ ಪರಿಶ್ರಮದ ಫಲವಾಗಿ 1948 ರಲ್ಲಿ ಹುಟ್ಟಿಕೊಂಡ ಈ ನಾಟ್ಯ ಸಂಘದ ಪ್ರಮುಖ ಬಯಲಾಟ 'ಶಿವಶಕ್ತಿ' ಎಂಬ ಪ್ರಸಿದ್ಧ ಆಖ್ಯಾನ. ಈ ಕಥೆಯನ್ನು ರಚಿಸಿದವರು ಇಂಡಿ ತಾಲೂಕಿನ ಹಲಸಂಗಿ ಮೌಲಾಲಿ ಸಾಹೇಬರು. ಇದನ್ನು ಬೆಳಕಿಗೆ ತಂದವರು ಅಥಣಿ ತಾಲೂಕಿನ ಚಿಕ್ಕಟ್ರೆಯ ಗಂಗಾರಾಮರು. ರಾಮಪ್ಪ ಮುಗದುಮ್, ಬಾಳಪ್ಪ ಮದಿಹಳ್ಳಿ, ಆರೇರ ಯಲ್ಲಪ್ಪ ರಕ್ಷಿ, ತಮ್ಮಣ್ಣಪ್ಪ ಡಬಾಜ ಮುಂತಾದವರು ಆಗಿನ ಹಿರಿಯ ಕಲಾವಿದರಾಗಿದ್ದರು. ಇವರೆಲ್ಲರ ಮಕ್ಕಳಾದ ಬಸವರಾಜ ಖೇಮಲಾಪುರೆ, ಬಸಪ್ಪ ಮದಿಹಳ್ಳಿ, ಸಂತ್ರಾಮ ಆರೇರ, ಆನಂದ ಮುಗದುಮ್, ಕಲ್ಲಪ್ಪ ದುರದುಂಡಿ, ಚನ್ನಪ್ಪ ಕಂಬಾರ ಮುಂತಾದವರು 1968ರಿಂದ ಇಂದಿನವರೆಗೂ ನಡೆಸಿಕೊಂಡು ಬಂದು ಮತ್ತೆ ಇವರ ಮಕ್ಕಳಾದ ಸಾಗರ ಖೇಮಲಾಪುರೆ, ಮಹದೇವ ಮದಿಹಳ್ಳಿ, ಸಿದ್ದಪ್ಪ ಮುಗದುಮ್, ವಿಠ್ಠಲ ಆರೇರ ಮುಂತಾದವರಿಗೆಲ್ಲ ಈಗ ಎರಡು ವರ್ಷದಿಂದ ಈ ಜಾನಪದ ಕಲೆಯನ್ನು ರೂಢಿಸಿದ್ದಾರೆ. ಅಂದರೆ ಮೂರು ತಲೆಮಾರಿನಿಂದ ವಂಶ ಪರಂಪರಾಗತವಾಗಿ ಈ ಜಾನಪದ ರಂಗಕಲೆ ಮುಂದುವರೆದುಕೊಂಡು ಬಂದಿದ್ದು ನಿಜಕ್ಕೂ ರೋಚಕ!

ನಮ್ಮ ತಂಡವು ಮುಖ್ಯವಾಗಿ ಸುತ್ತಮುತ್ತಲು ಜಾತ್ರೆ, ಉತ್ಸವಗಳಲ್ಲಿ ಈ 'ಶಿವಶಕ್ತಿ' ಬಯಲಾಟವನ್ನು ಆಡುತ್ತಾ ಬಂದಿದೆ. ಅದರಂತೆ ಕನ್ನಡ ಮತ್ತು ಸಮಸ್ಕೃತಿ ಇಲಾಖೆಯ ಸಹಯೋಗದಿಂದಲೂ ಹಲವಾರು ಪ್ರಯೋಗಗಳನ್ನು ಮಾಡಿದೆ. ಅಲ್ಲದೆ 1980 ರಿಂದ ಧಾರವಾಡ ಆಕಾಶವಾಣಿ ಕೇಂದ್ರದಲ್ಲಿ 'ಬಿ' ಗ್ರೇಡಿನ ಕಲಾವಿದರ ತಂಡವಾಗಿ ಇಂದಿಗೂ ಕಾರ್ಯಕ್ರಮ ನೀಡುತ್ತಿದೆ, 1968 ರಿಂದ ಇಲ್ಲಿಯವರೆಗೆ ಸಂಘದ ಮುಖ್ಯಸ್ಥರಾಗಿ ಹಾಗೂ ಕಲಾವಿದರಾಗಿ ಪ್ರಸ್ತುತ ನಾಟಕವನ್ನು ಇನ್ನೂ ಉತ್ತಮ ರೀತಿಯಲ್ಲಿ ಪ್ರದರ್ಶನ ನೀಡುತ್ತ ರಂಗಕಲಾ ಸೇವೆಯನ್ನು ಶ್ರೀ ಬಸವರಾಜ ಖೇಮಲಾಪುರೆಯವರು ಅವಿಶ್ರಾಂತವಾಗಿ ಮಾಡುತ್ತಿದ್ದಾರೆ.

ಮುಖ್ಯಸ್ಥರ ವಿಳಾಸ: ಶ್ರೀ ಬಸವರಾಜ ಹಾಲಪ್ಪ ಖೇಮಲಾಪುರೆ, ಶ್ರಿ ಬಸವೇಶ್ವರ ನಾಟ್ಯ ಸಂಘ, ಪಾಮಲದಿನ್ನಿ, ತಾ: ಗೋಕಾಕ. ಮೊ: 9886941217

## ಡಾ. ಸಿ. ಕೆ. ನಾವಲಗಿ, ಗೋಕಾಕ


ಬೈಲಹೊಂಗಲ ತಾಲೂಕು ಬಸರಕೋಡ ಗ್ರಾಮದಲ್ಲಿ ಜನಿಸಿ, ಕಿತ್ತೂರು, ಬೆಳಗಾವಿ, ಧಾರವಾಡದಲ್ಲಿ ಶಿಕ್ಷಣ ಪಡೆದು ಪಿ.ಎಚ್‌ಡಿ ಪದವಿಯನ್ನೂ ಹೊಂದಿ ಜಾನಪದ



ಸಂಶೋಧನಾ ಕಾರ್ಯದಲ್ಲಿ ವಿಶೇಷ ಉತ್ಸುಕರಾಗಿದ್ದ ಡಾ. ಸಿ.ಕೆ. ನಾವಲಗಿಯವರು ಜಾನಪದ ರಂಗಭೂಮಿಯ ಸೇವೆಯಲ್ಲೂ ಸಾಕಷ್ಟು ಕೆಲಸ ಮಾಡಿದ್ದಾರೆ. ಬೆಳಗಾವಿಯಲ್ಲಿ ಡಾ. ಚಂದ್ರಶೇಖರ ಕಂಬಾರರ ನಾಟಕೋತ್ಸವ ಏರ್ಪಡಿಸುವಲ್ಲಿ ಸಕ್ರಿಯ ಪಾತ್ರ ವಹಿಸಿದ್ದಾರೆ. ಗೋಕಾಕಿನಲ್ಲಿ ಹಲವಾರುಬಾರಿ ನೀನಾಸಂ ಹಾಗೂ ಇತರೆ ತಂಡಗಳ ನಾಟಕಗಳನ್ನು ಏರ್ಪಡಿಸುವಲ್ಲಿ ಪ್ರಮುಖ ಪಾತ್ರವಹಿಸಿದ್ದಾರೆ. ಕುವೆಂಪು ನಾಟಕಗಳನ್ನು ಆಡಿಸಿದ್ದಾರೆ. ಜಿಲ್ಲೆಯಾದ್ಯಂತ ಸಣ್ಣಾಟ, ಕೃಷ್ಣ ಪಾರಿಜಾತಗಳನ್ನೂ ಆಡಿಸಿದ್ದಾರೆ. ಕೌಜಲಗಿ ನಿಂಗವ್ವನ ಪಾರಿಜಾತ ಉತ್ಸವವನ್ನೂಕೂಡ ಕೌಜಲಗಿಯಲ್ಲಿ ಏರ್ಪಡಿಸಿದ್ದರು. ಜಾನಪದ ಶಿಷ್ಟ ರಂಗಭೂಮಿ ಕುರಿತು ಹಲವು ಉಪನ್ಯಾಸ ನೀಡಿದ್ದಾರೆ. ಲೇಖನಗಳನ್ನೂ ಬರೆದಿದ್ದಾರೆ. ಬೆಳಗಾವಿ ಜಿಲ್ಲೆಯ ಜನಪದ ಕಲಾವಿದರು ಎಂಬ ವ್ಯಕ್ತಿ ಪರಿಚಯ ಪುಸ್ತಕವನ್ನೂ ಬರೆದಿದ್ದಾರೆ. ರಂಗಭೂಮಿ ಕಲಾವಿದರನ್ನು ಕುರಿತು ಪತ್ರಿಕೆಗಳಲ್ಲಿ ಪರಿಚಯವನ್ನೂ ಬರೆದಿದ್ದಾರೆ.

ಜಾನಪದ ಸ್ಪಂದನ, ಗಾದೆಗಳಲ್ಲಿ ಹಾಸ್ಯ, ಗ್ರಾಮೀಣ ಗ್ರಹಿಕೆ, ವಚನ ಸಾಹಿತ್ಯ ಹಾಗೂ ಜಾನಪದ, ಜನಪದ ಕಥನ ಗೀತ ಸಂಚಯ, ಜಾನಪದ ಚಿಂತನ, ಶರಣ ಸಂಗಾತ, ವಿಮರ್ಶನ ಗ್ರಹಿಕೆ ಹೀಗೆ, ಇನ್ನೂ ಹಲವಾರು ಕೃತಿಗಳನ್ನು ರಚಿಸಿದ, ಹಲವಾರು ಗ್ರಂಥಗಳನ್ನೂ ಸಂಪಾದಿಸಿದ ನಾವಲಗಿಯವರು ಒಬ್ಬ ಜಾನಪದ ವಿದ್ವಾಂಸ, ಸಂಶೋಧಕ, ವಿಮರ್ಶಕ ಹಾಗೂ ವಾಗ್ಮಿ ಎಂದು ಗುರುತಿಸಿಕೊಂಡ ಇವರಿಗೆ ಬೆಂಗಳೂರಿನ ಕನಕ ಪ್ರತಿಷ್ಠಾನದಿಂದ ಪ್ರಕಾಶಿತವಾದ ಇವರ 2003ನೇ ಸಾಲಿನ 'ಜಾನಪದ ಸಮಾಲೋಕ' ಕ್ಕೆ ರಾಜ್ಯ ಕನ್ನಡ ಸಾಹಿತ್ಯ ಪರಿಷತ್ತಿನ 'ಅಕ್ಕಮ್ಮ ಗಿರಿಗೌಡ ರುದ್ರಪ್ಪ ದತ್ತಿ ಪ್ರಶಸ್ತಿ ಲಭಿಸಿದೆ. 2008ರಲ್ಲಿ ಡಾ. ಬಿ. ಎಸ್. ಗದ್ದಗಿಮಠ ಅವರ ಹೆಸರಿನ 'ಜಾನಪದ ತಜ್ಞ' ಪ್ರಶಸ್ತಿಯೂ ಗಿಟ್ಟಿದೆ. ಐವತ್ತೈದು ವಸಂತಗಳನ್ನು ಕಳೆದ ಡಾ. ಸಿ. ಕೆ. ನಾವಲಗಿಯವರು ಸಧ್ಯ ಗೋಕಾಕಿನ ಜೆ.ಎಸ್.ಎಸ್. ಕಾಲೇಜಿನಲ್ಲಿ ಕನ್ನಡ ಭಾಷಾ ಬೋಧಕರಾಗಿದ್ದಾರೆ ಹಾಗೂ ಕರ್ನಾಟಕ ಜಾನಪದ ಪರಿಷತ್ತಿನ ಜಿಲ್ಲಾ ಘಟಕಕ್ಕೆ ಅಧ್ಯಕ್ಷರೂ ಆಗಿದ್ದಾರೆ.

ವಿಳಾಸ: 'ಚೆಂಬೆಳಕು' ವಿದ್ಯಾನಗರ, ಗೋಕಾಕ. ಬೆಳಗಾವಿ ಜಿಲ್ಲೆ: 591307
ದೂ: 08332 227016 ಮೊ: 9448638077



## ಮಹಾಲಿಂಗ ಮಂಗಿ, ಗೋಕಾಕ

ಚಿಕ್ಕೋಡಿ ತಾಲೂಕು ಜಾಗನೂರಲ್ಲಿ 1950 ರಲ್ಲಿ ಜನಿಸಿದ ಇವರು, ವೃತ್ತಿಯಿಂದ ಗೋಕಾಕ್ ಮಿಲ್ಸ್ ಕಾರ್ಮಿಕರಾಗಿದ್ದು ಪ್ರವೃತ್ತಿಯಿಂದ ನಾಡಿನ ಅತ್ಯಂತ ಹೆಸರಾಂತ ವಿಮರ್ಶಕ, ಜಾನಪದ ತಜ್ಞ, ಕವಿ, ಕಾದಂಬರಿಕಾರ, ಕತೆಗಾರ, ಲೇಖಕ,


ಚಿತ್ರಕಾರ, ಸಂಘಟಕ, ಪತ್ರಕರ್ತ, ಹೋರಾಟಗಾರ. ಮಹಾಲಿಂಗ ಮಂಗಿಯವರು ನಾಟಕಕಾರ, ನಟ, ನಿರ್ದೇಶಕರಾಗಿಯೂ ಬಹುಜನರ ಮನಸ್ಸನ್ನು ಸೆಳೆದದ್ದು ವಿಶೇಷ. ಮಂಗಿಯವರು ಭಾವೈಕ್ಯತೆಗೆ ಸಂಬಂಧಿಸಿದ 'ಆತ್ಮ ಯಾವಕುಲ ಜೀವ ಯಾವ ಕುಲ?' ಮುಳುಗಡೆ ದುರಂತಕ್ಕೆ ಸಂಬಂಧಿಸಿದ 'ಮುಳುಗಡೆ' ವರದಕ್ಷಿಣೆ ಕುರಿತು 'ವಧು ದಹನ' ಸಾಕ್ಷರತೆಯ 'ಕಣ್ಣಿದ್ದೂ ಕುರುಡ' ಗಣೇಶೋತ್ಸವದ ವಿಡಂಬನೆ 'ಗಣಪತಿಯ ತಿಥಿ' ವೃತ್ತಿ ಪ್ರಧಾನವಾದ 'ಉದ್ಯೋಗಂ ಪುರುಷ ಲಕ್ಷಣಂ', ಚಾರಿತ್ರಿಕ ಗುಣದ 'ಸ್ವಾತಂತ್ರ್ಯ ವೀರ ಚಂದ್ರಶೇಖರ ಆಜಾದ', ಸ್ವಯಂಘೋಷಿತ ಆಸ್ತಿ ತೆರಿಗೆಗೆ ಸಂಬಂಧಿಸಿದ 'ಘೋಷಣೆ' ಮುಂತಾದ ನಾಟಕಗಳನ್ನು ರಚಿಸಿದ್ದಾರೆ.

ವಧುವರ, ಹನ್ನೆರಡು ಜನ ಬುದ್ಧಿವಂತರು, ಅಣ್ಣ ತಂಗಿ, ಮನೆ ಮುರುಕ ಮಿತ್ರ, ರತ್ನ ಮಾಂಗಲ್ಯ, ಪುತ್ಥಳಿ, ಗಂಡನ ಮಾನ, ತಂಗಿಯ ಮನೆ, ನಾರ್‍ಯಾನ ಕರಾಮತಿ, ಟ್ರಿಬ್ಬಲ್ ತಾಳಿ, ಜೋಕುಮಾರ ಸ್ವಾಮಿ, ಹಯವದನ, ಕೊನೇ ನಮಸ್ಕಾರ, ಸರ್ವೇ ಜನಾಃ ಸುಖೀನೋ ಭವಂತು, ಕಣ್ಣಿದ್ದೂ ಕುರುಡ, ಜಲಗಾರ ಮುಂತಾದ ನಾಟಕಗಳಲ್ಲಿ ವೈವಿಧ್ಯಪೂರ್ಣ ಪಾತ್ರಗಳನ್ನು ಮಾಡಿದ್ದಾರೆ. ಇವಗಳಲ್ಲಿ ಜೋಕುಮಾರ ಸ್ವಾಮಿ, ಹಯವದನ, ಕೊನೇ ನಮಸ್ಕಾರ, ಸರ್ವೇ ಜಾನಾ ಸುಖೀನೋ ಭವಂತು, ಕಣ್ಣಿದ್ದೂ ಕುರುಡ, ಮುಂತಾದ ನಾಟಕಗಳ ನಿರ್ದೇಶನವನ್ನೂ ಮಾಡಿದ್ದಾರೆ.

ರಂಗ ಪ್ರಬಂಧ ಮಂಡನೆ, ರಂಗ ಸಂವಾದದಲ್ಲಿ ಭಾಗ, ರಂಗ ಉಪನ್ಯಾಸ ನೀಡಕೆ ಮುಂತಾದ ರಂಗಚಟುವಟಿಕೆಗಳಲ್ಲಿ ಸಕ್ರಿಯ ಪಾತ್ರ, ಆಕಾಶವಾಣಿ ಧಾರವಾಡದ ಕೇಂದ್ರದಲ್ಲೂ ನಾಟಕ, ರೂಪಕ, ಶಬ್ದಚಿತ್ರ, ಸಂವಾದ, ಭಾಷಣ ಮುಂತಾದವುಗಳಿಂದಲೂ ಎಡೆಬಿಡದೆ ತಮ್ಮನ್ನ ತಾವು ತೊಡಗಿಸಿಕೊಂಡದ್ದುಂಟು, ದೂರದರ್ಶನದಲ್ಲೂ ಜೋಕುಮಾರ ಸ್ವಾಮಿಯ ಗೌಡನ ಪಾತ್ರದ ಅಭಿನಯ ಮೂಡಿಬಂದಿದೆ.

ಚಲನಚಿತ್ರ ದಾನಮ್ಮ ದೇವಿ ಮಹಾತ್ಮೆಯಲ್ಲೂ ಕಿರು ಪಾತ್ರ ವಹಿಸಿದ್ದಾರೆ. ಮಂಗಿಯವರು ರಂಗ ಸಂಘಟನೆಯ ನಿಟ್ಟಿನಲ್ಲಿ ಕನ್ನಡ ಮತ್ತು ಸಂಸ್ಕೃತಿ ಸಂಘ, ಜ್ಯೋತಿ ಕಲಾವಿದರು ಹಾಗೂ 2002 ರಲ್ಲಿ ವಿಚಾರ ಸಂಕಿರಣ ಮತ್ತು ನಾಟಕೋತ್ಸವಗಳನ್ನೂ ಮಾಡಿದ ಶ್ರೇಯಸ್ಸು ಇವರದು. ಅದೇ ರೀತಿ ಹಲವಾರು ಸಂಘ ಸಂಸ್ಥೆಗಳಿಗೆ ಪದಾಧಿಕಾರಿಯಾಗಿಯೂ ಸೇವೆ ಸಲ್ಲಿಸಿದ್ದಾರೆ. ಹಲವಾರು ಪ್ರಶಸ್ತಿ ಪುರಸ್ಕಾರಗಳೂ ಇವರ ವಶವಾಗಿವೆ. ಇವರ ಶ್ರೀಮತಿ ಲಕ್ಷ್ಮೀಬಾಯಿಯವರೂ ಕೂಡ ರಂಗಾಸಕ್ತರಾಗಿದ್ದು ಕಿತ್ತೂರು ಚನ್ನಮ್ಮ, ಕೆಳದಿ ಚನ್ನಮ್ಮ, ಕೋಳೂರು ಕೊಡಗೂಸು ಮುಂತಾದ ನಾಟಕಗಳಿಗೆ ರಂಗ ಸಜ್ಜಿಕೆಯ ರಚನೆಯನ್ನೂ ಮಾಡಿದ್ದಾರೆ.

ವಿಳಾಸ: 'ಶುಭೋದಯ' ಬಾಂಬೆ ಚಾಳ್ ಹತ್ತಿರ, ಲಕ್ಷ್ಮೀ ಬಡಾವಣೆ, ಗೋಕಾಕ– 591307 ಜಿ: ಬೆಳಗಾವಿ ಮೊ: 9880515868



## ರಾಮಪ್ಪ ಶಿವಲಿಂಗಪ್ಪ ಮುಧೋಳ, ಮೂಡಲಗಿ

ತಮ್ಮ ಜೀವನ ಪರ್ಯಂತ ರಂಗಭೂಮಿಯ ಸೇವೆಯಲ್ಲಿ ವೃತ್ತಿ ರಂಗಭೂಮಿಯ ಕಲಾವಿದರಾಗಿ ಹಲವಾರು ಕಂಪನಿಗಳಲ್ಲಿ ದುಡಿದಿದ್ದಾರೆ. ಕೇವಲ ಮೂರನೆಯ ತರಗತಿಯವರೆಗೆ ಓದಿದ ರಾಮಪ್ಪ ರಂಗಭೂಮಿಯಲ್ಲಿ ಮಾತ್ರ ಅದ್ವಿತೀಯ ಸಾಧನೆ ಗೈದಿದ್ದಾರೆ. 1932 ರಲ್ಲಿ ಜನ್ಮತಳೆದ ರಾಮಣ್ಣ 1948ರಲ್ಲಿ ರಂಗಭೂಮಿಯ ಪ್ರವೇಶವನ್ನು ಬೆಳ್ಳಿಚುಕ್ಕಿ ಎಂಬ ನಾಟಕದಲ್ಲಿ ಮುತ್ತಜ್ಜನ ಪಾತ್ರ ಮಾಡುವ ಮೂಲಕ ಗೈದರು. ಮುಂದೆ ಬಂಜೆ ತೊಟ್ಟಿಲಿನ ನಂತರ ಸಂಪತ್ತಿಗೆ ಸವಾಲಿನಲ್ಲಿ ಭದ್ರನ ಪಾತ್ರವನ್ನು ಭಯಂಕರವಾಗಿ ಮಾಡಿದರು. ಹಲವಾರು ಪ್ರಶಸ್ತಿ ಪುರಸ್ಕಾರಗಳನ್ನೂ ಪಡೆದಿದ್ದಾರೆ.

ನಂತರ 15 ವರ್ಷ ಗೋಕಾಕ ಕಂಪನಿಯಲ್ಲಿ ಇದ್ದು ಮುಂದೆ ಹುಚ್ಚೇಶ್ವರ ನಾಟ್ಯ ಸಂಘ ಕಮತಗಿಯಲ್ಲಿ ಒಂದು ವರ್ಷ ಸೇವೆ ಸಲ್ಲಿಸಿ 1984ಕ್ಕೆ ಗವಾಯಿಗಳ ಕಂಪನಿ ಸೇರಿದರು. ಇದಾದ ಮೇಲೆ 1985ರಲ್ಲಿ ಶ್ರೀ ಶಿವಬೋಧರಂಗ ನಾಟ್ಯ ಕಲಾ ಸಂಘ ಎಂಬ ಸಂಸ್ಥೆಯನ್ನು ಸ್ಥಾಪಿಸಿ ಸುಮಾರು ವರ್ಷಗಳವರೆಗೆ ನಡೆಸಿದರು. 1996 ರಲ್ಲಿ ಅಖಿಲ ಕರ್ನಾಟಕ ವೃತ್ತಿ ರಂಗಭೂಮಿ ಕಲಾವಿದರ ಪ್ರಥಮ ಸಮ್ಮೇಳನದಲ್ಲಿ ತಮ್ಮ ಕಲೆಯನ್ನು ಪ್ರದರ್ಶಿಸಿದರು. ಇವರ ಎಷ್ಟೋ ನಾಟಕಗಳು ರೇಡಿಯೋ ಪ್ರಸಾರ ಗೊಂಡಿವೆ. ಪೌರಾಣಿಕ ನಾಟಕೋತ್ಸವದಲ್ಲೂ ಭಾಗವಹಿಸಿದ್ದಾರೆ. 2002ರಲ್ಲಿ ಇಟಗಿ ಉತ್ಸವದಲ್ಲೂ ಭಾಗವಹಿಸಿದ್ದಾರೆ ಶ್ರೀ ರಾಮಣ್ಣವರಿಗೆ ಇಂದಿಗೂ ಬಣ್ಣ ಹಚ್ಚಿಕೊಳ್ಳುವ ಲವಲವಿಕೆ.

ವಿಳಾಸ: ರಾಮಪ್ಪ ಶಿವಲಿಂಗಪ್ಪ ಮುಧೋಳ, ಮೂಡಲಗಿ ತಾ:
ಗೋಕಾಕ ಜಿ: ಬೆಳಗಾವಿ ಮೊ: 9481327722



## ಈಶ್ವರಚಂದ್ರ ಶಿವಪುತ್ರಪ್ಪ ಬೆಟಗೇರಿ, ಗೋಕಾಕ

ಬೆಳಗಾವಿ ಜಿಲ್ಲೆ, ಗೋಕಾಕ ತಾಲೂಕಿನ ಬೆಟಗೇರಿ ಗ್ರಾಮದಲ್ಲಿ ಈಶ್ವರಚಂದ್ರ ಶಿವಪುತ್ರಪ್ಪ ಬೆಟಗೇರಿ ಇವರು ಜನಿಸಿದ್ದು 01–11–1958 ರಂದು. ಬಿ.ಎಸ್.ಎನ್.ಎಲ್ ನೌಕರರಾಗಿದ್ದರೂ ಹವ್ಯಾಸದಲ್ಲಿ ರಂಗ ಕಲಾವಿದರಾಗಿದ್ದಾರೆ. ಬೆಟಗೇರಿಯವರು ಪ್ರಾಥಮಿಕ ಹಾಗೂ ಪ್ರೌಢ ಶಾಲಾ ಮಟ್ಟದಲ್ಲಿಯೇ ರಂಗದ ಗೀಳು ಹಚ್ಚಿಕೊಂಡಿದ್ದರು. 'ಬಡವರ ಬಂಧು' 'ಅಣ್ಣತಂಗಿ' 'ಆದರ್ಶ ಶಿಕ್ಷಕ' 'ಎಮ್.ಎಲ್.ಎ' 'ಸ್ವಾವಲಂಬನ' 'ಕಪಟ ಕಾರಸ್ಥಾನ' 'ಸಂಗೊಳ್ಳಿ ರಾಯಣ್ಣ' 'ಪಂಚನ ರಾಜ್ಯ' ಅರ್ಥಾತ್ 'ಹಳ್ಳಿಯ ಕೊಳ್ಳಿ' ಮುಂತಾದ 18 ನಾಟಕಗಳಲ್ಲಿ ವಿಭಿನ್ನ ಪಾತ್ರಗಳನ್ನು ಮಾಡಿದ್ದಾರೆ.

ಜಾನಪದ ರಂಗ ಚಟುವಟಿಕೆಗಳಿಗೆ ಸಂಬಂಧಿಸಿದಂತೆ, 1982 ರಲ್ಲಿ ಗೋಕಾಕಿನ ಶ್ರೀ ಗಜಾನನ ಬಯಲಾಟ ಮೇಳದಲ್ಲಿ ಕೂಡಿಕೊಂಡು ಸತ್ಯವಾನ ಸಾವಿತ್ರಿ, ಮಂತ್ರಿ, ಮಾಲ್ವಿ ದೇವಿ, ಶ್ರೀದೇವಿ, ನಾರದ ಮುಂತಾದ ಪಾತ್ರಗಳಲ್ಲಿ ಕಾಣಿಸಿಕೊಂಡಿದ್ದಲ್ಲದೇ ಸಾವಿತ್ರಿಯ ಪಾತ್ರದಲ್ಲೂ ಮಿಂಚಿದ್ದಾರೆ. ಇವರು ಪಾತ್ರವಹಿಸಿದ ನಾಟಕಗಳು ಧಾರವಾಡ ಆಕಾಶವಾಣಿ ಹಾಗೂ ದೂರದರ್ಶನದಲ್ಲೂ ಮೂಲಕವಾಗಿಯೂ ಪ್ರಸಾರವಾಗಿವೆ. 'ಏಡ್ಸ್ ಆಶಾ ಕಿರಣ' ಎಂಬ ಸ್ವಂತ ನಾಟಕ ಚರನೆನ್ನೂ ಮಾಡಿ ರಂಗಕ್ಕೆ ತಂದಿದ್ದಾರೆ. ಅಲ್ಲದೇ ಇನ್ನೂ ಅನೇಕ ಅಪ್ರಕಟಿತ ಕೃತಗಳೂ ಪ್ರಕಾಶಿತಗೊಂಡು ಹೊರಬರಬೇಕಾಗಿದೆ. ಚಿತ್ತರಗಿ ಗಂಗಾಧರ ಶಾಸ್ತ್ರಿಗಳಿಂದ ವಿರಚಿತ 'ಯೋಗಶಕ್ತಿ' ನಾಟಕ ಕೃತಿಯನ್ನು ಬಯಲಾಟವನ್ನಾಗಿ ಮಾರ್ಪಡಿಸಿ ಅದರಲ್ಲಿ ಸರ್ವಮಂಗಲೆ ಹಾಗೂ ನಿಂಗಿಯ ಪಾತ್ರಗಳನ್ನು ಯಶಸ್ವಿಯಾಗಿ ನಿರ್ವಹಿಸಿದ್ದಾರೆ. ಇದೇರೀತಿ 'ಲವಕುಶ' 'ಕೃಷ್ಣ ಪಾರಿಜಾತ' 'ನಿಜಗುಣ ಶಿವಯೋಗಿ' ಮುಂತಾದ ನಾಟಕಗಳಲ್ಲೂ ಅಭಿನಯಿಸಿದ್ದಾರೆ. ಬೆಟಗೇರಿ ಇವರು ಒಳ್ಳೆ ಮಾತುಗಾರರೂ ಹೌದು. ಇವರಿಗೆ ಸ್ಥಳೀಯ 'ರಾಜ್ಯೋತ್ಸವ ಪ್ರಶಸ್ತಿ' (ಗೋಕಾಕ) ಹಾಗೂ 'ಗಡಿನಾಡೋತ್ಸವ ಸನ್ಮಾನ' (ಅಥಣಿ) ಲಭಿಸಿವೆ. ಸಧ್ಯ ಇವರು ಶ್ರೀ ಸರ್ವೇಶ್ವರ ಜಾನಪದ ಕಲಾ ಬಳಗ ಗೋಕಾಕ ಇದರ ಸಂಚಾಲಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

ವಿಳಾಸ: ಈಶ್ವರಚಂದ್ರ ಎಸ್. ಬೆಟಗೇರಿ, ಶ್ರೀ ಸದ್ಗುರು ನಂದೀಲಿಂಗ ಕೃಪಾಗೃಹ 'ಮಂಗಲೇಶ್ವರ' ತಳದೇವಿ ಗುಡಿಯ ಹಿಂದೆ, ಅಂಬೇಡ್ಕರ್ ನಗರ, ಗೋಕಾಕ– 591307 ಜಿಲ್ಲಾ ಬೆಳಗಾವಿ. ದೂರವಾಣಿ: 08332–229022 ಮೊ: 9449087902

## ನಿಂಗಯ್ಯಸ್ವಾಮಿ ಪೂಜಾರಿ, ಗೋಕಾಕ

ಇವರು ರಂಗಲೋಕದಲ್ಲಿ ಲೀನವಾಗಿ ಹೋಗಿದ್ದರೂ ಜನಪದ ರಂಗಭೂಮಿಯ ಕಲಾವಿದರಾಗಿಯೇ ಜನಮನೋ ರಂಗದಲ್ಲಿ ಶಾಶ್ವತವಾಗಿ ನೆಲೆಸಿದ್ದಾರೆ. 'ನಿಜಗುಣ ಶಿವಯೋಗಿ' ಸಣ್ಣಾಟದ 'ಪ್ರಮೀಳಾ' ಪಾತ್ರಧಾರಿಯಾಗಿ ರಂಗಭೂಮಿಯಲ್ಲಿ ಗುರುತಿಸಿಕೊಳ್ಳುವ ಮೂಲಕವಾಗಿ ಜನಪದ ರಂಗಭೂಮಿಯಲ್ಲಿ ಪ್ರವೇಶ ಪಡೆದಿದ್ದರು. ಸ್ತ್ರೀ ಪಾತ್ರದ ಪಾರಂಪರಿಕ ಆಚಾರ–ವಿಚಾರ, ವಿನೋದ–ವಿಲಾಸ, ಒನಪು–ವೈಯಾರ ಎಲ್ಲವನ್ನೂ ತಮ್ಮ ನಟನೆಗೆ ಹಿನ್ನಲೆಯಾಗಿಸಿಕೊಂಡು ಹಾಡು, ಮಾತು, ಕುಣಿತ, ಅಭಿನಯಾದಿಗಳಲ್ಲಿ ಅತ್ಯಂತ ನೈಜವಾಗಿ ರಂಗ ಸಾಧನೆಯನ್ನು ಮಾಡಿದವರಾಗಿದ್ದಾರೆ. 1949 ರಿಂದ 1968 ರವರೆಗೆ ನಿರಂತರವಾಗಿ ನಡೆದ ಭಕ್ತಿ ರಸಪೂರ್ಣ 'ನಿಜಗುಣ ಶಿವಯೋಗಿ' ಆಟದಲ್ಲಿ ನಿಜಗುಣ ಶಿವಯೋಗಿಯ ಪಾತ್ರವನ್ನು ವಹಿಸಿ ಜನಮೆಚ್ಚುಗೆ ಪಡೆದಿದ್ದ ಇವರು ರಾಜ್ಯ ನಾಟಕ ಅಕಾಡೆಮಿ ಪ್ರಶಸ್ತಿ ಮತ್ತು ಜಾನಪದ ಅಕಾಡೆಮಿಯಿಂದ 1985ರಲ್ಲಿ ಪಡೆದಿದ್ದಾರೆ. 1962–63ರಲ್ಲಿ ಗೋಕಾಕ ನಗರಸಭೆಯ ಅಧ್ಯಕ್ಷರಾಗಿಯೂ ಸಾಮಾಜಿಕ, ರಾಜಕೀಯ ಸೇವೆ ಸಲ್ಲಿಸಿದ ಇವರು 1924ರಲ್ಲಿ ಜನಿಸಿದ್ದರು. ಮುಂದೆ 2006ರಲ್ಲಿ ರಂಗಲಿಂಗಾಧೀನರಾದರು. ಸಧ್ಯ ಇವರ

ಹೆಸರಿನಿಂದಲೇ ದಿ. ಲಿಂಗಯ್ಯ ಸ್ವಾಮಿ ಪ್ರತಿಷ್ಠಾನವೊಂದು ಸ್ಥಾಪಿಸಲ್ಪಟ್ಟು ತನ್ಮೂಲಕವಾಗಿ ರಂಗ ಶಿಬಿರ, ರಂಗೋತ್ಸವ, ವಿಚಾರ ಸಂಕೀರ್ಣ ಮುಂತಾದ ಚಟುವಟಿಕೆಗಳು ಗೋಕಾಕದಲ್ಲಿ ನಿರಂತರ ನಡೆಯುತ್ತಿವೆ.


ವಿಳಾಸ: ಅಶೋಕ ಪೂಜಾರಿ. ದಿ. ಲಿಂಗಯ್ಯ ಸ್ವಾಮಿ ಪ್ರತಿಷ್ಠಾನ, ಗೋಕಾಕ್ ಜಿ: ಬೆಳಗಾವಿ. ಮೊ: 9448275170

## ಸೌದತ್ತಿ ತಾಲೂಕು

### ಜಾನಪದ ರಂಗತಂಡಗಳು

1) ಮಲ್ಲಿಕಾರ್ಜುನ ಕಾರಗೆಯವರ ಪಾರಿಜಾತ ತಂಡ, ಮುರಗೋಡ. ತಾ: ಸೌದತ್ತಿ
2) ಬಾಲಪ್ಪ ಗಸ್ತಿಯವರ ಬಯಲಾಟದ ತಂಡ, ಕರುಬಗಟ್ಟಿ. ತಾ: ಸೌದತ್ತಿ
3) ಸಿದ್ಧಾರೂಢ ಯುವ ಜಾನಪದ ಕಲಾ ಸಂಘ, ಕಡಬಿ. ತಾ: ಸೌದತ್ತಿ
4) ಶಿವಸಿದ್ಧ ಬೀರಲಿಂಗೇಶ್ವರ ಪೌರಾಣಿಕ ನಾಟಕ ಸಂಘ, ಸೌದತ್ತಿ
5) ಮಹಾದೇವಿ ಮಾದರವರಪಾರಿಜಾತ ತಂಡ, ಹುಲಿಕಟ್ಟಿ. ತಾ: ಸೌದತ್ತಿ
6) ಮಲ್ಲಪ್ಪ ತಳವಾರವರ ಬಯಲಾಟ ತಂಡ, ತಡಸಲೂರು. ತಾ: ಸೌದತ್ತಿ
7) ಶ್ರೀ ಹನುಮಾನ್ ಪೌರಾಣಿಕ ನಾಟ್ಯ ಸಂಘ, ಮದ್ಲೂರ. ತಾ: ಸೌದತ್ತಿ
8) ಶ್ರೀ ದುರುದುಂಡೇಶ್ವರ ಕೃಷ್ಣ ಪಾರಿಜಾತ ಕಲಾವಿದರ ಸಂಘ, ಮುರಗೋಡ. ತಾ: ಸೌದತ್ತಿ

## ನಟರು, ನಾಟಕಕಾರರು ಹಾಗೂ ರಂಗ ಕರ್ಮಿಗಳು



## ಮಲ್ಲಿಕಾರ್ಜುನ ಹಾಲಪ್ಪ ಕಾರಗಿ, ಮುರಗೋಡ


1965 ರಲ್ಲಿ ಸ್ಥಾಪನೆಗೊಂಡ ಶ್ರೀ ದುರುದುಂಡೇಶ್ವರ ಕೃಷ್ಣ ಪಾರಿಜಾತ ಕಲಾವಿದರ ಸಂಘವನ್ನು ಕಟ್ಟಲು ಮುಂದಾದವರು ಶ್ರೀ ಸಂಗನಬಸಪ್ಪ ತಡಸಲೂರ ಮಾಸ್ತರ. ಇವರು ಮೂಲತಃ ಮುರಗೋಡದವರೇ ಆಗಿದ್ದು ಜಾನಪದ ಚಟುವಟಿಕೆಗಳಲ್ಲಿ ಎಳೆತನದಿಂಲೇ ತಮ್ಮನ್ನು ತಾವು ತೊಡಗಿಸಿಕೊಂಡಿದ್ದರು. ಆ ಭಾಗದಲ್ಲಿ ಇವರಿಂದಲೇ ಕೃಷ್ಣ ಪಾರಿಜಾತ ಸಣ್ಣಾಟವು ರೂಪಗೊಂಡುದಾಗಿತ್ತು. ಇವರ ಅವಸಾನದ ನಂತರ ದೇವಲಾಪೂರದ ಸಂಗಯ್ಯ ಮಾಸ್ತರ ಚಿಕ್ಕಮಠ ಇವರಿಂದಲೂ ತಂಡವು ಒಳ್ಳೆ ಚಟುವಟಿಕೆಯಿಂದ ಕೂಡಿತ್ತು. ಮುಂದೆ ಬಸನಗೌಡ ನಾಗಲಾಪೂರ ಮಾಸ್ತರರ ನೇತೃತ್ವದಲ್ಲಿ ತಬಲಾ ಮಾಸ್ತರ ಕಂಬಾರ ಇವರ ಮಾರ್ಗದರ್ಶನದಲ್ಲಿ, ನೀಲಪ್ಪ ಮಾಸ್ತರ ನುಗ್ಗಾನಟ್ಟಿ, ಭಾಗವತ ಶ್ರೀ ದುಂಡಪ್ಪ ಹುದ್ದಾರ ಮಾಸ್ತರ ಇವರೆಲ್ಲರ ನಂತರ ಶ್ರೀ ಮಲ್ಲಿಕಾರ್ಜುನ ಹಾಲಪ್ಪ ಕಾರಗಿ ಮಾಸ್ತರ ಈ ತಂಡವನ್ನು ನೇತೃತ್ವ ವಹಿಸಿಕೊಂಡು ನಡೆದಿದ್ದಾರೆ.

ಈ ತಂಡದಲ್ಲಿ ಮಲ್ಲಿಕಾರ್ಜುನ ಕಾರಗಿ, ಶ್ರೀಮತಿ ಲಲಿತಾ ಪಾತ್ರೋಟ ನಾವಲಗಟ್ಟಿ, ಕಮಲವ್ವ ಪಾತ್ರೋಟ ನಾವಲಗಟ್ಟಿ, ಶ್ರೀ ಕಾಶಪ್ಪ ಗಿರೆಪ್ಪ ಚಚಡಿ. ಬಸಪ್ಪ ಅಣ್ಣಪ್ಪ ಮಲಕ್ಕನವರ, ಬಸಪ್ಪ ಫಕೀರಪ್ಪ ಸೋಮಾಪೂರ, ಬಾಬು ನಿಂಗಪ್ಪ ಮೇಗೇರಿ, ಮಲಕಾಜಪ್ಪ ಬಸವಣ್ಣೆಪ್ಪ ಕುರಬೇಟ್, ಪ್ರಕಾಶ ಚನ್ನಪ್ಪ ಮಡಿವಾಳರ, ಬಸಪ್ಪ ಅಡಿವೆಪ್ಪ ಚಿನಗುಡಿ, ಹಾರ್ಮೋನಿಯಂ ಮಾಸ್ತರ ಬಸಪ್ಪ ದೊಡಮನಿ ಹಾಗೂ ತಬಲಜೀ ಸಿದ್ದಪ್ಪ ಮಾಸ್ತರ ಸಾಣಿಕೊಪ್ಪ ಮುಂತಾದವರು ಕಲಾ ಸೇವೆಯಲ್ಲಿ ತೊಡಗಿದ್ದಾರೆ. ಈ ಸಂಘವು 1975ರಲ್ಲಿ ಧಾರವಾಡ ಆಕಾಶವಾಣಿಯ ಮೂಲಕ ಪಾರಿಜಾತ ನಾಟಕವನ್ನು ಬಿತ್ತರ ಪಡಿಸಿದೆ. ಬಿ. ಬಾಳಪ್ಪನವರ ಸಹಯೋಗದೊಂದಿಗೆ ಹತ್ತಾರು ಜಿಲ್ಲಾ ಮಟ್ಟದ ರಂಗ ಚಟುವಟಿಕೆಗಳನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಆಶ್ರಯದಲ್ಲಿ ನೀಡಿದೆ. ಮೈಸೂರು ದಸರಾ ಉತ್ಸವದಲ್ಲೂ ಭಾಗವಹಿಸಿದ ಖ್ಯಾತಿ ಈ ಸಂಘಕ್ಕಿದೆ. ಕೇವಲ ಕರ್ನಾಟಕದಲ್ಲಷ್ಟೇ ಅಲ್ಲದೆ ಆಂಧ್ರ, ಮಹಾರಾಷ್ಟ್ರ, ಮುಂತಾದ ರಾಜ್ಯಗಳಲ್ಲೂ ಪ್ರದರ್ಶನ ನೀಡಿದೆ. 2007 ರಲ್ಲಿ ಸಂಘವು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಲ್ಲಿ ನೋಂದಾಯಿತವಾಗಿದೆ.

ಮುಖ್ಯಸ್ಥರ ವಿಳಾಸ: ಶ್ರೀ ದುರುದುಂಡೇಶ್ವರ ಕೃಷ್ಣ ಪಾರಿಜಾತ ಕಲಾವಿದರ ಸಂಘ, ಹೊರಟ್ಟಿ ಓಣಿ, ಮುರಗೋಡ, ತಾ: ಸೌದತ್ತಿ. ಜಿ: ಬೆಳಗಾವಿ ಮೊ: 9663907581

## ಶೀಲಪ್ಪ ವೀರಭದ್ರಪ್ಪ ಮಲಕಾಜನವರ, ಮುರಗೋಡ

ಇವರು ಮುರಗೋಡ ತಾಲೂಕಿನಲ್ಲಿ ಸಂಗ್ಯಾಬಾಳ್ಯಾ ನಾಟಕದ ಮಾಸ್ತರ್ ಆಗಿ ರಂಗ ಸೇವೆಯನ್ನು ಬಹುವಿಧವಾಗಿ ಸಲ್ಲಿಸಿದ್ದಾರೆ. ಈ ಸೇವೆಯನ್ನು ಸದರಿಯವರು 1971 ರಿಂದ ಇಲ್ಲಿಯವರೆಗೂ ಎಡಬಿಡದೇ ಮಾಡುತ್ತ ಬಂದಿದ್ದಾರೆ. ನಾಟಕ ಕಲಿಸುವುದರ ಜೊತೆಗೆ ಹಾರ್ಮೋನಿಯಂ ವಾದನ, ತಾಳವಾದ್ಯ ನುಡಿಸುವದು



ಮಾಡುತ್ತ ಬಂದಿದ್ದಾರೆ. ಅಲ್ಲದೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯವರ ಕಲಾ ಮೇಳದಲ್ಲಿ ಭಾಗವಹಿಸುತ್ತಾ ಬಂದಿದ್ದಾರೆ. ನಾಟಕ ಕಲಿಸುವುದಷ್ಟೇ ಅಲ್ಲದೇ ಪಾರಿಜಾತದ ಎಲ್ಲ ಪಾತ್ರಗಳನ್ನೂ ಇವರು ಮಾಡುತ್ತಿದ್ದರು ಹಾಗೂ ಪಾತ್ರಧಾರಿಗಳಿಗೆ ಪೋಷಾಕು ಧಾರಣ ಹಾಗೂ ಮುಖವರ್ಣಿಕೆಯನ್ನೂ ಇವರು ಮಾಡುತ್ತ ಬಂದು ವೈವಿಧ್ಯ ಪೂರ್ಣ ರಂಗ ಸೇವೆಯನ್ನು ಗೈದಿದ್ದಾರೆ. ಇಂದಿಗೂ ಕೂಡ ಇವರಿಗೆ ಈ ರಂಗ ಸೇವೆಯ ನಿಟ್ಟಿನಲ್ಲಿ ಸುತ್ತು ಮುತ್ತಲ ಊರುಗಳಿಂದ ಬಹಳವಾದ ಬೇಡಿಕೆ ಇದೆ.

ವಿಳಾಸ: ಶೀಲಪ್ಪ ವೀರಭದ್ರಪ್ಪ ಮಲಕಾಜನವರ, ಪಾರಿಜಾತ ನಾಟಕ ಮಾಸ್ತರ, ಮುರಗೋಡ. ತಾ: ಸವದತ್ತಿ ಜಿ: ಬೆಳಗಾವಿ

## ರಂಗ ಆರಾಧನಾ ಸಾಂಸ್ಕೃತಿಕ ಸಂಘಟನೆ, ಸವದತ್ತಿ

1997 ರಲ್ಲಿ ಸವದತ್ತಿಯ ಸಮಾನ ಮನಸ್ಕ ರಂಗಾಸಕ್ತರೆಲ್ಲ ಹುಟ್ಟು ಹಾಕಿದ ಸಂಸ್ಥೆಯ "ರಂಗ ಆರಾಧನಾ ಸಾಂಸ್ಕೃತಿಕ ಸಂಘಟನೆ, ಸವದತ್ತಿ". ರಾಜು ಬದಾಮಿ, ರವಿ ಭಜಂತ್ರಿ, ಸುನೀಲ ಪತ್ರಿ, ಝುಕೀರ ನದಾಫ, ಎಸ್.ಬಿ.ಜಗಾಪೂರ ಮುಂತಾದವರೆಲ್ಲ ಇದರ ಪ್ರಾಥಮಿಕ ಸದಸ್ಯರು. ಅದೇ ವರ್ಷ ನೀನಾಸಂ ಪದವೀಧರರಾದ ವಿನೋದ ಅಂಬೇಕರ ಇವರಿಂದ ಒಂದು ತಿಂಗಳ ಕಾಲ ರಂಗ ತರಬೇತಿ ಶಿಬಿರ ಆಯೋಜಿಸಿ "ಮೃಚ್ಛಕಟಿಕ" ನಾಟಕವನ್ನು ಪ್ರದರ್ಶಿಸಲಾಯಿತು. 1998 ರಲ್ಲಿ ಮತ್ತೆ ಇದೇ ನಿರ್ದೇಶಕರಿಂದ "ಉದ್ಧವ ನಾಟಕ" ಪ್ರದರ್ಶಿಸಲಾಯಿತು. 1999 ರಲ್ಲಿ ರಾಷ್ಟ್ರೀಯ ನಾಟಕ ಶಾಲೆಯ ಪದವೀಧರರಾದ ಶ್ರೀ ಜಯತೀರ್ಥ ಜೋಶಿಯವರ ನಿರ್ದೇಶನದಲ್ಲಿ ವಿಶಿಷ್ಟ ರೀತಿಯಲ್ಲಿ ಸವದತ್ತಿಯ ಕೋಟೆಯನ್ನು ವೇದಿಕೆಯನ್ನಾಗಿ ಮಾರ್ಪಡಿಸಿ "ಗುಲಾಮನ ಸ್ವಾತಂತ್ರ್ಯ ಯಾತ್ರೆ" ನಾಟಕ ಪ್ರದರ್ಶಿಸಲಾಯಿತು. 2001 ರಲ್ಲಿ ಇದೇ ನಾಟಕ ಗುಲಬರ್ಗಾ ದೂರದರ್ಶನ ಕೇಂದ್ರದಿಂದ ಸವದತ್ತಿ ಕೋಟೆಯಲ್ಲಿ ಚಿತ್ರೀಕರಣಗೊಂಡು ಪ್ರಸಾರಗೊಂಡಿತು. ಮುಂದೆ 2000 ದಲ್ಲಿ 5 ರಿಂದ 6 ವಿವಿಧ ನಾಟಕಗಳ "ಪರಸಗಡ ನಾಟಕೋತ್ಸವ" ಆರಂಭಿಸಲಾಯಿತು. ಈ ಉತ್ಸವದಲ್ಲಿ ಇಲ್ಲಿಯವರೆಗೆ ನೀನಾಸಂ, ಶಿವಸಂಚಾರ, ಜಮುರಾ, ಬೆಳಗಾವಿ ರಂಗ ಸಂಪದ, ಧಾರವಾಡದ ಸಮುದಾಯ ಹಾಗೂ ಗದುಗಿನ ಹವ್ಯಾಸಿ ಕಲಾ ತಂಡಗಳಿಂದ ಸುಮಾರು 50ಕ್ಕೂ ಹೆಚ್ಚು ವಿವಿಧ ನಾಟಕಗಳ ಪ್ರದರ್ಶನ ನೀಡಲಾಗಿದೆ. ಅಲ್ಲದೇ ನಮ್ಮ ತಂಡದಿಂದ "ಮಿಂಚು, ಮೆಟ್ಟಿಲೇರುವ ಗಡಿಬಿಡಿಯಲ್ಲಿ ಕೊಡೆ ಮರೆತವರು, ಪ್ರತಿಶೋಧ, ದಾರಿ ಯಾವುದಯ್ಯಾ ವೈಕುಂಠಕೆ, ಹಸಿರೆಲೆ ಹಣ್ಣೆಲೆ, ಚೋರ ಚರಣದಾಸ, ಹಸ್ತಾಂತರ, ಬಿಳುಪಿನ ಹೆಣ, ತ್ಯಾಗವೀರ ಶಿರಸಂಗಿ ಲಿಂಗರಾಜರು ಹಾಗೂ ತೇರು ನಾಟಕಗಳನ್ನು ಪ್ರದರ್ಶಿಸಲಾಗಿದೆ. ಶ್ರೀ ಝುಕೀರ ನದಾಫ ಹಾಗೂ ಶ್ರೀ ಶಿರೀಷ ಜೋಶಿ ನಿರ್ದೇಶಕರಾಗಿ ಕೆಲಸ ನಿರ್ವಹಿಸಿದ್ದಾರೆ. ಶ್ರೀ ಕೆ. ನಾಗರಾಜ ಮುನವಳ್ಳಿ ಇವರು ಸತತ 13 ವರ್ಷಗಳಿಂದ ತಂಡದ ಎಲ್ಲ ನಾಟಕಗಳಿಗೆ ಸಂಗೀತ ನೀಡುತ್ತಿದ್ದಾರೆ. ಶಿವಾನಂದ ತಾರಿಹಾಳ, ರಮೇಶ ನವಲೆ, ರಮೇಶ ಪಡವಳಕರ, ದಿಲಾವರ ನದಾಫ, ಅಶೋಕ ಜಾಧವ, ಮಯೂರ ಶಿಂಧೆ, ವಾಸುದೇವ ರಾಠೋಡ, ಶ್ರೀನಿವಾಸ ಗದಗ, ಮಹಾಂತೇಶ ಮೇಲಗಿರಿ, ರಮೇಶ ಕಟ್ಟಿ ಮುಂತಾದವರು ತಂಡದಿಂದ ಉತ್ತಮ ನಟರಾಗಿ ಹೊರಹೊಮ್ಮಿದ್ದಾರೆ.

**ಮಾಹಿತಿ ನೀಡಿದವರು : ಶಿವಾನಂದ ತಾರಿಹಾಳ, ಸವದತ್ತಿ ರಂಗ ಚಿಂತಕ, ನಿರ್ದೇಶಕ, ನಾಟಕಕಾರ ಹಾಗೂ ನಟ**

# ಜಾಕೀರ ನದಾಫ



01-10-1968 ರಂದು ಜನಿಸಿದ ಇವರು ಸೌದತ್ತಿಯ ರಂಗ ಕಲಾವಿದರಾಗಿದ್ದಾರೆ. ಇವರು ಡಿಪ್ಲೋಮಾ ಇನ್ ಮೆಕ್ಯಾನಿಕಲ್ ಇಂಜನೀಯರಿಂಗ್ ವಿದ್ಯಾರ್ಹತೆ ಪಡೆದಿದ್ದರೂ ಕೋಳಿ ಸಾಕಾಣಿಕೆ ಉದ್ಯೋಗವನ್ನು ಮಾಡಿಕೊಂಡು ಜೀವನ ಸಾಗಿಸುತ್ತಿದ್ದಾರೆ. ಆದರೂ ಇವರು ರಂಗಭೂಮಿ, ಸಂಗೀತ, ಸಾಹಿತ್ಯವೆಂದು ಹಲವಾರು ರೀತಿಯ ಗೀಳನ್ನು ಹಚ್ಚಿಕೊಂಡವರಾಗಿದ್ದಾರೆ. ಸಂಗೀತದಲ್ಲಿ ಜ್ಯೂನಿಯರ್ ಪಾಸ್ ಮಾಡಿದ್ದಾರೆ. ನೂರಕ್ಕೂ ಹೆಚ್ಚು ಧ್ವನಿ ಸುರಳಿಗಳಿಗೆ ಸಾಹಿತ್ಯ ರಚನೆ, ರಾಗ ಸಂಯೋಜನೆ ಹಾಗೂ ಗಾಯನದಲ್ಲೂ ಹೆಸರು ಮಾಡಿದ್ದಾರೆ.

ರಂಗಭೂಮಿಗೆ ಸಂಬಂಧಿಸಿ ರಾಜಾವೆಂಕಟಪ್ಪ ನಾಯಕ, ಮೃಗಜಲ, ಕಪ್ಪು ಬಿಳುಪು, ಸ್ವಿಸ್ ಬ್ಯಾಂಕಿನಲ್ಲಿ ಹಣ ಇಲ್ಲ, ಮಿಂಚು, ವಾಸಾಂತಿ ಜೀರ್ಣಾಣಿ, ಗುಲಾಮನ ಸ್ವಾತಂತ್ರ್ಯ ಯಾತ್ರೆ, ಪ್ರತಿಶೋಧ, ದಾರಿ ಯಾವುದಯ್ಯ ವೈಕುಂಠಕೆ, ಬದುಕು ಬಂಗಾರವಾಯಿತು, ತಂದೆಗೆ ತಕ್ಕ ಮಗ, ಚಿನ್ನದಗೊಂಬೆ, ಕಲಿತ ಕಳ್ಳ, ಮಾತುಕೊಟ್ಟ ಮುತ್ತೈದೆ ಹಾಗೂ ಯಾರ ದೈವ ಯಾರ ಕೈಯಲ್ಲಿ ಎಂಬ ನಾಟಕಗಳಲ್ಲಿ ನಟಿಸಿದ್ದಾರೆ. ಮಿಂಚು, ಮೆಟ್ಟಲೇರುವ ಗಡಿಬಿಡಿಯಲ್ಲಿ ಕೊಡೆ ಮರೆತವರು, ಪ್ರತಿಶೋಧ, ಹಸಿರೆಲೆ ಹಣ್ಣೆಲೆ, ಚೋರ ಚರಣದಾಸ, ತ್ಯಾಗವೀರ ಶಿರಸಂಗಿ ಲಿಂಗರಾಜರು ಹಾಗೂ ತೇರು ಮುಂತಾದ ನಾಟಕಗಳನ್ನು ನಿರ್ದೇಶಿಸಿದ್ದಾರೆ. ಹಸ್ತಾಂತರ, ಬಿಳುಪಿನ ಹೆಣ, ಮುತ್ತಾಳಗುಂಡ, ಉಂಡಾಡಿ ಗುಂಡ ಸಂಪತ್ತು ಕಂಡ, ಗುಂಡ ಭಂಡನಲ್ಲ ಪ್ರಚಂಡ, ಕುರುಬ ಕೃಷ್ಣ, ಮರಳಿತು ಸಿಂಧೂರ, ಹುಚ್ಚ ಕಟ್ಟಿದ ತಾಳಿ, ಮುನಿದ ಅರಿಷಿಣ-ನಕ್ಕ ಕುಂಕುಮ ಹಾಗೂ ನಮ್ಮೂರ ಶೂರ ರಣಧೀರ ಮುಂತಾದವುಗಳನ್ನು ರಚಿಸಿ ನಿರ್ದೇಶಿಸಿದ್ದಾರೆ. ಮೃಚ್ಛಕಟಿಕ, ಉದ್ಭವ, ಗುಲಾಮನ ಸ್ವಾತಂತ್ರ್ಯ ಯಾತ್ರೆ ಮತ್ತು ದಾರಿಯಾವುದಯ್ಯ ವೈಂಕುಠಕೆ ಗೀತ ರಚಿಸಿ ಸಂಗೀತ ನಿರ್ದೇಶಿಸಿದ್ದಾರೆ. 1993 ರಿಂದ 2003 ರ ವರೆಗೆ ಬೆಳಗಾವಿ "ರಂಗ ಸಂಪದ" ತಂಡದ ನಟನಾಗಿ ಅನುಭವ. 1997 ರಿಂದ "ರಂಗ ಆರಾಧನಾ ಸಾಂಸ್ಕೃತಿಕ ಸಂಘಟನೆ ಸವದತ್ತಿ" ತಂಡದ ನಟನಾಗಿ, ನಿರ್ದೇಶಕನಾಗಿ, ರಂಗ ಸಂಘಟಕನಾಗಿ ಅನುಭವ. 2000 ದಿಂದ ಸವದತ್ತಿಯಲ್ಲಿ "ಪರಸಗಡ ನಾಟಕೋತ್ಸವ"ದ ಹೆಸರಿನಲ್ಲಿ ಪ್ರತಿ ವರ್ಷ 5 ರಿಂದ 6 ನಾಟಕಗಳ ಪ್ರದರ್ಶನ ಏರ್ಪಾಟು ಮುಂತಾದವುಗಳಲ್ಲಿ ತೊಡಗಿಕೊಂಡಿದ್ದಾರೆ.

ವಿಳಾಸ : ಹುಡೇದ ಓಣಿ. ಸೌದತ್ತಿ ಜಿ: ಬೆಳಗಾವಿ. ಮೊ: 8945114742

## ಶಿವಾನಂದ ನಾರಾಯಣ ತಾರಿಹಾಳ




28–01–1981 ರಂದು ಜನಿಸಿದ ಇವರು, ಎಮ್.ಎ, ಬಿ.ಇಡಿ, ಡಿ.ಆಯ್.ಕೆ. ವಿದ್ಯಾರ್ಹತೆ ಹೊಂದಿದ್ದು, ಶಿಕ್ಷಕ ವೃತ್ತಿಯಲ್ಲಿ ತೊಡಗಿದ್ದಾರೆ. ರಂಗಭೂಮಿಯ ಗೀಳೂ ಇವರಿಗಿದೆ. ಓದುವುದು ಮತ್ತು ಹಾಸ್ಯ ಭಾಷಣ ಮಾಡುವುದು ಇವರ ಹೆಚ್ಚಿನ ಹವ್ಯಾಸ. ಇವರು ನಟಿಸಿದ ನಾಟಕಗಳೆಂದರೆ – ದೇವರಿಗೂ ನೌಕರಿ ಸಿಗಲಿಲ್ಲ, ಭೂತದ ಭೀತಿಯಲ್ಲಿ, ಕೊನೆಯ ನಮಸ್ಕಾರ, ಪ್ರತಿಶೋಧ, ದಾರಿ ಯಾವುದಯ್ಯ ವೈಕುಂಠಕೆ, ಹಸಿರೆಲೆ ಹಣ್ಣೆಲೆ, ಚೋರ ಚರಣದಾಸ, ಹಸ್ತಾಂತರ, ಬಿಳುಪಿನ ಹೆಣ, ತ್ಯಾಗವೀರ ಶಿರಸಂಗಿ ಲಿಂಗರಾಜರು, ತೇರು, ಮೂಕನ ಮಕ್ಕಳು ಮತ್ತು ಅಣ್ಣನ ಮಕ್ಕಳು ಮುಂತಾದವುಗಳು.

ಟಿ.ವಿ. ಕಾರ್ಯಕ್ರಮಗಳು : ಉದಯ ಟಿ.ವಿಯಲ್ಲಿ ನಗೆ ಸಖತ್ ಸವಾಲ, ಜೀ ಕನ್ನಡದ ಕಾಮಿಡಿ ಕಿಲಾಡಿಗಳು, ಜಾಡಬುಡಿ ಮತ್ತು ಹುಲಿಗೆಮ್ಮದೇವಿ ಮಹಾತ್ಮೆ ಮುಂತಾದವು ಕಿರು ಚಿತ್ರಗಳು. ಸಂಗೊಳ್ಳಿ ರಾಯಣ್ಣ ಮತ್ತು ಗಾಜಿನಗೊಂಬೆ ಮುಂತಾದ ಧಾರಾವಾಹಿಗಳಲ್ಲೂ ಕಾಣಿಸಿಕೊಂಡಿದ್ದಾರೆ. ನೀನಾಸಂ ದಲ್ಲಿ ಒಂದು ತಿಂಗಳ ನಾಟಕ ತರಬೇತಿ, ಜನಪದ ಸಾಹಿತ್ಯದ ಬಗ್ಗೆ 5 ದಿನಗಳ ತರಬೇತಿ (ರಾಮನಗರದಲ್ಲಿ) ಪಡೆದಿದ್ದಾರೆ. ನಾಟಕ ಸಂಘಟನೆಗನುಸಾರವಾಗಿ 1997 ರಿಂದ 2003 ರ ವರೆಗೆ "ಭೂಮಿಕಾ ಹವ್ಯಾಸಿ ಕಲಾಬಳಗ ಸವದತ್ತಿ" ತಂಡದ ಸಕ್ರಿಯ ನಟನಾಗಿ, ಸದಸ್ಯನಾಗಿ ಸೇವೆ ಸಲ್ಲಿಸಿದ್ದಾರೆ. 2003 ರಿಂದ "ರಂಗ ಆರಾಧನಾ ಸಾಂಸ್ಕೃತಿಕ ಸಂಘಟನೆ ಸವದತ್ತಿ" ತಂಡದ ನಟನಾಗಿ, ಕಾರ್ಯದರ್ಶಿಯಾಗಿ ರಂಗ ಸಂಘಟಕನಾಗಿ ಅನುಭವ ಪಡೆದಿದ್ದಾರೆ.

ವಿಳಾಸ: ರಾಮಾಪೂರಸೈಟ, ಸವದತ್ತಿ–591126
ಮೊ: 9449795232, 9342904858

## ಲಕ್ಷ್ಮಣ ಶಿವಪ್ಪ ರಾಠೋಡ




ಇವರು ಮೂಲತಃ ಸವದತ್ತಿ ತಾಲೂಕಿನ ಕಾರ್ಲಕಟ್ಟಿ ತಾಂಡಾದವರಾಗಿದ್ದು ಬಂಜಾರಾ ವಂಶಕ್ಕೆ ಸೇರಿದವರಾಗಿದ್ದಾರೆ. ಪ್ರಾಥಮಿಕ ಶಾಲಾ ಮುಖ್ಯ ಶಿಕ್ಷಕರಾಗಿದ್ದುಕೊಂಡೇ ಹಲವಾರು ರೀತಿಯ ಸೇವಾ ಮನೋಭಾವವನ್ನು ಇರಿಸಿಕೊಂಡಿರುವ ಅರವತ್ತಾರು ವರ್ಷದ ಲಕ್ಷ್ಮಣ ಆದರ್ಶ ಶಿಕ್ಷಕ ಪ್ರಶಸ್ತಿ, ಸದ್ಭಾವನಾ ಪ್ರಶಸ್ತಿ ಹಾಗೂ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿಗಳನ್ನು ಶಿಕ್ಷಣ ಕ್ಷೇತ್ರ, ರಂಗ ಕ್ಷೇತ್ರ ಹಾಗೂ ಸಾಮಾಜಿಕ ಕ್ಷೇತ್ರಕ್ಕೆ ಸಂಬಂಧಿಸಿ

ಪಡೆದರಾಗಿದ್ದಾರೆ. ನಾಟಕಗಳನ್ನು ಕಲಿಸುವ ಹಾಗೂ ಹಾರ್ಮೋನಿಯಂ ನುಡಿಸುವ ಇವರ ಹವ್ಯಾಸದಿಂದ ಸವದತ್ತಿ ತಾಲೂಕಿನಲ್ಲಿ ರಂಗಕಲಾ ಪರಿಸರ ಆರೋಗ್ಯಪೂರ್ಣವಾಗಿ ಅಭಿವೃದ್ಧಿ ಹಂತದಲ್ಲಿದೆ ಎಂದು ಹೇಳಬಹುದು. ಇದುವರೆಗೆ ಸುಮಾರು ಮೂವತ್ತೈದು-ನಾಲ್ವತ್ತು ಸಾಮಾಜಿಕ, ಪೌರಾಣಿಕ ಹಾಗೂ ಐತಿಹಾಸಿಕ ನಾಟಕಗಳನ್ನು ಸವದತ್ತಿ ತಾಲೂಕಿ ವಿವಿಧೆಡೆ ಕಲಿಸಿ ರಂಗ ಕಲೆಯನ್ನು ಜೀವಂತವಾಗಿ ಇಡುವಲ್ಲಿ ಪ್ರಯತ್ನಿಸಿದ ಶ್ರೇಯಸ್ಸು ಇವರಿಗೆ ಸಲ್ಲುತ್ತದೆ. ಅದರಂತೆ ನೂರಾರು ಮಕ್ಕಳಿಗೆ ಸಂಗೀತ ಕಲೆಯನ್ನೂ ಧಾರೆಯೆರೆದಿದ್ದಾರೆ. ಇವರ ಮಕ್ಕಳು ಮೊಮ್ಮಕ್ಕಳೂ ಸಹಿತವಾಗಿ ಸಂಗೀತ ಹಾಗೂ ರಂಗಕಲೆಯಲ್ಲಿ ಪರಿಣತಿ ಸಾಧಿಸಿದ್ದಾರೆ.

ವಿಳಾಸ: ಕಾರ್ಲಕಟ್ಟಿ ತಾಂಡಾ, ವೆಂಕಟೇಶ್ವರ ನಗರ, ಸವದತ್ತಿ. ತಾ: ಬೆಳಗಾವಿ. ಮೊ: 9611084124

## ವಾಸುದೇವ ಆರ್. ರಾಠೋಡ



1960ರಲ್ಲಿ ಜನಿಸಿದ ಇವರು ಬೆಳಗಾವಿ ಜಿಲ್ಲೆ ಸವದತ್ತಿ ತಾಲೂಕಿನ ಕಾರ್ಲಕಟ್ಟಿ ತಾಂಡೆದವರು. ಬಿ.ಎ, ಬಿ.ಪಿ.ಎಡ್ ಪದವಿ ಪಡೆದ ವಾಸುದೇವ ಸವದತ್ತಿಯ ಎಸ್. ಕೆ. ಪದವಿಪೂರ್ವ ಮಹಾವಿದ್ಯಾಲಯದಲ್ಲಿ ದೈಹಿಕ ಶಿಕ್ಷಕರಾಗಿದ್ದಾರೆ. ನಾಟಕ, ತಬಲಾವಾದನ, ನಿರ್ದೇಶನ, ನೃತ್ಯ ಕ್ರೀಡೆ ಮುಂತಾದವುಗಳಲ್ಲಿ ವಿಶೇಷ ಆಸಕ್ತಿಯನ್ನು ಹೊಂದಿದವರಾಗಿದ್ದಾರೆ. ನಾಟಕ ಕ್ಷೇತ್ರದಲ್ಲಿ ಇವರು ಸುಮಾರು 20 ವರ್ಷಗಳಿಂದ ಸೇವೆ ಸಲ್ಲಿಸಿದ್ದಾರೆ. ಇವರು ನಿರ್ದೇಶಿಸಿದ ನಾಟಕಗಳೆಂದರೆ– ಹೆಂಡತಿ ಹಾಕಿದ ಸವಾಲು, ಸುಳ್ಳಿನ ಸಾಮ್ರಾಜ್ಯದ ಸತ್ಯ ಹೋರಾಟ, ಮಾಂಗಲ್ಯಕ್ಕೆ ಬಂದ ಆಪತ್ತು, ಸಂತ ತುಕಾರಾಮ, ಪ್ರೇಮ ಪಂಚರ್ ಮುಮಾತಾದ ನಾಟಕಗಳು. ಹೆಂಡತಿ ಹಾಕಿದ ಸವಾಲಿನಲ್ಲಿ ಇವರು ಪಾತ್ರವನ್ನೂ ಮಾಡಿದ್ದಾರೆ. ಸವದತ್ತಿಯ 'ರಂಗ ಆರಾಧನಾ ಸಾಂಸ್ಕೃತಿಕ ವೇದಿಕೆ' ಎಂಬ ಸಂಘಟನೆಯಲ್ಲಿ ಕರಿನಾಯಿ, ಬಿಳುಪಿನ ಹೆಣ, ಸಿರಸಂಗಿ ಲಿಂಗರಾಜರು, ತೇರು ಮುಂತಾದ ನಾಟಕಗಳಲ್ಲಿ ಅಭಿನಯಿಸಿದ್ದಾರೆ. ಕಿರುತೆರೆ 'ಆದಿಶಕ್ತಿ ಹುಲಿಗೆಮ್ಮ' ದಲ್ಲಿಯೂ ಕಾಣಿಸಿಕೊಂಡಿದ್ದಾರೆ.

ವಿಳಾಸ: ಕಾರ್ಲಕಟ್ಟಿ ತಾಂಡಾ, ವೆಂಕಟೇಶ್ವರ ನಗರ, ಸವದತ್ತಿ. ಆ: ಬೆಳಗಾವಿ. ಮೊ: 9731570095



## ನಾರಾಯಣ. ಆರ್. ರಾಠೋಡ

ಇವರು ಸವದತ್ತಿ ತಾಲೂಕಿನ ಕಾರ್ಲಕಟ್ಟಿ ತಾಂಡಾದವರಾಗಿದ್ದು ಸಾರಿಗೆ ಇಲಾಖೆ ವಿಭಾಗೀಯ ಕಛೇರಿಯ ಮೇಲ್ವಿಚಾರಕ ಅಧಿಕಾರಿಯಾಗಿದ್ದಾರೆ. ಇವರ ತಂದೆಯವರಾದ ರಾಮಪ್ಪನವರೂ ರಂಗ ಕಲಾವಿದರು ಹಾಗೂ ಲಂಬಾಣಿ ಜಾನಪದ ಸಾಹಿತಿಗಳಾಗಿದ್ದಾರೆ. ಶ್ರೀ ನಾರಾಯಣರವರು ಸಾಹಿತ್ಯ, ಚಿತ್ರಕಲೆ, ಸಂಗೀತ, ನಾಟಕ ರಚನೆ, ನಾಟಕ ನಿರ್ದೇಶನ, ಅಭಿನಯ, ಹಿನ್ನೆಲೆ ಗಾಯನ ಮುಂತಾದವುಗಳಲ್ಲಿ ಹೆಚ್ಚು ಆಸಕ್ತರಾಗಿದ್ದಾರೆ. ಇವರು ಹಲವಾರು ಕತೆ, ಕವನಗಳನ್ನೂ ರಚಿಸಿದ್ದಾರೆ. ಅವೆಲ್ಲ ವಿವಿಧ ಪತ್ರಿಕೆಗಳಲ್ಲೂ ಪ್ರಕಟಗೊಂಡಿವೆ. ಲಂಬಾಣಿ ಸಾಹಿತ್ಯಕ್ಕೆ ಸಂಬಂಧಿಸಿದಂತೆ ಹಲವಾರು ವೈಚಾರಿಕ ಲೇಖನಗಳಲ್ಲೂ ರಚಿಸಿದ್ದಾರೆ. ಇವರ ಸಹನಿರ್ದೇಶನದ ನಾಟಕಗಳು ಮರಳಿ ಬಂದ ಮಾಂಗಲ್ಯ, ಗಯ್ಯಾಳಿ ಹೆಣ್ಣಿಗೆ ಗುಣವಂತ ಗಂಡ, ಗರತಿ ಹೆಣ್ಣಿಗೆ ಗರ್ವದ ಗಂಡ, ರೌಡಿ ರಾಜ್ಯದಲ್ಲಿ ರಣಧೀರ, ಮಾಂಗ್ಯ ತಂದ ಆಪತ್ತು ಮುಂತಾದವುಗಳು.

ವಿಳಾಸ: ಕಾರ್ಲಕಟ್ಟಿ ತಾಂಡಾ, ವೆಂಕಟೇಶ್ವರ ನಗರ, ಸವದತ್ತಿ. ತಾ: ಬೆಳಗಾವಿ.
ಮೊ: 9538453607

# ರಾಮದುರ್ಗ ತಾಲೂಕು

## ರಂಗ ತಂಡಗಳು


1) ಲಕ್ಷ್ಮಿಬಾಯಿ ಎಲ್ಲಪ್ಪನವರ ಸದಾಶಿವ ಮಹಿಳಾ ನಾಟಕ ಮಂಡಳಿ,
ಸಾಲಗಳ್ಳಿ, ತಾ: ರಾಮದುರ್ಗ

2) ದೊಡ್ಡವ್ವ ದರ್ಶನಕೊಳ್ಳವರ ಪಾರಿಜಾತ ತಂಡ, ಮುರಕಡಿನಾಳ.
ತಾ: ರಾಮದುರ್ಗ

3) ಈರಣ್ಣ ಕಂಬಾರವರ ಪಾರಿಜಾತ ತಂಡ, ಉದಪೂಡಿ.
ತಾ: ರಾಮದುರ್ಗ

4) ಶ್ರೀ ಬಸವೇಶ್ವರ ಜಾನಪದ ಕಲಾ ಬಳಗ, ನರಸಾಪೂರ.
ತಾ: ರಾಮದುರ್ಗ

# ನಟರು, ನಾಟಕಕಾರರು ಹಾಗೂ ರಂಗ ಕರ್ಮಿಗಳು



## ಮಹದೇವ ಹಡಪದ, ರಾಮದುರ್ಗ

ಇವರು ಸದ್ಯ ಹೆಗ್ಗೋಡಿನ ನೀನಾಸಮ್ ರಂಗಶಿಕ್ಷಣ ಕೇಂದ್ರದಲ್ಲಿ ಶಿಕ್ಷಕರಾಗಿ ಕೆಲಸ ಮಾಡುತ್ತಿದ್ದಾರೆ. ಇವರು ರಂಗಭೂಮಿಯನ್ನು ವೃತ್ತಿಯಾಗಿ ಸ್ವೀಕರಿಸಿದ್ದು, ನೀನಾಸಮ್, ರಂಗ ಕಿಶೋರ, ಆಟಮಾಟ, ಜನಮನದಾಟ, ಗೊಂಬೆ ಮನೆ, ಸಮುದಾಯ ಹೀಗೆ ಹಲವಾರು ತಂಡಗಳಲ್ಲಿ ನಟರಾಗಿ, ತಂತ್ರಜ್ಞರಾಗಿ, ಸಂಘಟಕರಾಗಿ ಕೆಲಸ ಮಾಡಿದ್ದಾರೆ. ಅಲ್ಲದೇ ಹೆಸರಾಂತ ನಿರ್ದೇಶಕರ ಜೊತೆಗೂ ಸಹಾಯಕರಾಗಿ ಕೆಲಸ ಮಾಡಿದ್ದಾರೆ.

**ಇವರ ನಿರ್ದೇಶನದ ನಾಟಕಗಳು :**

ಹ್ಯಾಮ್ಲೆಟ್, ಒಥೆಲೊ, ವಿದ್ಯಾರ್ಥಿಗಳಿಗೆ. ಕಾಯಕ ಯೋಗಿ ಮತ್ತು ಹಂಚಿನ ಮನೆ ಪರಸಪ್ಪ (ಜಮುರಾ ಕಲಾ ಲೋಕ, ಚಿತ್ರದುರ್ಗ) ಉಚಲ್ಯ ಮತ್ತು ಮೂರು ಕಾಸಿನ ಸಂಗೀತ ನಾಟಕ (ರಂಗಸಿರಿ, ಹಾಸನ) ಸಾಯೋ ಆಟ, ಜಾತ್ರೆ, ಹ್ಯೂಬಸಣ್ಣ (ಗೊಂಬೆ ಮನೆಯ ಕಾಲೇಜು ರಂಗಶಿಬಿರ) ವಸುಧೆಯೊಳು, ದೇಸಗತಿ, ಸಾಹೇಬರು ಬರುತ್ತಾರೆ, (ತಿರುಕ ರಂಗ, ಮಲ್ಲಾಡಿಹಳ್ಳಿ)

**ಮಕ್ಕಳ ನಾಟಕಗಳು :**

ಗೋವರ್ಧನ ಗಿರಿ, ಗೊಂಬೆ ಮ್ಯಾಕ್‌ಬತ್, ಜನಪದ ಜೋಗಿ, ಯಾರು ಇಲ್ಲ, ಕಥನಕಥಿತ, ಕೆರೆಯೇ ಚೆನ್ನ

ಕರ್ನಾಟಕದ ಬೇರೆ-ಬೇರೆ ಜಿಲ್ಲೆಗಳಲ್ಲಿ ಮಕ್ಕಳ ರಂಗತರಬೇತಿ ಶಿಬಿರ, ಯುವ ರಂಗತರಬೇತಿ ಶಿಬಿರ, ರಂಗಕಾರ್ಯಾಗಾರಗಳು, ರಂಗಸಂಘಟನೆಯಲ್ಲಿ ತೊಡಗಿಕೊಂಡಿದ್ದಾರೆ. ಅಲ್ಲದೇ ಆಟಮಾಟ (ಧಾರವಾಡ), ರೆಪರ್ಟರಿಯ ಸದಸ್ಯರಾಗಿದ್ದಾರೆ.

ವಿಳಾಸ : ನೀನಾಸಂ, ಹೆಗ್ಗೋಡು. ಮೊ: 9972352163

## ಜಂಪಣ್ಣ ಕಡಿವಾಲದ, ರಾಮದುರ್ಗ




ವೃತ್ತಿ ನಾಟಕ ಸಂಸ್ಥೆ ಯವರು ಪ್ರದರ್ಶಿಸುತ್ತಿದ್ದ ನಾಟಕಗಳಿಗೆ ವೇಷಭೂಷಣ ಸಾಮಗ್ರಿಗಳನ್ನು ವಿನ್ಯಾಸಗೊಳಿಸಿ ಕೊಡುವದು ಒಂದು ಮುಖದ ಪ್ರತಿಭೆಯಾದರೆ, ರಂಗ ಚಿತ್ರಕಲೆಯಲ್ಲಿ ನೈಪುಣ್ಯತೆ, ಅಭಿನಯ ಕಲೆ ಹಾಗೂ ನಾಟಕ ರಚನಾ ಕೌಶಲ್ಯ ಈ ಮೂರೂ ಕಲೆಗಳು ಸೇರಿ ಒಟ್ಟಾರೆ ಜಂಪಣ್ಣನವರು ಚತುಷ್ಕಲಾ ಪ್ರವೀಣರಾಗಿದ್ದಾರೆಂದು ಹೇಳಬಹುದು. ಇವರು 1943ರ ಸುಮಾರಿಗೆ ಕೆರೂರಲ್ಲಿ ಶ್ರೀ ಉಮ್ಮಣ ಹಾಗೂ ಜನಿಸಿ ಏಳನೆ ತರಗತಿಯವರೆಗೆ ಮಾತ್ರ ಶಿಕ್ಷಣ ಪಡೆದು ಬಡತನದ ಬವಣೆಯ ಕಾರಣದಿಂದ ಹುಟ್ಟೂರು ಬಿಟ್ಟು ರಾಮದುರ್ಗಕ್ಕೆ ಬಂದು ಸೇರಿದರು. ಅಲ್ಲಿ ಇವರ ಕುಲಕಸುಬಾದ ನೇಕಾರಿಕೆಯನ್ನು ಮುಂದುವರೆಸಿ ಕೊಂಡು ಹೋದರಾದರೂ ಬಿಡುವಿನ ವೇಳೆಯಲ್ಲಿ ಕುಲ ಬಾಂಧವರನ್ನೆಲ್ಲ ಸೇರಿಸಿಕೊಂಡು ರಂಗ ಚಟುವಟಿಕೆಗಳಲ್ಲಿ ಸಮಯ ವ್ಯಯಮಾಡಿ ಮನಸ್ಸಿಗೆ ಆತ್ಮ ತೃಪ್ತಿಯನ್ನು ಹೊಂದುತ್ತ ನಡೆದಿದ್ದರು. ಶ್ರೀ ಮಾನ್ವಿ ಅದೃಶ್ಯಪ್ಪನವರು ಕೆರೂರಲ್ಲಿ ಹುಟ್ಟು ಹಾಕಿದ ಶ್ರೀ ಶಾರದಾ ಸಂಗೀತ ನಾಟಕ ಮಂಡಳಿ ಹಾಗೂ ಅನ್ನಪೂರ್ಣ ನಾಟ್ಯ ಸಂಘದಲ್ಲಿ ಅನೇಕ ರೀತಿಯ ಸೇವೆ ಮಾಡಿದ ಇವರು ಸದಾ ವೃತ್ತಿ ರಂಗ ಸಂಪರ್ಕದಲ್ಲಿ ಇರಲು ಪ್ರಯತ್ನಿಸುತ್ತಿದ್ದರು. ಇಲಕಲ್ಲಿನ ವೃತ್ತಿ ರಂಗಭೂಮಿಯ ರಂಗ ಚಿತ್ರ ಕಲಾವಿದರಾದ ಶ್ರೀ ಸೋಮಣ್ಣ ಸಣ್ಣೂರ ಇವರ ಜೊತೆಗೂಡಿ ಕೆಲಸ ಮಾಡಿದ ಇವರು ಅವರ ಸಂಪರ್ಕದಿಂದಲೇ ರಂಗ ಚಿತ್ರಕಲೆಯನ್ನು ರೂಢಿಸಿಕೊಂಡರು.

ಇವರು ಪೌರಾಣಿಕ ನಾಟಕಗಳ ವೇಷಭೂಷಣ ಹಾಗೂ ಪ್ರಸಾಧನಕ್ಕೆ ಸಂಬಂಧಿಸಿದ ಹಲ ಕೆಲವು ಸಾಮಗ್ರಿಗಳನ್ನು ಬಹಳ ಅತ್ಯದ್ಭುತವಾಗಿ ಮಾಡುತ್ತಿದ್ದರು. ಇವರು ತಯಾರಿಸಿದ ಪೋಷಾಕುಗಳಲ್ಲಿ ಅತ್ಯಂತ ಕಡಿಮೆ ಬೆಲೆಯ, ಕಡಿಮೆ ದರ್ಜೆಯ ಸಾಮಗ್ರಿಗಳನ್ನು ಮಾತ್ರ ಕೊಂಡು ಕೊಂಡು ವಿನ್ಯಾಸದ ನಂತರ ಅತ್ಯಂತ ಆಕರ್ಷಣೀಯವಾಗಿ ಕಾಣುವಂತೆ ಅದ್ಭುತವಾಗಿ ಕಾಣುವಂತೆ ತಯಾರಿಸುತ್ತಿದ್ದರು. ಇಂಥ ಎಲ್ಲ ಸಾಮಗ್ರಿಗಳನ್ನು ಕಂಪನಿಗಳಿಗೂ ಮಾಡಿಕೊಟ್ಟಿದ್ದರು. ಅದರಂತೆ ಕಿರೀಟ, ಖಡ್ಗ, ಗುರಾಣಿ, ಬಾಣ, ಬಿಲ್ಲು, ಚಕ್ರ ಇತರ ಉಡುಗೆ ತೊಡುಗೆಗಳನ್ನೂ ಕೂಡ ಸಾಕಷ್ಟು ಸುಂದರವಾಗಿ ವಿನ್ಯಾಸಗೊಳಿಸಿ ಪೂರೈಸಿದ್ದರು. ಇದೇ ತೆರನಾಗಿ ಅಭಿನಯದಲ್ಲೂ ಯಾವುದೇ ರೀತಿಯಾಗಿ ಹಿಂದೆ ಇದ್ದಿರಲಿಲ್ಲ. ಕುರುಕ್ಷೇತ್ರ ನಾಟಕದಲ್ಲಿ ಭೀಮನ ಪಾತ್ರವನ್ನಂತೂ ಅತ್ಯಂತ ಮಾರ್ಮಿಕವಾಗಿ ಮಾಡುತ್ತಿದ್ದರು. ಇವರು ಬರೆದು ರಂಗಕ್ಕೆ ತಂದ 'ದೇವಲ ಮಹರ್ಷಿ' 'ರಾಮದುರ್ಗ ದುರಂತ' 'ಶಿವರಾತ್ರಿ ಮಹಾತ್ಮೆ' ಮುಂತಾದ ನಾಟಕಗಳು ಹೆಚ್ಚು ಜನಪ್ರಿಯವಾಗಿವೆ. ಇವರು ಅನೇಕ ಪ್ರಶಸ್ತಿಗಳನ್ನೂ ಪಡೆದಿದ್ದಾರೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯವರಿಂದಲೂ ಕೂಡ ಇವರು ಸನ್ಮಾನಿಸಲ್ಪಟ್ಟಿದ್ದಾರೆ.

ವಿಳಾಸ: ರಾಧಾಪೂರ ಪೇಟ್. ರಾಮದುರ್ಗ ಜಿ: ಬೆಳಗಾವಿ

## ಡಾ. ಕೆ. ಸಿ. ಪಾಟೀಲ, ರಾಮದುರ್ಗ



ಕೆರೂರು ಇವರ ಜನ್ಮಸ್ಥಳವಾದರೂ ನಾಟಕದ ಗೀಳಿನಿಂದಾಗಿ ರಾಮದುರ್ಗದಲ್ಲಿ ನೆಲೆಸಿದರು. ಆದರೂ ಇವರು ವೈದ್ಯ ವೃತ್ತಿಯಲ್ಲಿ ಮುಂದುವರೆದು ರಂಗಭೂಮಿಯ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುತ್ತಾ ಬಂದಿದ್ದಾರೆ. ಉತ್ತರ ಕರ್ನಾಟಕದ ವೃತ್ತಿ ನಾಟಕದವರ ಸಂಪರ್ಕದಿಂದಾಗಿ ಇವರಿಗೆ ನಾಟಕ ಕಲೆಯಲ್ಲಿ ಹೆಚ್ಚು ಆಸಕ್ತಿ ಹುಟ್ಟಿ ನಾಟಕ ರಚನೆಗೆ ಮುಂದಾದರು. ಇವರು ಬರೆದ 'ಅಕ್ಕನ ಆಸ್ತಿ' ಎಂಬ ಪ್ರಥಮ ನಾಟಕ ಗದುಗಿನ ಗವಾಯಿಗಳ ನಾಟಕ ಕಂಪನಿ ರಂಗಕ್ಕೆ ತಂದಿತು. ಅದರಂತೆ ಗೋಕಾಕಿನ ಶ್ರೀ ಶಾರದಾ ಸಂಗೀತ ನಾಟಕ ಕಂಪನಿಯು 'ಲಂಚ ಪಂಚಾಯತಿ' ಎಂಬ ನಾಟಕವನ್ನು ಪ್ರದರ್ಶಿಸಿತ್ತು. ಅದೃಶ್ಯಪ್ಪ ಮಾನ್ವಿ, ದಿಗಂಬರ ಗೌಡರು, ಚೆನ್ನಪ್ಪ ಬೋರಣ್ಣವರ, ತುಕಾರಾಮಪ್ಪ ದಾಸ್ಮನಿ, ಹೂವಪ್ಪ ಗಿರಿಗೌಡರ, ಮುಂತಾದ ಕಲಾವಿದರ ಆಶೀರ್ವಾದದಿಂದ ನಟರಾಗಿಯೂ ಅನೇಕ ನಾಟಕಗಳಲ್ಲಿ ಇವರು ಮಿಂಚಿದ್ದಾರೆ. ಇವರ ಅಜ್ಜಂದಿರಾದ ಟೀಕಪ್ಪ ಗೌಡರು ಸಾರ್ವಜನಿಕವಾಗಿ ರಾಮಾಯಣ ಮಹಾಭಾರತ ವಾಚನ ಮಾಡಿದವರು. ಅಲ್ಲದೇ ಶ್ರೀ ಶಾಕಾಂಬರಿ ನಾಟ್ಯ ಸಂಘ ಎಂಬ ಹವ್ಯಾಸಿ ಕಂಪನಿಯನ್ನು ಕಟ್ಟಿ ಬೆಳೆಸಿದವರಾಗಿದ್ದಾರೆ. ಇವರ ತಂದೆಯವರೂ ನಾಟಕದ ಗೀಳಿನವರೇ ಆಗಿದ್ದರು. ಹೀಗಾಗಿ ಇವರಿಗೆ ನಾಟಕ ಕಲೆ ರಕ್ತಗತವಾಗಿಯೇ ಬಂದಿದೆ ಎಂದರೂ ತಪ್ಪಲ್ಲ. ರತಿ ಕಲ್ಯಾಣ ನಾಟಕದಲ್ಲಿ ಕೃಷ್ಣನ ಪಾತ್ರ ಹಾಗೂ ಇನ್ನುಳಿದ ನಾಟಕಗಳಲ್ಲಿ ವೈವಿಧ್ಯಮಯ ಪಾತ್ರಗಳನ್ನು ಮಾಡಿದ ಅನುಭವ ಇವರಿಗಿದೆ. ಇವರು ನಿವೃತ್ತಿಯ ನಂತರ ರಚಿಸಿದ 'ಸಂಪೂರ್ಣ ಸಂಪತ್ತು' 'ಪವಿತ್ರ ಪಾಪಿ' 'ತಪ್ಪು ಯಾರದು ನೀವೇ ಹೇಳಿ' ಮುಂತಾದ ಅಪ್ರಕಟಿತ ನಾಟಕಗಳು ಪ್ರದರ್ಶನಗೊಳ್ಳಬೇಕಿವೆ. ಶಿವಶಕ್ತಿ ಮಹಾತ್ಮೆ, ಬ್ರಹ್ಮಸೂತ್ರ, ವಸ್ತ್ರ ನಿರ್ಮಾಪಕ, ದೇವಲನ ಚರಿತ್ರೆ ಮುಂತಾದವುಗಳು ಇವರ ಪ್ರಕಟಿತ ನಾಟಕಗಳು. ಸಧ್ಯ ಇವರು ರಾಮದುರ್ಗ ಪುರಸಭೆ ಸದಸ್ಯರಾಗಿ ಸೇವೆ ಸಲ್ಲಿಸುತ್ತಿದ್ದಾರೆ.

ವಿಳಾಸ: ನಾರಾಯಣ ಪೇಟ್, ಹರಿಮಂದಿರದ ಹತ್ತಿರ, ರಾಮದುರ್ಗ. ಜಿ : ಬೆಳಗಾವಿ. ಮೊ : 9902603730

## ಸಂಕಪ್ಪ ವೀರಭದ್ರಪ್ಪ ಹುಗ್ಗಿ, ರಾಮದುರ್ಗ ಜಿಲ್ಲಾ



ಇವರು ಬಾಲ್ಯದಿಂದಲೇ ಕಲೆಯನ್ನು ಗೀಳಾಗಿಸಿ ಕೊಂಡಿದ್ದರು. ಮೂಲತಃ ನೇಕಾರಿಕೆ ಕುಟುಂಬದಲ್ಲಿ ಜನಿಸಿದ ಶ್ರೀ ಸಂಕಪ್ಪನವರು ದಿನವೆಲ್ಲ ನೇಕಾರಿಕೆ ಉದ್ಯೋಗ ಮಾಡಿ ಪ್ರತಿದಿನ ಸಾಯಂಕಾಲ ರಂಗೋದ್ಯೋಗದಲ್ಲಿ ಹವ್ಯಾಸಾತ್ಮಕ ವಾಗಿ ತೊಡಗುತ್ತಿದ್ದರು. ರಾಮದುರ್ಗದ ಜಯಭಾರತಿ ನಾಟ್ಯ ಸಂಘವು ಹತ್ತು ವರ್ಷಗಳವರೆಗೆ ರಾಜ್ಯದ ವಿವಿಧೆಡೆ ಪ್ರಯೋಗಿಸಿದ ಬಡತನದ ಭೂತ,

ಅಕ್ಷಯಾಂಬರ, ಕುರುಕ್ಷೇತ್ರ, ಹೇಮರೆಡ್ಡಿ ಮಲ್ಲಮ್ಮ, ಯಚ್ಚಮ ನಾಯಕ ಮುಂತಾದ ನಾಟಕಗಳಲ್ಲಿ ಮುಖ್ಯ ಪಾತ್ರಗಳನ್ನೇ ಮಾಡಿದ್ದಾರೆ. ಹೀಗಾಗಿ ಇವರು ಇಂದಿಗೂ ಬಣ್ಣಹಚ್ಚಿಕೊಳ್ಳುವ ಆತುರದಲ್ಲಿದ್ದಾರೆ. ರಂಗದ ಬಗೆಗಿನ ಅಷ್ಟೊಂದು ಆಸಕ್ತಿಯನ್ನು ಇವರು ತುಂಬಿಕೊಂಡಿದ್ದಾರೆ. ತಮ್ಮ ಕಲಾ ಪ್ರೌಢಿಮೆಯನ್ನು ಹೆಚ್ಚಾಗಿ ಪೌರಾಣಿಕ ನಾಟಕಗಳಲ್ಲಿಯೇ ತೋರಿಸಿದ್ದಾರೆ. ಅದರಲ್ಲೂ ನಾರದನ ಪಾತ್ರಕ್ಕೆ ಹೇಳಿ ಮಾಡಿಸಿದಂತ ವ್ಯಕ್ತಿತ್ವ ಇವರದು. ರಾಮದುರ್ಗದ ಜಂಪಣ್ಣ ಕಡಿವಾಲದವರು ಬರೆದ ದೇವಾಂಗ ಮಹಾತ್ಮೆ ನಾಟಕದಲ್ಲಿಯ ನಾರದನ ಪಾತ್ರವಂತೂ ಸಂಕಪ್ಪನವರಿಗೆ ಒಳ್ಳೆ ಯಶಸ್ಸು ತಂದುಕೊಟ್ಟಿದೆ. ಅದರಂತೆ ಅದೇ ಲೇಖಕರು ಬರೆದು ನಿರ್ದೇಶಿಸಿದ ರಾಮದುರ್ಗ ದುರಂತ ಎಂಬ ಐತಿಹಾಸಿಕ ನಾಟಕದಲ್ಲೂ ಶ್ರೇಷ್ಠ ನಟನೆಂದೂ ಗುರುತಿಸಿಕೊಂಡಿದ್ದಾರೆ. ಹೀಗೆ ಹಲವಾರು ಐತಿಹಾಸಿಕ ಹಾಗೂ ಪೌರಾಣಿಕ ನಾಟಕಗಳ ರಂಗ ಕ್ಷೇತ್ರದ ಮೂಲಕ ಸುಮಾರು 40 ವರ್ಷಗಳ ಅನುಭವ ಇವರಿಗೆ ದಕ್ಕಿದೆ. ಇವರ ನಾಟಕಗಳು ಆಕಾಶವಾಣಿ ಧಾರವಾಡ ಮೂಲಕವಾಗಿಯೂ ಪ್ರಸಾರಗೊಂಡಿವೆ.


ವಿಳಾಸ: ರಾಮದುರ್ಗ. ತಾಲೂಕು ರಾಮದುರ್ಗ. ಜಿಲ್ಲಾ: ಬೆಳಗಾವಿ



## **ಲಕ್ಷ್ಮಣ ಕೇಶಪ್ಪ ಕುರಡಗಿ.** ರಾಮದುರ್ಗ ತಾ:

ಇವರು ಸುಮಾರು ಮೂವತ್ತೈದು ವರ್ಷಗಳಿಂದ ರಂಗ ಸೇವೆಯಲ್ಲಿ ತೊಡಗಿದವರಾಗಿದ್ದಾರೆ. ಈ ಒಂದು ಕಲೆ ಇವರಿಗೆ ಅವರ ತಂದೆಯವರಿಂದ ಬಂದ ಬಳುವಳಿಯಾಗಿದೆ. ತಂದೆ ಕೇಶಪ್ಪ ಕುರಡಗಿಯವರು ಜಾನಪದ ದೊಡ್ಡಾಟದ ಕಲಾವಿದರಾಗಿದ್ದರು. ಅದರ ಪ್ರಭಾವದಿಂದ ಲಕ್ಷ್ಮಣ ಕೂಡ ಒಬ್ಬ ಉತ್ತಮ ಕಲಾವಿದರಾಗಲು ಅನುಕೂಲವಾಯಿತೆಂದು ಹೇಳಬಹುದು. ಇವರ ಅಭಿನಯ ಹಾಗೂ ಮಾತಿನ ಶೈಲಿ ಬಹಳ ಅದ್ಭುತವಾಗಿತ್ತೆನ್ನಲಾಗಿದೆ. ಇವರು ಹಲವಾರು ವೃತ್ತಿರಂಗ ನಾಟಕ ಕಂಪನಿಗಳಲ್ಲಿಯೂ ಅಭಿನಯಿಸಿದ ಅನುಭವವಿದೆ. ಹಾಗೂ ಗ್ರಾಮೀಣ ಹವ್ಯಾಸಿ ನಾಟಕಗಳಲ್ಲಿಯೂ ತಮ್ಮ ಅಭಿನಯ ಚಾತುರ್ಯವನ್ನು ತೋರಿಸಿದ್ದಾರೆ. ಇವರು ತಮ್ಮ ಸಹಪಾಟಿಗಳೊಂದಿಗೆ ಬೆಂಗಳೂರಿನವರೆಗೂ ಹೋಗಿ ನಾಟಕ ಪ್ರದರ್ಶಿಸಿ ಬಂದಿದ್ದಾರೆ. ಅಲ್ಲದೆ, ಇವರ ಹಲವಾರು ನಾಟಕಗಳು ಧಾರವಾಡ ಆಕಾಶವಾಣಿಯಿಂದಲೂ ಬಿತ್ತರಗೊಂಡಿವೆ. 56 ವರ್ಷವಯಸ್ಸಿನ ಲಕ್ಷ್ಮಣ ಕುರಡಗಿಯವರು ಇಂದಿಗೂ ರಂಗದ ಮೇಲೆ ಬರಲು ಉತ್ಸುಕರಾಗಿದ್ದಾರೆ. ಇವರು ಸಧ್ಯ ಸಭೆ ಸಮಾರಂಭ, ಮದುವೆಗಳಿಗೆ ಬೇಕಾದ ಪರದೆ ಭತ್ತು ಮುಂತಾದವುಗಳನ್ನು ಬಾಡಿಗೆಗೆ ಕೊಡುವ ಕೆಲಸವನ್ನೂ ಮಾಡುತ್ತಿದ್ದಾರೆ.

ವಿಳಾಸ: ರಾಮದುರ್ಗ ತಾ: ರಾಮದುರ್ಗ ಜಿ: ಬೆಳಗಾವಿ




## ಮಾರುತಿ ಚೌಡಪ್ಪ ಖಾನಾಪೂರ, ರಾಮದುರ್ಗ ತಾ:

ಇವರು ರಾಮದುರ್ಗದ ಆರ್ಯ ಸಂಗೀತ ನಾಟಕ ಮಂಡಳಿಯ ಪ್ರತಿಭಾವಂತ ರಂಗ ಕಲಾವಿದರಲ್ಲಿ ಒಬ್ಬರಾಗಿದ್ದಾರೆ. ಹಲವಾರು ವೃತ್ತಿಕಂಪನಿಗಳಲ್ಲಿಯೂ ಅಭಿನಯವನ್ನು ಪೂರೈಸಿದ್ದಾರೆ ಹಾಗೂ ಗ್ರಾಮೀಣ ರಂಗ ಸಂಸ್ಥೆಗಳಲ್ಲಿಯೂ ಎಲ್ಲ ಪ್ರಕಾರದ ಪಾತ್ರಗಳನ್ನು ಮಾಡಿದ್ದಾರೆ. ಪೌರಾಣಿಕ ನಾಟಕಗಳಲ್ಲಿಯೇ ಹೆಚ್ಚಾಗಿ ಪಾತ್ರ ಮಾಡುತ್ತಿದ್ದ ಇವರು ಶ್ರೀಕೃಷ್ಣಗಾರುಡಿಯಲ್ಲಿ ಭೀಮ, ಲವಕುಶದಲ್ಲಿ ಲಕ್ಷ್ಮಣ, ಜಗಜ್ಯೋತಿ ಬಸವೇಶ್ವರದಲ್ಲಿ ಕೊಂಡಿ ಮಂಚಣ್ಣ, ಪಾದುಕಾ ಪಟ್ಟಾಭಿಷೇಕದಲ್ಲಿ ರಾಮನ ಪಾತ್ರ ಹೀಗೆ ವಿವಿಧ ಪಾತ್ರಗಳನ್ನು ಮಾಡಿದ್ದಾರೆ. ಪ್ರಸಾಧನಕಲೆಯಲ್ಲೂ ಅಭಿರುಚಿಯನ್ನು ಹೊಂದಿದ ಇವರು ಅನೇಕ ಪೌರಾಣಿಕ ಪಾತ್ರಧಾರಿಗಳಿಗೆ ಮುಖ ವರ್ಣಿಕೆ ಹಾಗೂ ವೇಷಭೂಷಣ ಇತ್ಯಾದಿಗಳಲ್ಲಿ ಹೆಚ್ಚು ಪರಿಣತಿಯನ್ನು ಸಾಧಿಸಿದ್ದಾರೆ.

ಇವರು ಸಾಮಾಜಿಕ ಹಾಗೂ ಪೌರಾಣಿಕ ನಾಟಕಗಳಲ್ಲಿ ಯಾವದೇ ಪಾತ್ರವನ್ನಾದರೂ ಸಮರ್ಥ ರೀತಿಯಲ್ಲಿ ಅಭಿನಯಿಸುತ್ತಿದ್ದರು, 58 ವರ್ಷದವರಾದರೂ ಕೂಡ ಇಂದಿಗೂ ಬಣ್ಣ ಹಚ್ಚುವ ಶ್ರೀಯುತರು ಮಾರುತಿಯವರು ಕೇವಲ ನಟರಾಗಿ ಉಳಿಯದೇ ಒಳ್ಳೆ ಸಮಾಜ ಕಾರ್ಯಕರ್ತರಾಗಿಯೂ ರಾಮದುರ್ಗನಿವಾಸಿಗಳ ಮಧ್ಯ ಹೆಸರು ಮಾಡಿದ್ದಾರೆ. ಇವರ ರಂಗ ಸೇವೆ ಸುಮಾರು 40ವರ್ಷದ ಅನುಭವವನ್ನು ಹೊಂದಿದೆ. ಆಕಾಶವಾಣಿಯಲ್ಲೂ ಮತ್ತು ದೂರದರ್ಶನದಲ್ಲೂ ಇವರ ನಾಟಕಗಳು ಪ್ರಸಾರಗೊಂಡಿವೆ.

ವಿಳಾಸ: ರಾಮದುರ್ಗ, ತಾ: ರಾಮದುರ್ಗ  ಮೊ: 9411038663



## ಶರಬಣ್ಣ ಟಾಕಪ್ಪ ಆರಿ, ರಾಮದುರ್ಗ ಜಿ.

ರಾಮದುರ್ಗದಲ್ಲಿ ಸಾಮಾನ್ಯವಾಗಿ ಆರಿ ಮನೆತನವೇ ಕಲಾವಿದರ ಮನೆತನವೆಂದು ಹೇಳಬಹುದು. ಏಕೆಂದರೆ ರಾಮದುರ್ಗದ ರಂಗ ಇತಿಹಾಸದಲ್ಲಿ ಪ್ರಥಮವಾಗಿ ಹೆಸರು ಮಾಡಿದವರೆಂದರೆ ಆರಿ ಕುಟುಂಬದವರು. ಇವರಲ್ಲಿ ಶ್ರೀ ಶರಬಣ್ಣನವರು ಪೌರಾಣಿಕ ನಾಟಕಗಳಲ್ಲಿ ಧೀರೋದಾತ್ತ ಪಾತ್ರಗಳಿಗೆ ಅತ್ಯಂತ ಹೆಸರಾದವರೇ ಅಲ್ಲದೆ, ಒಳ್ಳೆ ಹಾಡುಗಾರರೂ ಆಗಿದ್ದರು. ರಾಮದುರ್ಗ ದುರಂತ ನಾಟಕದಲ್ಲಿ ರಾಜನ ಪಾತ್ರವಹಿಸಿ ಸಹಸ್ರಾರು ಜನಪ್ರೇಕ್ಷಕರ ಮನ ರಂಜಿಸಿದ್ದಾರೆ. ಅಂತೆಲೇ ಇವರಿಗೆ ರಾಮದುರ್ಗದ ರಾಜನೆಂದೇ ಉಪನಾಮವೂ ಲಭಿಸಿದೆ. ಇದೊಂದೇ ಅಲ್ಲದೇ ಅನೇಕ ನಾಟಕಗಳಲ್ಲಿ ಗಾಂಭೀರ್ಯಪೂರ್ಣವಾದ ಪಾತ್ರಗಳನ್ನು ಮಾಡುತ್ತ ಬಂದ ಇವರು ಸಿನಿಮಾದಲ್ಲೂ ಕೂಡ ಪೋಷಕ ಪಾತ್ರಗಳನ್ನು

ಮಾಡಿದ್ದಾರೆ ಹಾಗು ರಾಮದುರ್ಗದಲ್ಲಿಯೇ ಎರಡು ಚಲನಚಿತ್ರ ಮಂದಿರಗಳ ಮಾಲೀಕರೂ ಆಗಿದ್ದಾರೆ. ರಂಗ ಕ್ಷೇತ್ರದಲ್ಲಿ ಶರಬಣ್ಣನವರಿಗೆ ಏನಿಲ್ಲವೆಂದರೂ 40ವರ್ಷದ ಅನುಭವ.


ವಿಳಾಸ: ರಾಮದುರ್ಗ. ಜಿಲ್ಲಾ: ಬೆಳಗಾವಿ



## ಭೀಮಣ್ಣ ರೇವಣಸಿದ್ಧಪ್ಪ ಸೂಳಿಭಾವಿ, ರಾಮದುರ್ಗ

ಇವರು ವೃತ್ತಿಯಲ್ಲಿ ನೇಕಾರರಾದರೂ ಪ್ರವೃತ್ತಿಯಲ್ಲಿ ರಂಗ ಕಲಾವಿದರಾಗಿದ್ದಾರೆ. ಯಾವದೇ ನಾಟಕವಿರಲಿ ನಾಟಕದ ಯಾವದೇ ಪಾತ್ರಕ್ಕಾದರು ಸೈ ಎನ್ನುವ ಮನೋಭಾವದ ಭೀಮಣ್ಣ ಅನೇಕ ಸಾಮಾಜಿಕ ನಾಟಕಗಳಲ್ಲಿ ಖಳ ಹಾಗೂ ನಾಯಕ ಪಾತ್ರದಲ್ಲಿ ಮಿಂಚಿದ್ದಾರೆ. ಇವರು ಒಳ್ಳೆ ಹಾಡುಗಾರರೂ ಆಗಿದ್ದರು. ವೃತ್ತಿ ಹಾಗೂ ಹವ್ಯಾಸಿ ಎರಡೂ ಪ್ರಕಾರದ ನಾಟಕಗಳಲ್ಲಿ ವೈವಿಧ್ಯಪೂರ್ಣವಾದ ನಟನೆಯನ್ನು ಬಿಂಬಿಸಿದ್ದಾರೆ. ರಂಗ ಸೇವೆಯಲ್ಲಿ ಕನಿಷ್ಟ ಮೂವತ್ತು ವರ್ಷಗಳ ಅನುಭವ ಇವರಿಗಿದೆ. ಇಂದಿಗೂ ಬಣ್ಣ ಹಚ್ಚುವ ತುಡಿತ ಇವರಿಗುಂಟು.

ವಿಳಾಸ: ರಾಮದುರ್ಗ, ಜಿಲ್ಲಾ: ಬೆಳಗಾವಿ




## ಮಲ್ಲಪ್ಪ ಸಂಕಪ್ಪ ಕೊಳೇಕರ, ರಾಮದುರ್ಗ ಜಿಲ್ಲಾ

ಮಲ್ಲಪ್ಪ ಕೊಳೇಕರ ಇವರೂ ಕೂಡ ನೇಕಾರರ ಮನೆತನದಲ್ಲಿ ಹುಟ್ಟಿ ಈ ವೃತ್ತಿಯೊಂದಿಗೆ ಅಭಿನಯವನ್ನೂ ರೂಢಿಸಿಕೊಂಡಿದ್ದಾರೆ. ನಾಟಕ ಪೌರಾಣಿಕವೇ ಇರಲಿ ಐತಿಹಾಸಿಕವೇ ಇರಲಿ ಅಥವಾ ಸಾಮಾಜಿಕವೇ ಇರಲಿ ಯಾವುದೇ ತೆರನಾದ ಪಾತ್ರಗಳಿಗೂ ಮಲ್ಲಪ್ಪ ಸೈ ಎನ್ನುತ್ತಿದ್ದರು. ರಾಮದುರ್ಗ ರಾಧಾಪೂರ ಪೇಟೆಯ ಆರ್ಯ ಸಂಗೀತ ನಾಟಕ ಮಂಡಳಿಯವರ ಭೂಕೈಲಾಸ ನಾಟಕದಲ್ಲಿ ಯಮರಾಜನ ಪಾತ್ರದಿಂದ ಬಹಳಷ್ಟು ಪ್ರಸಿದ್ಧಿಗೆ ಬಂದ ಇವರು ಎನ್. ಬಸವರಾಜ ಅವರ ಕಲಿಯುಗದ ರಾಮ ನಾಟಕದಲ್ಲಿ ಹಾಸ್ಯ ಪಾತ್ರವನ್ನೂ ಮಾಡುವಲ್ಲಿ ನಿಸ್ಸೀಮರಾಗಿದ್ದ ಇವರು ಹಲವಾರು ವೃತ್ತಿಕಂಪನಿಗಳಲ್ಲೂ ಸೇವೆ ಗೈದಿದ್ದಾರೆ, ಹಾರ್ಮೋನಿಯಂ ವಾದನದಲ್ಲೂ ರುಚಿ ಕಂಡಿದ್ದಾರೆ. ಅದರಲ್ಲೂ ಗಂಭೀರ ಹಾಗೂ ಹಾಸ್ಯ ಪಾತ್ರಗಳನ್ನಂತೂ ಒಳ್ಳೆ ಪರಿಣಾಮಕಾರಿಯಾಗಿ ಮಾಡುತ್ತಿದ್ದರು. ಸುಮಾರು ಮೂವತ್ತುವರ್ಷಗಳಿಂದ ರಂಗಸೇವೆಯಲ್ಲಿದ್ದಾರೆ.

ವಿಳಾಸ: ರಾಮದುರ್ಗ ಜಿಲ್ಲಾ: ಬೆಳಗಾವಿ ಮೊ: 9986325826


## ನೇಮಣ್ಣ ದೇವಕಾರೆಪ್ಪ ಆರಿ, ರಾಮದುರ್ಗ



ನೇಕಾರಿಕೆಯೇ ಇವರ ಮೂಲೋದ್ಯೋಗವಾಗಿದ್ದರೂ ರಂಗಕಲೆಯಿಂದ ಇವರೇನೂ ಹೊರತಾಗಿರಲಿಲ್ಲ. ಇವರು ವಿಶೇಷವಾಗಿ ಸ್ತ್ರೀ ಪಾತ್ರಗಳಿಗಾಗಿಯೇ ಮೀಸಲಿದ್ದಂತಿದ್ದರು. ಪ್ರಾರಂಭದ ಆರ್ಯ ಸಂಗೀತ ನಾಟಕ ಮಂಡಳಿಯಲ್ಲಿ, ಪಾಂಡುರಂಗ ನಾಟ್ಯ ಸಂಘ, ಜ್ಯೋತಿ ಕಲಾ ನಾಟ್ಯ ಸಂಘ, ಜೈ ಭಾರತಿ ನಾಟ್ಯ ಸಂಘ ಮುಂತಾದವುಗಳಲ್ಲಿ ಹಾಗೂ ಅನೇಕ ಕಂಪನಿ ನಾಟಕಗಳಲ್ಲಿಯೂ ಸಾಧ್ವಿ ಪಾತ್ರ ಮಾಡಿ ಹೆಸರುಗಳಿಸಿದ ಇವರು ಹಾಸ್ಯ ಪಾತ್ರಕ್ಕೂ ಹೇಳಿ ಮಾಡಿಸಿದ ವ್ಯಕ್ತಿತ್ವ ಇವರದು. ನೇಮಣ್ಣವರ ಸಹಜ ಜೀವನದಲ್ಲೂ ಅವರ ಹಾವಭಾವ ನಡೆ ನುಡಿ ಎಲ್ಲವೂ ಸಾಮಾನ್ಯ ಸ್ತ್ರೀಯನ್ನು ಮೀರಿಸುವಂಥವೇ ಆಗಿದ್ದವು. ಆರಿಯವರ ವೃತ್ತಿ ಕಂಪನಿಯಲ್ಲಿ ಅನೇಕ ವರ್ಷಗಳವರೆಗೆ ರಂಗ ಸೇವೆ ಮಾಡಿ ಈಗ ನಿವೃತ್ತಿ ಹೊಂದಿದ್ದಾರೆಂದರೂ ಪ್ರಸಂಗ ಬಂದರೆ ಮತ್ತೆ ಸ್ತ್ರೀ ವೇಷದಲ್ಲಿ ಕಾಣಿಸಿಕೊಳ್ಳುವ ಆತುರ ಇವರನ್ನು ಇನ್ನೂ ಬಿಟ್ಟಿಲ್ಲ.

ವಿಳಾಸ: ರಾಮದುರ್ಗ, ಜಿ: ಬೆಳಗಾವಿ ಮೊ: 9535158185


## ಸೋಮನಾಥ ತಿಪ್ಪಣ್ಣ ಬಸರಗಿ, ರಾಮದುರ್ಗ



ಇವರೂ ಕೂಡ ವೃತ್ತಿ ನಾಡಕ ಕಂಪನಿಯಿಂದ ಬಂದವರು. ಇವರ ಮೂಲೋದ್ಯೋಗವೂ ನೇಕಾರಿಕೆ. ನಾಟಕ ಕಲೆ ಹಾಗೂ ನೇಕಾರಿಕೆ ಕಲೆಯನ್ನು ಒಟ್ಟಿಗೇ ಕರಗತ ಮಾಡಿಕೊಂಡವರು ಶ್ರೀ ಸೋಮನಾಥ ಬಸರಗಿ. ಇವರು ಒಳ್ಳೆ ಹಾಡುಗಾರರೂ ಹೌದು, ಅಭಿನಯ ಕುಶಾಗ್ರಮತಿಗಳೂ ಹೌದು. ತಬಲಾ ವಾದನದ ಅಭಿರುಚಿಯನ್ನೂ ಇಟ್ಟುಕೊಂಡವರಾಗಿದ್ದರು. ಆದರೆ ಇವರು ರಂಗಭೂಮಿಯಲ್ಲಿ ಮಾತ್ರ ಸ್ತ್ರೀ ಪಾತ್ರಗಳಿಗೇ ಮೀಸಲಿದ್ದದರು. ಅತ್ಯಂತ ದುಃಖದ ಸನ್ನಿವೇಶಗಳಿದ್ದಾಗಂತೂ ಸಂಪೂರ್ಣ ಭಾವನಾ ಪರವಶರಾಗಿ ಪಾತ್ರಗಳನ್ನು ಮಾಡುವ ಕಲೆ ಇವರಿಗೆ ಕರಗತವಾಗಿಬಿಟ್ಟಿತ್ತು. ಇವರ ಪಾತ್ರಗಳನ್ನು ನೋಡಿ ಕಣ್ಣೀರು ಹಾಕದ ಪ್ರೇಕ್ಷಕರೇ ಇರುತ್ತಿರಲಿಲ್ಲವೆಂದು ಬಹುಜನರ ಅಭಿಪ್ರಾಯವಾಗಿತ್ತು.

ವಿಳಾಸ: ರಾಮದುರ್ಗ, ಜಿ: ಬೆಳಗಾವಿ

## ಬಸವಂತಪ್ಪ ಚನ್ನಪ್ಪ ಹರ್ಲಾಪೂರ, ರಾಮದುರ್ಗ



ಬಸವಂತಪ್ಪ ಹರ್ಲಾಪೂರವರು ಇವರು ಭಾರತ ಸ್ವಾತಂತ್ರ್ಯದ ಹೋರಾಟಗಾರೂ ಹೌದು ರಂಗ ಸಾಧಕರೂ ಹೌದು. ಸ್ವಾತಂತ್ರ್ಯ ಚಳುವಳಿ ಸಂದರ್ಭದಲ್ಲಿ ರಂಗಭೂಮಿಯಲ್ಲಿ ಬಣ್ಣ ಬಳಿದುಕೊಂಡು, ವೇಷ ಮರೆಸಿಕೊಂಡು ಅತ್ಯಂತ ಚಾಣಾಕ್ಷತನದಿಂದ ಪೋಲೀಸರಿಗೂ ಸಿಗದೇ ಬ್ರಿಟಿಷರಿಗೆ ಚಳ್ಳೆಹಣ್ಣು ತಿನಿಸಿದವರು ಹರ್ಲಾಪೂರವರು. ಈ ನಿಟ್ಟಿನಲ್ಲಿ ರಂಗಭೂಮಿಯ ಪರ್ಯಾಯ ಚಟುವಟಿಕೆಗಳು ಚಳುವಳಿಗಾರರಿಗೆ ತುಂಬಾ ಸಹಕರಿಸಿವೆ ಎಂದು ಇಂದಿಗೂ ನೆನೆಯುತ್ತಾರೆ ಈ ಕಲಾವಿದರು. ರಾಮದುರ್ಗದ ನೇಕಾರ ಪೇಟೆಯಲ್ಲಿಯ ಆಗಾಗ ನಡೆಯುತ್ತಿದ್ದ ನಾಟಕೋತ್ಸವಗಳಲ್ಲಿ ಇವರು ಖಾಯಂ ಆಗಿ ಹಾರ್ಮೋನಿಯಂ ನುಡಿಸುವ ಮೂಲಕ, ನಾಟಕಗಳನ್ನು ಕಲಿಸುವ ಮೂಲಕ ಹಾಗೂ ಸ್ವತಃ ಅಭಿನಯವನ್ನೂ ಮಾಡುವ ಮೂಲಕ ರಂಗಭೂಮಿಯ ಬಹುಮುಖ ಸೇವೆಯನ್ನು ಗೈಯುತ್ತಬಂದಿದ್ದಾರೆ. ಇಂದಿಗೂ ಕೂಡ ಪಕ್ಕದ ಹಳ್ಳಿಗಳಲ್ಲಿ ನಾಟಕ ಕಲಿಸುವ ಉದ್ಯೋಗವನ್ನು ಮಾಡುತ್ತ ಕಾಲವ್ಯಯ ಮಾಡುತ್ತಿದ್ದಾರೆ ಈ ಕಲಾವಿದರು.

ವಿಳಾಸ: ರಾಮದುರ್ಗ. ಜಿಲ್ಲಾ: ಬೆಳಗಾವಿ

## ಗುರುನಾಥ ಲಕ್ಷ್ಮಣ ಅಕ್ಷರದ, ರಾಮದುರ್ಗ



ಇವರು ಹೆಚ್ಚಾಗಿ ಪೌರಾಣಿಕ ಹಾಗೂ ಐತಿಹಾಸಿಕ ನಾಟಕಗಳಲ್ಲಿ ಅಭಿನಯಿಸಿದ್ದಾರೆ. ಕಂದಗಲ್ ಹನುಮಂತ ರಾಯರ ಬಹುತೇಕ ನಾಟಕಗಳಲ್ಲಿ ಇವರು ಪಾತ್ರ ಮಾಡಿದ್ದಾರೆ. ಇವರೂ ಹಾಗೂ ಜಂಪಣ್ಣ ಕಡಿವಾಲದ ಇಬ್ಬರೂ ಕೂಡಿಯೇ ಹೊಸ ಹೊಸ ನಾಟಕಗಳನ್ನು ರಂಗಕ್ಕೆ ತಂದಿದ್ದಾರೆ. ಬಹು ಕ್ಲಿಷ್ಟವಾದಂತ ಅವರ ಭಾಷೆಯನ್ನು ಅತಿ ಸರಳಾಗಿ, ಸ್ಪಷ್ಟವಾಗಿ. ಭಾವಪೂರ್ಣವಾಗಿ ಉಚ್ಚರಿಸುತ್ತಿದ್ದ ಇವರ ಕಂಠ ಮಾಧುರ್ಯವೂ ಅಷ್ಟೇ ಅದ್ಭುತವಾಗಿತ್ತೆನ್ನಲಾಗಿದೆ. ಸ್ತ್ರೀ ಪಾತ್ರಗಳನ್ನೂ ಇವರು ಪರಿಣಾಮಕಾರಿಯಾಗಿ ಅಭಿನಯಿಸುತ್ತಿದ್ದರು. ಇವರ ಮನೆತನದ ಮೂಲೋದ್ಯೋಗ ನೇಕಾರಿಕೆ. ಹಗುಲೆಲ್ಲ ನೇಯ್ಗೆ ಕಾಯಕ, ನಿತ್ಯ ಸಾಯಂಕಾಲ ನಾಟಕದ ತಾಲೀಮು ಇಲ್ಲವೆ ಸತ್ಸಂಗದಲ್ಲಿ ಕಾಲಹರಣ ಮಾಡುವದು ಇವರ ಹವ್ಯಾಸ.

ವಿಳಾಸ: ರಾಮದುರ್ಗ. ಜಿಲ್ಲಾ: ಬೆಳಗಾವಿ



## ಕಾಶಪ್ಪ ಓಂಕಾರೆಪ್ಪ ಹೂಲಿ, ರಾಮದುರ್ಗ

ಇವರೂ ಕೂಡ ಸ್ತ್ರೀ ಪಾತ್ರಗಳನ್ನು ಮಾಡುವುದರಲ್ಲಿ ನಿಸ್ಸೀಮರಾಗಿದ್ದರು ಯಾವುದೇ ನಾಟಕವಿರಲಿ ಸಾಮಾಜಿಕವೇ ಇರಲಿ ಪೌರಾಣಿಕವೇ ಇರಲಿ ಅತ್ಯಂತ ಭಾವಪೂರ್ಣವಾಗಿ ಅಭಿನಯಿಸುವ ಕಲೆ ಇವರಿಗೆ ಕರಗತವಾಗಿಬಿಟ್ಟಿತ್ತು. ಅಪರಿಚಿತರಿಗೆ ಇವರ ಪಾತ್ರ ಗುರುತು ಹಿಡಿಯುವುದೂ ದುಸ್ತರವಾಗುತ್ತಿತ್ತು. ಹಾವಭಾವ, ವೇಷಭೂಷಣ, ವಾಚಿಕಾಭಿನಯ, ಮುಖವರ್ಣಿಕೆ ಎಲ್ಲವೂ ಹೆಣ್ಣಿನ ತದ್ರೂಪ. ಆರ್ಯ ಸಂಗೀತ ನಾಟಕ ಮಂಡಳಿ ಹಾಗೂ ಪಾಂಡುರಂಗ ನಾಟ್ಯಸಂಘದಲ್ಲಿ ಹೂಲಿಯವರು ವಂಶಜ್ಯೋತಿ ಪ್ರಕಾಶ, ಮದುಮಗಳು, ತಾಯಿ ಕರುಳು, ಶ್ರೀರಾಮ ಪಟ್ಟಾಭಿಷೇಕ, ಶ್ರೀಕೃಷ್ಣ ಗಾರುಡಿ ಮುಂತಾದ ನಾಟಕಗಳಲ್ಲಿ ಸ್ತ್ರೀ ಪಾತ್ರವನ್ನೇ ಮಾಡಿ ಜನಪ್ರಿಯರಾಗಿದ್ದಾರೆ. ಹಲವಾರು ನಾಟಕ ಕಂಪನಿಗಳಲ್ಲಿಯೂ ಸೇವೆ ಸಲ್ಲಿಸಿ ಈಗ ರಂಗ ಸೇವೆಯಿಂದ ನಿವೃತ್ತಿಯಾಗಿದ್ದಾರೆ. ಇವರ ಕುಂಭಕರ್ಣನ ಪಾತ್ರವಂತೂ ಬಹಳ ಹೆಸರು ಮಾಡಿತ್ತು. ಅಲ್ಲಿಲ್ಲಿ ಭಜನಾ ಮೇಳದಲ್ಲಿ ಕೂಡಿಕೊಂಡು ಹಾಡುವದನ್ನು ಮಾಡುತ್ತಿರುತ್ತಾರೆ.

ವಿಳಾಸ: ರಾಮದುರ್ಗ. ಜಿಲ್ಲಾ: ಬೆಳಗಾವಿ ಮೊ: 9916394488




## ರಾಮಣ್ಣ ಶಿವಪ್ಪ ಕೊಳದೂರ, ರಾಮದುರ್ಗ

ರಾಮದುರ್ಗದಲ್ಲಿ ಜನಪದ, ವೃತ್ತಿ ಹಾಗೂ ಹವ್ಯಾಸಿ ಪ್ರಕಾರದ ರಂಗ ಚಟುವಟಿಕೆಗಳಿಗೆ ಪ್ರಾತಿನಿಧ್ಯ ಮೊದಲಿನಿಂದಲೂ ಇದೆ. ಆದರೆ ಜನಪದ ಹಾಗೂ ವೃತ್ತಿ ರಂಗಭೂಮಿಗಿದ್ದಷ್ಟು ಹವ್ಯಾಸಿಗಿಲ್ಲವೆಂದೇ ಹೇಳಬಹುದು. ಪ್ರಸ್ತುತ ರಾಮಣ್ಣ ಕೊಳದೂರವರು ಜನಪದ ಹಾಗೂ ವೃತ್ತಿ ರಂಗಭೂಮಿಯಲ್ಲಿ ಅನನ್ಯ ಸೇವೆಯನ್ನು ಸಲ್ಲಿಸಿದ್ದಾರೆ. ನೇಕಾರಿಕೆ ವೃತ್ತಿಯ ಬಿಡುವಿನ ವೇಳೆಯಲ್ಲಿ ನಾಟಕದ ತಾಲೀಮು ಮಾಡುತ್ತಿದ್ದರು. ಉತ್ತಮ ಕಂಠ. ಅಭಿನಯ. ಮಾತುಗಾರಿಕೆಯಿಂದಾಗಿ ಕೊಳದೂರವರು ಬಹುಬೇಗನೇ ರಂಗಭೂಮಿಯಲ್ಲಿ ಹೆಸರು ಮಾಡಿದ್ದರು. ದೊಡ್ಡಾಟಲ್ಲಿ ಸಾರಥಿಯ ಪಾತ್ರವನ್ನು ಮಾರ್ಮಿಕವಾಗಿ ಮಾಡುತ್ತಿದ್ದರೆನ್ನಲಾಗಿದೆ. ರಾಮದುರ್ಗದ ಆರ್ಯ ಸಂಗೀತ ನಾಟಕ ಮಂಡಳಿ, ದುರ್ಗಾದೇವಿ ನಾಟ್ಯ ಸಂಘ, ದೇವಾಂಗ ನಾಟ್ಯ ಸಂಘ ಮುಂತಾದ ಮಂಡಳಿಗಳಲ್ಲಿ ಅಭಿನಯಿಸಿದ ಇವರು 1996 ರಲ್ಲಿ ಅಭಿನಯಿಸಿದ ಹಸಿರು ಬಳೆ ನಾಟಕದಲ್ಲಿ ಧರ್ಮಣ್ಣನ ಪಾತ್ರವು ಹೆಚ್ಚು ಪ್ರಸಿದ್ಧಿಯಲ್ಲಿದೆ. ದೇವಾಂಗ ಮಹಾತ್ಮೆ ನಾಟಕದಲ್ಲಿ ಪುನೀತ ಗುರುವಿನ ಪಾತ್ರವೂ ಅಷ್ಟೇ ಜನಪ್ರಿಯ.

ವಿಳಾಸ: ರಾಮದುರ್ಗ. ಜಿಲ್ಲಾ: ಬೆಳಗಾವಿ. ಮೊ: 9980694548

## ವಾಮಣ್ಣ ಗದಿಗೆಪ್ಪ ಕಾಟುಕರ, ರಾಮದುರ್ಗ



ವಾಮಣ್ಣನವರು ಶಾಲಾ ಶಿಕ್ಷಣವನ್ನೂ ಅಷ್ಟೇನೂ ಪೂರೈಸಿಕೊಂಡವರಲ್ಲವೆಂದರೂ ರಂಗ ಶಾಲೆಯಲ್ಲಿ ಮಾತ್ರ ಬಹಳ ಚುರುಕಿನವರಾಗಿದ್ದರೆನ್ನಲಾಗಿದೆ. ನಾಟಕ ಮಾತುಗಳನ್ನು ತಾವೇ ಓದಿಕೊಂಡು ಕಂಠಸ್ಥ ಮಾಡುವುದಕ್ಕಿಂತಲೂ ಮತ್ತೊಬ್ಬರ ಬಾಯಿಂದ ಕೇಳಿ ಮನನ ಮಾಡಿಕೊಳ್ಳುವುದೇ ಅವರ ವಿಶೇಷತೆಯಾಗಿತ್ತು. ವೃತ್ತಿರಂಗಭೂಮಿಯಲ್ಲೂ ಸೇವೆ ಸಲ್ಲಿಸಿದ ಹಾಗೂ ಹವ್ಯಾಸಿ ರಂಗಭೂಮಿಯಲ್ಲೂ ದುಡಿದ ಕಾಟುಕರ ಒಳ್ಳೆ ನಟರಾಗಿದ್ದರು. ಇವರು ಮತ್ತೆ ಹಲವಾರು ರಂಗ ನಟರನ್ನು ತಯಾರು ಮಾಡಿದ ಗುರುಸ್ಥಾನವನ್ನೂ ಪಡೆದಿದ್ದರು.

ವಿಳಾಸ: ರಾಮಗುರ್ಗ. ಜಿಲ್ಲಾ: ಬೆಳಗಾವಿ

## ಹನುಮಂತಪ್ಪ ಸಂಕಪ್ಪ ಬಡ್ನೂರ, ರಾಮದುರ್ಗ



ಇವರು ವೃತ್ತಿಯಿಂದ ನೇಕಾರರಾಗಿದ್ದು ಪ್ರವೃತ್ತಿಯಲ್ಲಿ ರಂಗಭೂಮಿಯ ನಟ. ಸ್ವಭಾವತಃ ಧರ್ಮಪಾರಾಯಣರಾದ ಇವರು ತಮ್ಮ ಒಳ್ಳೆ ಅಸ್ಖಲಿತ ಹಾಗೂ ಸುಸ್ಪಷ್ಟ ವಾಣಿಯಿಂದ ಪ್ರೇಕ್ಷಕರನ್ನು ತಮ್ಮತ್ತ ಸೆಳೆಯುತ್ತಿದ್ದರು. ಪೌರಾಣಿಕ ನಾಟಕಗಳಲ್ಲಂತೂ ಪಾತ್ರಗಳಲ್ಲಿ ಪರಕಾಯ ಪ್ರವೇಶ ಮಾಡಿದವರಂತೆ ತಲ್ಲೀನರಾಗುತ್ತಿದ್ದರು. ಇವರು ತಮ್ಮ ಅಭಿನಯ ಚಾತುರ್ಯಕ್ಕೆ ಹಲವಾರು ಪ್ರಶಸ್ತಿಗಳನ್ನೂ ಗಿಟ್ಟಿಸಿಕೊಂಡಿದ್ದಾರೆ. ನಗರ ನಾಟ್ಯ ಮಂದಿರಗಳಲ್ಲೂ ಇವರ ರಂಗ ಪ್ರಯೋಗಗಳು ಸಾಕಷ್ಟು ಆಗಿವೆ. ಆಕಾಶವಾಣಿ ಕೇಂದ್ರದಲ್ಲೂ ಪ್ರಸಾರಗೊಂಡಿವೆ.

ವಿಳಾಸ: ರಾಮದುರ್ಗ. ಜಿಲ್ಲಾ: ಬೆಳಗಾವಿ



## ಪುರವಂತಪ್ಪ ಬಸಪ್ಪ ಲ್ಯಾವಿ, ರಾಮದುರ್ಗ

ಲ್ಯಾವಿ ಪುರವಂತಪ್ಪ ರಂಗಭೂಮಿಯ ಬೆಡಗಿನ ನಾರಿಯೆಂದೇ ಪ್ರಸಿದ್ಧಿಯಲ್ಲಿದ್ದರು ತಮ್ಮ ಹರೆಯದ ವಯಸ್ಸಿನಲ್ಲಿ ಸ್ತ್ರೀ ವೇಷಾಲಂಕಾರ ಹಾಗೂ ಮುಖವರ್ಣಿಕೆ-ಯೊಂದಿಗೆ ರಂಗದ ಮೇಲೆ ಬಂದರೆ ಹದಿಹರೆಯದ ಚಂಗಿ ಯುವಕರೂ ಕೇಕೆ ಹಾಕಿ, ಶಿಳ್ಳು ಹೊಡೆಯುತ್ತಿದ್ದರು. ಅಷ್ಟೊಂದು ಪರಿಣಾಮ-ಕಾರಿಯಾಗಿ, ಭಾವನಾತ್ಮಕವಾಗಿ ಅಭಿನಯಿಸುತ್ತಿದ್ದ ಲ್ಯಾವಿಯರು ರಾಮದುರ್ಗದ ಎಲ್ಲ ಹವ್ಯಾಸಿ ತಂಡಗಳಲ್ಲಿ ಹಾಗೂ ಜಾನಪದ ತಂಡಗಳಲ್ಲಿ ತಮ್ಮ ನಟನಾ ಕೌಶಲ್ಯವನ್ನು ತೋರಿಸಿದ್ದಾರೆ. ರಾಮದುರ್ಗದ

ಪಾಂಡುರಂಗ ನಾಟ್ಯ ಸಂಘ, ಬನಶಂಕರಿ ನಾಟ್ಯ ಸಂಘ ಮತ್ತು ನಾಟ್ಯ ಕಲಾ ಸಂಘಗಳಲ್ಲಿ ದೀಪಾವಳಿ, ಅಗ್ನಿಕುಂಡ, ಚೌತಿ ಚಂದ್ರ, ರಾಜಾ ಹರಿಶ್ಚಂದ್ರ, ಪುನೀತ ಪತ್ನಿ, ತಾಯಿ ಕರುಳು, ಪ್ರೇಮ ಜ್ಯೋತಿ ಮುಂತಾದ ನಾಟಕಗಳಲ್ಲಿ ಹೆಚ್ಚಾಗಿ ಸ್ತ್ರೀ ಪಾತ್ರಗಳನ್ನೇ ಮಾಡಿದ ಹೆಗ್ಗಳಿಕೆ ಇವರದು. ಇವರ ಕೃಷ್ಣ ಗಾರುಡಿ ಹಾಗೂ ಸಂಗ್ಯಾಬಾಳ್ಯಾ ಡಪ್ಪಿನಾಟಗಳು ಆಕಾಶವಾಣಿ ಹಾಗೂ ದೂರದರ್ಶನದಲ್ಲಿ ಪ್ರಸಾರ ಕಂಡಿವೆ.

ವಿಳಾಸ: ರಾಮದುರ್ಗ. ಜಿಲ್ಲಾ: ಬೆಳಗಾವಿ



## ಪಾಂಡಪ್ಪ ಮಲ್ಲಪ್ಪ ದೊಡವಾಡ, ಸಾ. ಹಲಗತ್ತಿ

ದೊಡವಾಡ ಪಾಂಡಪ್ಪನವರು ರಾಮದುರ್ಗದ ನೆರೆಗ್ರಾಮವಾದ ಹಲಗತ್ತಿಯವರು. ಹಲಗತ್ತಿಗ್ರಾಮ ಕೂಡ ಒಳ್ಳೆ ನಾಟಕ ಪ್ರಿಯರ ಊರು. ರಂಗ ಕಲಾವಿದರನ್ನು ಗೌರವದಿಂದ ಕಂಡು ಗೌರವಿಸುವ ಊರು. ಇಂಥ ಊರಲ್ಲಿ ರಂಗಬಳಗವನ್ನು ಕಟ್ಟಿ ಕೊಂಡು ರಂಗಭೂಮಿಯ ಉಳುವಿಗಾಗಿ ಹಗಲಿರಳೂ ಶ್ರಮಿಸುತ್ತಿರುವ ಪೌರಾಣಿಕ ಪಾತ್ರಧಾರಿ ಪಾಂಡಪ್ಪನವರು ವೃತ್ತಿ ಕಂಪನಿಗಳಲ್ಲಿಯೂ ಕೂಡ ರಂಗ ಸೇವೆ ಸಲ್ಲಿಸಿದವರಾಗಿದ್ದಾರೆ. ಸಮಾಜ ಸೇವೆಯಲ್ಲೂ ಯಾವುದೇ ರೀತಿಯಿಂದ ಹಿಂದೆ ಬೀಳದ ಪಾಂಡಪ್ಪ ರಾಮದುರ್ಗ ತಾಲೂಕಾ ಅಭಿವೃದ್ಧಿ ಮಂಡಳಿಯ ಸದಸ್ಯರಾಗಿಯೂ ಕಾರ್ಯ ನಿರ್ವಹಿಸಿದ್ದಾರೆ.

ವಿಳಾಸ: ಸಾ: ಹಲಗತ್ತಿ, ತಾ: ರಾಮದುರ್ಗ. ಜಿ: ಬೆಳಗಾವಿ



## ಗೌಡಪ್ಪ ಭಜಂತ್ರಿ, ಹಲಗತ್ತಿ. ತಾ: ರಾಮದುರ್ಗ

ಜಿ: ಬೆಳಗಾವಿ. ಗೌಡಪ್ಪ ಭಜಂತ್ರಿ ಸಾ: ಹಲಗತ್ತಿ ತಾಲೂಕು ರಾಮದುರ್ಗ ಇವರು ಪ್ರಾಥಮಿಕ ಶಿಕ್ಷಣವನ್ನು ಹಲಗತ್ತಿಯಲ್ಲಿ ಮುಗಿಸಿದ್ದಾರೆ. ಚಿಕ್ಕಂದಿನಿಂದಲೂ ಇವರಿಗೆ ನಾಟಕದಲ್ಲಿ ಅಭಿರುಚಿ. ಸಂಗೀತದಲ್ಲೂ ಅಷ್ಟೆ. ಸದ್ಯಕ್ಕೆ ಇವರ ವಯಸ್ಸು 58. ಇವರು ಈಗಾಗಲೇ ಅನೇಕ ನಾಟಕಗಳಲ್ಲಿ ಅಭಿನಯ ಅಭಿನಯಿಸಿದ್ದಾರೆ. ಅಭಿನಯಿಸುತ್ತಿದ್ದಾರೆ.ನಿವರು ಅಭಿನಯಿಸಿದ ನಾಟಕಗಳೆಂದರೆ_ ಹಳಿಯಿಂದ ದಿಳ್ಳಿಯವರೆಗೆ, ಮಲಮಗಳು, ಕುರುಕ್ಷೇತ್ರ, ಸೂಳೆಯ ಮಗ, ಹೆಣ್ಣು ಮಗಳು ಮುಂತಾದವುಗಳು. ಕುರುಕ್ಷೇತ್ರ ನಾಟಕದಲ್ಲಿ ಕೃಷ್ಣನಪಾತ್ರ ರೋಮಾಂಚನ ಗೊಳಿಸುವಂಥದ್ದು. ಹಾಸ್ಯಪಾತ್ರ ಹಾಗೂ ಮುಖ್ಯಪಾತ್ರಗಳನ್ನೂ ಮಾಡಿದ್ದಾರೆ. ಸ್ತ್ರೀ ಪಾತ್ರದಲ್ಲಂತೂ ಇವರದು ಎತ್ತಿದ ಕೈ. ಸಂಗೀತದ ಹುಚ್ಚು ಹಿಡಿಸಿಕೊಂಡ ಇವರು

ಹಾರ್ಮೋನಿಯಂ ಮಾಸ್ತರ ಆಗಿ ಅನೇಕ ನಾಟಕಗಳಿಗೆ ನಿರ್ದೇಶನ ನೀಡಿದ್ದಾರೆ, ಅನೇಕ ಗ್ರಾಮಗಳಲ್ಲಿ ಇವರು ನಾಟಕ ಕಲಿಸಲು ಈಗಲೂ ಹೋಗುತ್ತಾರೆ. ಇಂದಿಗೂ ಅವರ ಅಭಿನಯದ ರುಚಿ ಬತ್ತಿಲ್ಲ. ಕುರುಕ್ಷೇತ್ರದ ಕೃಷ್ಣನ ಮಾತುಗಳಂತೂ ಕೇಳುವಂಥಾವುಗಳು. ಇಂತಹ ಕಲಾವಿದರು ಇರುವುದರಿಂದಲೇ ಹಳ್ಳಿಗಳಲ್ಲಿ ಕಲೆ ಉಳಿದುಕೊಂಡಿದೆ ಎಂದು ಹೇಳಬಹುದು.

ವಿಳಾಸ: ಗೌಡಪ್ಪ ಭಜಂತ್ರಿ, ಹಲಗತ್ತಿ, ತಾ: ರಾಮದುರ್ಗ. ಜಿ: ಬೆಳಗಾವಿ

**ರಾಚಪ್ಪ ಕೇಮಣ್ಣ ಮುಗಳಿ,** ರಾಮದುರ್ಗ

ಇವರು ವೃತ್ತಿಯಿಂದ ನೇಕಾರಿಕೆಯನ್ನು ಅವಲಂಬಿಸಿದವರು. ನಾಟಕ ರಂಗದ ವ್ಯಾಮೋಹಕ್ಕೆ ಒಳಗಾಗಿ ಹಲವಾರು ವೃತ್ತಿ ನಾಟಕಗಳ ಕಂಪನಿಗಳಲ್ಲಿ ವಿಶೇಷವಾಗಿ ಹಾಸ್ಯ ಪಾತ್ರಗಳನ್ನು ಮಾಡಿ ಪ್ರೇಕ್ಷಕರನ್ನು ತುಂಬಾ ನಗಿಸಿದವರು. ಅನೇಕ ಕಂಪನಿಗಳ ತಿರುಗಾಟದ ನಂತರ ಮತ್ತೆ ಇವರು ತಮ್ಮ ಊರಾದ ರಾಮದುರ್ಗಕ್ಕೆ ಬಂದು ತಮ್ಮ ಕುಲಕಸಬನ್ನು ಮಾಡುತ್ತ ಹವ್ಯಾಸಿ ಕಲಾವಿದರನ್ನು ಕೂಡಿಸಿ ನಾಟಕ ಕಲಿಸಲು ಮುಂದಾದರು. ಇವರು ತಾವೇ ಸ್ವತಃ ನಾಟಕಗಳನ್ನು ರಚಿಸಿ ಪ್ರಯೀಗಿಸಿದ್ದೂ ಉಂಟು. ವಂಶಜ್ಯೋತಿ. ಪ್ರಕಾಶ ಹಾಗೂ ಪುನೀತ ಪತ್ನಿ ಹೀಗೆ ಹಲವಾರು ನಾಟಕಗಳನ್ನು ಪ್ರಯೋಗಿಸಿ ಜನಮನ್ನಣೆ ಗಳಿಸಿದ್ದಾರೆ. ಆ ಮೇಲೆ, 'ದಿವ್ಯ ಮೂರ್ತಿ ದೇವಾಂಗ' ಎಂಬ ನಾಟಕವನ್ನು ರಚಿಸಿ ಶ್ರೀ ದೇವಾಂಗ ನಾಟ್ಯ ಸಂಘ, ರಾಮದುರ್ಗ ಇದರಡಿಯಲ್ಲಿ ಪ್ರಯೋಗ ಮಾಡಿದ್ದಾರೆ. ಸದರೀ ನಾಟಕವನ್ನು ಮುದ್ರಣ ಮಾಡಿಸಿ ಅನೇಕ ಊರುಗಳಲ್ಲಿ ನಾಟಕ ಪ್ರದರ್ಶಿಸಿ ತಮ್ಮ ಕಲಾ ಪ್ರೌಢಿಮೆಯನ್ನು ಮೆರೆದ ಮಾಹಾನ್ ಕಲಾವಿದರಿವರು.

ವಿಳಾಸ: ರಾಚಪ್ಪ ಕೇಮಣ್ಣ ಮುಗಳಿ, ರಾಮದುರ್ಗ. ಜಿ: ಬೆಳಗಾವಿ




**ಕಲ್ಯಾಣನಾಥ ವೀರಪ್ಪ ಅಜವಾನ,** ರಾಮದುರ್ಗ ಜಿ:

ಬೆಳಗಾವಿ ಹಲಗತ್ತಿಯಲ್ಲ ಜನಿಸಿದ ಇವರು ಪ್ರೌಢ ಮತ್ತು ಪದವಿ ಶಿಕ್ಷಣವನ್ನು ರಾಮದುರ್ಗದಲ್ಲಿಯೇ ಪಡೆದಿದ್ದಾರೆ. ಸದ್ಯ ಇವರು ಗೊಡಚಿಯ ಶ್ರೀ ವೀರಭದ್ರೇಶ್ವರ ಪ್ರೌಢ ಶಾಲೆಯಲ್ಲಿ ಶಿಕ್ಷಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. 2002ರಲ್ಲಿ ಇವರಿಗೆ ತಾಲೂಕಾ ಮಟ್ಟದ ಆದರ್ಶ ಶಿಕ್ಷಕ ಪ್ರಶಸ್ತಿಯೂ ದೊರಕಿದೆ. ಸಾಹಿತ್ಯದಲ್ಲಿ ಅಭಿರುಚಿ ಇದ್ದ ಇವರಿಗೆ ಹಾಡುಗಾರಿಕೆಯಲ್ಲೂ ಮತ್ತು ಅಭಿನಯದಲ್ಲೂ ಆಸಕ್ತಿನ್ನು ಇರಿಸಿಕೊಂಡು ಬಂದಿದ್ದಾರೆ. ಇವರು ಹಲವಾರು ಕಥೆ ಕವನಗಳನ್ನು ಬರೆದಿದ್ದಾರೆ. ಹಳ್ಳಿಯ ಉದ್ಧಾರ, ಬಾಳು ಮುರಿದರೂ ತಾಳ ತಪ್ಪಲಿಲ್ಲ, ಗಂಡಿನ ಕೋಪ ಹೆಣ್ಣಿಗೆ ತಾಪ ಮುಂತಾದವುಗಳನ್ನು ರಚಿಸಿ ಪ್ರಯೋಗಕ್ಕೆ

ಅಣಿಗೊಳಿಸಿದ್ದಾರೆ. ಇವರು ವಿವಿಧ ನಾಟಕಗಳಲ್ಲಿ ಅಭಿನಯವನ್ನೂ ಮಾಡಿದ್ದಾರೆ. ಇತ್ತಿತ್ತಲಾಗಿ ಜಾಗೃತ ಕಲಾವೇದಿಕೆ ಸದಸ್ಯರಾಗಿ ತಂಡದವರೊಂದಿಗೆ ಬೀದೀ ನಾಟಕಗಳಲ್ಲಿ ಅಭಿನಯಿಸಿದ್ದಾರೆ.

ವಿಳಾಸ: ಕಲ್ಯಾಣನಾಥ ವೀರಪ್ಪ ಅಜವಾನ, ರಾಮದುರ್ಗ. ಜಿ: ಬೆಳಗಾವಿ



## ಎಂ. ವಿ. ಅಜವಾನ, ರಾಮದುರ್ಗ

ಮಲ್ಲಿಕಾರ್ಜುನ ವೀರಪ್ಪ ಅಜವಾನ, ಹಲಗತ್ತಿ ತಾ: ರಾಮದುರ್ಗ ಇವರು ಪ್ರಾಥಮಿಕ ಶಿಕ್ಷಣವನ್ನು ಹಲಗತ್ತಿಲ್ಲಿಯೇ ಮುಗಿದ್ದಾರೆ. 19-12-1946ರಲ್ಲಿ ಜನಿಸಿದ ಇವರು ಪ್ರೌಢ ಮತ್ತು ಪದವಿ ಶಿಕ್ಷಣವನ್ನು ರಾಮದುರ್ಗದಲ್ಲಿ ಹೊಂದಿದ್ದಾರೆ. ಸದ್ಯ ಇವರು, ಸರಕಾರಿ ಗ್ರಂಥಾಲಯ ಇಲಾಖೆಯಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಹವ್ಯಾಸ: ನಾಟಕ ಅಭಿನಯ, ಹಾಡುಗಾರಿಕೆ. ಇವರು ಸಾಮಾಜಿಕ, ಪೌರಾಣಿಕ, ಐತಿಹಾಸಿಕ ನಾಟಕಗಳಲ್ಲಿ ಅಭಿನಯಿಸಿದ್ದಾರೆ. ಕುರುಕ್ಷೇತ್ರ, ಸಿಂಧೂರ ಲಕ್ಷ್ಮಣ, ರಾಮದುರ್ಗ ದುರಂತ ಹಾಗೂ ಸಾಮಾಜಿಕ ನಾಟಕಗಳಾದ ಅತ್ತೆ ಸೊಸೆ, ದೀಪಾವಳಿ, ಸಹೋದರ, ಕಲಿತ ಕಳ್ಳ, ತಂದೆ ಮಾಡಿದ ತಪ್ಪು, ಸೂಳೆಯ ಮಗ ಮುಂತಾದವುಗಳಲ್ಲಿ ಅಭಿನಯಿಸದ್ದಾರೆ. ರಂಗಸಂಪದ ಕಲಾ ತಂಡ ಧಾರವಾಡ ಇವರೊಂದಿಗೆ ಶ್ರೀರಂಗರು ಬರೆದ ಶೋಕಚಕ್ರ ನಾಟಕದಲ್ಲಿ ಜಯರಾಯನ ಪಾತ್ರಧಾರಿಯಾಗಿ ಮೆರೆದಿದ್ದಾರೆ. ದೆಹಲಿಯಲ್ಲಿ ಜರುಗಿದ ನಾಟಕ ಸ್ಪರ್ಧಯಲ್ಲಿ ಇದೇ ನಾಟಕವನ್ನು ಪ್ರಯೋಗಿಸಿ ಬಂದಿದ್ದಾರೆ. ಬೀದಿನಾಟಕಗಳಲ್ಲಿ ಪಾಲ್ಗೊಂಡಿದ್ದಾರೆ. ಸ್ತ್ರೀ ಪಾತ್ರ ಸಹಿತ ಯಾವುದೇ ಪಾತ್ರ ಕೊಟ್ಟರೂ ಅದಕ್ಕೆ ಜೀವ ತುಂಬಿ ಸೈ ಎನಿಸಿ ಕೊಳ್ಳುವರು. ರಾಮದುರ್ಗ ದುರಂತ ನಾಟಕದಲ್ಲಿ ರಾಜನ ಪಾತ್ರಧಾರಿಯಾಗಿ ಅಭಿನಯಿಸಿದ್ದಲ್ಲದೇ ಈ ನಾಟಕವು ದೂರದರ್ಶನ ಚಂದನದಲ್ಲಿ ಪ್ರಸಾರಗೊಂಡಿತು. ಕುರುಕ್ಷೇತ್ರದಲ್ಲಿ ಭೀಮನ ಪಾತ್ರ ರೋಮಾಂಚನ ಗೊಳಿಸುವಂಥದ್ದು. ಸಮಾಜ ಸೇವೆಯ ತೆರದಿ ವಿವಿಧ ಸಂಘಟನೆಗಳಲ್ಲಿ ಭಾಗವಹಿಸಿದ್ದಾರೆ. ಪ್ರತಿಭಾ ಹ್ಯಾಸಿ ಕಲಾ ತಂಡ ಬೆಳಗಾವಿ, ಕರ್ನಾಟಕ ರಾಜ್ಯ ಸರಕಾರಿ ನೌಕರರ ಸಂಘ, ಜಾಗೃತ ಕಲಾವೇದಿಕೆ ಹಾಗೂ ರಂಗ ಸಂಪದ ಧಾರವಾಡ ಕಲಾ ತಂಡದ ಸದಸ್ಯರಾಗಿ ಸೇವೆ ಸಲ್ಲಿಸಿ

ವಿಳಾಸ: ಎಂ. ವಿ. ಅಜವಾನ, ರಾಮದುರ್ಗ. ಜಿ: ಬೆಳಗಾವಿ

# ಅಥಣಿ ತಾಲೂಕು

## ಜಾನಪದ ರಂಗ ತಂಡಗಳು

1) ಸುರೇಶ ಲೆಂಡೆಯವರ ಶ್ರೀ ಬೀರಲಿಂಗೇಶ್ವರ ನಾಟ್ಯಸಂಘ, ಬಡಚಿ, ಅಥಣಿ

2) ಮಾರುತಿ ಶೀನಪ್ಪಗೋಳವರ ಶ್ರೀ ಮಲ್ಲಿಕಾರ್ಜುನ ನಾಟ್ಯಸಂಘ, ದರೂರ. ತಾ: ಅಥಣಿ

3) ಅಡವಯ್ಯ ತೊಡಗಲ್ಮಠವರ ಶ್ರೀ ಲಿಂಗೇಶ್ವರ ನಾಟ್ಯ ಸಂಘ, ಸಂಕಾನಟ್ಟಿ. ತಾ: ಅಥಣಿ

4) ಹನುಮಂತ ಕೋಳಿಯವರ ಶ್ರೀ ಬಸವೇಶ್ವರ ನಾಟ್ಯ ಸಂಘ, ಕಕಮರಿ, ಅಥಣಿ

5) ಬಾಹುರಾಜಾ ದಾಶಾಳವರ ಶ್ರೀ ಅಮ್ಮ ರಾಜೇಶ್ವರಿ ನಾಟ್ಯ ಸಂಘ, ಕಕಮರಿ. ತಾ: ಅಥಣಿ

6) ಮಾರುತಿ ದಳವಾಯಿಯವರ ಬಯಲಾಟ ಜನಪದ ತಂಡ, ಕನ್ನಾಳ. ಅಥಣಿ

7) ಸಂಜು ಕುಲಕರ್ಣಿಯವರ ಶ್ರೀ ಪಾಂಡುರಂಗ ಪ್ರಾಸಾದಿಕ ನಾಟ್ಯಸಂಘ, ಮಲಹಾಬಾದ. ತಾ: ಅಥಣಿ

8) ವಿಠ್ಠಲ ಕೋಳಿಯವರ ಶ್ರೀ ಶಿವಯೋಗಿ ಕೃಷ್ಣ ಪಾರಿಜಾತ ಕಂಪನಿ, ಹಲ್ಯಾಳ. ತಾ: ಅಥಣಿ

9) ಅಶೋಕ ಕಾಂಬಳೆಯವರ ಶ್ರೀ ಬಾಳಕೃಷ್ಣ ನಾಟ್ಯಸಂಘ, ಸತ್ತಿ. ತಾ: ಅಥಣಿ

10) ಚನ್ನಮಲ್ಲ ಕಾಂಬಳೆಯವರ ಜೈಭೀಮ ನಾಟ್ಯ ಸಂಘ, ಕುಸನಾಳ, ಅಥಣಿ

11) ಮಹಾದೇವ ಮಾದರವರ ಶ್ರೀ ಲಕ್ಷ್ಮೀ ಸಂಗ್ಯಾ ಬಾಳ್ಯಾ ನಾಟ್ಯ ಸಂಘ, ಸುಟ್ಟಟ್ಟಿ. ತಾ: ಅಥಣಿ

12) ಕಲ್ಲಪ್ಪ ನಾವಿಯವರ ಶ್ರೀ ಗಿರಿಮಲ್ಲೇಶ್ವರ ನಾಟ್ಯ ಸಂಘ, ಬಡಚಿ. ತಾ: ಅಥಣಿ

13) ಶಿವಪ್ಪ ಕಂಬಾರವರ ಶ್ರೀ ಸದಾಶಿವ ನಾಟ್ಯ ಸಂಘ, ಚಮಕೇರಿ. ತಾ: ಅಥಣಿ


14) ಶಿವಣ್ಣ ಕುಂಬಾರವರ ಸದಾಶಿವ ನಾಟ್ಯ ಸಂಘ, ಚಮಕೇರಿ. ತಾ: ಅಥಣಿ

15) ಬಸವರಾಜ ತೇಲಿ. ದೊಡ್ಡಾಟದ ಮ್ಯಾಳ. ಮೋಳೆ. ತಾ: ಅಥಣಿ

16) ಬಾಬಾಲಾಲ ನದಾಫವರ ಪಾರಿಜಾತ ಮ್ಯಾಳ. ಸಪ್ತಸಾಗರ. ತಾ: ಅಥಣಿ

17) ಸ. ಸ. ಗಿರಮಲ್ಲೇಶ್ವರ ಬಯಲಾಟ ಸಂಘ, ಬಡಚಿ. ತಾ: ಅಥಣಿ

# ನಟರು, ನಾಟಕಕಾರರು ಹಾಗೂ ರಂಗ ಕರ್ಮಿಗಳು




## ಶ್ರೀ ಕಲ್ಲಪ್ಪ ತಾಯಪ್ಪ ನಾವಿ, ಬಡಚಿ.

ಅಥಣಿ ತಾಲೂಕು ಬಡಚಿ ಗ್ರಾಮದವರಾದ ಜಾನಪದ ಕಲಾವಿದ ಶ್ರೀ ಕಲ್ಲಪ್ಪ ತಾಯಪ್ಪ ಲಾವಿ ಇವರು ಸ. ಸ. ಗಿರಿಮಲ್ಲೇಶ್ವರ ಬಯಲಾಟ ಸಂಘ, ಬಡಚಿ. ತಾ: ಅಥಣಿ ಎಂಬ ಜಾನಪದ ನಾಟಕ ರಂಗಮೇಳವನ್ನು ಮಾಡಿಕೊಂಡು ಸುಮಾರು ಮೂವತ್ತು ವರ್ಷಗಳಿಂದ ರಂಗ ಸೇವೆ ಸಲ್ಲಿಸುತ್ತಿದ್ದಾರೆ. ಇವರು ಜಾನಪದ ಕಲಾವಿದರಾಗಿದ್ದು ಎಳೆತನದಲ್ಲಿಯೇ ರಂಗ ಭೂಮಿಯ ಗೀಳು ಹಚ್ಚಿಕೊಂಡವರಾಗಿದ್ದರು. ಹಿರಿಯ ಜಾನಪದ ರಂಗಕಲಾವಿದರಾದ ಇಂಚಗೇರಿ ಆಧ್ಯಾತ್ಮ ಸಂಪ್ರದಾಯದ ದುಂಡಪ್ಪ ಭೋಜಪ್ಪ ದನದಮನಿ ಇವರ ಮಾರ್ಗದರ್ಶನದಲ್ಲಿ ರಂಗ ತರಬೇತಿ ಪಡೆದು ಜಾನಪದ ಸಣ್ಣಾಟಗಳ ಕಲೆಯನ್ನು ಮುಂದುವರೆಸಿಕೊಂಡು ಬಂದಿದ್ದಾರೆ. ಇವರು ನಗರ ಹಾಗೂ ಗ್ರಾಮೀಣ ಪ್ರದೇಶದ ರಂಗಾಸಕ್ತರ ಆಹ್ವಾನದ ಮೇರೆಗೆ 'ಸತ್ಯವಾನ್ ಸಾವಿತ್ರಿ' 'ಭಕ್ತ ಮಾರ್ಕಂಡೇಯ' ಅರ್ಥಾತ್ 'ಯಮನ ಸೋಲು' ಎಂಬ ವೃತ್ತಿಪರ ಪೌರಾಣಿಕ ಆಖ್ಯಾನಗಳ ಪ್ರದರ್ಶನ ನೀಡುತ್ತ ಬಂದಿದ್ದಾರೆ. ಹಾಗೂ 'ಗಲಾಟಿ ಮಾಡಿದ ತಲಾಟಿ' 'ಸೌಭಾಗ್ಯಲಕ್ಷ್ಮಿ' 'ದೀಪಾವಳಿ' ಮುಂತಾದ ಸಾಮಾಜಿಕ ನಾಟಕಗಳನ್ನೂ ಪ್ರದರ್ಶಿಸುತ್ತ ಬಂದಿದ್ದಾರೆ. ಹಲವಾರು ಮಠ ಮಾನ್ಯ, ಜಾತ್ರೆ ಉತ್ಸವ ಮುಂತಾದೆಡೆಗಳಲ್ಲಿ ಇವರ ತಂಡ ಪ್ರದರ್ಶನ ನೀಡಿದೆ. ಈ ತಂಡದ ಮಾಲಕರಾದ ಕಲ್ಲಪ್ಪ ನಾವಿ ಇವರು ಸ್ತ್ರೀ ಪಾತ್ರಗಳನ್ನೇ ಮಾಡುವ ಹವ್ಯಾಸದವರಾಗಿದ್ದಾರೆ. ಹಾಗೂ ಈ ಸ.ಸ. ಗಿರಿಮಲ್ಲೇಶ್ವರ ಬಯಲಾಟ ಸಂಘದವರು ಬೇರೆ ಬೇರೆ ಪ್ರದೇಶಗಳಿಂದ ಹಲವಾರು ಪ್ರಸಸ್ತಿ ಪುರಸ್ಕಾರಗಳನ್ನು ಪಡೆದಿದ್ದಾರೆ.

ಈ ತಂಡದ ಮುಖ್ಯ ಕಲಾವಿದರು: ಶ್ರೀ ಕಲ್ಲಪ್ಪ ತಾಯಪ್ಪ ನಾವಿ, ಭೀಮಪ್ಪ ರಾಮಪ್ಪ ಗುರವ, ಗೋವಿಂದ ಮುಕುಂದ ಜಾಧವ, ಜ್ಯೋತಿಬಾ ಯಶವಂತ ಖೋತ, ರಂಗಪ್ಪ ಲಕ್ಷ್ಮಣ ಮರಗುಂದಿ, ಸಂಗಪ್ಪ ಗುರುಬಸು ಆಜೂರ, ಮಲ್ಲಪ್ಪ ಬಸಪ್ಪ ಆಜೂರ, ಮಲ್ಲಪ್ಪ ಬಸಪ್ಪ ಯಳ್ಳೂರ ಮುಂತಾದವರು ಪಾತ್ರಧಾರಿಗಳದರೆ ಸುಭಾಸ ಅಡಿವೆಪ್ಪ ಮರೇಗುದ್ದಿ ಹಾರ್ಮೋನಿಯಂ ಹಾಗೂ ಭೀಮಪ್ಪ ತಮ್ಮಣ್ಣಿ ಬಡಿಗೇರ ತಬಲಾ ಕಲಾವಿದರಾಗಿದ್ದಾರೆ.

ಮುಖ್ಯಸ್ಥರ ವಿಳಾಸ : ಶ್ರೀ ಕಲ್ಲಪ್ಪ ತಾಯಪ್ಪ ನಾವಿ, ಸ. ಸ. ಗಿರಿಮಲ್ಲೇಶ್ವರ ಬಯಲಾಟ ಸಂಘ, ಬಡಚಿ. ತಾ: ಅಥಣಿ ಜಿ: ಬೆಳಗಾವಿ. ಮೊ: 9535349828

## ಕೃಷ್ಣ ಲಕ್ಷ್ಮಣರಾವ್ ಕುಂದರಗಿ



ಇವರು ವೃತ್ತಿಯಿಂದ ವಕೀಲರಾಗಿದ್ದರೂ ಪ್ರವೃತ್ತಿಯಿಂದ ರಂಗ ಕಲಾವಿದರಾಗಿದ್ದಾರೆ. 1951 ಜನಿಸಿದ ಕೃಷ್ಣ ಇವರು ಮೂಲತಃ ಅಥಣಿ ತಾಲೂಕಿನ ಕೃಷ್ಣಾ ಕಿತ್ತೂರವರು. ಬಾಲ್ಯದಿಂದಲೂ ನಾಟಕದ ಗೀಳು ಹಚ್ಚಿಕೊಂಡ ಇವರು ಹತ್ತು ವರ್ಷದವರಿದ್ದಾಗಲೇ ಚಂದ್ರ ಹಾಸ, ಬಾಲಚಂದ್ರ, ಸ್ತ್ರೀರತ್ನ ಮುಂತಾದ ನಾಟಕಗಳಲ್ಲಿ ಅಭಿನಯಿಸಿದ್ದಾರೆ. 1968ರ ಸುಮಾರಿಗೆ ಗಂಡನ ಮಾನ, ಅತ್ತೆ ಸೊಸೆ, ಅಣ್ಣ ತಂಗಿ, ಅಣ್ಣ ತಮ್ಮ, ದೀಪಾವಳಿ , ದಸರಾ, ಮುಂತಾದ ನಾಟಕಗಳಲ್ಲಿ ಸ್ತ್ರೀ ಪಾತ್ರವನ್ನು ಮಾಡಿದ ಹೆಗ್ಗಳಿಕೆ ಇವರದು. ಕನ್ನಡ ಮಾತ್ರವಲ್ಲದೆ ಇಂಗ್ಲಿಷ ನಾಟಕಗಳಾದ ಸರ್ಚ ಆಫ್ ಹೀರೋ, ಒಥೆಲೋ, ಮ್ಯಾಕ್ಬೆತ್, ಕಿಂಗ್‌ಲಿಯರ್ ಮುಂತಾದವುಗಳು ಹಾಗೂ ದುನಿಯಾ, ಕಿಸ್ಮತ್ ಹಿಂದೀ ನಾಟಕಗಳೂ ಇವರನ್ನು ಚೆನ್ನಾಗಿ ದುಡಿಸಿಗೊಂಡಿವೆ.1974ರಲ್ಲಿ ಮಹಾರಾಷ್ಟ್ರದ ಸಾಂಗಲಿಯಲ್ಲಿ ನಾಟ್ಯ ಕಲಾಂಕುರ ಎಂಬ ನಾಟಕ ಕಂಪನಿಯನ್ನು ಸ್ಥಾಪಿಸಿ ತನ್ಮೂಲಕ ಪುರುಷಾನಾ ಅವಡತಾತ ಬಾಯ್ಕಾ, ಖಡಾಷ್ಟಕ, ಅಸ್ಲಾ ನೌರಾ ನಕೋಗಬಾಯಿ ಮುಂತಾದ ಮರಾಠಿ ನಾಟಕಗಳಲ್ಲೂ ಅಭಿನಯ ಹಾಗೂ ನಿರ್ದೇಶನದ ಕಾರ್ಯ ಮಾಡಿದ್ದಾರೆ. 1976 ರಲ್ಲಿ ಮಲ್ಲಿಕಾರ್ಜುನ ನಾಟ್ಯ ಸಂಘವೆಂದು ಪರಿವರ್ತಿಸಿಕೊಂಡು ಹಲವಾರು ನಾಟಕಗಳನ್ನು ಪ್ರದರ್ಶಿಸಿದರು.

ಕಣ್ಣೀರಿನ ಹೂವು, ಮಹಾಭಾರತ, ಸೂರ್ಯ ಚಂದ್ರರ ನಡುವೆ, ತೋಳ ಬಂತಲೆ ತೋಳ. ಆಂಧೀ ಮರಳಿ ಬಂದಾಗ, ಸ್ವಾಮೀಜಿ, ನಕ್ಕು ಬಿಡಿ ಸಾಕು, ನಾನು ನಾಥುರಾಮ ಘೋಡಸೆ ಎಂಬ ಹಲವಾರು ನಾಟಕಗಳು ಇವರಿಂದ ಸೃಷ್ಟಿಗೊಂಡು ಪ್ರದರ್ಶಿತ ಗೊಂಡಿವೆ. ದೇವದಾಸಿ, ಖನ್ನಮ್ಮ ದೇವಿ ಮಹಾತ್ಮೆ ಕಿರುತೆರೆಯಲ್ಲೂ ಕಾಣಿಸಿಕೊಂಡ ಇವರು ಕೆಂಪು ನೀಶಾದಿ, ಪವಿತ್ರ ಪ್ರೇಮ ಚಲನ ಚಿತ್ರಗಳಲ್ಲೂ ಗೌರವ ನಟರಾಗಿ ಅಭಿನಯಿಸಿದ್ದಾರೆ. ತತ್ಫಲವಾಗಿ 'ಸುವರ್ಣಶ್ರೀ' 'ಅಮೋಘ ವರ್ಷ ನೃಪತುಂಗ' 'ವೀರ ಕನ್ನಡಿಗ' 'ಕರುನಾಡ ಪದ್ಮಶ್ರೀ' ಮುಂತಾದ ಪ್ರಶಸ್ತಿಗಳನ್ನು ಪಡೆದಿದ್ದಾರೆ.

## ಅಮೋಘ ಎಂ. ಖೊಬ್ರಿ



ಇವರು ಅಥಣಿ ತಾಲೂಕಿನ ತೆಲಸಂಗ ಗ್ರಾಮದವರು. ವೃತ್ತಿಯಿಂದ ನ್ಯಾಯವಾದಿಗಳು. ರಂಗಕಲೆ ಇವರ ಪ್ರವೃತ್ತಿಯಲ್ಲಿ ಬಂದುದು. ವೃತ್ತಿ ನಾಟಕ ಕಂಪನಿಗಳಲ್ಲಿ ಹಾಗೂ ಹವ್ಯಾಸೀ ನಾಟಕ ತಂಡಗಳಲ್ಲಿ ಅಭಿನಯಿಸಿದ ವಿಶೇಷ ಪ್ರತಿಭೆ ಇವರದು. ವಿಶ್ವಜ್ಯೋತಿ ಪಂಚಾಕ್ಷರ ನಾಟ್ಯ ಸಂಘ ಗದಗ

(ಜೇವರಗಿ) ಪುಟ್ಟರಾಜ ನಾಟ್ಯ ಸಂಘ ಹಾವೇರಿ, ಗುರು ತೋಂಟದಾರ್ಯ ನಾಟ್ಯ ಸಂಘ ಮಂಡಲಗಿರಿ, ಶ್ರೀ ಕುಮಾರೇಶ್ವರ ನಾಟ್ಯ ಸಂಘ ಹಾನಗಲ್, ಸ್ವಾಮಿ ಸಮರ್ಥ ನಾಟ್ಯ ಸಂಘ ಅಕ್ಕಲಕೋಟ, ಶ್ರೀ ವೀರೇಶ್ವರ ನಾಟ್ಯ ಸಂಘ ನಾಲ್ವತ್ತವಾಡ ಹೀಗೆ ಹಲವಾರು ಕಂಪನಿಗಳ ಹಲವಾರು ನಾಟಕಗಳಲ್ಲಿ ಪ್ರಮುಖ ಪಾತ್ರವಹಿಸಿ ಅಭಿನಯಿಸಿದ್ದಾರೆ. ಸಿಂಧೂರ ಲಕ್ಷ್ಮಣ, ಸಂಗೊಳ್ಳಿ ರಾಯಣ್ಣ, ಕಲ್ಯಾಣ ಕ್ರಾಂತಿ, ಕೈಲಾಗದ ಗಂಡ ಕೈಲಾಸ ಕಂಡ, ಚಿನ್ನದ ಗೊಂಬೆ, ತವರು ಮನೆ, ಅಣ್ಣ ತಂಗಿ, ಮಾತು ಕೊಟ್ಟ ಮುತ್ತೈದೆ, ಚನ್ನಪ್ಪ ಚನ್ನೆಗೌಡ, ಗಂಡನ ಮಾನ, ತಾಯಿ ಕರುಳು, ಹೆತ್ತಪ್ಪ ಮುಂತಾದ ನಾಟಕಗಳಲ್ಲಿ ಇವರು ಅಭಿನಯಿಸಿದ್ದಾರೆ.

ಹವ್ಯಾಸಿ ರಂಗ ಕ್ಷೇತ್ರದಲ್ಲೂ ಇವರದು ಪ್ರಧಾನವಾಗಿ ಕೇಳಿ ಬರುವ ಹೆಸರಾಗಿದೆ. ಕನ್ನಡ ರಂಗಭೂಮಿ ಹಾಗೂ ಸಾಂಸ್ಕೃತಿಕ ಕಲಾ ಸಂಘ, ತೆಲಸಂಗ, ಪುಟ್ಟರಾಜ ಗವಾಯಿಗಳ ಹವ್ಯಾಸಿ ಕಲಾಸಂಘ ತೆಲಸಂಗ, ಸಂಗನಬಸವೇಶ್ವರ ನಾಟ್ಯ ಸಂಘ ಐಗಳಿ, ಸಿದ್ಧೇಶ್ವರ ನಾಟ್ಯ ಸಂಘ ಅಥಣಿ, ಸಿದ್ಧೇಶ್ವರ ರಂಗ ಮೇಳ ಅಥಣಿ ಮುಂತಾದ ತಂಡಗಳ ಮುಖೇನ ತಮ್ಮ ಅಭಿನಯ ಚಾತುರ್ಯವನ್ನು ತೋರಿಸಿದ್ದಾರೆ.


ವಿಳಾಸ: ತೆಲಸಂಗ. ತಾ: ಅಥಣಿ. ಜಿ: ಬೆಳಗಾವಿ.

# ರಾಯಬಾಗ ತಾಲೂಕು

## ಜಾನಪದ ರಂಗ ತಂಡಗಳು

1) ಶಿವನಗೌಡ ಪಾಟೀಲವರ ಶ್ರೀ ನಿಜಗುಣ ಕಲಾ ಪೋಷಕರ ಸಂಘ, ಮಂಟೂರ. ತಾ: ರಾಯಬಾಗ
2) ಮಾಲಾಬಾಯಿ ಸಾಂಬ್ರೇಕರವರ ಶ್ರೀ ರಾಘವೇಂದ್ರ ನಾಟ್ಯ ಸಂಘ, ಹಿಡಕಲ್. ತಾ: ರಾಯಬಾಗ
3) ಮೀರಸಾಬ ನದಾಫವರ ಶ್ರಿ ಮಾಧವಾನಂದ ಶ್ರೀಕೃಷ್ಣ ಪಾರಿಜಾತ ಕಂಪನಿ, ಸವಸುದ್ದಿ. ತಾ: ರಾಯಬಾಗ
4) ರೇಣುಕಾ ದೊಡಮನಿಯವರ ಹನುಮಾನ ಕೃಷ್ಣ ಪಾರಿಜಾತ ಕಂಪನಿ, ಸುಲ್ತಾನಪೂರ. ತಾ: ರಾಯಬಾಗ
5) ಸದಾಶಿವ ಗದಗ್ಯೆಗೋಳ ಮಹಾಲಿಂಗೇಶ್ವರ ಶ್ರೀಕೃಷ್ಣ ಪಾರಿಜಾತ ಕಂಪನಿ, ಕಂಕಣವಾಡಿ. ತಾ:ರಾಯಬಾಗ
6) ಸಂತವ್ವ ಅಂಬಿನಾಯಕರ ಶ್ರೀದುರ್ಗಾದೇವಿ ಶ್ರೀಕೃಷ್ಣ ಪಾರಿಜಾತ ಸಂಘ, ಕಂಕಣವಾಡಿ. ತಾ:ರಾಯಬಾಗ
7) ಸಿದ್ರಾಮ ಬಡಿಗೇರವರ ಬಯಲಾಟ ತಂಡ, ಖೇಮಲಾಪೂರ. ತಾ: ರಾಯಬಾಗ
8) ಚನಬಸು ಬಾನಿಯವರ ಶ್ರೀ ಮಲ್ಲಿಕಾರ್ಜುನ ನಾಟ್ಯ ಸಂಘ, ಅಲಖನೂರ. ತಾ: ರಾಯಬಾಗ
9) ವಸಂತ ಸುತಾರವರ ಶ್ರೀ ಗುರು ಬ್ರಹ್ಮಾನಂದ ನಾಟ್ಯ ಸಂಘ, ಪರಮಾನಂದವಾಡಿ. ತಾ: ರಾಯಬಾಗ
10) ಹನುಮಂತ ಹಳಕಲ್ ಅವರ ಶ್ರೀ ರೇಣುಕಾದೇವಿ ನಾಟ್ಯ ಸಂಘ, ಯಲ್ಪಾರಟ್ಟಿ. ತಾ: ರಾಯಬಾಗ
11) ಮಲ್ಲಪ್ಪ ಜಂಬಗಿಯವರ ಶ್ರೀ ಅರಣ್ಯ ಸಿದ್ಧೇಶ್ವರ ನಾಟ್ಯ ಸಂಘ, ಯಲ್ಪಾರಟ್ಟಿ. ತಾ: ರಾಯಬಾಗ
12) ಮಿಲಿಂದ ಸಂಗಣ್ಣವರ ಶ್ರೀ ಮಾಹಾಕಾಳಿ ನಾಟ್ಯ ಸಂಘ, ಚಿಂಚಲಿ. ತಾ: ರಾಯಬಾಗ
13) ಹಸನಸಾಬ ಮೌಲಾಸಾಬ ನದಾಫವರ ಪಾರಿಜಾತ ಮ್ಯಾಳ ಕಂಕಣವಾಡಿ. ತಾ: ರಾಯಬಾಗ
14) ಶಿವನಗೌಡ ಬಾಳನಗೌಡ ಪಾಟೀಲವರಪಾರಿಜಾತ ಮ್ಯಾಳ ಮಂಟೂರ. ತಾ: ರಾಯಬಾಗ

# ನಟರು, ನಾಟಕಕಾರರು ಹಾಗೂ ರಂಗ ಕರ್ಮಿಗಳು



## ಬಿ.ಎ. ಸನದಿ, ಹಾರೊಗೇರಿ

ಈ ತಾಲೂಕಿನ ಹಾರೋಗೇರಿ ಪರಿಸರದಲ್ಲಿ ಬಿ.ಎ. ಸನದಿ 'ಪದ್ಮಶ್ರೀ ಕಲಾಮಂದಿರ' ಎಂಬ ರಂಗಮಂದಿರ ಹಾರೋಗೇರಿಯಲ್ಲಿ ಎಲ್ಲ ರೀತಿಯ ಅನುಕೂಲತೆಗಳಿಂದ ಸುಸಜ್ಜಿತವಾಗಿದೆ. 1300 ಜನ ಪ್ರೇಕ್ಷಕರಿಗೆ ಸಾಕಾಗುವಷ್ಟು ಆಸನಗಳ ವ್ಯವಸ್ಥೆಯೂ ಕೂಡ ಇದೆ. 1946 ರಲ್ಲಿ ಜನಿಸಿದ ಸನದಿಯವರು ಸ್ವಯಂ ನಟರೂ ಹೌದು, ನಿರ್ದೇಶಕರೂ ಹೌದು, ಪ್ರಸಾಧನ ಕಲಾವಿದರೂ ಹೌದು. ಎಳೆತನದಿಂದಲೇ ರಂಗಭೂಮಿಯ ಗೀಳು ಹಚ್ಚಿಕೊಂಡ ಇವರು ಹೈಸ್ಕೂಲು ಮಟ್ಟದಲ್ಲಿಯೇ ಲವಕುಶ, ಶಬರಿ ಮುಂತಾದ ನಾಟಕಗಳಲ್ಲಿ ಪಾತ್ರ ಮಾಡಿದವರು.

ಇವರು ಎಸ್.ಎಸ್.ಎಲ್.ಸಿ. ನಂತರ 'ರಂಗ ತರಂಗ' ಎಂಬ ರಂಗ ಸಂಸ್ಥೆಯನ್ನು ಹುಟ್ಟುಹಾಕಿ ಹಲವಾರು ನಾಟಕಗಳು ಪ್ರದರ್ಶಿತಗೊಳ್ಳಲು ಅನುಕೂಲ ಮಾಡಿದರು. ಹಲವಾರು ಜನ ಚಲನಚಿತ್ರ ನಟ ನಟಿಯರನ್ನೂ ರಂಗಭೂಮಿಯ ಮೂಲಕ ಹಾರೋಗೇರಿಯ ಪ್ರೇಕ್ಷಕಗಣಕ್ಕೆ ಪರಿಚಯಿಸಿದರು. ನಾಟಕೋತ್ಸವ ಆಚರಿಸುವ ಮೂಲಕವಾಗಿ ಕಂದಗಲ್ ಹನುಮಂತರಾಯರ ಚಿತ್ರಾಂಗದಾ, ರಕ್ತರಾತ್ರಿ, ಕುರುಕ್ಷೇತ್ರ, ಅಕ್ಷಯಾಂಬರ ಮುಂತಾದ ನಾಟಕಗಳನ್ನೂ ರಂಗಕ್ಕೆ ತಂದರು. ಐತಿಹಾಸಿಕ ಹಾಗೂ ಪೌರಾಣಿಕ ನಾಟಕಗಳಿಗೆ ಸಂಬಂಧಸಿ ರಂಗ ಚಮತ್ಕಾರಗಳ ಮೂಲಕ ಜನಮನಗಳನ್ನು ಸೂರೆಗೈದರು.

ಸನದಿಯವರು ಚಲನ ಚಿತ್ರನಿರ್ಮಾಣ ಕಾರ್ಯದಲ್ಲೂ ತೊಡಗಿದ್ದರು. ಸಧ್ಯ ಹುಬ್ಬಳ್ಳಿಯಲ್ಲಿ ಇವರ ಮಕ್ಕಳು ಪದ್ಮಶ್ರೀ ಪಿಕ್ಚರ್ಸ್ ಎನ್ನುವ ಹಂಚಿಕೆದಾರ ಫಾಯಿನಾನ್ಸ್ ಆಫೀಸನ್ನು ನಡೆಸುತ್ತಿದ್ದಾರೆ. ಮಕ್ಕಳಿಗೆ ಮಾರ್ಗದರ್ಶಕರಾಗಿ ಸನದಿಯವರಿದ್ದಾರೆ. ಒಟ್ಟಾರೆ, ಸನದಿಯವರ ರಂಗ ಸೇವೆಯನ್ನು ಗೌರವಿಸಿ ಕರ್ನಾಟಕ ನಾಟಕ ಅಕಾಡೆಮಿ ಪ್ರಶಸ್ತಿ ನೀಡಿದೆ. ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘ, ಹುಬ್ಬಳ್ಳಿಯ ಆರ್ಟ್ಸ್ ಸರ್ಕಲ್, ಕರುನಾಡ ಸಿರಿ, ಕಲಾ ಪೋಷಕ, ಬಳ್ಳಾರಿ ರಾಘವ ಪ್ರಶಸ್ತಿ ಮುಂತಾದವುಗಳು ಇವರಿಗೆ ಲಭಿಸಿವೆ.

ವಿಳಾಸ: ಹಾರೋಗೇರಿ. ತಾ: ರಾಯಬಾಗ. ಜಿ: ಬೆಳಗಾವಿ. ಮೊ: 9902230155

## ಆಯ್. ಆರ್. ಮಠಪತಿ, ಹಾರೋಗೇರಿ.




1950ರಲ್ಲಿಯೇ ಜನಿಸಿದವರಾದ ಈರಯ್ಯ ರಾಚಯ್ಯ ಮಠಪತಿ ಎಂ.ಎ, ಎಂ.ಇ.ಡಿ ಪದವೀಧರರಾಗಿ ಪ್ರೌಢಾಶಾಲಾ ಶಿಕ್ಷಕರಾಗಿ ಸೇವೆಸಲ್ಲಿಸಿ ನಿವೃತ್ತಿಯಾಗಿದ್ದಾರೆ. ಆದರೆ ರಂಗ ಸೇವೆ, ಸಂಗೀತ, ಯೋಗ, ಚಿತ್ರಕಲೆ ಹಾಗೂ ಸಾಹಿತ್ಯ ಸೇವೆಯಿಂದ ನಿವೃತ್ತಿಯಾಗಿಲ್ಲ.

ಪ್ರೌಢ ಶಾಲಾ ಶಿಕ್ಷಕರಾಗಿದ್ದಾಗಿನಿಂದಲೇ ಇವರು ಅಲ್ಲಿಯ ಮಕ್ಕಳಿಗಾಗಿ ಚಿಕ್ಕ ಚಿಕ್ಕ ನಾಟಕಗಳನ್ನು ಬರೆದು ಅವರಿಂದಲೇ ಅವನ್ನು ರಂಗಕ್ಕೆ ತಂದದ್ದೂ ಉಂಟು. ಹೀಗಾಗಿ ಇವರು ಒಳ್ಳೆ ನಾಟಕ ನಿರ್ದೇಶಕರೂ ಹೌದು. ಮಕ್ಕಳಿಗೆ ಸಂಗೀತ ಹೇಳಿಕೊಡುವಲ್ಲಿಯೂ ಇವರು ಸಿದ್ಧ ಹಸ್ತರಾಗಿದ್ದರು. ಸ್ವತಃ ಶ್ರೀ ಮಠಪತಿಯವರು ಚಿನ್ನದ ಬೊಂಬೆ, ದೇವರಿಗೂ ನೌಕರಿ ಸಿಗಲಿಲ್ಲ, ಸಮಾಜಕ್ಕೆ ಸವಲ್ ಮುಂತಾದ ನಾಟಕಗಳಲ್ಲಿ ಸಮರ್ಥವಾಗಿ ಅಭಿನಯವನ್ನೂ ಮಾಡಿದ್ದಾರೆ. ಸಾಹಿತ್ಯ ಕ್ಷೇತ್ರದಲ್ಲೂ ಇವರು ಹಿಂದೆ ಇಲ್ಲ. ಡಾ. ಕುವೆಂಪು ಕೃತಿ ಸಮೀಕ್ಷೆ, ಮುತ್ತು ಸುರಿದಾವ, ಬೆಳಕು ಹರಿದಿತ್ತು, ತಪ್ಪೆಜ್ಜೆಗಳು, ಹಲವು ಹೂವು, ಗಂಧ, ಬೆಳಗಾವಿ ಬಳುವಳಿ, ಸೇವೆ ಸ್ಮರಣೆ ಮುಂತಾದ ಗ್ರಂಥಗಳನ್ನು ಸಂಪಾದಿಸಿದ್ದಾರೆ. ಹಾರೋಗೇರಿಯ ಶರಣ ವಿಚಾರ ವಾಹಿನಿ ಹಾಗೂ ಸ್ನೇಹಕುಂಜ ವಿಚಾರ ವೇದಿಕೆಯ ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸಿದ್ದಾರೆ. ಇವರು ರಂಗ ಸೇವೆ ಮಾತ್ರ ನಿರಂತರವಾಗಿ ನಡೆದೇ ಇದೆ.

ವಿಳಾಸ: 'ನಿಶ್ಚಿಂತ ನೆಲೆ' ಬಸವ ಬ್ಯಾಕೋಡ ರಸ್ತೆ, ಹಾರೋಗೇರಿ. ತಾ: ರಾಯಬಾಗ
ಮೊ: 9741744111


## ರಾಮಚಂದ್ರ ಅಕ್ಕಪ್ಪ ಕಾಂಬಳೆ, ಚಿಂಚಲಿ



ಇವರು ರಾಯಬಾಗ ತಾಲೂಕಾ ರಂಗ ಸಂಘಟಕರಾಗಿ ಹಾಗೂ ರಂಗಕಲಾವಿದರಾಗಿ ಸಾಕಷ್ಟು ಕೆಲಸಗಳನ್ನು ಮಾಡಿದ್ದಾರೆ. 1970 ರಲ್ಲಿ ಜನಿಸಿದ ರಾಮಚಂದ್ರ ಡಾ. ಅಂಬೇಡಕರ ಜಾನಪದ ಕಲಾ ಪೋಷಕ ಸಂಘ ಹಾಗೂ ನಿಸರ್ಗ ಗ್ರಾಮೀಣ ಅಭಿವೃದ್ಧಿ ಸಂಸ್ಥೆ ಚಿಂಚಲಿ ಇದರ ಮೂಲಕ ಕಲಾಭಿವೃದ್ಧಿ ಕಾರ್ಯವನ್ನು ಕೈಕೊಂಡಿದ್ದಾರೆ. ಶ್ರೀ ಕಾಂಬಳೆಯವರು ಜಾನಪದ ವೀರಗಾಸೆ, ಸಂಗೀತ, ನೃತ್ಯ, ಭಜನೆ ಮುಂತಾದವುಗಳಲ್ಲೂ ಪರಿಣತಿಯನ್ನು ಹೊಂದಿದ್ದಾರೆ. ಅಕ್ಷರ ಪ್ರಭಾ, ಮಾಹಿತಿ ಹಕ್ಕು, ಹೆಣ್ಣು ಸಮಾಜದ ಕಣ್ಣು, ಏಡ್ಸ್, ಪಲ್ಸ್ ಪೋಲಿಯೋ, ತಾಯಿ ಮತ್ತು ಆರೋಗ್ಯ, ಜಲ ನಿರ್ಮಲ ಯೋಜನೆ, ದೇವದಾಸಿ ಪದ್ಧತಿ, ಅರಿಯೋಣ ಬಾ, ಸ್ತನ್ಯ ಪಾನ, ವರದಕ್ಷಿಣೆ, ಮದ್ಯಪಾನದ ದುಷ್ಪರಿಣಾಮ,

ಕುಷ್ಠರೋಗ ಮುಂತಾದ ಬೀದಿ ನಾಟಕಗಳಲ್ಲಿ ಅಭಿನಯಿಸಿದ್ದಾರೆ.

ವಿಳಾಸ: ಡಾ. ಅಂಬೇಡಕರ್ ನಗರ. ಮು: ಚಿಂಚಲಿ ತಾ: ರಾಯಬಾಗ ಜಿ: ಬೆಳಗಾವಿ– 591217 ಮೊ: 9481324035 ದೂ: 08331 237327



## ಮಲ್ಲಪ್ಪ ಪರಪ್ಪ ಜಂಬಗಿ, ಮಲ್ಲಾರಟ್ಟಿ

1959ರಲ್ಲಿ ಜನಿಸಿದ ಇವರು ಏಳನೇ ಇಯತ್ತೆಯವರೆಗೆ ಮಾತ್ರ ಶಿಕ್ಷಣವನ್ನು ಪೂರೈಸಿದರು ಹಾಗೂ ಬಾಲ್ಯದಿಂದಲೇ ಗಾಯನ ಕಲೆ ಹಾಗೂ ಡೊಳ್ಳಿನ ಪದ ಹಾಡುವುದನ್ನು ರೂಢಿಸಿಕೊಂಡು ಬಂದವರಾಗಿದ್ದರು. ಹಾಗೇ ಬಯಲಾಟದಲ್ಲೂ ಇವರು ಹೆಜ್ಜೆ ಹಾಕಲು ಪ್ರಾರಂಭಿಸಿದರು. ಬಯಲಾಟಗಳಲ್ಲಿ ಇವರು ಸ್ತ್ರೀ ಪಾತ್ರಗಳನ್ನೇ ಆಯ್ದುಕೊಂಡರು. ಇವರು ಮೊಟ್ಟಮೊದಲಿಗೆ 'ದೀಪಾವಳಿ' ನಾಟಕದಲ್ಲಿ ಸ್ತ್ರೀ ಪಾತ್ರವನ್ನು ಮಾಡಿದರು. ನಂತರ ಕ್ರಮೇಣ 'ಸೌಭಾಗ್ಯಲಕ್ಷ್ಮಿ' 'ಬಸ್ ಹಮಾಲ' 'ಬಡವ ಬದುಕಲೇ ಬೇಕು' 'ಬಂಜೆ ತೊಟ್ಟಿಲು' ಅತ್ತಿಗೆಯೇ ಹೆತ್ತಮ್ಮ' 'ಆಸರೆ ಇಲ್ಲದ ಬಳ್ಳಿ' ಮುಂತಾದ ನಾಟಕಗಳಲ್ಲಿ ಸ್ತ್ರೀ ಪಾತ್ರಗಳನ್ನು ಮಾಡಿದ್ದಾರೆ.

ಅಭಿನಯ ಮಾತ್ರವಲ್ಲದೇ ಇವರು ಸಾವಿರ ಹಳ್ಳಿಯ ಸರದಾರ, ರೈತ ಹಚ್ಚಿದ ದೀಪ, ಮುಂತಾದ ನಾಟಕಗಳನ್ನೂ ನಿರ್ದೇಶಿಸಿದ್ದಾರೆ. ಇವರು ಕೃಷಿ ಕಲಾವಿದ. ಕೂಲಿ ಕೆಲಸವನ್ನೂ ಮಾಡುತ್ತ ರಂಗ ಸೇವೆಯನ್ನೂ ಗೈಯುತ್ತ ಬಂದಿರುವ ಇವರ ಈ ಎಲ್ಲ ಸೇವೆಗೆ ತಲೆದೂಗಿ ಹಾರೋಏರಿಯ ರಂಗ ತರಂಗ ವೇದಿಕೆ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದಲೂ ಸನ್ಮಾನಿತರಾಗಿದ್ದಾರೆ. ಹಲವಾರು ಪ್ರಶಸ್ತಿಗಳೂ ಬಂದಿವೆ.

ವಿಳಾಸ: ಮಲ್ಲಾರಟ್ಟಿ, ತಾ: ರಾಯಬಾಗ ಮೊ: 9448634200



## ಬಾಬಾಲಾಲ ದಸ್ತಗೀರ ನದಾಫ, ಸಪ್ತಸಾಗರ

ಕಲೆ ಹಾಗೂ ಸಂಗೀತ ಕುಟುಂಬದಲ್ಲಿ 12–10–1938ರಂದು ಜನಿಸಿದ ಬಾಬಾಲಾಲ ಎಳೆತನದಿಂದಲೇ ರಂಗಕಲೆಯನ್ನು ರೂಢಿಸಿಕೊಂಡು ಬಂದವರಾಗಿದ್ದಾರೆ. 1948ರಲ್ಲಿ ಇವರ ಅಜ್ಜನವರಾದ ಗೂಡೂಸಾಬ ನದಾಫವರು ಸಪ್ತಸಾಗರದಲ್ಲಿ ಬಯಲಾಟದ ತಂಡವನ್ನು ಕಟ್ಟಿದ್ದರು. ಅಲ್ಲಿಂದಲೇ ಬಾಬಾಲಾಲವರಿಗೂ ರಂಗಾಸಕ್ತಿ ಹುಟ್ಟಿಕೊಂಡಿತು. ಚಿಕ್ಕ ಚಿಕ್ಕ ಪಾತ್ರಗಳನ್ನೂ ಮಾಡಹತ್ತಿದರು. ನಂತರ 1950ರಲ್ಲಿ ನೆರೆಗ್ರಾಮವಾದ ಸಿದ್ಧಾಪೂರದಲ್ಲಿ ಶ್ರೀಕೃಷ್ಣ ಪಾರಿಜಾತ ಎಂಬ ಬಯಲಾಟವನ್ನು

ಪ್ರಯೋಗಿಸಿ ತಮ್ಮ ಅಜ್ಜನವರ ಕಂಪನಿಯನ್ನು ಇವರೇ ಮುಂದುವರೆಸಿಕೊಂಡು ನಡೆದರು. ಸತತ ಐವತ್ತು ವರ್ಷಗಳಕಾಲ ಪ್ರದರ್ಶನ ನೀಡಿ ಕರ್ನಾಟಕ ಹಾಗೂ ಮಹಾರಾಷ್ಟ್ರ ಗಡಿ ತುಂಬೆಲ್ಲಾ ಕಂಪನಿಯ ಹಾಗೂ ವೈಯಕ್ತಿಕ ಛಾಪು ಮೂಡಿಸಿದರು.

ಆಕಾಶಾಣಿ ಧಾರವಾಡ ಕೇಂದ್ರದಿಂದಲೂ ಹಾಗೂ ಬೆಂಗಳೂರು ದೂರದರ್ಶನ ಕೇಂದ್ರದಿಂದಲೂ ಹಲವಾರುಬಾರಿ ಶ್ರೀಕೃಷ್ಣ ಪಾರಿಜಾತದ ಆಯ್ದ ಭಾಗಗಳು ಪ್ರಸಾರಗೊಂಡಿವೆ. 1994ರಲ್ಲಿ ಇವರಿಗೆ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ದೊರಕಿದೆ. ರಾಜ್ಯ ಹಾಗೂ ಕೇಂದ್ರದಿಂದ ಮಾಶಾಸನವೂ ದೊರೆತಿದೆ.

ವಿಳಾಸ: ಸಪ್ತಸಾಗರ ತಾ: ರಾಯಬಾಗ ದೂರವಾಣಿ: 08289 231086
ಮೊ: 9611974955

# ಹುಕ್ಕೇರಿ ತಾಲೂಕು

## ಜಾನಪದ ರಂಗ ತಂಡಗಳು

1) ತುಕಾರಾಮ ನಾಯಕವರ ಸಂಗ್ಯಾಬಾಳ್ಯಾನಾಟದ ತಂಡ, ಕಣಗಲಾ. ತಾ: ಹುಕ್ಕೇರಿ

2) ಅಶೋಕ ಪಾಟೀಲರ ಹದಳಕೇರಿ ರಾಧಾನಾಟದ ತಂಡ, ಪೋ: ಹುಕ್ಕೇರಿ

3) ಶೆಟಿಗೌಡ ಪಾಟೀಲರ ಸಂಗ್ಯಾಬಾಳ್ಯಾನಾಟದ ತಂಡ, ಬಸ್ತವಾಡ. ಹುಕ್ಕೇರಿ

4) ಭೀಮಪ್ಪ ಹುದ್ದಾರವರ ರಾಧಾನಾಟದ ತಂಡ, ಹುಲ್ಲೋಳಿಹಟ್ಟಿ, ತಾ: ಹುಕ್ಕೇರಿ

5) ಕಲ್ಲಪ್ಪ ಅರ್ಜುನವಾಡವರ ಸಂಗ್ಯಾಬಾಳ್ಯಾನಾಟದ ತಂಡ, ಅರ್ಜುನವಾಡ. ತಾ: ಹುಕ್ಕೇರಿ

6) ನಾಗಪ್ಪ ಸೂರ್ಯವಂಶಿಯವರ ಸಂಗ್ಯಾಬಾಳ್ಯಾನಾಟದ ತಂಡ, ಚಿಕ್ಕಲದಿನ್ನಿ. ತಾ: ಹುಕ್ಕೇರಿ

7) ಯಾಕೋಬ ಮುಲ್ತಾನಿಯವರ ಸಂಗ್ಯಾಬಾಳ್ಯಾನಾಟದ ತಂಡ, ಹಂಚಾನಟ್ಟಿ, ತಾ: ಹುಕ್ಕೇರಿ

9) ಶೈಲಾ ಮಾದರವರ ರಾಧಾನಾಟದ ತಂಡ ಕಣವಿನಟ್ಟಿ, ತಾ: ಹುಕ್ಕೇರಿ

9) ಕಾಡೇಶ ಖಾನಾಪುರೆಯವರ ನಾಟಕ ಸಂಘ, ಎಲಿಮುನೋಳಿ. ತಾ: ಹುಕ್ಕೇರಿ

10) ಶಿವಪುತ್ರ ಬಡಿಗೇರವರ ಪಾರಿಜಾತ ತಂಡ, ಸುಲ್ತಾನಪೂರ. ತಾ: ಹುಕ್ಕೇರಿ

11) ಮೀರಸಾಬ ಮುಲ್ಲಾರವರ ರಾಧಾನಾಟದ ತಂಡ, ಅಮ್ಮಣಗಿ. ತಾ: ಹುಕ್ಕೇರಿ

12) ಕೆಂಪಣ್ಣ ಸನದಿಯವರ ಸಂಗ್ಯಾಬಾಳ್ಯಾನಾಟದ ತಂಡ, ಮದಮಕ್ಕನಾಳ. ಪೋ: ಬೆನ್ನಿವಾಡ ತಾ: ಹುಕ್ಕೇರಿ

13) ಕಾಳಪ್ಪ ಬಡಿಗೇರವರ ನಾಟಕ ಸಂಘ, ಬಡಕುಂದರಿ. ತಾ: ಹುಕ್ಕೇರಿ

14) ರಾಜು ಸೂರ್ಯವಂಶಿಯವರ ನಾಟಕ ಸಂಘ, ಚಿಕ್ಕಾಲದಿನ್ನಿ. ತಾ: ಹುಕ್ಕೆರಿ

15) ಗೋಪಾಲ ಚಿಪಣಿಯವರ ರಾಧನಾಟದ ತಂಡ, ಯಮಕನಮರಡಿ. ತಾ: ಹುಕ್ಕೇರಿ

16) ಶ್ರೀ ವಿಶ್ವಜ್ಯೋತಿ ಬಸವೇಶ್ವರ ಕಲಾ ಪೋಷಕ ಸಂಘ, ಹುಲ್ಲೋಳಿ ಹಟ್ಟಿ, ತಾ: ಹುಕ್ಕೇರಿ

# ನಟರು, ನಾಟಕಕಾರರು ಹಾಗೂ ರಂಗ ಕರ್ಮಿಗಳು



## ಬಸವರಾಜ ಸಿದ್ಧಪ್ಪ ಕಾಂಬಳೆ, ಹುಲ್ಲೋಳಿ

ಬೆಳಗಾವಿ ಜಿಲ್ಲೆ ಹುಕ್ಕೇರಿ ತಾಲೂಕಿನ ಶ್ರೀ ವಿಶ್ವಜ್ಯೋತಿ ಬಸವೇಶ್ವರ ಕಲಾ ಪೋಷಕ ಸಂಘವು ಸುಮಾರು ಹತ್ತು ವರ್ಷಗಳಿಂದ ಜನಪದ ರಂಗ ಕಲಾ ಸೇವೆಯಲ್ಲಿ ತೊಡಗಿ ರಂಗ ಕಲೆಯ ಅಭಿವೃದ್ಧಿಗಾಗಿ ಸದಾ ಶ್ರಮಿಸುತ್ತಿದೆ. ಕಲಾವಿದ ಬಸವರಾಜ ಸಿದ್ಧಪ್ಪ ಕಾಂಬಳೆ (ಅರ್ಜುನವಾಡ) ಇವರು ಸದರೀ ತಂಡದ ಅಧ್ಯಕ್ಷರಿದ್ದು ಎಲ್ಲ ಜನಪದ ಕಲೆಗಳಲ್ಲಿ ಪರಿಣಿತಿಯನ್ನು ಪಡೆದಿದ್ದಾರೆ. ಇವರು ಈ ಕಲಾ ತಂಡದವತಿಯಿಂದ ರಂಗ ಕಲೆಗಳನ್ನಷ್ಟೇ ಅಲ್ಲದೆ ಜನಪದ ಸಂಗೀತ, ಜನಪದ ವಾದನಕಲೆ, ಜನಪದ ಆಟ, ಜನಪದ ಹಾಸ್ಯ ಮುಂತಾದವುಗಳನ್ನೂ ಮಾರ್ಮಿಕವಾಗಿ ಪ್ರಸ್ತುತ ಪಡಿಸುವ ಕಲೆಯನ್ನು ರೂಢಿಸಿಕೊಂಡಿದೆ. ಈ ತಂಡದ ಹಲವಾರು ಕಾರ್ಯಕ್ರಮಗಳು ಧಾರವಾಡದ ಆಕಾಶವಾಣಿಯಲ್ಲೂ ಬಿತ್ತರಗೊಂಡಿವೆ. 2008ರಲ್ಲಿ ಬೆಂಗಳೂರು ರವೀಂದ್ರ ಕಲಾ ಕ್ಷೇತ್ರ, 2009ರಲ್ಲಿ ರಾಜ್ಯಮಟ್ಟದ ಯುವಜನೋತ್ಸವ, 2010ರಲ್ಲಿ ಕಿತ್ತೂರು ಉತ್ಸವ, ಮಂಡ್ಯದ ಯುವಜನೋತ್ಸವ ಮುಂತಾದವುಗಳಲ್ಲಿ ಭಾಗವಹಿಸಿ ಪ್ರಶಸ್ತಿ, ಪುರಸ್ಕಾರ ಪಡೆದಿವೆ.

ತಬಲಾವಾದನದ ಜೊತೆ ಹಿನ್ನೆಲೆ ಗಾಯನ, ತಾಳವಾದನ ಈ ತಂಡದ ವಿಶೇಷತೆ. ಈ ತಂಡ ಶ್ರೀ ಕೃಷ್ಣ ಪಾರಿಜಾತ ಹಾಗೂ ಇನ್ನೂ ಹಲವಾರು ಬಯಲಾಟಗಳನ್ನು ಬಹಳ ಯಶಸ್ವಿಯಾಗಿ ಪ್ರಯೋಗಿಸುತ್ತ ಬಂದಿದೆ. ವೃತ್ತಿ ರಂಗ ಮಾದರಿಯಲ್ಲಿಯೇ ಚಿತ್ರಿತ ದೃಶ್ಯಾವಳಿಗಳನ್ನು ಉಪಯೋಗಿಸಿ ಸಾಮಾಜಿಕ, ಪೌರಾಣಿಕ ಹಾಗೂ ಐತಿಹಾಸಿಕ ನಾಟಕಗಳನ್ನು ಆಡುವ ಹವ್ಯಾಸವನ್ನೂ ಈ ತಂಡ ಬೆಳಸಿಕೊಂಡು ಬಂದಿದೆ. 'ಪ್ರಾಣ ಹೋದರೂ ಮಾನ ಬೇಕು' ಎಂಬ ನಾಟಕ ಈ ತಂಡಕ್ಕೆ ಬಹಳಷ್ಟು ಖ್ಯಾತಿಯನ್ನೊದಗಿಸಿದೆ. ಕಲಾವಿದ ಬಸವರಾಜ ಸಿದ್ಧಪ್ಪ ಕಾಂಬಳೆ (ಅರ್ಜುನವಾಡ) ಇವರು ಈ ತಂಡದ ಅಧ್ಯಕ್ಷರು. ಈಗಾಗಲೇ ಕಣಗಲಾ ಸಂಸ್ಥೆಯಿಂದ 2008ರಲ್ಲಿ 'ತೇಜರತ್ನ' ಪ್ರಶಸ್ತಿ ಹಾಗೂ 2009ರಲ್ಲಿ ಗೋಕಾಕಿನ ಕಾಡಸಿದ್ಧೇಶ್ವರ ಶಿಕ್ಷಣ ಸಂಸ್ಥೆಯಿಂದ 'ಶ್ರೀನಿಧಿ' ಪುರಸ್ಕಾರ ಲಭಿಸಿವೆ.

ವಿಳಾಸ : ಬಸವರಾಜ ಸಿದ್ಧಪ್ಪ ಕಾಂಬಳೆ (ಅರ್ಜುನವಾಡ) ಅಧ್ಯಕ್ಷರು, ಶ್ರೀ ವಿಶ್ವಜ್ಯೋತಿ ಬಸವೇಶ್ವರ ಕಲಾ ಪೋಷಕ ಸಂಘ, ಹುಲ್ಲೋಳಿ ಹಟ್ಟಿ, ತಾ: ಹುಕ್ಕೇರಿ ಜಿ: ಬೆಳಗಾವಿ. ಮೊ: 3632563814

## ಬಸವಣ್ಣೆಯ್ಯ ಮಠಪತಿ, ಬಸಾಪೂರ

ಹುಕ್ಕೇರಿ ತಾಲೂಕಿನ ಬಸಾಪೂರ ಗ್ರಾಮದ ಬಸವಣ್ಣಯ್ಯನವರು 1914ರಲ್ಲಿ ಜನಿಸಿದ ಕೇವಲ ನಾಲ್ಕನೇ ಇಯತ್ತೆಯವರೆಗೆ ಶಿಕ್ಷಣವನ್ನು ಪಡೆದಿದ್ದಾರೆ. ಆದರೂ ಜನಪದ ರಂಗಭೂಮಿಯ ಚಟುವಟಿಕೆಗಳಲ್ಲಿ ಇವರದು ಎತ್ತಿದ ಕೈ. ಇದಕ್ಕೆ ಕಾರಣ ಪಾರಿಜಾತ ಕಲಾವಿದೆ ಕೌಜಲಗಿ ನಿಂಗವ್ವನ ರಂಗ ಸಹಕಾರವೆಂದೇ ಹೇಳಬಹುದು. ಇವಳ ಪ್ರಭಾವದಿಂದಲೇ ಬಸವಣ್ಣೆಯ್ಯ ರುಕ್ಮಿಣಿ, ಕೊರವಂಜಿ, ಗೌಳಗಿತ್ತಿಯ ಪಾತ್ರವನ್ನು ಮಾಡುವಲ್ಲಿ ನಿಸ್ಸೀಮರಾಗಿದ್ದರು.

ಇವರು ಬಸಾಪುರ ಕಂಪನಿ ಎಂದು ಸ್ವಂತ ಕಂಪನಿ ಕಟ್ಟಿ ಹತ್ತು ವರ್ಷಕ್ಕೂ ಮೇಲ್ಪಟ್ಟು ನಡೆಸಿಕೊಂಡು ಹೋಗಿದ್ದರು. ಕರ್ನಾಟಕ ಮಹಾರಾಷ್ಟ್ರ ಸೇರಿದಂತೆ ಸಾವಿರಾರು ರಂಗ ಪ್ರಯೋಗಗಳನ್ನು ಇವರು ಮಾಡಿದ್ದಾರೆ. ತೊಂಭತ್ತೆರಡರ ವಯಸ್ಸಿನಲ್ಲಿರುವ ಇವರು ಇಂದಿಗೂ ರಂಗ ಚೈತನ್ಯಪೂರ್ಣರಾಗಿದ್ದಾರೆ.

ವಿಳಾಸ : ಬಸಾಪೂರ. ತಾ: ಹುಕ್ಕೇರಿ

# ಚಿಕ್ಕೋಡಿ ತಾಲೂಕು

## ಜಾನಪದ ರಂಗ ತಂಡಗಳು

1) ಅಣ್ಣಪ್ಪ ಜನಮಟ್ಟಿಯವರ ಸಂಗ್ಯಾಬಾಳ್ಯಾನಾಟದ ತಂಡ, ಯಾದವಾಡ ತಾ: ಚಿಕ್ಕೋಡಿ
2) ತಾಯಪ್ಪ ಮೂಡಲಗಿಯವರ ಪಾರಿಜಾತ ತಂಡ, ದೋನವಾಡ. ತಾ: ಚಿಕ್ಕೋಡಿ
3) ಶ್ರೀ ಬಸವೇಶ್ವರ ನಾಟ್ಯ ಸಂಘ, ಮುಗಳಿ. ತಾ: ಚಿಕ್ಕೋಡಿ
4) ಮಾರುತಿ ಕಮತೆಯವರ ಸಂಗ್ಯಾಬಾಳ್ಯಾನಾಟದ ತಂಡ, ಕುಂಗಡೊಳ್ಳಿ. ತಾ: ಚಿಕ್ಕೋಡಿ
5) ಆನಂದಕುಮಾರ ಚಿಕ್ಕೋಡಿಯವರ ನಾಟಕ ಸಂಘ, ಚಿಂಚಣಿ, ತಾ: ಚಿಕ್ಕೋಡಿ
6) ಗಣೇಶ ವೇಷಗಾರವರ ನಾಟಕ ಸಂಘ, ಯಕ್ಸಂಬಾ. ತಾ: ಚಿಕ್ಕೋಡಿ
7) ಹೊನ್ನಪ್ಪ ಗೊರವ ಅವರ ನಾಟಕ ಸಂಘ, ಬಂಬಲವಾಡ. ತಾ: ಚಿಕ್ಕೋಡಿ
8) ಶ್ರೀ ಬೀರೇಶ್ವರ ನಾಟಕ ಸಂಘ, ಕರಗಾವ್ ತಾ: ಚಿಕ್ಕೋಡಿ
9) ಲಕ್ಷ್ಮಣ ಶಿರಗಣ್ಣವರ ರಾಧಾನಾಟದ ತಂಡ, ವಡ್ರಾಳ. ತಾ: ಚಿಕ್ಕೋಡಿ

# ನಟರು, ನಾಟಕಕಾರರು ಹಾಗೂ ರಂಗ ಕರ್ಮಿಗಳು

**ಅಪ್ಪಣ್ಣ ಜಂಬಗಿ,** ಕಬ್ಬೂರ, ತಾ: ಹುಕ್ಕೇರಿ.

ಚಿಕ್ಕೋಡಿ ತಾಲೂಕು ಕಬ್ಬೂರಿನಲ್ಲಿ ಹುಟ್ಟಿದ ಅಣ್ಣಪ್ಪನವರು ಅಲ್ಲಿಯೇ ಪ್ರಾಥಮಿಕ ಶಿಕ್ಷಣ ಮುಗಿಸಿ ರಾಯಬಾಗ ತಾಲೂಕಿನ ಹಿಡಕಲ್‌ದಲ್ಲಿದ್ದ ತಂದೆ ತಾಯಿಯ ಪೋಷಣೆಯಲ್ಲಿ ರಂಗ ಪರಿವಾರದ ನಂಟನ್ನು ಬೆಳೆಸಿಕೊಂಡರು. ಕೆರೂರಿನ ಮಲ್ಲಪ್ಪ ಕಂಬಾರ ಮಾಸ್ತರ ಮಾರ್ಗದರ್ಶನದಲ್ಲಿ ಪಾರಿಜಾತ ಕಲಿತು ತಮ್ಮಣ್ಣ ಮೂಡಲಗಿಯವರ ಮಾಲೀಕತ್ವದ 'ಬಲಬೀಮ ನಾಟ್ಯ ಸಂಘ ಕಬ್ಬೂರ' ಇದರ ಆಶ್ರಯದಲ್ಲಿ ಕೃಷ್ಣ ಪಾರಿಜಾತ ಬಯಲಾಟಗಳನ್ನು ಆಡಲು ಪ್ರಾರಂಭಿಸಿದರು. ಈ ಆಟಗಳಲ್ಲಿ ಜಂಬಗಿಯವರು ಗೋಪಾಲ, ನಾರದ ಮುಂತಾದ ಪಾತ್ರಗಳಲ್ಲಿ ಕಾಣಿಸಿಕೊಂಡರು. ಮುಂದೆ ಇವರ ಕಂಪನಿ ಬೆಳಗಾವಿ, ಚಿಕ್ಕೋಡಿ, ಸಂಕೇಶ್ವರ, ಕಟಗೇರಿ, ಮದನಭಾವಿ, ಅಥಣಿ, ಕಿಳ್ಳೆಗಾವ, ಆಜೂರ, ವಿಜಾಪೂರ, ಅಗಳಖೇಡ ಮುಂತಾದೆಡೆಗಳಲ್ಲಿ ನಾಟಕ ಪ್ರದರ್ಶನ ನೀಡಿತು. ಆಕಾಶವಾಣಿಯಲ್ಲೂ ಇವರ ನಾಟಕಗಳು ಪ್ರಸಾರಗೊಂಡಿವೆ. ನಂತರ, ಇವರು ನಾಟಕ ಕಲಿಸುವ ಮಾಸ್ತರ ಆಗಿಯೂ ಇಪ್ಪತ್ತೈದು ವರ್ಷ ಸೇವೆ ಸಲ್ಲಿಸಿದರು.

ಹಾಲುಮತ ಜನಾಂಗದ (ಕುರುಬ ಜನಾಂಗ) ಅಪ್ಪಣ್ಣ ಜಂಬಗಿ ಸಧ್ಯ 82 ನೇ ವಯಸ್ಸಿನಲ್ಲಿಯೂ ಪಾರಿಜಾತದ ಐತಿಹ್ಯವನ್ನೆಲ್ಲ ಸರಾಗವಾಗಿ ಹೇಳುತ್ತಾರೆ. ಪಾರಿಜಾತದಲ್ಲಿ ಇವರ ಕುಣಿತವೇ ವಿಶೇಷವಾದದ್ದು. ಇದನ್ನು ನೋಡಲೆಂದೇ ಜನ ಮುಗಿಬೀಳುತ್ತಿದ್ದರಂತೆ. ಹಾಡುಗಾರಿಕೆಯೂ ಅಷ್ಟೆ ಪರಿಣಾಮಕಾರಿಯಾಗಿತ್ತಂತೆ. ಪಾರಿಜಾತದಲ್ಲಿ ಕೃಷ್ಣನಪಾತ್ರವನ್ನಂತೂ ವಿಶೇಷವಾಗಿ ಅಭಿನಯಿಸುತ್ತಿದ್ದರಂತೆ. ಇವರು ಆಧ್ಯಾತ್ಮ ಜೀವಿಗಳೂ ಹೌದು.

ವಿಳಾಸ: ಕಲಾವಿದರು, ಕಬ್ಬೂರು. ತಾ: ಚಿಕ್ಕೋಡಿ ಜಿ: ಬೆಳಗಾವಿ.


# ಖಾನಾಪೂರ ತಾಲೂಕು

## ಜಾನಪದ ರಂಗ ತಂಡಗಳು

1) ಶಿವಲಿಂಗಪ್ಪ ಮೆಳವಣಕಿಯವರ ಪಾರಿಜಾತ ತಂಡ, ಚಿಕ್ಕಮುನವಳ್ಳಿ, ತಾ: ಖಾನಾಪೂರ

2) ಬಸವೇಶ್ವರ ದೊಡ್ಡಾಟ ತಂಡ ಗುಂಡ್ಯಾನಟ್ಟಿ, ತಾ: ಖಾನಾಪೂರ.

## ನಟರು, ನಾಟಕಕಾರರು ಹಾಗೂ ರಂಗ ಕರ್ಮಿಗಳು



### ಮಹಾದೇವ ಶಿವಪ್ಪ ಅವರಾದಿ, ತಾ: ಖಾನಾಪೂರ.

ಈ ರಂಗ ತಂಡದವನ್ನು ಹುಟ್ಟು ಹಾಕಿ ಬಹಳ ದಿನಗಳವರೆಗೆ ನಡೆಸಿಕೊಂಡು ಬಂದ ಗುಂಡೇನಟ್ಟಿಯ ಶ್ರೀ ಗೋವಿಂದಗೌಡ ಪಾಟೀಲ ಇವರಿಂದ ಶ್ರೀ ಮಹಾದೇವ ಶಿವಪ್ಪ ಅವರಾದಿ ಕಲಾವಿದರು ಮುನ್ನಡೆಸಿಕೊಂಡು ಹೊರಟಿದ್ದಾರೆ. ಈ ತಂಡವು ಸುಮಾರು ನಲವತ್ತು ವರ್ಷಗಳಿಂದ ನಾಡಿನ ಒಳಗೂ ಹೊರಗೂ ಮೂಡಲಪಾಯದ ರಂಗ ಚಟುವಟಿಕೆಗಳನ್ನು ಯಶಸ್ವಿಯಾಗಿ ನಡೆಸಿಕೊಂಡು ಬಂದಿದೆ. ಧಾರವಾಡ ಆಕಾಶವಾಣಿಯಲ್ಲಿಯೂ ಕೂಡ ಈ ತಂಡದ ಆಖ್ಯಾನಗಳು ಪ್ರಸಾರಗೊಂಡಿವೆ. ಅದರಂತೆ ದೂರದರ್ಶನದಲ್ಲಿಯೂ. ಇಷ್ಟೇ ಅಲ್ಲದೆ, ಹೊರ ರಾಜ್ಯಗಳಾದ ಹೈದರಾಬಾದ, ನಾಗಾಲ್ಯಾಂಡ, ಗುಜರಾತ ಮುಂತಾದವುಗಳಲ್ಲಿ ಹಲವಾರು ಜಾನಪದ ನಾಟಕಗಳನ್ನು ಪ್ರದರ್ಶಿಸಿದ ಕೀರ್ತಿ ಈ ತಂಡದ್ದಾಗಿದೆ.

ಶತಮುಖಿ ಸಂಹಾರ, ವೀರವರ್ಮ, ಸುಗಂಧ ಪುಷ್ಪಹರಣ, ಮಹಾಭಾರತ, ರಾಮಾಯಣ, ಭೀಮಾರ್ಜುನ ಕಾಳಗ ಮುಂತಾದ ಬಯಲಾಟಗಳನ್ನು ಪ್ರದರ್ಶಿಸುತ್ತ ಬಂದ ಈ ತಂಡದಲ್ಲಿ ಈರಪ್ಪ ಅಡಿವೆಪ್ಪ ಕಿಲಾರಿ, ಸುಭಾಷ ನಿಂಗಪ್ಪ ತಿಗಡಿ, ಉಳವಪ್ಪ ಶೆಟ್ಟೆಪ್ಪ ಕಿಲಾರಿ, ಈರಪ್ಪ ಯಲ್ಲಪ್ಪ ನಾಗನೂರ, ಈಶ್ವರಪ್ಪ ಬಾಳಪ್ಪ ಚನ್ನಣ್ಣವರ, ಅರ್ಜುನ ಚನ್ನಪ್ಪ ಕಿಲಾರಿ. ಹಾರ್ಮೋನಿಯಂ ಮಾಸ್ತರ ಶಂಕರ್ ಚನ್ನಣ್ಣನವರ ಹಾಗೂ ಮೃದಂಗ ಮಲ್ಲಪ್ಪ ಸದೆಪ್ಪ ಹರಿಜನ ಇವರು ಪ್ರಮುಖರಾಗಿದ್ದಾರೆ.

ಮುಖ್ಯಸ್ಥರ ವಿಳಾಸ: ಮಹಾದೇವ ಶಿವಪ್ಪ ಅವರಾದಿ, ಬಸವೇಶ್ವರ ದೊಡ್ಡಾಟ ತಂಡ, ಗುಂಡೇನಟ್ಟಿ, ತಾ: ಖಾನಾಪೂರ ಜಿ: ಬೆಳಗಾವಿ. ಮೊ : 9611001819



ಮುಂಬೈನ ಮಾತುಂಗದ ಕರ್ನಾಟಕ ಸಂಘದ ನಾಟಕ ಉದ್ಘಾಟನೆಯ ಒಂದು ದೃಶ್ಯ




ನಾನೇ ನಾನು ನಾಟಕದಲ್ಲಿ ಅನುರಾಧಾ ಕುಲಕರ್ಣಿ ಹಾಗೂ ಸಂಗಡಿಗರು



ಪರಪ್ಪ, ನಂದಣ್ಣವರ ಜಾಲಿಕೊಪ್ಪ ಇವರ ನಾಟಕದ ಒಂದು ದೃಶ್ಯ



'ಗಿರಿಜಾ ಕಲ್ಯಾಣ' ದೊಡ್ಡಾಟದಲ್ಲಿ ಡಾ. ಬಸವರಾಜ ಮಲಶೆಟ್ಟಿಯವರು ಸೂತ್ರಧಾರಿಯಾಗಿ



ಮೈಸೂರಿನ ರಂಗಾಯಣದ 'ಓ ಲಿಯರ್' ನಾಟಕದ ಒಂದು ದೃಶ್ಯ ನಿ : ಚಿದಂಬರರಾವ್ ಜಂಬೆ



ಶಿವಲಿಂಗಪ್ಪ ಬಸಪ್ಪ, ಕರವಿನಕೊಪ್ಪ ಇವರ 'ಸಂಗ್ಯಾಬಾಳ್ಯಾ' ನಾಟಕದ ದೃಶ್ಯ




ಗೋಕಾಕಿನ ಈಶ್ವರಚಂದ್ರ ಬೆಟಗೇರಿ ಇವರ 'ಸತ್ಯವಾನ ಸಾವಿತ್ರಿ' ನಾಟಕದ ಒಂದು ದೃಶ್ಯ



ಗೋಕಾಕಿನ ಶಿವಲಿಂಗಪ್ಪ ಮುಧೋಳ ಇವರ ಅಭಿನಯದ ಒಂದು ಚಿತ್ರ



'ತರುಗುಣಿ ಮಡುವು' ನಾಟಕದ ಒಂದು ದೃಶ್ಯದಲ್ಲಿ ಜೆ. ಕೇಶವ ಹಾಗೂ ಡಿ. ರಮೇಶ ಕುಲಕರ್ಣಿ



ಅಥಣಿಯ ಕುಂದರಗಿ ವಕೀಲರ 'ಗಾಂಧಿ...' ನಾಟಕದ ಒಂದು ದೃಶ್ಯ



ಗೋಕಾಕ್ ತಾಲೂಕು ಮೂಡಲಗಿಯ ಶಿವಲಿಂಗಪ್ಪ ಮುಧೋಳ ಅವರ ಅಭಿನಯದ ಒಂದು ದೃಶ್ಯ



ಸವದತ್ತಿ ತಾಲೂಕಿನ ಮುರಗೋಡದ ಶೀಲಪ್ಪ ಮಲಿಕಾಜಪ್ಪ, ಮುರಗೋಡ ಇವರ ಅಭಿನಯದ ಒಂದು ಚಿತ್ರ



'ಕಲ್ಯಾಣ ಕ್ರಾಂತಿ' ನಾಟಕದಲ್ಲಿ ಬಸವಣ್ಣನ
ಪಾತ್ರಧಾರಿ ತೆಲಸಂಗದ ಅಮೋಘ ಖೊಬ್ರಿ



'ನಾನೇ ನಾನು' ಹಾಸ್ಯ ನಾಟಕದಲ್ಲಿ
ಶ್ರೀ ಕೃಷ್ಣ ಉಪಾದ್ಯೆ ಹಾಗೂ
ಶ್ರೀಮತಿ ಪದ್ಮಾವತಿ ಉಪಾದ್ಯೆ



ಬೆಳಗಾವಿಯ ಸಕ್ರೆವ್ವ ಯಲ್ಲಪ್ಪ ಪಾತ್ರೋಟ ಇವರ ರಾಧಾನಾಟದ ಒಂದು ದೃಶ್ಯ

# ಸವದತ್ತಿಯ 'ರಂಗ ಆರಾಧನಾ' ತಂಡದವರ ಕೆಲವು ನಾಟಕಗಳ ದೃಶ್ಯಾವಳಿಗಳು







## ಸವದತ್ತಿಯ 'ರಂಗ ಆರಾಧನಾ' ತಂಡದವರ ಕೆಲವು ನಾಟಕಗಳ ದೃಶ್ಯಾವಳಿಗಳು

